ಬುಧವಾರ, ಸೆಪ್ಟೆಂಬರ್ 4, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಟ್ರೇಲರ್ ಬಿಡುಗಡೆ
ಮುಂಬೈನಲ್ಲಿ ನಡೆದ 'ದಿ ಬಂಕಿಂಗ್‌ಹ್ಯಾಮ್ ಮರ್ಡರ್ಸ್' ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ನಿರ್ಮಾಪಕಿ ಏಕ್ತಾ ಕಪೂರ್ ಜತೆ ನಟಿ ಕರೀನಾ ಕಪೂರ್

Instagram ನ 50+ ಟೂಲ್‌ಗಳ ಮೂಲಕ ನಿಮ್ಮ ಹರೆಯದವರು ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರಲು ಸಹಾಯ ಮಾಡಿ.

ನಿರ್ಬಂಧಿತ ನೇರ ಸಂದೇಶಗಳ,
ಮೂಲಕ, Instagram ನಲ್ಲಿರುವ ಹರೆಯದವರು
ಅವರು ಫಾಲೋ ಮಾಡುವ
ಅಥವಾ ಕನೆಕ್ಟ್ ಆಗಿರುವವರಿಂದ ಮಾತ್ರ ಸಂದೇಶಗಳನ್ನು
ಸ್ವೀಕರಿಸಬಹುದು.

instagram.com/familytools ಇಲ್ಲಿ ನಮ್ಮ 50+
ಟೂಲ್‌ಗಳೊಂದಿಗೆ ಪ್ರಾರಂಭಿಸಿ



ತಾಪಮಾನ ಏರಿಳಿತ: ಆಸ್ಪತ್ರೆಗಳಲ್ಲಿನ ಹೊರ ರೋಗಿಗಳಲ್ಲಿ ಶೇ 30ರಷ್ಟು ಮಂದಿ ಜ್ವರ ಪೀಡಿತರು

ಮಕ್ಕಳನ್ನು ಕಾಡುತ್ತಿದೆ ವೈರಾಣು ಜ್ವರ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ತಾಪಮಾನದ ಏರಿಳಿತ, ಗಾಳಿ ಸಹಿತ ಮಳೆ ಹಾಗೂ ಬಿಸಿಲಿನಿಂದಾಗಿ ವೈರಾಣು ಜ್ವರವು ಮಕ್ಕಳನ್ನು ಹೆಚ್ಚಾಗಿ ಕಾಡಲಾರಂಭಿಸಿದೆ. ಇನ್ನೊಂದೆಡೆ, ಶೀತ ಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಪ್ರಕರಣಗಳು ಏರಿಕೆಯತ್ತ ಸಾಗಿವೆ.

ಇಲ್ಲಿನ ಪ್ರಮುಖ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳ ಹೊರರೋಗಿ ವಿಭಾಗಗಳಿಗೆ ಭೇಟಿ ನೀಡುತ್ತಿರುವವರಲ್ಲಿ ಶೇ 30ಕ್ಕೂ ಅಧಿಕ ಮಂದಿ ಜ್ವರ ತಪಾಸಣೆಗೆ ಒಳಪಡುತ್ತಿದ್ದಾರೆ. ಇವರಲ್ಲಿ ಮಕ್ಕಳೇ ಹೆಚ್ಚಿನವರಾಗಿದ್ದಾರೆ. ಕಳೆದೊಂದು ತಿಂಗಳಿನಿಂದ ನಗರದಲ್ಲಿ ಸಾಧಾರಣ ಮಳೆಯಾಗುತ್ತಿದ್ದು, ದಿನದ ಬಹುತೇಕ ಅವಧಿ ಮೋಡ ಕವಿದ ವಾತಾವರಣದಿಂದ ತಾಪಮಾನ ಇಳಿಮುಖವಾಗಿದೆ. ಗರಿಷ್ಠ ತಾಪಮಾನ 28 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 20 ಡಿಗ್ರಿ ಸೆಲ್ಸಿಯಸ್ ವರದಿಯಾಗುತ್ತಿದ್ದು, ಕೆಲ ದಿನಗಳು ಗರಿಷ್ಠ ತಾಪಮಾನ 25 ಡಿಗ್ರಿ ಸೆಲ್ಸಿಯಸ್‌ಗೂ ಕುಸಿದಿದೆ. ಈ ವಾತಾವರಣದಿಂದ ಮಕ್ಕಳು ಹೆಚ್ಚಾಗಿ ಅಸ್ವಸ್ಥರಾಗುತ್ತಿದ್ದಾರೆ.

ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಗೆ ಪ್ರತಿನಿತ್ಯ 500ರಿಂದ 600 ಹೊರ ರೋಗಿಗಳು ಭೇಟಿ ನೀಡುತ್ತಿದ್ದಾರೆ. ಇವರಲ್ಲಿ ಅರ್ಧದಷ್ಟು ಮಂದಿ ಜ್ವರ, ಕೆಮ್ಮು ಸಂಬಂಧಿ ಸಮಸ್ಯೆಗೆ ತಪಾಸಣೆಗೆ ಒಳಪಡುತ್ತಿದ್ದಾರೆ. ಜಯನಗರ ಸಾರ್ವಜನಿಕ ಆಸ್ಪತ್ರೆ, ಕೆ.ಸಿ. ಜನರಲ್ ಆಸ್ಪತ್ರೆ, ವಿಕ್ಟೋರಿಯಾ, ವಾಣಿವಿಲಾಸ ಸೇರಿದಂತೆ ಪ್ರಮುಖ ಸರ್ಕಾರಿ ಆಸ್ಪತ್ರೆಗಳಿಗೆ ಪ್ರತಿನಿತ್ಯ ಸರಾಸರಿ 50 ಜ್ವರ ಪೀಡಿತರು ಭೇಟಿ ನೀಡುತ್ತಿದ್ದಾರೆ. ಅದೇ ರೀತಿ, ಮಣಿಪಾಲ್, ನಾರಾಯಣ ಹೆಲ್ತ್, ಅಪೋಲೊ, ಫೋರ್ಟಿಸ್ ಸೇರಿದಂತೆ ವಿವಿಧ ಖಾಸಗಿ ಆಸ್ಪತ್ರೆಗಳಿಗೂ ಜ್ವರದ ಚಿಕಿತ್ಸೆಗಾಗಿ ಬರುವವರ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದೆ. ವಿವಿಧ ಕ್ಲಿನಿಕ್‌ಗಳಲ್ಲಿ ಸಹ ರೋಗಿಗಳ ದಟ್ಟಣೆ ಹೆಚ್ಚಾಗುತ್ತಿದೆ.

ವೈರಾಣು ಜ್ವರ ಬಂದಾಗ ವಿಶ್ರಾಂತಿ ಅಗತ್ಯ. ಹೊರಗಡೆ ಓಡಾಡಿದಲ್ಲಿ ಸೋಂಕು ಹರಡಲಿದೆ. ಸೀನಿದಾಗ, ಕೆಮ್ಮಿದಾಗ ಹೊಮ್ಮುವ ಹನಿ ಬೇರೊಬ್ಬರಿಗೆ ತಗುಲದಂತೆ ಎಚ್ಚರ ವಹಿಸಿ

ಡಾ.ಕೆ.ಎಸ್. ಸಂಜಯ್, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ ನಿರ್ದೇಶಕ

ಮಕ್ಕಳಿಗೆ ಸಮಸ್ಯೆ: 'ಮಕ್ಕಳಲ್ಲಿ ರೋಗ ನಿರೋಧಕ ಶಕ್ತಿ ಕಡಿಮೆ ಇರುತ್ತದೆ. ಹಾಗಾಗಿ, ಸಾಮಾನ್ಯವಾಗಿ ಜ್ವರ ಮೊದಲು ಮಕ್ಕಳಿಗೆ ಬರುತ್ತದೆ. ಬಳಿಕ ಮನೆ ಮಂದಿಗೆಲ್ಲ ಹರಡುತ್ತದೆ. ನೆಗಡಿ, ಕೆಮ್ಮು, ಮೈ–ಕೈ ನೋವಿನಿಂದ ಪ್ರಾರಂಭವಾಗಿ, ಐದಾರು ದಿನ ಸಮಸ್ಯೆ ಬಾಧಿಸುತ್ತದೆ. ವಾತಾವರಣ ಬದಲಾವಣೆಯಾದಾಗ ಜ್ವರ ಪ್ರಕರಣಗಳು ಕಾಣಿಸಿಕೊಳ್ಳುತ್ತವೆ. ಬಿಸಿ ನೀರು ಸೇವನೆ ಸೇರಿ ಅಗತ್ಯ ಮುನ್ನೆಚ್ಚರಿಕೆ ಕ್ರಮವಹಿಸಬೇಕು' ಎಂದು ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯ ನಿರ್ದೇಶಕ ಡಾ.ಕೆ.ಎಸ್. ಸಂಜಯ್ ತಿಳಿಸಿದರು.

'ಕೆಲ ದಿನಗಳಿಂದ ಮಳೆ–ಬಿಸಿಲಿನಿಂದ ಚಳಿಯ ವಾತಾವರಣ ಇದೆ. ಇದರಿಂದಾಗಿ ಮಕ್ಕಳು ಹಾಗೂ ವೃದ್ಧರು ಹೆಚ್ಚಿನ ಸಂಖ್ಯೆಯಲ್ಲಿ ಅನಾರೋಗ್ಯ ಪೀಡಿತರಾಗುತ್ತಿದ್ದು, ಹೆಚ್ಚಿನವರು ಜ್ವರ, ಉಸಿರಾಟದ ಸಮಸ್ಯೆ, ಗಂಟಲು ನೋವು ಸಮಸ್ಯೆ ಸಂಬಂಧ ಆಸ್ಪತ್ರೆಗೆ ಭೇಟಿ ನೀಡುತ್ತಿದ್ದಾರೆ' ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರೊಬ್ಬರು ಮಾಹಿತಿ ನೀಡಿದರು.

ವರದಿಯಾದ ಐಎಲ್‌ಐ ಪ್ರಕರಣಗಳು

ಅವಧಿ	ಪರೀಕ್ಷೆ	ದೃಢ
ಆ.26ರಿಂದ ಸೆ.1	431	261
ಆ.19ರಿಂದ ಆ.25	459	21
ಆ.12ರಿಂದ ಆ.18	380	199
ಆ.5ರಿಂದ ಆ.11	410	222
ಜುಲೈ 29ರಿಂದ ಆ.4	311	141
ಜುಲೈ 22ರಿಂದ ಜುಲೈ 28	254	100
ಜುಲೈ 15ರಿಂದ ಜುಲೈ 21	273	72

ಐಎಲ್‌ಐ ಪ್ರಕರಣ ಹೆಚ್ಚಳ

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ, ಜುಲೈ ಬಳಿಕ ರಾಜ್ಯದಲ್ಲಿ ಶೀತ ಜ್ವರ ಮಾದರಿ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಪ್ರಕರಣಗಳು ಏರಿಕೆ ಕಂಡಿವೆ. ಪ್ರತಿ ವಾರ ದೃಢಪಡುತ್ತಿದ್ದ ಪ್ರಕರಣಗಳ ಸಂಖ್ಯೆ ಜುಲೈ ತಿಂಗಳಲ್ಲಿ ನೂರರ ಗಡಿಯೊಳಗಿತ್ತು. ಈಗ ಆ ಸಂಖ್ಯೆ 250ರ ಗಡಿ ದಾಟಿದೆ. ಈ ರೋಗದ ಶಂಕೆಯ ಕಾರಣದಿಂದ ಪ್ರತಿ ವಾರ 400ಕ್ಕೂ ಅಧಿಕ ಮಂದಿಯನ್ನು ತಪಾಸಣೆಗೆ ಒಳಪಡಿಸಲಾಗುತ್ತಿದೆ. ಹೆಚ್ಚಿನ ಪ್ರಕರಣಗಳು ಬೆಂಗಳೂರಿನಲ್ಲಿಯೇ ದೃಢಪಡುತ್ತಿವೆ.

ವೈರಾಣು ಜ್ವರದ ಪ್ರಮುಖ ಲಕ್ಷಣಗಳು

ತೀವ್ರ ಆಯಾಸ, ದಣಿವು, ಮೈ–ಕೈ ನೋವು, ತಲೆನೋವು, ನೆಗಡಿ, ಶೀತ–ಜ್ವರ, ಕೆಮ್ಮು, ಮೂಗು ಕಟ್ಟುವುದು, ಕಣ್ಣುಗಳಲ್ಲಿ ಅಸ್ವಸ್ಥತೆ, ಗಂಟಲು ಉರಿ.

ಸುದ್ದಿ 2 ನಿಮಿಷ

ಲಂಚ ಪಡೆಯುವಾಗ ಕುಂದಾಣ ಗ್ರಾ. ಪಂ. ಪಿಡಿಒ ಬಂಧನ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಕುಂದಾಣ ಗ್ರಾಮ ಪಂಚಾಯತಿಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಪದ್ಮನಾಭ ಡಿ.ಎನ್. ಅವರನ್ನು ₹2 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ನಗರದ ಹೆಬ್ಬಾಳದ ಕೆಂಪಾಪುರ ನಿವಾಸಿ ಮಲ್ಲಿಕಾರ್ಜುನ ಸಿ.ವಿ. ಎಂಬುವವರು ಕುಂದಾಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಡಾವಣೆಯಲ್ಲಿ ಭೂಗತ ಕೇಬಲ್ ಅಳವಡಿಸಲು ನಿರಾಕ್ಷೇಪಣಾ ಪತ್ರಕ್ಕೆ (ಎನ್‌ಒಸಿ) ಅರ್ಜಿ ಸಲ್ಲಿಸಿದ್ದರು. ಎನ್‌ಒಸಿ ನೀಡಲು ಪಿಡಿಒ ಪದ್ಮನಾಭ ₹5 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಮಲ್ಲಿಕಾರ್ಜುನ ಅವರು ಪದ್ಮನಾಭಗೆ ₹3 ಲಕ್ಷ ಮುಂಗಡ ನೀಡಿದ್ದರು. ಉಳಿದ ₹2 ಲಕ್ಷ ನೀಡುವಂತೆ ಆರೋಪಿ ಒತ್ತಾಯಿಸುತ್ತಿದ್ದರು. ಈ ಕುರಿತು ಲೋಕಾಯುಕ್ತ ಪೊಲೀಸರಿಗೆ ಮಲ್ಲಿಕಾರ್ಜುನ ದೂರು ನೀಡಿದ್ದರು.

'ಲಂಚದ ಉಳಿದ ಹಣವನ್ನು ನೀಡುವಂತೆ ಮಲ್ಲಿಕಾರ್ಜುನ ಅವರಿಗೆ ತಿಳಿಸಲಾಗಿತ್ತು. ಅದರಂತೆ ಮಂಗಳವಾರ ಪಂಚಾಯಿತಿ ಕಚೇರಿಯಲ್ಲೇ ಅವರು ಪಿಡಿಒಗೆ ಲಂಚದ ಹಣ ತಲುಪಿಸಿದರು. ಈ ವೇಳೆ ದಾಳಿ ನಡೆಸಿ, ಪದ್ಮನಾಭ ಅವರನ್ನು ಬಂಧಿಸಲಾಯಿತು. ಜತೆಗೆ ₹2 ಲಕ್ಷವನ್ನು ವಶಕ್ಕೆ ಪಡೆಯಲಾಗಿದೆ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರೆಸಲಾಗಿದೆ' ಎಂದು ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಘಟಕದ ಇನ್‌ಸ್ಪೆಕ್ಟರ್ ರಮೇಶ್ ಜೆ. ಮಾಹಿತಿ ನೀಡಿದ್ದಾರೆ.

ಕೆಡೆಟ್‌ಗಳ ವೈಮಾನಿಕ ತರಬೇತಿಗೆ ಡಿಮೊನಾ ಸಿಮ್ಯುಲೇಟರ್

ಬೆಂಗಳೂರು: ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ (ಎನ್‌ಡಿಎ) ಕೆಡೆಟ್‌ಗಳಿಗೆ ವೈಮಾನಿಕ ಹಾರಾಟದ ತರಬೇತಿ ನೀಡುವ ಉದ್ದೇಶದಿಂದ ಸೂಪರ್ ಡಿಮೊನಾ ವಿಮಾನದ ಸಿಮ್ಯುಲೇಟರ್ ಬಳಸಿಕೊಳ್ಳಲು ಉದ್ದೇಶಿಸಲಾಗಿದ್ದು, ಬೆಂಗಳೂರಿನಲ್ಲಿರುವ ಭಾರತೀಯ ವಾಯುಪಡೆಯ ಸಾಫ್ಟ್‌ವೇರ್ ಅಭಿವೃದ್ಧಿ ಸಂಸ್ಥೆ (ಎಸ್‌ಡಿಐ) ಸಿಮ್ಯುಲೇಟರ್‌ನ ವಿನ್ಯಾಸ, ಅಭಿವೃದ್ಧಿ ಮತ್ತು ಜೋಡಣೆ ಮಾಡಿ ಹಸ್ತಾಂತರಿಸಿದೆ.

ಎನ್‌ಡಿಎನ್‌ನಲ್ಲಿ ವಾಯುಪಡೆ ತರಬೇತಿ ತಂಡವನ್ನು (ಎಎಫ್‌ಟಿಟಿ) ಸ್ಥಾಪಿಸಲಾಗಿದ್ದು, ಈ ಸಿಮ್ಯುಲೇಟರ್ ಮೂಲಕ ಕೆಡೆಟ್‌ಗಳಿಗೆ ಹಾರಾಟದ ತರಬೇತಿ ನೀಡಲಾಗುವುದು. ಕೆಡೆಟ್‌ಗಳು ವೈಮಾನಿಕ ಹಾರಾಟದ ಮೂಲ ಅಂಶಗಳನ್ನು ತಿಳಿದುಕೊಂಡಿರಬೇಕು. ವಿಮಾನ ಹಾರಾಟದ ವ್ಯವಸ್ಥೆಯ ಕುರಿತು ಅಗತ್ಯ ಪ್ರಾಥಮಿಕ ಜ್ಞಾನ ನೀಡುವ ಮೂಲಕ ಅವರನ್ನು ಸಜ್ಜುಗೊಳಿಸಲಾಗುವುದು ಎಂದು ಪ್ರಕಟಣೆ ಹೇಳಿದೆ.

ಸಿಮ್ಯುಲೇಷನ್ ಸಾಫ್ಟ್‌ವೇರ್ ಅಲ್ಲದೇ, ವಿಮಾನದ ಡೈನಾಮಿಕ್ಸ್ ಸಾಫ್ಟ್‌ವೇರ್ ಅನ್ನು ವಾಯುಪಡೆಯ ಎಂಜಿನಿಯರ್‌ಗಳೇ ಅಭಿವೃದ್ಧಿಪಡಿಸಿದ್ದಾರೆ. ಅತ್ಯಾಧುನಿಕ 135 ಡಿಗ್ರಿ ಎಫ್‌ಒವಿ ಇಮ್ಮರ್ಸಿವ್ ಡಿಸ್‌ಪ್ಲೇ ವ್ಯವಸ್ಥೆಯೂ ಇರುವುದರಿಂದ ಕೆಡೆಟ್‌ಗಳಿಗೆ ವೈಮಾನಿಕ ಹಾರಾಟದ ವಿಸ್ತೃತ ದೃಶ್ಯದ ಅನುಭವವನ್ನೂ ಪಡೆಯಬಹುದಾಗಿದೆ. ಕೇಂದ್ರ ಸರ್ಕಾರ ಆತ್ಮನಿರ್ಭರ ಭಾರತದ ಯೋಜನೆಯ ಭಾಗವಾಗಿ ಸ್ಥಳೀಯ ಉದ್ಯಮಗಳನ್ನೂ ತೊಡಗಿಸಿಕೊಳ್ಳಲಾಗಿದೆ.

ವೈದ್ಯಾಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆಯು ವೈದ್ಯಾಧಿಕಾರಿಗಳನ್ನು ವಿವಿಧ ಆಸ್ಪತ್ರೆಗಳಿಗೆ ವರ್ಗಾಯಿಸಿ ಆದೇಶ ಹೊರಡಿಸಿದೆ.

ಬೆಂಗಳೂರಿಗೆ ಸಂಬಂಧಿಸಿದಂತೆ ಜಯನಗರ ಸಾರ್ವಜನಿಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಹುದ್ದೆಗೆ ಕೆ.ಆರ್. ಪುರ ಸಾರ್ವಜನಿಕ ಆಸ್ಪತ್ರೆಯ ಅರಿವಳಿಕೆ ತಜ್ಞ ಡಾ.ಸುರೇಂದ್ರ ಕೆ.ಎಸ್., ಸ್ಥಾನಿಕ ವೈದ್ಯಾಧಿಕಾರಿ (ಆರ್‌ಎಂಒ) ಹುದ್ದೆಗೆ ಸ್ಥಳ ನಿರೀಕ್ಷಣೆಯಲ್ಲಿದ್ದ ಡಾ.ಪದ್ಮಾ ಜಿ.ಎಲ್. ಅವರನ್ನು ವರ್ಗಾಯಿಸಲಾಗಿದೆ.

ಕೆ.ಸಿ. ಜನರಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಹುದ್ದೆಗೆ ಅದೇ ಆಸ್ಪತ್ರೆಯ ಆರ್‌ಎಂಒ ಡಾ.ಬಿ.ಆರ್. ಮೋಹನ್ ಅವರನ್ನು ನೇಮಿಸಲಾಗಿದೆ.

ಡೆಂಗಿ ಸಾಂಕ್ರಾಮಿಕ ಕಾಯಿಲೆ: ಘೋಷಣೆ

ಸಾಂಕ್ರಾಮಿಕ ರೋಗಗಳ ಕಾಯ್ದೆ–2020ರ ಅಡಿಯ ನಿಯಮಗಳಿಗೆ ಸರ್ಕಾರದಿಂದ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಂಗಿ ಜ್ವರವನ್ನು ಸಾಂಕ್ರಾಮಿಕ ಕಾಯಿಲೆ ಎಂದು ರಾಜ್ಯ ಸರ್ಕಾರ ಘೋಷಿಸಿದೆ.

ರಾಜ್ಯದಲ್ಲಿ ಈ ವರ್ಷ ಡೆಂಗಿ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾದ ಕಾರಣದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಸಾಂಕ್ರಾಮಿಕ ರೋಗಗಳ ಕಾಯ್ದೆ–2020ರ ಅಡಿಯಲ್ಲಿನ ನಿಯಮಗಳನ್ನು ತಿದ್ದುಪಡಿ ಮಾಡಿ, 'ಕರ್ನಾಟಕ ಸಾಂಕ್ರಾಮಿಕ ರೋಗಗಳು (ತಿದ್ದುಪಡಿ ನಿಯಮಗಳು) 2024' ಎಂಬ ಶೀರ್ಷಿಕೆಯಡಿ ಅಧಿಸೂಚನೆ ಹೊರಡಿಸಲಾಗಿದೆ.

ಜಮೀನು, ನಿವೇಶನ, ಕಟ್ಟಡ, ನೀರಿನ ಟ್ಯಾಂಕ್, ಉದ್ಯಾನ, ಆಟದ ಮೈದಾನ ಸೇರಿ ಯಾವುದೇ ಸ್ಥಳದಲ್ಲಿ ಮಾಲೀಕರು ಅಥವಾ ಸಂಬಂಧಪಟ್ಟ ವ್ಯಕ್ತಿಗಳು ಸೊಳ್ಳೆಗಳ ಸಂತಾನೋತ್ಪತ್ತಿ ತಡೆಗೆ ಅಗತ್ಯ ಕ್ರಮಗಳನ್ನು ಕಡ್ಡಾಯವಾಗಿ ಕೈಗೊಳ್ಳಬೇಕು. ನೀರಿನ ಸಂಗ್ರಹ ಪಾತ್ರೆಗಳು, ಸಂಪ್‌ಗಳು ಮತ್ತು ಓವರ್‌ಹೆಡ್ ಟ್ಯಾಂಕ್‌ಗಳು ಸುರಕ್ಷಿತವಾಗಿ ಮುಚ್ಚಿರುವುದನ್ನು ಖಚಿತಪಡಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ.

ಸ್ವಚ್ಛತೆ ಬಗ್ಗೆ ನಿಗಾ ವಹಿಸಲು ಬಿಬಿಎಂಪಿ ವ್ಯಾಪ್ತಿಯಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತರು ಮತ್ತು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯನ್ನು ಒಳಗೊಂಡ ಸಕ್ಷಮ ಪ್ರಾಧಿಕಾರ ರಚಿಸಲಾಗಿದೆ. ಈ ಪ್ರಾಧಿಕಾರವು ಡೆಂಗಿ ನಿಯಂತ್ರಣಾ ಕ್ರಮಗಳನ್ನು ಜಾರಿಗೆ ತರುವ, ಪರಿಶೀಲಿಸುವ ಮತ್ತು ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸುವ ಅಧಿಕಾರ ಹೊಂದಿರಲಿದೆ.

ಸ್ವಚ್ಛತೆ ಕಾಯ್ದುಕೊಳ್ಳದಿದ್ದರೆ ದಂಡ ವಿಧಿಸಲು ಅವಕಾಶ

ಡೆಂಗಿ ಹರಡುವ ಸೊಳ್ಳೆಗಳ ಲಾರ್ವಾ ಉತ್ಪತ್ತಿಯಾಗಲು ಅವಕಾಶ ಮಾಡಿಕೊಟ್ಟರೆ ದಂಡ ವಿಧಿಸಲಾಗುತ್ತದೆ.

ಮನೆಯ ಒಳಗೆ ಹಾಗೂ ಹೊರಗೆ ಸ್ವಚ್ಛತೆ ಕಾಯ್ದುಕೊಳ್ಳದಿದ್ದರೆ ನಗರ ಪ್ರದೇಶಗಳಲ್ಲಿನ ಕುಟುಂಬಗಳಿಗೆ ₹400, ಗ್ರಾಮೀಣ ಪ್ರದೇಶಗಳಲ್ಲಿನ ಕುಟುಂಬಗಳಿಗೆ ₹200 ದಂಡ ವಿಧಿಸಲಾಗುತ್ತದೆ. ವಾಣಿಜ್ಯ ಸಂಸ್ಥೆಗಳು, ಕಚೇರಿಗಳು, ಶಾಲಾ–ಕಾಲೇಜುಗಳು, ಆರೋಗ್ಯ ಸೇವಾ ಕ್ಷೇತ್ರಗಳಲ್ಲಿ ನಿಯಮ ಉಲ್ಲಂಘನೆಗೆ ನಗರ ಪ್ರದೇಶಗಳಿಗೆ ₹1 ಸಾವಿರ, ಗ್ರಾಮೀಣ ಪ್ರದೇಶಗಳಿಗೆ ₹500 ಗೊತ್ತುಪಡಿಸಲಾಗಿದೆ. ಕಟ್ಟಡ ನಿರ್ಮಾಣ ಸ್ಥಳಗಳು ಮತ್ತು ಖಾಲಿ ನಿವೇಶನಗಳಿಗೆ ಸಂಬಂಧಿಸಿದಂತೆ ನಗರ ಪ್ರದೇಶಗಳಿಗೆ ₹2 ಸಾವಿರ ಹಾಗೂ ಗ್ರಾಮೀಣ ಪ್ರದೇಶಗಳಿಗೆ ₹1 ಸಾವಿರ ದಂಡ ನಿಗದಿಪಡಿಸಲಾಗಿದೆ.

'ಗುತ್ತಿಗೆದಾರರ ಬಾಕಿ ಹಣ ಶೀಘ್ರ ಬಿಡುಗಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗುತ್ತಿಗೆದಾರರ ಬಾಕಿ ಹಣವನ್ನು ಗರಿಷ್ಠ ಒಂದು ಅಥವಾ ಎರಡು ವಾರಗಳಲ್ಲಿ ಬಿಡುಗಡೆ ಮಾಡಲಾಗುವುದು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ಮೆಸರ್ಸ್ ನಿಕ್ಷೇಪ ಇನ್ಫ್ರಾ ಪ್ರಾಜೆಕ್ಟ್ಸ್ ಪಾಲುದಾರ ಬಿ.ಎಸ್. ಧನಂಜಯ ಸೇರಿದಂತೆ ಒಟ್ಟು 44 ಗುತ್ತಿಗೆ ಕಂಪನಿಗಳು ಹಾಗೂ ಗುತ್ತಿಗೆದಾರರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹೊರತುಪಡಿಸಿ ಉಳಿದೆಲ್ಲಾ ಸಂಸ್ಥೆಗಳು ಶೇ 100ರಷ್ಟು ಹಣ ಬಿಡುಗಡೆ ಮಾಡಿವೆ. ಬಿಬಿಎಂಪಿ ಶೇ 75ರಷ್ಟು ಬಾಕಿ ಬಿಡುಗಡೆ ಮಾಡಿದ್ದು, ಶೇ 25ರಷ್ಟು ಬಾಕಿ ಉಳಿಸಿಕೊಂಡಿದೆ. ಸರ್ಕಾರದ ಕಾಮಗಾರಿಗಳಿಂದ ದೊರೆಯುವ ಲಾಭ ಶೇ 10ಕ್ಕೂ ಕಡಿಮೆ. ಶೇ 25ರಷ್ಟು ಹಣ ಉಳಿಸಿಕೊಂಡರೆ ಏನು ಮಾಡುವುದು? ಈ ನಡುವೆ ಜಿಎಸ್‌ಟಿ ನೋಟಿಸ್ ಸಹ ಬರುತ್ತಿವೆ' ಎಂದು ಆಕ್ಷೇಪಿಸಿದರು.

ಇದಕ್ಕೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ, 'ಬಾಕಿ ಹಣವನ್ನು ಗರಿಷ್ಠ ಒಂದು ಅಥವಾ ಎರಡು ವಾರಗಳಲ್ಲಿ ಬಿಡುಗಡೆ ಮಾಡಿಸಲಾಗುವುದು' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಅರ್ಜಿದಾರರ ಪರ ವಕೀಲರನ್ನು ಉದ್ದೇಶಿಸಿದ ನ್ಯಾಯಪೀಠವು, 'ಶೇ 75ರಷ್ಟು ಹಣ ಬಿಡುಗಡೆಯಾಗಿದೆಯಲ್ಲಾ? ಈಗ ಬಾಕಿ ಹಣ ಬಿಡುಗಡೆಗೆ ಅಡ್ವೊಕೇಟ್ ಜನರಲ್ ಭರವಸೆ ನೀಡಿದ್ದಾರೆ' ಎಂದು ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿತು.

2019-20ರಿಂದ 2022-23ರ ಅವಧಿಯಲ್ಲಿ ಗುತ್ತಿಗೆದಾರರಿಗೆ ನೀಡಿರುವ ಕಾಮಗಾರಿಗಳ ಗುಣಮಟ್ಟ ಮತ್ತಿತರ ಅಂಶಗಳ ತನಿಖೆಗಾಗಿ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗ ರಚನೆ ಮಾಡಿ 2023ರ ಆಗಸ್ಟ್ 5ರಂದು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶವನ್ನು ಅರ್ಜಿದಾರರು ಪ್ರಶ್ನಿಸಿದ್ದಾರೆ.

ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅಭಿಮತ

'ಸ್ಥಳೀಯರಿಂದ ಜಾಗತಿಕ ಸೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಥಳೀಯ ಮಟ್ಟದಲ್ಲಿ ನಿಂತು ಜಾಗತಿಕ ಮಟ್ಟದ ಸೇವೆ ಒದಗಿಸುವುದಕ್ಕೆ ಬೆಂಗಳೂರು ವಿಶ್ವದಾದ್ಯಂತ ಹೆಸರುವಾಸಿಯಾಗಿದೆ. ಇದರ ವಿಸ್ತರಣೆಯಾಗಿಯೇ ಸ್ಥಳೀಯ ಮತ್ತು ಜಾಗತಿಕ ಪ್ರತಿಭೆಗಳನ್ನು ಒಂದೇ ವೇದಿಕೆ ಅಡಿ ತರಲು ಬೆಂಗಳೂರು ತಂತ್ರಜ್ಞಾನ ಶೃಂಗಸಭೆ ಆಯೋಜಿಸಲಾಗುತ್ತಿದೆ' ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಇದೇ ನವೆಂಬರ್‌ನಲ್ಲಿ ನಡೆಯಲಿರುವ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಗೆ ಪೂರ್ವಭಾವಿಯಾಗಿ ಮಂಗಳವಾರ ನಗರದಲ್ಲಿ ಆಯೋಜಿಸಲಾಗಿದ್ದ 'ಗ್ಲೋಬಲ್ ಇನ್ನೋವೇಷನ್ ಅಲಯನ್ಸ್'ನ (ಜಿಐಎ) ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳ ಸಭೆಯಲ್ಲಿ ಅವರು ಮಾತನಾಡಿದರು.

'ಬೆಂಗಳೂರು ಮಾತ್ರವಲ್ಲ, ಕರ್ನಾಟಕವೂ ತಂತ್ರಜ್ಞಾನ ಆಧಾರಿತ ಸಹಕಾರ ಮತ್ತು ಸಹಯೋಗಕ್ಕೆ ಯಾವತ್ತೂ ಒತ್ತು ನೀಡಿದೆ. ಅಂತಹ ಅವಕಾಶವನ್ನು ಈ ಶೃಂಗಸಭೆ ಮಾಡಿಕೊಡಲಿದೆ. ಇದರಲ್ಲಿ ಭಾಗಿಯಾಗುವ ಮೂಲಕ ಅದನ್ನು ಬಳಸಿಕೊಳ್ಳಬೇಕು' ಎಂದು ಜಿಐಎ ಪ್ರತಿನಿಧಿಗಳನ್ನು ಅವರು ಶೃಂಗಸಭೆಗೆ ಆಹ್ವಾನಿಸಿದರು.

'ಕನ್ನಡಿಗರಲ್ಲಿ ಉತ್ಕೃಷ್ಟ ಮಟ್ಟದ ಕೌಶಲ ಬೆಳೆಸಿ, ಜಾಗತಿಕ ಸೇವೆ ಒದಗಿಸುವ ಉದ್ದೇಶದಿಂದಲೇ ಖಾಸಗಿ ಕ್ಷೇತ್ರದಲ್ಲೂ ಸ್ಥಳೀಯರಿಗೆ ಮೀಸಲಾತಿ ಒದಗಿಸುವ ಕ್ರಮ ತೆಗೆದುಕೊಳ್ಳಲಾಗಿತ್ತು' ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು. ಮಾಹಿತಿ ತಂತ್ರಜ್ಞಾನ ಕ್ಷೇತ್ರ, ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ನವೋದ್ಯಮಗಳ ಸ್ಥಾಪನೆ ಮತ್ತು ಕಾರ್ಯನಿರ್ವಹಣೆಗೆ ರಾಜ್ಯ ಸರ್ಕಾರ ಒದಗಿಸುತ್ತಿರುವ ಸಹಕಾರ, ನೆರವು ಮತ್ತು ವಿನಾಯತಿಗಳು ಹಾಗೂ ಈ ಕ್ಷೇತ್ರಗಳಲ್ಲಿ ರಾಜ್ಯದ ಸಾಧನೆಗಳನ್ನು ಮಾಹಿತಿ ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಏಕರೂಪ್ ಕೌರ್ ಅವರು ಜಿಐಎ ಪ್ರತಿನಿಧಿಗಳಿಗೆ ವಿವರಿಸಿದರು.

ಜಿಐಎ ಸದಸ್ಯರ ಸಭೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿದರು

ಮುಖ್ಯಾಂಶಗಳು

- ತಂತ್ರಜ್ಞಾನ ಶೃಂಗಸಭೆಯಲ್ಲಿ ಭಾಗಿಯಾಗಲು ಜಿಐಎ ಸದಸ್ಯರಿಗೆ ಆಹ್ವಾನ
- ತಂತ್ರಜ್ಞಾನ, ಸಂಶೋಧನೆಯಲ್ಲಿ ಮುಂಚೂಣಿ 33 ರಾಷ್ಟ್ರಗಳ ಒಕ್ಕೂಟ

'ಲಹರ್ ಸಿಂಗ್ ಬ್ರೋಕರೇಜ್ ವಿಫಲ'

'ಬಿಜೆಪಿಯ ಲಹರ್ ಸಿಂಗ್ ಅವರದ್ದು 'ಪೊಲಿಟಿಕಲ್ ಬ್ರೋಕರೇಜ್ ಕೆಲಸ'. ಈ ಕೆಲಸಕ್ಕೆ ಕನ್ನಡದಲ್ಲೇ ಒಂದು ಹೆಸರಿದೆ. ಆದರೆ ಅದನ್ನು ನಾನು ಹೇಳುವುದಿಲ್ಲ. ಕರ್ನಾಟಕದಲ್ಲೂ ಆ ಕೆಲಸ ಮಾಡಲು ಅವರು ಯತ್ನಿಸಿದರು. ಆದರೆ ಇಲ್ಲಿ ಅದು ನಡೆಯಲಿಲ್ಲ. ತಾನು ಸಕ್ರಿಯವಾಗಿದ್ದೇನೆ ಎಂದು ಬಿಜೆಪಿ ವರಿಷ್ಠರಿಗೆ ತೋರಿಸಿಕೊಳ್ಳಲು, ಕಾಂಗ್ರೆಸ್ ನಾಯಕರ ವಿರುದ್ಧ ದೂರು ನೀಡುವ ಮತ್ತು ಆರೋಪ ಮಾಡುವ ಕೆಲಸ ಮಾಡುತ್ತಿದ್ದಾರೆ' ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

ತಮ್ಮ ವಿರುದ್ಧ ಲಹರ್ ಸಿಂಗ್ ಅವರು ಮಾಡಿರುವ ಆರೋಪಗಳ ಬಗ್ಗೆ ಪ್ರಶ್ನಿಸಿದಾಗ ಪ್ರಿಯಾಂಕ್, 'ಇಲ್ಲಸಲ್ಲದ ಆರೋಪ ಮಾಡುವವರ ವಿರುದ್ಧ ನಮ್ಮ ಕುಟುಂಬ ಮಾನನಷ್ಟ ಮೊಕದ್ದಮೆ ಹೂಡಲಿದೆ. ಹಲವು ದಿನಗಳ ಹಿಂದೆ ಅವರು ಸರ್ಕಾರದ ವಿರುದ್ಧ ಹತ್ತಾರು ಆರೋಪಗಳನ್ನು ಮಾಡಿದ್ದರು. ಈಗ ಆ ಆರೋಪಗಳೆಲ್ಲಾ ಎಲ್ಲಿ ಹೋದವು' ಎಂದು ಪ್ರಶ್ನಿಸಿದರು.

ಕನ್ನಡ ನಟಿಯರ ಸ್ಥಿತಿಗತಿ ಅಧ್ಯಯನ ಸರ್ಕಾರದಿಂದಲೇ ಸಮಿತಿ ರಚನೆಯಾಗಲಿ: ಶ್ರುತಿ ಹರಿಹರನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲಯಾಳ ಚಿತ್ರರಂಗದಲ್ಲಿ ನಟಿಯರ ಸ್ಥಿತಿಗತಿ ಅಧ್ಯಯನಕ್ಕಾಗಿ ರಚನೆಗೊಂಡಿದ್ದ 'ಹೇಮಾ ಸಮಿತಿ' ರೀತಿಯಲ್ಲಿಯೇ ಕನ್ನಡ ಚಿತ್ರರಂಗಕ್ಕೂ ಒಂದು ಸಮಿತಿಯ ಅಗತ್ಯವಿದೆ ಎಂದು ನಟಿ ಶ್ರುತಿ ಹರಿಹರನ್ ಹೇಳಿದರು.

ಈ ಕುರಿತು 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಅವರು, ಪ್ರತಿ ಚಿತ್ರೋದ್ಯಮದಲ್ಲೂ ಅದರದ್ದೇ ಆದ ಸಮಸ್ಯೆಗಳಿವೆ. ಲೈಂಗಿಕ ಶೋಷಣೆ ಮಾತ್ರವಲ್ಲ, ಬೇರೆ ರೀತಿಯ ಸಾಕಷ್ಟು ಸಮಸ್ಯೆಗಳಿವೆ. ನಟಿಯರನ್ನು, ಸಹ ಕಲಾವಿದರನ್ನು ಹೀನಾಯವಾಗಿ ನಡೆಸಿಕೊಳ್ಳಲಾಗುತ್ತಿದೆ. ಶೌಚಾಲಯದಂಥ ಕನಿಷ್ಠ ಸವಲತ್ತು ನೀಡುತ್ತಿಲ್ಲ. ಮುಟ್ಟಿನ ಸಮಯದಲ್ಲಿ ಶೌಚಾಲಯವೇ ಇಲ್ಲದೆ ಹೋದರೆ ನಟಿಯರು ಏನು ಮಾಡಬೇಕೆಂದು ಯೋಚಿಸುತ್ತಿಲ್ಲ. ಈ ಬಗ್ಗೆ ಧ್ವನಿ ಎತ್ತಲೇಬೇಕು. ಕೇರಳದಲ್ಲಿ ಸರ್ಕಾರವೇ ಹೇಮಾ ಸಮಿತಿಯನ್ನು ರಚಿಸಿತ್ತು. ಹೀಗಾಗಿ ಆ ಸಮಿತಿಗೆ ವಿಶ್ವಾಸಾರ್ಹತೆಯಿದೆ. ನಮ್ಮಲ್ಲಿಯೂ ಅದೇ ರೀತಿ ಸಮಿತಿ ರಚನೆಯಾಗಿ ನಟಿಯರ ಸ್ಥಿತಿಗತಿ ಕುರಿತು ಅಧ್ಯಯನ ನಡೆಯಬೇಕು' ಎಂದರು.

ಶ್ರುತಿ ಹರಿಹರನ್

'ನನಗೆ ಹೇಮಾ ಸಮಿತಿಯ ವರದಿ ಬಗ್ಗೆ ಬಹಳ ಗೌರವವಿದೆ. ದಿಟ್ಟ ಕೆಲಸಕ್ಕಾಗಿ ಅಲ್ಲಿನ ಸರ್ಕಾರಕ್ಕೂ, ಸಮಿತಿಗೂ ಅಭಿನಂದನೆ ಸಲ್ಲಿಸುತ್ತೇನೆ. ನಮ್ಮಲ್ಲಿಯೂ ಆ ರೀತಿ ಲೈಂಗಿಕ ಕಿರುಕುಳ ಇಲ್ಲ ಎಂದಲ್ಲ. ಆ ಕುರಿತು ಐದು ವರ್ಷಗಳ ಹಿಂದೆಯೇ ನಾನು ಧ್ವನಿ ಎತ್ತಿದೆ. ಆಗ ಒಂದಷ್ಟು ಜನ ನನ್ನ ಜೊತೆಗೆ ನಿಂತರು. ಬಹಳಷ್ಟು ಜನ ವೃತ್ತಿಜೀವನ ಭಯದಿಂದ ಮುಕ್ತವಾಗಿ ಹೇಳಲಿಲ್ಲ. ಲೈಂಗಿಕ ಕಿರುಕುಳ, ಸಂಬಂಧಗಳ ಬಗ್ಗೆ ನಾವು ಮುಚ್ಚುಮರೆಯಲ್ಲಿ ಮಾತನಾಡುತ್ತಿದ್ದೆವು. ಆಪ್ತವಲಯದಲ್ಲಿ ಜೋಕ್ ಮಾಡಿಕೊಳ್ಳುತ್ತಿದ್ದೆವು. ಆದರೆ, ಈ ವಿಚಾರವನ್ನು ಕೇರಳ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ ಎಂದರೆ, ನಿಜಕ್ಕೂ ಹೆಮ್ಮೆಯ ವಿಚಾರ' ಎಂದು ಶ್ಲಾಘಿಸಿದರು.

'ಲೈಂಗಿಕ ಶೋಷಣೆ ಎಂದಾಗ ಸಹಜವಾಗಿ ಬಿಸಿ ಸುದ್ದಿಯಾಗುತ್ತದೆ. ಆದರೆ ನಾವು ಸಮಸ್ಯೆಯ ಅದೊಂದೇ ಮುಖವನ್ನು ನೋಡಬಾರದು. ಚಿತ್ರರಂಗದಲ್ಲಿ ತಾರತಮ್ಯ ಹೋಗಬೇಕು. ನಾವೆಲ್ಲ ಭಯವಿಲ್ಲದೆ, ಗೌರವದಿಂದ ಕೆಲಸ ಮಾಡುವ ವಾತಾವರಣ ಸೃಷ್ಟಿಯಾಗಬೇಕು. 'ಮೀ ಟೂ' ಅಭಿಯಾನದಿಂದ ಒಂದಷ್ಟು ಪರಿಣಾಮವಂತೂ ಆಯಿತು. ಅದೇ ರೀತಿ ಸಮಿತಿ ರಚನೆಯಾದಾಗ ಇನ್ನೊಂದಷ್ಟು ಸಂಗತಿಗಳು ಬೆಳಕಿಗೆ ಬರಬಹುದು' ಎಂದವರು ಅಭಿಪ್ರಾಯಪಟ್ಟರು.

ಅತ್ಯಾಚಾರ ಆರೋಪ: ಮಲಯಾಳ ನಟ ನಿವಿನ್ ಪೋಳಿ ವಿರುದ್ಧ ಪ್ರಕರಣ

ಕೊಚ್ಚಿ(ಪಿಟಿಐ): ಮಲಯಾಳ ನಟ ನಿವಿನ್ ಪೋಳಿ ವಿರುದ್ಧ ಅತ್ಯಾಚಾರ ಆರೋಪ ಕೇಳಿಬಂದಿದ್ದು, 40 ವರ್ಷದ ಮಹಿಳೆ ನೀಡಿದ ದೂರಿನನ್ವಯ ಅವರ ವಿರುದ್ಧ ಮಂಗಳವಾರ ಪ್ರಕರಣ ದಾಖಲಾಗಿದೆ.

'ವರ್ಷದ ಹಿಂದೆ ದುಬೈನಲ್ಲಿ ನಿವಿನ್ ನನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ' ಎಂದು ಮಹಿಳೆ ದೂರಿದ್ದಾರೆ.

'ಮಹಿಳೆ ನೀಡಿದ ದೂರು ಆಧರಿಸಿ ನಟ ನಿವಿನ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ, ಮಹಿಳೆ ಸೇರಿದಂತೆ ಆರು ಜನ ಆರೋಪಿಗಳಿದ್ದಾರೆ. ಮಹಿಳೆ ಮೊದಲ ಆರೋಪಿಯಾಗಿದ್ದರೆ, ನಿವಿನ್ ಆರನೇ ಆರೋಪಿ' ಎಂದು ಪೊಲೀಸರು ತಿಳಿಸಿದ್ದಾರೆ.



ನಿವಿನ್ ಪೌಳಿ

'ತಮ್ಮ ಬಗ್ಗೆಯೇ ಆರೋಪ ಮಾಡಿಕೊಳ್ಳುತ್ತಿರುವ ಸುಧಾಕರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸದ ಡಾ.ಕೆ. ಸುಧಾಕರ್ ಅವರು ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದು, ತಮ್ಮ ಬಗ್ಗೆ ತಾವೇ ಆರೋಪ ಮಾಡಿಕೊಳ್ಳುತ್ತಿದ್ದಾರೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಹೇಳಿದ್ದಾರೆ.



ದಿನೇಶ್ ಗುಂಡೂರಾವ್

'ಕೋವಿಡ್ ಅಕ್ರಮಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಡಿ.ಕುನ್ಹಾ ಅವರ ವರದಿಯಲ್ಲಿ ಏನಿದೆ ಎಂಬುದು ನಮಗೇ ತಿಳಿದಿಲ್ಲ. ವರದಿಯಲ್ಲಿರುವ ಅಂಶಗಳನ್ನು ಆಧರಿಸಿ ಮುಂದಿನ ಕ್ರಮ ಆಗಲಿದೆ' ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

'ಸುಧಾಕರ್ ಅವರಿಗೆ ತಾವು ಮಾಡಿದ ತಪ್ಪುಗಳ ಪಾಪಪ್ರಜ್ಞೆ ಕಾಡುತ್ತಿರಬಹುದು. ವರದಿಯಲ್ಲಿ ಇಂಥವರ ಹೆಸರು ಇದೆ ಎಂದು ನಾವು ಹೇಳಿಲ್ಲ. ಬೀದಿಯಲ್ಲಿ ನಿಂತು ಕೆಲಸ ಮಾಡಿದ್ದೇನೆ ಎಂದು ಅವರೇ ಹೇಳಿಕೊಳ್ಳುತ್ತಿದ್ದಾರೆ. ಮಂತ್ರಿಯನ್ನಾಗಿ ಮಾಡುವುದೇ ಕೆಲಸ ಮಾಡಲಿಕ್ಕಾಗಿ. ಹೀಗಾಗಿ ಕೆಲಸ ಮಾಡುವುದು ಮಂತ್ರಿಗಳ ಕರ್ತವ್ಯ. ಅದನ್ನು ನಾವು ಹೇಳಿಕೊಳ್ಳುವುದಿಲ್ಲ. ಜನರು ನಮ್ಮ ಕೆಲಸದ ಬಗ್ಗೆ ಮಾತನಾಡಬೇಕು' ಎಂದು ದಿನೇಶ್ ತಿಳಿಸಿದರು.

'ಕೋವಿಡ್‌ನಲ್ಲಿ ಹಾಯಾಗಿ ಈಜುಕೊಳದಲ್ಲಿ ಈಜಾಡಿಕೊಂಡಿದ್ದರು': (ಕೋಲಾರ ವರದಿ): 'ಕೋವಿಡ್ ಸಮಯದಲ್ಲಿ ಪ್ರಾಣದ ಹಂಗು ತೊರೆದು ಕೆಲಸ ಮಾಡಿರುವುದಾಗಿ ಹೇಳಿಕೊಂಡಿರುವ ಡಾ.ಕೆ.ಸುಧಾಕರ್ ಆಗ ತಮ್ಮ ಕುಟುಂಬ ಸದಸ್ಯರ ಜೊತೆ ಈಜುಕೊಳದಲ್ಲಿ ಈಜಾಡುತ್ತಿದ್ದದ್ದು ಎಲ್ಲರಿಗೂ ಗೊತ್ತಿದೆ. ಯಾರ ಬಳಿ ಈ ನಾಟಕ ಮಾಡುತ್ತಾರೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿರುಗೇಟು ನೀಡಿದ್ದಾರೆ.

ನಗರದಲ್ಲಿ ಮಾತನಾಡಿದ ಅವರು, ಕೋವಿಡ್ ಕಾಲದಲ್ಲಿ ಹಗರಣ ನಡೆದಿದೆ. ಮಾಸ್ಕ್, ಪಿಪಿಎ ಕಿಟ್ ದರ ಎಷ್ಟಿತ್ತು, ಎಷ್ಟಕ್ಕೆ ಖರೀದಿಸಿದರು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ ಎಂದು ತಿಳಿಸಿದರು.

ಹಗರಣಗಳ ಪರಿಶೀಲನೆಗೆ ಸಮಿತಿ- ಸಚಿವ ಜಿ. ಪರಮೇಶ್ವರ

ಬೆಂಗಳೂರು: 'ಬಿಟ್ ಕಾಯಿನ್, ವಾಲ್ಮೀಕಿ ಅಭಿವೃದ್ಧಿ ನಿಗಮ, ಕೋವಿಡ್ ನಿರ್ವಹಣೆ ಹಗರಣ ಸೇರಿದಂತೆ ಎಲ್ಲ ಪ್ರಕರಣಗಳನ್ನು ಪರಿಶೀಲಿಸಲು ಸಮಿತಿ ರಚಿಸಲು ನಿರ್ಧರಿಸಲಾಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈಗಾಗಲೇ ಎಸ್‌ಐಟಿ ಮತ್ತು ಸಿಐಡಿಗೆ ವಹಿಸಿರುವ ಹಗರಣಗಳ ತನಿಖೆ ಯಾವ ಹಂತದಲ್ಲಿವೆ ಎಂಬುದನ್ನು ಪರಿಶೀಲಿಸುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಸಮಿತಿ ರಚಿಸಲಾಗುವುದು' ಎಂದರು.

ಅನವಶ್ಯಕ ಆಪಾದನೆ ಸಲ್ಲ: 'ಖರ್ಗೆ ಕುಟುಂಬದ ಸಿದ್ಧಾರ್ಥ ಟ್ರಸ್ಟ್‌ಗೆ ಕಾನೂನುಬಾಹಿರವಾಗಿ ಕೆಐಎಡಿಬಿ ನಿವೇಶನ ಹಂಚಿಕೆ ಮಾಡಿಲ್ಲ ಎಂದು ಸಚಿವ ಎಂ.ಬಿ. ಪಾಟೀಲ ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ. ದೂರು ಬಂದರೆ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಬೇಕಾದವರು ರಾಜ್ಯಪಾಲರು. ಅನವಶ್ಯಕವಾಗಿ ಆಪಾದನೆ ಮಾಡುವುದು ಸರಿಯಲ್ಲ' ಎಂದರು.

'ರಾಜಕೀಯ ಉದ್ದೇಶ ಇಟ್ಟುಕೊಂಡು ಬಿಜೆಪಿಯವರು ಆರೋಪಗಳನ್ನು ಮಾಡುತ್ತಿದ್ದಾರೆ. ನಾವು ಸತ್ಯಾಸತ್ಯತೆ ಜನರ ಮುಂದಿಡುತ್ತೇವೆ. ಯಾವುದನ್ನೂ ನಾವು ಕಾನೂನು ಬಾಹಿರವಾಗಿ ಮಾಡಿಲ್ಲ ಎಂಬುದನ್ನು ಈಗಾಗಲೇ ನ್ಯಾಯಾಲಯಕ್ಕೂ ತಿಳಿಸಿದ್ದೇವೆ' ಎಂದು ತಿಳಿಸಿದರು.

ಜಿ.ಪರಮೇಶ್ವರ

ಅಕಾಂಕ್ಷಿಗಳ ವಶಕ್ಕೆ ಪಡೆಯಲು ಯತ್ನ: ಇನ್‌ಸ್ಪೆಕ್ಟರ್‌ಗೆ ತರಾಟೆ

ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿಗೆ ವಯೋಮಿತಿ ಹೆಚ್ಚಿಸುವಂತೆ ಆಗ್ರಹಿಸಿ ಮನವಿ ಸಲ್ಲಿಸಲು ಸದಾಶಿವನಗರದಲ್ಲಿರುವ ಜಿ. ಪರಮೇಶ್ವರ ಅವರ ಮನೆಗೆ ಮಂಗಳವಾರ ಬೆಳಿಗ್ಗೆ ತೆರಳಿದ್ದ ಹುದ್ದೆ ಆಕಾಂಕ್ಷಿಗಳನ್ನು ಪೊಲೀಸರು ವಶಕ್ಕೆ ಪಡೆದರು. ಅಭ್ಯರ್ಥಿಯೊಬ್ಬನನ್ನು ಬಲವಂತವಾಗಿ ವಶಕ್ಕೆ ಪಡೆಯಲು ಯತ್ನಿಸಿರುವುದು ಗಮನಕ್ಕೆ ಬರುತ್ತಿದ್ದಂತೆ, ಪೊಲೀಸ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಪರಮೇಶ್ವರ, 'ಅಹವಾಲು ಸಲ್ಲಿಸಲು ಯಾರೇ ಬಂದರೂ ಸುಮ್ಮನೆ ನಿಂತುಕೊಂಡು ನೋಡಬೇಕು. ಇನ್ನೊಮ್ಮೆ ಆ ರೀತಿ ನಡೆದುಕೊಳ್ಳಬಾರದು' ಎಂದು ಎಚ್ಚರಿಕೆ ನೀಡಿದರು.

'ತಮ್ಮ ಸಮಸ್ಯೆಗಳು ಬಗೆಹರಿಯುತ್ತದೆ ಎಂಬ ಉದ್ದೇಶದಿಂದ ಜನರು ಬರುತ್ತಾರೆ. ನಮ್ಮ ಬಳಿಗೆ ಬಾರದಿದ್ದರೆ, ಇನ್ನು ಯಾರ ಬಳಿಗೆ ಹೋಗಲು ಸಾಧ್ಯ' ಎಂದು ಸದಾಶಿವನಗರ ಠಾಣೆಯ ಇನ್‌ಸ್ಪೆಕ್ಟರ್‌ಗೆ ಪರಮೇಶ್ವರ ತಾಕೀತು ಮಾಡಿದರು.

ಚಿಂಕಾರಧಾಮದಲ್ಲಿ ಕಾಲುವೆ ನಿರ್ಮಾಣ: ಪರಿಶೀಲನೆಗೆ ನಿರ್ಧಾರ

ಭದ್ರಾ: ಒಪ್ಪದ ವನ್ಯಜೀವಿ ಮಂಡಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ತುಮಕೂರು ಜಿಲ್ಲೆಯಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ಕಾಲುವೆ ನಿರ್ಮಾಣಕ್ಕಾಗಿ ಬುಕ್ಕಾಪಟ್ಟಣ ಚಿಂಕಾರ ವನ್ಯಜೀವಿ ಧಾಮದ 128 ಎಕರೆ ಅರಣ್ಯ ಬಳಸಿಕೊಳ್ಳುವ ಪ್ರಸ್ತಾವನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಒಪ್ಪಿಗೆ ನೀಡಿಲ್ಲ.

ಕಾಲುವೆ ಆಜುಬಾಜಿನಲ್ಲಿ ಪ್ರಾಣಿಗಳ ಸಂಚಾರಕ್ಕೆ ಹಾದಿ ಹಾಗೂ ಉಪಶಮನ ಕ್ರಮಗಳ ಬಗ್ಗೆ ಡೆಹ್ರಾಡೂನ್‌ನ ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ತಜ್ಞರಿಂದ ಪರಿಶೀಲನೆ ನಡೆಸಿ ಮುಂದಿನ ತೀರ್ಮಾನ ಕೈಗೊಳ್ಳಲು ಮಂಡಳಿ ತೀರ್ಮಾನಿಸಿದೆ. ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅಧ್ಯಕ್ಷತೆಯಲ್ಲಿ ನಡೆದ ಮಂಡಳಿಯ ಸ್ಥಾಯಿಸಮಿತಿಯ 79ನೇ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು.

ರಾಜ್ಯ ಸರ್ಕಾರ ಹಾಗೂ ರಾಜ್ಯ ವನ್ಯಜೀವಿ ಮಂಡಳಿ ಈ ಪ್ರಸ್ತಾವನೆಗೆ ಒಪ್ಪಿಗೆ ಕೊಟ್ಟಿವೆ. ಅಭಯಾರಣ್ಯ ಪ್ರದೇಶದ ಕಾಲುವೆಯ ಉದ್ದಕ್ಕೂ ಪ್ರತಿ 100 ಮೀಟರ್‌ಗೆ ಪ್ರಾಣಿಗಳಿಗೆ ಸಾಗಲು ಮಾರ್ಗ ನಿರ್ಮಿಸಲಾಗುತ್ತದೆ ಹಾಗೂ ಉಳಿದ ಕಡೆಗಳಲ್ಲಿ ಬೇಲಿ ಹಾಕಲಾಗುತ್ತದೆ ಎಂದು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಸಭೆಯ ಗಮನಕ್ಕೆ ತಂದರು.

ಮಂಡಳಿಯ ತಜ್ಞ ಸದಸ್ಯ ಡಾ.ಎಚ್.ಎಸ್. ಸಿಂಗ್, 'ಕಾಡು ಪ್ರಾಣಿಗಳು ದಾಟಲು ಕಾಲುವೆಗೆ ಸಮರ್ಪಕ ಮಾರ್ಗಗಳಿರಬೇಕು. ಕಾಲುವೆ ನೀರನ್ನು ಕಾಡು ಪ್ರಾಣಿಗಳು ಕುಡಿಯಲು ವ್ಯವಸ್ಥೆ ಮಾಡಬೇಕು' ಎಂದು ಸಲಹೆ ನೀಡಿದರು. ಅಭಯಾರಣ್ಯದಲ್ಲಿ ಅನಗತ್ಯ ನಿರ್ಮಾಣ ಕಾಮಗಾರಿಗಳನ್ನು ತಪ್ಪಿಸಬೇಕು ಎಂದು ಸಮಿತಿಯ ಅಧ್ಯಕ್ಷರು ಸಲಹೆ ನೀಡಿದರು.

ಚಿಂಕಾರ ವನ್ಯಜೀವಿ ಧಾಮವು 136.11 ಚ.ಕಿ.ಮೀ ವಿಸ್ತೀರ್ಣ ಹೊಂದಿದ್ದು, ಪರಿಸರ ಸೂಕ್ಷ್ಮ ವಲಯವು 157.0962 ಚ.ಕಿ.ಮೀ ವ್ಯಾಪಿಸಿದೆ. ಇದರಲ್ಲಿ 18.5662 ಚ.ಕಿ.ಮೀ ಡೀಮ್ಡ್ ಅರಣ್ಯ ಪ್ರದೇಶವಿದೆ. ಈ ಅರಣ್ಯ ಪ್ರದೇಶವು ವಿನಾಶದ ಅಂಚಿನಲ್ಲಿರುವ ಚಿಂಕಾರ (ಹುಲ್ಲೇಕರ) ಜತೆಗೆ ವಿವಿಧ ವನ್ಯಜೀವಿಗಳು, ವಿಶಿಷ್ಟ ಜಾತಿಯ ಸಸ್ಯ ಸಂಪತ್ತನ್ನು ಒಳಗೊಂಡಿದೆ. ತುಮಕೂರು ಜಿಲ್ಲೆಯ ಶಿರಾ, ಚಿಕ್ಕನಾಯಕನಹಳ್ಳಿ, ಗುಬ್ಬಿ ತಾಲ್ಲೂಕುಗಳು ಹಾಗೂ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬುಕ್ಕಾಪಟ್ಟಣ ವನ್ಯಜೀವಿ ಧಾಮ ವಿಸ್ತರಿಸಿಕೊಂಡಿದೆ.

ಭದ್ರಾ ಮೇಲ್ದಂಡೆ ಯೋಜನೆಯಡಿ ನಡೆಯುತ್ತಿರುವ ಕಾಮಗಾರಿಯ ನೋಟ

ಬುಧವಾರ, ಸೆಪ್ಟೆಂಬರ್ 4, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 247 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಏಕಕಾಲಕ್ಕೆ ಹಲವು ಬ್ರೌಸರ್ ಟ್ಯಾಬ್‌ಗಳನ್ನು ತೆರೆದು, ವ್ಯವಸ್ಥಿತವಾಗಿಡುವ 'ಟ್ಯಾಬ್ ಗ್ರೂಪ್ಸ್'ನಿಂದ ಅನುಕೂಲ ಹೆಚ್ಚು



ಆಳ-ಅಗಲ
ಭ್ರಷ್ಟಾಚಾರ ಅವ್ಯಾಹತ

ಬಳ್ಳಾರಿ: ಕಾರಾಗೃಹಗಳಿಗೆ ಅತ್ಯಾಧುನಿಕ ಜಾಮರ್ ಶೀಘ್ರ 5

ಪತ್ರಿಕಾ ವಿತರಕರ ದಿನಾಚರಣೆಯ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,555	25,279	₹73,630 (ಬೆಂಗಳೂರು)	₹84,700 (ಬೆಂಗಳೂರು)	83.98

ಪಶ್ಚಿಮ ಬಂಗಾಳ: ಮಹಿಳೆ, ಮಕ್ಕಳ ರಕ್ಷಣೆಗೆ ಮತ್ತಷ್ಟು ಒತ್ತು • ಅಪರಾಧಿಗಳಿಗೆ ಕಠಿಣ ಶಿಕ್ಷೆ

ಅತ್ಯಾಚಾರಿಗೆ ಗಲ್ಲು: ಮಸೂದೆಗೆ ಅಸ್ತು

ಕೋಲ್ಕತ್ತ (ಪಿಟಿಐ): ಅತ್ಯಾಚಾರಿಗಳಿಗೆ ಮರಣ ದಂಡನೆ ವಿಧಿಸಲು ಅವಕಾಶ ನೀಡುವ ಮಸೂದೆಯನ್ನು ಪಶ್ಚಿಮ ಬಂಗಾಳ ವಿಧಾನಸಭೆಯು ಸರ್ವಾನುಮತದಿಂದ ಮಂಗಳವಾರ ಅಂಗೀಕರಿಸಿದೆ.

ಇಲ್ಲಿನ ಆರ್.ಜಿ.ಕರ್ ವೈದ್ಯಕೀಯ ಕಾಲೇಜು, ಆಸ್ಪತ್ರೆಯ ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಮತ್ತು ಆಕೆಯ ಕೊಲೆ ಪ್ರಕರಣ ಕುರಿತು ದೇಶದಾದ್ಯಂತ ಭಾರಿ ಆಕ್ರೋಶ ವ್ಯಕ್ತವಾಗುತ್ತಿರುವುದರ ನಡುವೆಯೇ ಈ ಮಸೂದೆಗೆ ಒಪ್ಪಿಗೆ ದೊರೆತಿದೆ.

ಅತ್ಯಾಚಾರಕ್ಕೆ ಒಳಗಾದ ಮಹಿಳೆ ಸಾವಿಗೀಡಾದಲ್ಲಿ ಅಥವಾ ಪ್ರಜ್ಞಾಹೀನ ಸ್ಥಿತಿ ತಲುಪಿದಲ್ಲಿ, ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸುವ ಅವಕಾಶವನ್ನು ಮಸೂದೆ ಒಳಗೊಂಡಿದೆ. ಅತ್ಯಾಚಾರ ಪ್ರಕರಣದಲ್ಲಿ ಅಪರಾಧಿ ಎಂದು ಸಾಬೀತಾದ ವ್ಯಕ್ತಿಗೆ ಪೆರೋಲ್ ರಹಿತ ಜೀವಾವಧಿ ಶಿಕ್ಷೆ ನೀಡುವ ಅವಕಾಶವನ್ನೂ ಈ ಮಸೂದೆ ಹೊಂದಿದೆ.

ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ, 'ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಂಡಿಸಿದ ಮಸೂದೆಯು, ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಆಕೆಯ ಕೊಲೆ ಬಗ್ಗೆ ವ್ಯಕ್ತವಾಗುತ್ತಿರುವ ಸಾರ್ವಜನಿಕ ಆಕ್ರೋಶ ಮತ್ತು ಪ್ರತಿಭಟನೆಯಿಂದ ದೇಶದ ಗಮನವನ್ನು ಬೇರೆಡೆ ಸೆಳೆಯುವ ತಂತ್ರದ ಭಾಗವಾಗಿದೆ' ಎಂದು ಆರೋಪಿಸಿದ್ದಾರೆ.

ಆದಾಗ್ಯೂ, ಬಿಜೆಪಿ ಸೇರಿದಂತೆ ವಿರೋಧ ಪಕ್ಷಗಳ ಎಲ್ಲ ಸದಸ್ಯರು ಈ ಮಸೂದೆಗೆ ಬೆಂಬಲ ಸೂಚಿಸಿದ್ದಾರೆ.

'ಅಪರಾಜಿತ ಮಹಿಳೆ ಮತ್ತು ಮಕ್ಕಳ (ಪಶ್ಚಿಮ ಬಂಗಾಳ ಕ್ರಿಮಿನಲ್ ಕಾಯ್ದೆಗಳು ಮತ್ತು ತಿದ್ದುಪಡಿ) ಮಸೂದೆ–2024' ಮಂಡನೆ ಹಾಗೂ ಅಂಗೀಕರಿಸುವುದಕ್ಕಾಗಿ ಎರಡು ದಿನಗಳ ವಿಶೇಷ ಅಧಿವೇಶನವನ್ನು ಕರೆಯಲಾಗಿತ್ತು. ಕಾನೂನು ಸಚಿವ ಮಲಯ್ ಘಟಕ್ ಮಸೂದೆ ಮಂಡಿಸಿದರು.

'ಮಹಿಳೆ ಮತ್ತು ಮಕ್ಕಳ ವಿರುದ್ಧ ನಡೆಯುವ ಹಿಂಸಾಕೃತ್ಯಗಳ ತನಿಖೆ ಮತ್ತು ವಿಚಾರಣೆಯನ್ನು ತ್ವರಿತವಾಗಿ ನಡೆಸುವುದಕ್ಕೆ ಅನುವಾಗುವಂತೆ ಚೌಕಟ್ಟನ್ನು ರೂಪಿಸಲು ಹೊಸದಾಗಿ ಜಾರಿಗೆ ಬಂದಿರುವ ಭಾರತೀಯ ನ್ಯಾಯ ಸಂಹಿತೆ–2023, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023 ಹಾಗೂ ಪೋಕ್ಸೊ ಕಾಯ್ದೆ–2012ಕ್ಕೆ ಸೂಕ್ತ ತಿದ್ದುಪಡಿಯನ್ನು ಪ್ರಸ್ತಾವಿಸಲಾಗಿದೆ' ಎಂದು ಮಸೂದೆಯಲ್ಲಿ ಹೇಳಲಾಗಿದೆ.

11ನೇ ಪುಟ ನೋಡಿ

ಮಸೂದೆಯಲ್ಲಿನ ಅವಕಾಶಗಳೇನು?

- ಅತ್ಯಾಚಾರಿಗಳಿಗೆ ನೀಡುವ ಶಿಕ್ಷೆಗೆ ಸಂಬಂಧಿಸಿ ಭಾರತೀಯ ನ್ಯಾಯ ಸಂಹಿತೆಯಲ್ಲಿನ (ಬಿಎನ್‌ಎಸ್) ಕೆಲ ಸೆಕ್ಷನ್‌ಗಳಿಗೆ ತಿದ್ದುಪಡಿಗಳನ್ನು ರಾಜ್ಯದ ನೂತನ ಮಸೂದೆ ಒಳಗೊಂಡಿದೆ
- ಬಿಎನ್‌ಎಸ್ ಸೆಕ್ಷನ್ 64: ಅತ್ಯಾಚಾರ ಪ್ರಕರಣದ ಅಪರಾಧಿಗೆ 10 ವರ್ಷಗಳಿಗಿಂತಲೂ ಕಡಿಮೆ ಇಲ್ಲದ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಲು ಬಿಎನ್‌ಎಸ್ ಸೆಕ್ಷನ್ 64ರಡಿ ಅವಕಾಶ ಇದೆ. ಪಶ್ಚಿಮ ಬಂಗಾಳದ 'ಅಪರಾಜಿತ ಮಸೂದೆ'ಯು ಈ ಸೆಕ್ಷನ್ ಅನ್ನು ತಿದ್ದುಪಡಿ ಮಾಡಿದ್ದು, 'ಅಪರಾಧಿಗೆ ಆತನ ಜೀವಿತಾವಧಿವರೆಗೆ ಜೈಲು ಶಿಕ್ಷೆ ಮತ್ತು ದಂಡ ಇಲ್ಲವೇ ಮರಣ ದಂಡನೆ' ನೀಡುವ ಅವಕಾಶ ಸೇರಿಸಲಾಗಿದೆ
- ಬಿಎನ್‌ಎಸ್ ಸೆಕ್ಷನ್ 66: ಅತ್ಯಾಚಾರದಿಂದಾಗಿ ಸಂತ್ರಸ್ತೆ ಮೃತಪಟ್ಟಲ್ಲಿ ಅಥವಾ ಆಕೆ ಪ್ರಜ್ಞಾಹೀನ ಸ್ಥಿತಿ ತಲುಪಿದಲ್ಲಿ ಅಪರಾಧಿಗೆ 20 ವರ್ಷ ಜೈಲು ಶಿಕ್ಷೆ/ಜೀವಾವಧಿ ಶಿಕ್ಷೆ/ಮರಣ ದಂಡನೆ ವಿಧಿಸಲು ಈ ಸೆಕ್ಷನ್ ಅವಕಾಶ ನೀಡುತ್ತದೆ 'ಅಪರಾಜಿತ ಮಸೂದೆ'ಯು ಇಂತಹ ಪ್ರಕರಣಗಳಲ್ಲಿ ಮರಣ ದಂಡನೆಗೆ ಅವಕಾಶ ನೀಡುತ್ತದೆ
- ಬಿಎನ್‌ಎಸ್ ಸೆಕ್ಷನ್ 70: ಸಾಮೂಹಿಕ ಅತ್ಯಾಚಾರಕ್ಕೆ ಸಂಬಂಧಿಸಿದ ಸೆಕ್ಷನ್ ಇದು. ಇಂತಹ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ 20 ವರ್ಷ ಜೈಲು, ದಂಡ ವಿಧಿಸಲಾಗುತ್ತದೆ. ನೂತನ ಮಸೂದೆಯು 20 ವರ್ಷ ಜೈಲು ಶಿಕ್ಷೆಯನ್ನು ತೆಗೆದು ಹಾಕಿದೆ. ತಪ್ಪಿತಸ್ಥರಿಗೆ ಜೀವಾವಧಿ ಶಿಕ್ಷೆ ಮತ್ತು ಮರಣ ದಂಡನೆ ವಿಧಿಸಬಹುದಾದ ಅವಕಾಶವನ್ನು ಒಳಗೊಂಡಿದೆ
- ಲೈಂಗಿಕ ಹಿಂಸೆಯ ಸಂತ್ರಸ್ತೆಯ ಗುರುತು ಬಹಿರಂಗಪಡಿಸಿದವರಿಗೆ ಬಿಎನ್‌ಎಸ್ ಅಡಿ ಗರಿಷ್ಠ 2 ವರ್ಷ ಜೈಲು ಶಿಕ್ಷೆ ವಿಧಿಸುವ ಅವಕಾಶ ಇದೆ. ಹೊಸ ಮಸೂದೆಯಲ್ಲಿ 3–5 ವರ್ಷ ಜೈಲು ಶಿಕ್ಷೆ ವಿಧಿಸುವ ಅವಕಾಶವನ್ನು ಸೇರಿಸಲಾಗಿದೆ

ಮಮತಾ ಹೇಳಿದ್ದು

- ಮಹಿಳೆ ಮತ್ತು ಮಕ್ಕಳ ವಿರುದ್ಧದ ದೌರ್ಜನ್ಯ/ಹಿಂಸೆ ಪ್ರಕರಣಗಳ ಕುರಿತು ಕಾಲಮಿತಿಯಲ್ಲಿ ತನಿಖೆ ಪೂರ್ಣಗೊಳಿಸುವುದನ್ನು ಖಾತ್ರಿಪಡಿಸಲು 'ಅಪರಾಜಿತ ಕಾರ್ಯ-ಪಡೆ'ಯನ್ನು ಸ್ಥಾಪಿಸಲಾಗುವುದು
- ವಿಧಾನಸಭೆಯಲ್ಲಿ ಅಂಗೀಕರಿಸಲಾದ ಮಸೂದೆಯಲ್ಲಿನ ಅವಕಾಶಗಳಿಗೆ ಅನುಗುಣವಾಗಿ ಈ ಕಾರ್ಯಪಡೆ ಕಾರ್ಯನಿರ್ವಹಿಸಲಿದೆ
- ಮಸೂದೆಗೆ ತ್ವರಿತವಾಗಿ ಅಂಕಿತ ಹಾಕುವಂತೆ ರಾಜ್ಯಪಾಲರ ಮೇಲೆ ವಿರೋಧ ಪಕ್ಷಗಳು ಒತ್ತಡ ಹೇರಬೇಕು



ಮಮತಾ ಬ್ಯಾನರ್ಜಿ

ಕಿತ್ತುಹೋದ ರಸ್ತೆ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ದಂಡೋತಿ ಕಾಗಿಣಾ ನದಿ ಪ್ರವಾಹದ ರಭಸಕ್ಕೆ ಸೇತುವೆ ಮೇಲಿನ ಸಿಮೆಂಟ್ ರಸ್ತೆ ಕಿತ್ತುಹೋಗಿದೆ

ಪ್ರಜಾವಾಣಿ ಚಿತ್ರ: ಮಲ್ಲಿಕಾರ್ಜುನ ಎಚ್.ಎಂ

'ಕೋವಿಡ್ ವರದಿ; ಸಂಪುಟದಲ್ಲಿ ಮಂಡನೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಕೋವಿಡ್ ಅವಧಿಯಲ್ಲಿ ನಡೆದ ಅಕ್ರಮಗಳ ಕುರಿತು ತನಿಖಾ ಆಯೋಗವು ನೀಡಿರುವ ವರದಿಯನ್ನು ಗುರುವಾರ ಸಂಪುಟ ಸಭೆಯ ಮುಂದೆ ಇಡಲಾಗುವುದು. ನಂತರವಷ್ಟೇ ಕ್ರಮದ ಕುರಿತು ನಿರ್ಧರಿಸುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ತನಿಖೆಯ ವರದಿಯನ್ನು ನಾನೇ ಇನ್ನೂ ನೋಡಿಲ್ಲ. ವಿರೋಧ ಪಕ್ಷಗಳಿಗೆ ಕೊಟ್ಟವರು ಯಾರು? ಅದನ್ನು ನೋಡದೆಯೇ ಮಾತನಾಡುವುದು ಸರಿಯೇ' ಎಂದು ಅವರು ಪ್ರಶ್ನಿಸಿದರು.

'ರಾಜಕೀಯ ಉದ್ದೇಶದಿಂದ ವರದಿ ತರಿಸಲಾಗಿದೆ' ಎಂದು ಸಂಸದ ಕೆ. ಸುಧಾಕರ್ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿ, 'ಅವರಿಗೆ ತಾನೇನು ತಪ್ಪು ಮಾಡಿದ್ದೇನೆ ಎಂಬ ಅರಿವಿದೆ. ಹೀಗಾಗಿ ವರದಿ ಬಹಿರಂಗವಾಗುವುದಕ್ಕೂ ಮುಂಚೆಯೇ ಟೀಕಿಸುತ್ತಿದ್ದಾರೆ.' ಎಂದು ಪ್ರಶ್ನಿಸಿದರು.

> ಕುಂಬಳಕಾಯಿ ಕಳ್ಳ ಎಂದರೆ ಅವರು (ಸುಧಾಕರ್) ಹೆಗಲು ಮುಟ್ಟಿ ನೋಡಿಕೊಳ್ಳುವುದು ಏಕೆ?
> **ಸಿದ್ದರಾಮಯ್ಯ** ಮುಖ್ಯಮಂತ್ರಿ

ದರ್ಶನ್ ಮೊದಲ ಆರೋಪಿ? • ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪರಿಶೀಲನೆ

ಕೊಲೆ: ದೋಷಾರೋಪ 4,500 ಪುಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಅಧಿಕಾರಿಗಳು, ದೋಷಾರೋಪ ಪಟ್ಟಿ ಸಲ್ಲಿಸುವ ಕೊನೆಯ ಹಂತದ ತಯಾರಿ ನಡೆಸಿದ್ದಾರೆ.

ನ್ಯಾಯಾಲಯಕ್ಕೆ ಬುಧವಾರ ಅಥವಾ ಗುರುವಾರ ಆರೋಪಪಟ್ಟಿ ಸಲ್ಲಿಸುವ ಸಾಧ್ಯತೆ ಇದೆ.

ನಗರದ ಪಟ್ಟಣಗೆರೆಯ ಶೆಡ್‌ನಲ್ಲಿ ಜೂನ್ 9ರಂದು ಕೊಲೆ ನಡೆದಿತ್ತು. ಜೂನ್ 11ರಂದು ನಟ ದರ್ಶನ್ ಸೇರಿದಂತೆ ಪ್ರಮುಖ ಆರೋಪಿಗಳನ್ನು ಬಂಧಿಸಲಾಗಿತ್ತು. ಅಪರಾಧ ಪ್ರಕ್ರಿಯಾ ಸಂಹಿತೆಯ ಪ್ರಕಾರ, ಆರೋಪಿಗಳನ್ನು ಬಂಧಿಸಿದ 90 ದಿನಗಳೊಳಗೆ ಆರೋಪಪಟ್ಟಿ ಸಲ್ಲಿಸಬೇಕು. ಇಲ್ಲವಾದರೆ ಆರೋಪಿಗಳು ಜಾಮೀನು ಪಡೆಯಲು ಅರ್ಹರಾಗುತ್ತಾರೆ. ಈ ಕಾರಣದಿಂದ ಒಂದೆರಡು ದಿನಗಳೊಳಗೆ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲು ಭರದ ಸಿದ್ಧತೆ ನಡೆದಿದೆ.

ಕೊಲೆ ಆರೋಪದಡಿ ದರ್ಶನ್ ಹಾಗೂ ಅವರ ಆಪ್ತೆ ಪವಿತ್ರಾಗೌಡ ಸೇರಿ 17 ಮಂದಿಯನ್ನು ಬಂಧಿಸಲಾಗಿತ್ತು. ತನಿಖೆ ಹಂತದಲ್ಲಿ ಲಭಿಸಿದ ಎಲ್ಲ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿದ್ದ ತನಿಖಾಧಿಕಾರಿಗಳು ಬೆಂಗಳೂರು ಹಾಗೂ ಹೈದರಾಬಾದ್ ವಿಧಿ ವಿಜ್ಞಾನ ಪ್ರಯೋಗಾಲಯಗಳಿಗೆ ರವಾನಿಸಿದ್ದರು. ಈ ಪೈಕಿ ಬೆಂಗಳೂರು ಎಫ್‌ಎಸ್‌ಎಲ್ ಪರೀಕ್ಷಾ ವರದಿ ಕೈ ಸೇರಿದ್ದು, ಹೈದರಾಬಾದ್ ಪ್ರಯೋಗಾಲಯದ ವರದಿ ಬರುವುದು ಮಾತ್ರ ಬಾಕಿ ಇದೆ.

5ನೇ ಪುಟ ನೋಡಿ

'ಪವಿತ್ರಾಗೌಡಗೆ ಅಶ್ಲೀಲ ಸಂದೇಶ ಕಳುಹಿಸಿದ್ದು ದೃಢ'

'ರೇಣುಕಸ್ವಾಮಿ ಅವರು ದರ್ಶನ್ ಅವರ ಆಪ್ತೆ ಪವಿತ್ರಾಗೌಡ ಅವರಿಗೆ ಇನ್‌ಸ್ಟಾಗ್ರಾಂ ಮೂಲಕ ಅಶ್ಲೀಲ ಸಂದೇಶ ಹಾಗೂ ಫೋಟೊಗಳನ್ನು ಕಳುಹಿಸುತ್ತಿದ್ದರು' ಎಂಬುದು ತನಿಖೆಯಿಂದ ದೃಢಪಟ್ಟಿದೆ.

ಆರೋಪಿಗಳು ರೇಣುಕಸ್ವಾಮಿಯನ್ನು ಚಿತ್ರದುರ್ಗದಿಂದ ಅಪಹರಿಸಿ, ಪಟ್ಟಣಗೆರೆಯ ಶೆಡ್‌ಗೆ ಕರೆದೊಯ್ದು ಕೊಲೆ ನಡೆಸಿರುವುದಕ್ಕೆ ಇದೇ ಕಾರಣ ಎಂಬುದು ತನಿಖೆಯಿಂದ ಬಯಲಾಗಿದ್ದು, ನ್ಯಾಯಾಲಯಕ್ಕೆ ಸಲ್ಲಿಸುವ ಆರೋಪಪಟ್ಟಿಯಲ್ಲಿ ಈ ಅಂಶವನ್ನೂ ಉಲ್ಲೇಖಿಸಲಾಗುವುದು ಎಂದು ಮೂಲಗಳು ಹೇಳಿವೆ.

ಕೃತ್ಯ ಎಸಗಿದ ಬಳಿಕ ರೇಣುಕಸ್ವಾಮಿ ಮೊಬೈಲ್, ಸಿಮ್ ಅನ್ನು ಆರೋಪಿಗಳು ರಾಜಕಾಲುವೆಗೆ ಎಸೆದು ಸಾಕ್ಷ್ಯನಾಶ ಮಾಡಿದ್ದರು. ತನಿಖಾಧಿಕಾರಿಗಳು ರೇಣುಕಸ್ವಾಮಿ ಅವರ ಹೆಸರಿನಲ್ಲಿದ್ದ ಸಿಮ್ ಮತ್ತೊಮ್ಮೆ ಪಡೆದು, ಇನ್‌ಸ್ಟಾಗ್ರಾಂ ಖಾತೆಯನ್ನು ಮರು ಚಾಲನೆಗೊಳಿಸಿದ್ದರು. ನಂತರ, 'ಮೆಟಾ' ಕಂಪನಿಗೆ ಪತ್ರ ಬರೆದು ರೇಣುಕಸ್ವಾಮಿ ಅವರು ಪವಿತ್ರಾ ಅವರ ಖಾತೆಗೆ ಅಶ್ಲೀಲ ಸಂದೇಶ ಕಳುಹಿಸುತ್ತಿದ್ದರೇ ಎಂಬುದರ ಮಾಹಿತಿ ಕೇಳಿದ್ದರು.

'ಮೆಟಾ' ಕಂಪನಿಯವರು ತನಿಖಾಧಿಕಾರಿಗಳಿಗೆ ಮಾಹಿತಿ ನೀಡಿದ್ದು, 'ರೆಡ್ಡಿ' ಎಂಬ ಹೆಸರಿನ ಖಾತೆಯಿಂದ ಅಶ್ಲೀಲ ಸಂದೇಶಗಳು ಬಂದಿದ್ದವು ಎಂಬುದಾಗಿ ಹೇಳಿದ್ದಾರೆ ಎಂದು ಗೊತ್ತಾಗಿದೆ. ಅಲ್ಲದೇ ಪೂರಕ ದಾಖಲೆಗಳನ್ನು ಒದಗಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ರೇಣುಕಸ್ವಾಮಿ 'ರೆಡ್ಡಿ' ಹೆಸರಿನ ಖಾತೆಯಿಂದ ಸಂದೇಶ ಕಳುಹಿಸುತ್ತಿದ್ದರು ಎಂಬುದು ಪೊಲೀಸರ ತನಿಖೆಯಲ್ಲಿ ಪತ್ತೆಯಾಗಿದೆ.

ದರ್ಶನ್

ಪವಿತ್ರಾ ಗೌಡ

ಹರಿಯಾಣ: ದನಕಳ್ಳನೆಂದು ಭಾವಿಸಿ ವಿದ್ಯಾರ್ಥಿ ಹತ್ಯೆ

ಫರೀದಾಬಾದ್ (ಪಿಟಿಐ): ದ್ವಿತೀಯ ಪಿಯುಸಿ ವಿದ್ಯಾರ್ಥಿಯೊಬ್ಬನನ್ನು ದನ ಕಳ್ಳಸಾಗಣೆದಾರನೆಂದು ತಿಳಿದು ಸ್ವಯಂಘೋಷಿತ ಗೋರಕ್ಷಕ ತಂಡವೊಂದು ಕಾರಿನಲ್ಲಿ ಹಿಂಬಾಲಿಸಿ ಗುಂಡಿಕ್ಕಿ ಹತ್ಯೆಗೈದಿದೆ.

ಹತ್ಯೆಗೆ ಸಂಬಂಧಿಸಿದಂತೆ ಸೌರಭ್, ಅನಿಲ್ ಕೌಶಿಕ್, ವರುಣ್, ಕೃಷ್ಣ ಮತ್ತು ಆದೇಶ್ ಎಂಬ ಐವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ. ಆಗಸ್ಟ್ 23ರಂದು ಈ ಕೃತ್ಯ ನಡೆದಿದ್ದು, ಆರ್ಯನ್ ಮಿಶ್ರಾ ದುಷ್ಕರ್ಮಿಗಳ ಗುಂಡಿಗೆ ಬಲಿಯಾದ ವಿದ್ಯಾರ್ಥಿ.

'ದನ ಕಳ್ಳಸಾಗಣೆದಾರರು ಆಗಸ್ಟ್ 23ರ ರಾತ್ರಿ ಎರಡು ಎಸ್‌ಯುವಿಗಳಲ್ಲಿ ನಗರಕ್ಕೆ ಬರಲಿದ್ದಾರೆ ಎಂಬ ಮಾಹಿತಿ ಲಭಿಸಿದ್ದು, ಅವರಿಗಾಗಿ ಕಾದು ಕುಳಿತಿದ್ದೆವು' ಎಂದು ಆರೋಪಿಗಳು ವಿಚಾರಣೆ ವೇಳೆ ಹೇಳಿದ್ದಾರೆ.

'ಆರ್ಯನ್ ಮಿಶ್ರಾ ಮತ್ತು ಸ್ನೇಹಿತರಾದ ಶಾಂಕಿ ಹಾಗೂ ಹರ್ಷಿತ್ ಅವರು ಕಾರಿನಲ್ಲಿ ಬಂದಿದ್ದು, ಸ್ವಯಂಘೋಷಿತ ಗೋರಕ್ಷರಕ ತಂಡವು ಕಾರಿನಲ್ಲಿ ಗೋ ಕಳ್ಳಸಾಗಣೆದಾರರು ಇದ್ದಾರೆ ಎಂದು ಭಾವಿಸಿದ್ದಾರೆ. ದೆಹಲಿ– ಆಗ್ರಾ ರಾಷ್ಟ್ರೀಯ ಹೆದ್ದಾರಿಯ ಪಲ್ವಲ್ ಸಮೀಪದ ಗದಪುರಿ ಟೋಲ್ ಪ್ಲಾಜಾದವರೆಗೆ ಸುಮಾರು 30 ಕಿ.ಮೀ. ದೂರ ಅವರ ಕಾರನ್ನು ಹಿಂಬಾಲಿಸಿದ್ದಾರೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಕಾರು ನಿಲ್ಲಿಸುವಂತೆ ಸೂಚನೆ ನೀಡಿದರೂ ಚಾಲಕನು ವೇಗ ಹೆಚ್ಚಿಸಿದ್ದಾನೆ. ಇದರಿಂದ ಕಾರಿನ ಮೇಲೆ ಗುಂಡು ಹಾರಿಸಿದ್ದಾಗಿ ಆರೋಪಿಗಳು ಹೇಳಿದ್ದಾರೆ. ಗುಂಡೇಟು ತಗುಲಿ ಆರ್ಯನ್ ಸ್ಥಳದಲ್ಲೇ ಮೃತಪಟ್ಟರು' ಎಂದು ವಿವರಿಸಿದರು.

ಎಲ್ಲ ಐವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ತನಿಖೆ ಮುಂದುವರಿದಿದೆ.

ದೀಪ್ತಿ ಜೀವಾಂಜಿ

ದೀಪ್ತಿ ಜೀವಾಂಜಿಗೆ ಕಂಚಿನ ಪದಕ

ಪ್ಯಾರಿಸ್ (ಪಿಟಿಐ): ವಿಶ್ವ ಚಾಂಪಿಯನ್ ದೀಪ್ತಿ ಜೀವಾಂಜಿ ಅವರು ಪ್ಯಾರಾಲಿಂಪಿಕ್ಸ್‌ನ ಮಹಿಳೆಯರ 400 ಮೀಟರ್ ಓಟದ ಟಿ20 ವಿಭಾಗದಲ್ಲಿ ಕಂಚಿನ ಪದಕ ಗೆದ್ದರು. ಈ ಮೂಲಕ ಭಾರತ ಗೆದ್ದ ಪದಕಗಳ ಸಂಖ್ಯೆ 16ಕ್ಕೆ ಏರಿಕೆಯಾಗಿದೆ.

ಭಾರತದ 21 ವರ್ಷ ವಯಸ್ಸಿನ ದೀಪ್ತಿ, ಮಂಗಳವಾರ ನಡೆದ ಫೈನಲ್ ಸ್ಪರ್ಧೆಯಲ್ಲಿ 55.82 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಉಕ್ರೇನ್‌ನ ಯುಲಿಯಾ ಶುಲಿಯಾರ್ (55.16 ಸೆ) ಮತ್ತು ವಿಶ್ವದಾಖಲೆ ಹೊಂದಿರುವ ಟರ್ಕಿಯ ಐಸೆಲ್ ಒಂಡರ್ (55.23) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಜಯಿಸಿದರು. ಶುಲಿಯಾರ್ ಅವರು ಟೋಕಿಯೊದಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

12ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಹಡಪದಗೆ ಕನ್ನಡ ಸಂಘರ್ಷ ಸಮಿತಿ ಪ್ರಶಸ್ತಿ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ನೀಡುವ 'ಸಾವಿತ್ರಿಬಾಯಿ ಫುಲೆ ಹಾಗೂ ಜ್ಯೋತಿ ಬಾ ಫುಲೆ' ಪ್ರಶಸ್ತಿಗೆ ಕವಿ ಚಂದ್ರಶೇಖರ ಹಡಪದ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ₹5 ಸಾವಿರ ನಗದು ಒಳಗೊಂಡಿದೆ. ಇದೇ 8ರಂದು ಬೆಳಿಗ್ಗೆ 11 ಗಂಟೆಗೆ ಎನ್.ಆರ್. ಕಾಲೊನಿಯ ಬಿ.ಎಂ.ಶ್ರೀ. ಕಲಾಭವನದಲ್ಲಿ ಲೇಖಕಿ ಕೆ. ಷರೀಫಾ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಮಿತಿ ಅಧ್ಯಕ್ಷ ಎ.ಎಸ್.ನಾಗರಾಜಸ್ವಾಮಿ ತಿಳಿಸಿದ್ದಾರೆ.

ಎಚ್‌ಎಸ್‌ಆರ್ ಸಿಟಿಜನ್ ಫೋರಂ ವತಿಯಿಂದ ಜೆ.ಪಿ. ನಗರದ ನೋಬಲ್ ಕಾಲೇಜಿನಲ್ಲಿ ನಡೆದ 'ಮಣ್ಣಿನ ಗಣೇಶ ಕಾರ್ಯಾಗಾರ'ದಲ್ಲಿ 130ಕ್ಕೂ ಹೆಚ್ಚು ಮಕ್ಕಳು ಹಾಗೂ ವಯಸ್ಕರು ಪಾಲ್ಗೊಂಡಿದ್ದರು. ಕಾರ್ಯಾಗಾರದಲ್ಲಿ ತರಬೇತಿಯ ಜೊತೆಗೆ ರಾಸಾಯನಿಕ ಮುಕ್ತ ಹಾಗೂ ಪರಿಸರ ಸ್ನೇಹಿ ಹಬ್ಬಗಳ ಆಚರಣೆಯ ಕುರಿತು ಜಾಗೃತಿ ಸಹ ಮೂಡಿಸಲಾಯಿತು

ವಿಶ್ವ ದಾಖಲೆಯ ಪಟ್ಟಿಗೆ ಸೇರಿದ ತರಬೇತಿ ಕಾರ್ಯಕ್ರಮ

ಪೊಲೀಸರಿಗೆ ಸಿಪಿಆರ್ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಜಿಲ್ ಸೊಸೈಟಿ ಆಫ್ ಬೆಂಗಳೂರು ಸಂಸ್ಥೆ ಕಂಠೀರವ ಕ್ರೀಡಾಂಗಣದಲ್ಲಿ ಆಗಸ್ಟ್ 14ರಂದು ಪ್ರಥಮ ಚಿಕಿತ್ಸೆ ಹಾಗೂ ಕಾರ್ಡಿಯೊ ಪಲ್ಮನರಿ ರಿಸಸಿಟೇಶನ್ (ಸಿಪಿಆರ್) ವಿಧಾನ ಕುರಿತು ನಗರದ 2,200 ಪೊಲೀಸರಿಗೆ ನೀಡಿದ ತರಬೇತಿ ಕಾರ್ಯಕ್ರಮಕ್ಕೆ ವರ್ಲ್ಡ್ ರೆಕಾರ್ಡ್ ಆಫ್ ಲಂಡನ್ ಸಂಸ್ಥೆಯು ವಿಶ್ವ ದಾಖಲೆ ಪ್ರಮಾಣಪತ್ರ ನೀಡಿದೆ.

ಹೃದಯ ಹಾಗೂ ಶ್ವಾಸಕೋಶ ಸಂಬಂಧಿ ಕಾಯಿಲೆಗೆ ನೀಡಿದ ತರಬೇತಿಯ ನೇತೃತ್ವ ವಹಿಸಿದ್ದ ಐಕ್ಯಾಟ್ ಫೌಂಡೇಷನ್ ಸಂಸ್ಥೆಯ ಡಾ.ಶಾಲಿನಿ ಈ ಬಗ್ಗೆ ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಮಂಗಳವಾರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

'ಆರೋಗ್ಯ ಸಚಿವ ಆರ್.ದಿನೇಶ್ ಗುಂಡೂರಾವ್, ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಸಹ ತರಬೇತಿಯಲ್ಲಿ ಭಾಗವಹಿಸಿದ್ದರು. ಒಂದೇ ಸ್ಥಳದಲ್ಲಿ ಅತಿಹೆಚ್ಚು ಮಂದಿಗೆ ತರಬೇತಿ ನೀಡಿರುವುದು ಇದೇ ಮೊದಲು. ಪ್ರಥಮ ಚಿಕಿತ್ಸೆ ತರಬೇತಿ ಪಡೆದಿದ್ದರೆ, ತುರ್ತು ಸಂದರ್ಭದಲ್ಲಿ ವ್ಯಕ್ತಿಯ ಜೀವ ಉಳಿಸಲು ಸಾಧ್ಯ. ನಿತ್ಯ ವಿವಿಧ ಘಟನೆಗಳನ್ನು ಪೊಲೀಸರು ನೋಡುತ್ತಾರೆ. ಸಿಆರ್‌ಪಿ ವಿಧಾನ ಹಾಗೂ ಪ್ರಥಮ ಚಿಕಿತ್ಸೆಯ ಜ್ಞಾನ ಹೊಂದಿರುವುದು ಅಗತ್ಯ. ಹಠಾತ್ ಹೃದಯಾಘಾತ ಸಂದರ್ಭದಲ್ಲಿ ವ್ಯಕ್ತಿಯನ್ನು ಪ್ರಾಣಾಪಾಯದಿಂದ ಪಾರು ಮಾಡಲು ಸಿಪಿಆರ್ ವಿಧಾನ ಸಹಾಯಕ. ಕೋವಿಡ್ ಬಳಿಕ ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚುತ್ತಿವೆ' ಎಂದು ಹೇಳಿದರು.

ಸರ್ಜಿಕಲ್ ಸೊಸೈಟಿ ಆಫ್ ಬೆಂಗಳೂರು ಸಂಸ್ಥೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪೊಲೀಸರಿಗೆ ಸಿಪಿಆರ್ ತರಬೇತಿ ನೀಡಲಾಯಿತು.

ನಿಯಮ ಉಲ್ಲಂಘನೆ: 1,011 ಪ್ರಕರಣ

ಬೆಂಗಳೂರು: ಪಶ್ಚಿಮ ಸಂಚಾರ ವಿಭಾಗದ ವ್ಯಾಪ್ತಿಯಲ್ಲಿ ನಿಯಮ ಉಲ್ಲಂಘಿಸಿ ಚಾಲನೆ ಮಾಡುತ್ತಿದ್ದವರ ವಿರುದ್ಧ ಕಾರ್ಯಾಚರಣೆ ಮುಂದುವರೆಸಿರುವ ಪೊಲೀಸರು ಒಟ್ಟು 1,011 ಪ್ರಕರಣ ದಾಖಲಿಸಿದ್ದಾರೆ.

ದೋಷಪೂರಿತ ನಂಬರ್ ಪ್ಲೇಟ್ ಅಳವಡಿಕೆ 192 ಪ್ರಕರಣ, ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ 27, ನಿರ್ಬಂಧಿತ ಸ್ಥಳಗಳಲ್ಲಿ ವಾಹನ ನಿಲುಗಡೆ 103, ಏಕಮುಖ ಮಾರ್ಗದಲ್ಲಿ ವಾಹನ ಸಂಚಾರ 260, ಇತರೆ ಸಂಚಾರ ನಿಯಮ ಉಲ್ಲಂಘನೆ 429 ಪ್ರಕರಣಗಳು ಸೇರಿ 1,011 ಪ್ರಕರಣ ದಾಖಲು ಮಾಡಲಾಗಿದೆ. ₹5.26 ಲಕ್ಷ ದಂಡ ಸಂಗ್ರಹಿಸಲಾಗಿದೆ ಎಂದು ನಗರ ಸಂಚಾರ ಪೊಲೀಸರು ಹೇಳಿದರು.

ಬಫರ್ ವಲಯದಲ್ಲಿ 300 ಕಿ.ಮೀ. ಸರ್ವಿಸ್ ರಸ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ರಾಜಕಾಲುವೆ ಹಾಗೂ ಕೆರೆಗಳ ಬಫರ್ ವಲಯದಲ್ಲಿ 300 ಕಿ.ಮೀ. ಸರ್ವಿಸ್ ರಸ್ತೆ ನಿರ್ಮಿಸಲು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಬಿಬಿಎಂಪಿ ಮುಂದಾಗಿದೆ.

ಬಫರ್ ವಲಯ ಅಭಿವೃದ್ಧಿಯೂ ಈ ಯೋಜನೆಯಲ್ಲಿದ್ದು, ಸರ್ವಿಸ್ ರಸ್ತೆ ನಿರ್ಮಿಸುವುದೇ ಮುಖ್ಯ ಉದ್ದೇಶವಾಗಿದೆ. ಇದಕ್ಕಾಗಿ ಡಿಪಿಆರ್ ತಯಾರಿಸಲು ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದೆ. ಸೆಪ್ಟೆಂಬರ್ 18ರೊಳಗೆ ಬಿಡ್ ಸಲ್ಲಿಸಬೇಕಾಗಿದ್ದು, ಒಪ್ಪಂದವಾದ ನಂತರದ ಆರು ತಿಂಗಳಲ್ಲಿ ಡಿಪಿಆರ್ ಸಲ್ಲಿಸಬೇಕಾಗುತ್ತದೆ ಎಂದು ಟೆಂಡರ್ ಆಹ್ವಾನಿಸಿರುವ ನೋಟಿಸ್‌ನಲ್ಲಿ ಮಾಹಿತಿ ನೀಡಲಾಗಿದೆ.

ರಾಜಕಾಲುವೆ ಇರುವ ಸ್ಥಿತಿ, ಸರ್ವಿಸ್ ರಸ್ತೆ ನಿರ್ಮಿಸಲು ಬೇಕಾಗಿರುವ ಪ್ರದೇಶದ ವಿವರ, ಬಫರ್ ವಲಯದಲ್ಲಿ ಕಟ್ಟಡ ಅಥವಾ ಇತರೆ ನಿರ್ಮಾಣಗಳಿದ್ದರೆ ಅವರಿಗೆ ನೀಡಬೇಕಾಗದ ಅಭಿವೃದ್ಧಿ ಹಕ್ಕು ವರ್ಗಾವಣೆ (ಟಿಡಿಆರ್) ಮಾಹಿತಿಗಳನ್ನೂ ಡಿಪಿಆರ್‌ನಲ್ಲಿ ನೀಡಬೇಕು ಎಂದು ಸೂಚಿಸಲಾಗಿದೆ.

ಶಿವಕೋಟೆ: ಸಂಜೀವಯ್ಯ ಗ್ರಾ.ಪಂ. ಅಧ್ಯಕ್ಷ

ಪ್ರಜಾವಾಣಿ ವಾರ್ತೆ



ಯಲಹಂಕ: ಶಿವಕೋಟೆ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಮತ್ಕೂರು ಎಚ್. ಸಂಜೀವಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದೆ ಅಧ್ಯಕ್ಷರಾಗಿದ್ದ ಮುನಿರತ್ನಮ್ಮ ಮುನಿಬೈಲಪ್ಪ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕಾಗಿ ಸಂಜೀವಯ್ಯ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರು. ಒಟ್ಟು 18 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ 13 ಸದಸ್ಯರು ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಂಡು, ಐದು ಸದಸ್ಯರು ಗೈರು ಹಾಜರಾಗಿದ್ದರು.

15 ವರ್ಷಗಳ ಹಿಂದೆ ಪಂಚಾಯಿತಿ ಅಧ್ಯಕ್ಷರಾಗಿದ್ದ ಸಂಜೀವಯ್ಯ ಅವರು, ಈಗ ಎರಡನೇ ಬಾರಿಗೆ ಮತ್ತೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ನಗರದಲ್ಲಿ ಇಂದು

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಕನ್ನಡ ಜಾನಪದ ಪರಿಷತ್ ಉದ್ಘಾಟನೆ, ಪದಗ್ರಹಣ ಸಮಾರಂಭ: ಉದ್ಘಾಟನೆ: ಜನಪದ ಎಸ್. ಬಾಲಾಜಿ, ಅಧ್ಯಕ್ಷತೆ: ಎಸ್. ಮುನಿರಾಜು, ಉಪಸ್ಥಿತಿ: ರಿಯಾಜ್ ಪಾಷ, ಬಿ.ಎಂ. ವೆಂಕಟೇಶ್, ವೆ. ಅಜಿತ್ ಕುಮಾರ್, ಆಯೋಜನೆ: ಕನ್ನಡ ಜಾನಪದ ಪರಿಷತ್ ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಘಟಕ, ಸ್ಥಳ: ಅಸೆಂಟ್ ಕಾಲೇಜಿನ ಆವರಣ, ಎಂಟನೇ ಮೈಲಿ, ಹೆಸರಘಟ್ಟ ರಸ್ತೆ, ಬೆಳಿಗ್ಗೆ 10

ಅತ್ಯಾಧುನಿಕ ತಂತ್ರಜ್ಞಾನಗಳಾದ ಮೂರನೇ ಟೆಸ್ಲಾ ಎಂಆರ್‌ಐ, 128–ಸ್ಲೈಸ್ ಸಿಟಿ, ಮ್ಯಾಕೊ ರೋಬೋಟಿಕ್ ಉಪಕರಣಗಳು, ಆಂಬುಲೆನ್ಸ್ ವಾಹನದ ಉದ್ಘಾಟನೆ: ಅತಿಥಿಗಳು: ದಿನೇಶ್ ಗುಂಡೂರಾವ್, ಬಿ. ರಮೇಶ್ ಬಾಬು, ಕೆ. ಗೋವಿಂದರಾಜು, ಆಯೋಜನೆ: ವಾಸವಿ ಹಾಸ್ಪಿಟಲ್ಸ್, ಸ್ಥಳ: ವಾಸವಿ ಆಸ್ಪತ್ರೆ, ಮೊದಲ ಹಂತ, 70ನೇ ಅಡ್ಡರಸ್ತೆ, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 10

'ಜಸ್ಮಾ ಓಡನ್' ನಾಟಕ ಪ್ರದರ್ಶನ: ಮೂಲ: ಶಾಂತಾ ಗಾಂಧಿ, ಕನ್ನಡಕ್ಕೆ ಅನುವಾದ: ವೈಶಾಲಿ ಕಾಸರವಳ್ಳಿ, ನಿರ್ದೇಶನ: ಬಿ. ಜಯಶ್ರೀ, ಆಯೋಜನೆ: ರಾಷ್ಟ್ರೀಯ ನಾಟಕ ಶಾಲೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ವಿವಿಧ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.
nagaradalli_indu@prajavani.co.in

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
ಹಿಂದಿನ ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್
(ಭಾರತ ಸರ್ಕಾರದ ಅಧೀನ ಸಂಸ್ಥೆ)
CIN: U15100MH1950GOI008187 ವೆಬ್‌ಸೈಟ್: www.irel.co.in
ಐಎಸ್‌ಒ 9001:2015, ಐಎಸ್‌ಒ 14001:2015 & ಐಎಸ್‌ಒ 45001:2018 ಕಂಪನಿ

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್, ಚವಾರಾ ಇವರು ಕೆಳಕಂಡ ಐಟಂ/ಜಾಬ್ ವಿವರಗಳಿಗಾಗಿ ಬಿಡ್ ಆಹ್ವಾನಿಸಿದ್ದಾರೆ.
ಉಲ್ಲೇಖ: ಜಾಹೀರಾತು ಸಂ. 24–25/10 — ಟೆಂಡರ್ ಪ್ರಕಟಣೆ — ದಿನಾಂಕ: 29–08–2024

ಇವೆಂಟ್ ನಂ.(ಜಿಇಎಂ)	ಜಾಬ್/ಐಟಂ ವಿವರ
ಜಿಇಎಂ/2024/ಬಿ/5331932	ಅಯಾನಿವೆಲಿಕುಲನಗರ ಗ್ರಾಮದಿಂದ ಚವಾರ ಪ್ಲಾಂಟ್‌ಗೆ ಶೂನ್ಯ ತೇವಾಂಶ ಆಧಾರದಲ್ಲಿ ಖನಿಜ ಮರಳು ಎಕ್ಸ್‌ಕ್ಯಾವೇಶನ್ ಹೀಪಿಂಗ್ ಸ್ಟಾಕಿಂಗ್ ಲೋಡಿಂಗ್ ಟ್ರಾನ್ಸ್‌ಪೋರ್ಟೇಶನ್ 100000ಟಿ, ಐಆರ್‌ಇಎಲ್ ಚವಾರ ಪ್ಲಾಂಟ್‌ನಿಂದ ಅಯಾನಿವೆಲಿಕುಲನಗರ ಗ್ರಾಮದಲ್ಲಿ ಅಗೆದಿರುವ ಗುಂಡಿಗಳಿಗೆ ಶೂನ್ಯ ತೇವಾಂಶ ಆಧಾರದಲ್ಲಿ ಟೈಲ್‌ಗಳಿಗೆ ಮೆಕ್ಯಾನಿಕಲ್ ಲೋಡಿಂಗ್ ಮತ್ತು ಲೆವೆಲ್ಲಿಂಗ್ 100000ಟಿ
ಜಿಇಎಂ/2024/ಬಿ/5340529	ಎಕ್ಸ್‌ಕ್ಯಾವೇಟರ್‌ಗಳನ್ನು ಬಳಸಿಕೊಂಡು ಪೊಝಿ ಮೌಥ್ ಅಗಲೀಕರಣ/ ಆಳಗೊಳಿಸುವ ಮತ್ತು ಕತ್ತರಿಸುವ ಸಂದರ್ಭದಲ್ಲಿ ಸ್ಪಿಲ್‌ವೇ ಚಾನಲ್‌ನಲ್ಲಿನ ಮರಳು ತೆರವುಗೊಳಿಸುವುದು, ತೊಟ್ಟಪಳ್ಳಿ ಸ್ಪಿಲ್‌ವೇ ಚಾನಲ್‌ನ ದಕ್ಷಿಣ ಭಾಗದಿಂದ ಮತ್ತು ಪೊಝಿ ಮೌಥ್ ಸೈಟ್‌ನಿಂದ ಟಿಪ್ಪರ್/ಮಲ್ಟಿ ಆಕ್ಸೆಲ್ (ರೇರ್ ಡಂಪ್ ಟ್ರಕ್ಸ್) ನಲ್ಲಿ ಖನಿಜ ಮರಳು ಸಂಗ್ರಹಣೆ, ಲೋಡಿಂಗ್, ಸಾಗಾಣಿಕೆ ಮತ್ತು ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್, ಚವಾರ ಹಾಗೂ ಕೆಎಂಎಂಎಲ್ ಶಂಕರ ಮಂಗಲಂ–ಫೇಸ್ 5 ಆಪರೇಷನ್ಸ್‌ಗೆ ಖನಿಜ ಮರಳು ಸಾಗಾಣಿಕೆ

ಬಿಡ್‌ದಾರರು http://irel.co.in ಅಥವಾ http://gem.gov.in ಅಥವಾ ಸಿಪಿಪಿ ವೆಬ್‌ಸೈಟ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಮೇಲ್ಕಂಡ ಟೆಂಡರ್‌ಗಳಿಗೆ ಯಾವುದೇ ತಿದ್ದುಪಡಿ/ವಿಸ್ತರಣೆ ಉಂಟಾದಲ್ಲಿ ಅಂತಹವುಗಳನ್ನು ಮೇಲ್ಕಂಡ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
CBC 48139/12/0010/2425 — ಸಹಿ/– ಮುಖ್ಯಸ್ಥರು, ಚವಾರ

ಪುರಸಭಾ ಕಾರ್ಯಾಲಯ, ಕೋನಪ್ಪನ ಅಗ್ರಹಾರ
ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560100.
ಇ–ಮೇಲ್: ka.konappanaagrahara.tmc@gmail.com
ಸಂಖ್ಯೆ: ಪುಸ/ಕೋ/ತಾಂ/ಶಾ/12/2024–25 — ದಿನಾಂಕ: 03–09–2024

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

ಕೋನಪ್ಪನ ಅಗ್ರಹಾರ ಪುರಸಭೆ ವ್ಯಾಪ್ತಿಯಲ್ಲಿ 2024–25 ನೇ ಸಾಲಿನ ಎಸ್.ಎಫ್.ಸಿ ಹಾಗೂ ಪುರಸಭಾ ನಿಧಿಯ ಶೇ 24.10, ಶೇ 7.25 ಹಾಗೂ ಶೇ 5 ರ ಅನುದಾನದಡಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ನಿಯಮಾನುಸಾರ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರುಗಳು ತಮ್ಮ ಟೆಂಡರ್‌ಗಳನ್ನು ವೆಬ್‌ಸೈಟ್: https://kppp.karnataka.gov.in ಮುಖಾಂತರ ಟೆಂಡರ್ ಸಲ್ಲಿಸತಕ್ಕದ್ದು.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	ಅನುದಾನ: ಎಸ್.ಎಫ್.ಸಿ ಶೇ 7.25/2024–25 DMA/2024-25/RD/WORK_INDENT25354/CALL-2 (Others)	1.22
2	ಅನುದಾನ: ಪುರಸಭಾ ನಿಧಿ ಶೇ 24.10/2024–25 DMA/2024-25/OW/WORK_INDENT25364/CALL-2 (Others)	4.45
3	ಅನುದಾನ: ಪುರಸಭಾ ನಿಧಿ ಶೇ 5/2024–25 DMA/2024-25/OW/WORK_INDENT25366/CALL-2 (ST Category)	1.35
4	ಅನುದಾನ: ಪುರಸಭಾ ನಿಧಿ ಶೇ 7.25/2024–25 DMA/2024-25/OW/WORK_INDENT25365/CALL-2 (SC Category)	2.35

1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 11–09–2024 ರಂದು 17.00 ಘಂಟೆವರೆಗೆ. 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 13–09–2024 ರಂದು ಬೆಳಿಗ್ಗೆ 10.30 ಘಂಟೆಗೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: https://kppp.karnataka.gov.in ಮುಖಾಂತರ ಹಾಗೂ ಕಛೇರಿ ಸಮಯದಲ್ಲಿ ಅಭಿಯಂತರರಿಂದ ಪಡೆಯತಕ್ಕದ್ದು.
ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಕೋನಪ್ಪನ ಅಗ್ರಹಾರ. — ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಕೋನಪ್ಪನ ಅಗ್ರಹಾರ.
ವಾಸಾಸಂಇ/ವಾ.ಪ್ರ/1827/ಅಡ್ವರ್ಟೋರ್/2024–25

ಶ್ರೀ ಚಾಮುಂಡೇಶ್ವರಿ ಷುಗರ್ಸ್ ಲಿಮಿಟೆಡ್
chamundeswari
CIN: U15435KA1970PLC001974
ನೋಂದಾಯಿತ ಕಚೇರಿ: ನಂ. 88/5, ರಿಚ್‌ಮಂಡ್ ರೋಡ್, ಬೆಂಗಳೂರು – 560 025
Phone no: 080 - 2500 2500 Fax: 080 – 2500 2510
Email: complianceofficer@chamundisugars.com Web: www.chamundeswarisugars.in

ಷೇರುದಾರರಿಗೆ ಸೂಚನೆ

ಕಂಪನಿಯ ಸದಸ್ಯರು ಐವತ್ತೊಂದುನೆಯ ವಾರ್ಷಿಕ ಸಾಮಾನ್ಯ ಸಭೆ (AGM) ಶನಿವಾರ, 28 ಸೆಪ್ಟೆಂಬರ್, 2024 ರಂದು ಬೆಳಗೆ 11.00 A.M IST ಗೆ, ವಿಡಿಯೋ ಕಾನ್ಫರೆನ್ಸಿಂಗ್ ("VC") / ಇತರೆ ಆಡಿಯೋ–ವಿಷುಯಲ್ ಮೀನ್ಸ್ ("OAVM") ಮೂಲಕ ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ., ಕಂಪನಿಗಳ ಕಾಯ್ದೆ 2013 ರ ಅನ್ವಯವಾಗುವ ಎಲ್ಲಾ ನಿಯಮಗಳು ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳ ಅನುಸಾರವಾಗಿ ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 10/2022, ದಿನಾಂಕ 28.12.2022 ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 11/2022 ದಿನಾಂಕ 28.12.2022 ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 09/2023 ದಿನಾಂಕ 25.09.2023 ಮತ್ತು ಎಲ್ಲ ಇತರ ಸುತ್ತೋಲೆ ಹೊರಡಿಸಿ ಇರುವ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ("MCA") ಹೊರಡಿಸಿದ ಎಲ್ಲಾ ಇತರ ಸುತ್ತೋಲೆಗಳು AGMಗೆ ಕರೆ ಮಾಡುವ ಸೂಚನೆಯಲ್ಲಿ ವ್ಯವಹಾರವನ್ನು ವಹಿವಾಟು ಮಾಡಲು, ಸದಸ್ಯರು VC/OAVM ಮೂಲಕ AGMಗೆ ಹಾಜರಾಗಬಹುದು.

ಅನ್ವಯವಾಗುವ ಸುತ್ತೋಲೆಯ ಪ್ರಕಾರ ಆರ್ಥಿಕ ವರ್ಷ 2023–24 (31.03.2024)ಕ್ಕೆ ಅಂತ್ಯಗೊಂಡಂತೆ ಸಂಭಂದ ಪಟ್ಟಂತೆ ಕ್ರೂಡೀಕೃತ ಹಾಗೂ ಪ್ರತ್ಯೇಕ ಆರ್ಥಿಕ ತಖೆಗಳು ಆಡಳಿತ ಮಂಡಲಿಯ ವರದಿ ಮತ್ತಿತರ ದಾಖಲೆಗಳನ್ನು 30ನೇ ಆಗಸ್ಟ್ 2024ರ ದಿನಾಂಕದಂದು ಸದಸ್ಯರುಗಳ ನೊಂದಣಿ ಪುಸ್ತಕದಲ್ಲಿರುವ ಸದಸ್ಯರುಗಳಿಗೆ, ಹಾಗೂ ಇ–ಮೇಲ್ ವಿಳಾಸವನ್ನು ಕಂಪನಿ / ಡೆಪಾಸಿಟರಿ ಪಾರ್ಟಿಸಿಪೆಂಟ್ರೊಂದಿಗೆ ನೊಂದಾಯಿಸಿಕೊಂಡಿರುವ ಷೇರುದಾರರಿಗೆ, ವಾರ್ಷಿಕ ಮಹಾಸಭೆಯ ತಿಳುವಳಿಕೆ ಪತ್ರವನ್ನು ಕಳುಹಿಸಲಾಗಿದೆ. ಈ ಮೇಲ್ಕಂಡ ದಾಖಲಾತಿಗಳು ಕಂಪನಿಯ ಅಂತರ್ಜಾಲ ವಿಳಾಸ www.chamundeswarisugars.in ನಲ್ಲೂ ಲಭ್ಯವಿರುತ್ತದೆ.

ವಿದ್ಯುನ್ಮಾನ ಮತಚಲಾವಣೆ (e-voting) ಹಾಗೂ ವಾರ್ಷಿಕ ಮಹಾಸಭೆಯಲ್ಲಿ ವಿದ್ಯುನ್ಮಾನ ಮತಚಲಾವಣೆ (e-voting) ಬಗ್ಗೆ ಮಾರ್ಗಸೂಚಿ.

ವಾರ್ಷಿಕ ಮಹಾಸಭೆಯಲ್ಲಿ ಅಂಗೀಕರಿಸಬೇಕಾದ ವಿಷಯಗಳ ಮೇಲೆ ವಿದ್ಯುನ್ಮಾನದ ಮೂಲಕ ಮತಚಲಾಯಿಸುವ (e-voting) ಅವಕಾಶವನ್ನು ಕಲ್ಪಿಸಲಾಗಿದ್ದು ಸದಸ್ಯರುಗಳು ಎನ್.ಎಸ್.ಡಿ.ಎಲ್. ನ ವಿದ್ಯುನ್ಮಾನ ಮತಚಲಾವಣೆ (ರಿಮೋಟ್ ಇ–ಮತಚಲಾವಣೆ) ವ್ಯವಸ್ಥೆಯನ್ನು ಈ ಕೆಳಗೆ ನಮೂದಿಸಿರುವ ದಿನಾಂಕಗಳಿಂದ ಚಲಾಯಿಸಬಹುದಾಗಿರುತ್ತದೆ.

ಇದಲ್ಲದೆ ದೂರ ಸಂವೇದಿ ಮುಖಾಂತರ ಮತಚಲಾಯಿಸದೇ ಇರುವ ಸದಸ್ಯರು ವಾರ್ಷಿಕ ಮಹಾಸಭೆಯ ವೇಳೆಯಲ್ಲಿ (ರಿಮೋಟ್ ಇ–ಮತಚಲಾವಣೆ) http://www.evoting.nsdl.com ಮೂಲಕ ಮತ ಚಲಾಯಿಸಬಹುದಾಗಿರುತ್ತದೆ.

ಎನ್.ಎಸ್.ಡಿ.ಎಲ್. ಇವರನ್ನು ವಿದ್ಯುನ್ಮಾನ ಮತಚಲಾವಣೆಗಾಗಿ ನೇಮಿಸಲಾಗಿದೆ.

ಕೆನರಾ ಬ್ಯಾಂಕ್ केनरा बैंक Canara Bank
A Government of India Undertaking
भारत सरकार का उपक्रम (A Govt. Of India undertaking)
Premises & Estate Section, GA Wing, Head Office, No.112, J C Road, Bangalore-560002.

NOTICE
TENDER FOR PROVIDING CANTEEN FACILITY

Fresh tenders are invited from experienced Canteen contractors for running Staff canteen at Centre of Excellence, Bagaluru, Financial City, Bengaluru-562149.

For further details and other terms and conditions, please visit Bank's website https://canarabank.com/tenders.aspx. For any clarifications contact 080-22238819/22297695 extn 219/214. Last date for submission of tender form is 25.09.2024, 3:00 PM.

Further, all addendum/corrigendum including modification if any, will be hosted at the Bank's website only.

Place: Bengaluru — Sd/-
Date : 04.09.2024 — ASSISTANT GENERAL MANAGER

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಅಇಂ(ವಿ)/ಪ್ರ(ನಿ)/ಆರ್‌ಎಂಜಿಸಿ/ಕಾನಿಇಂ(ಕ)ಸಕಾನಿಇಂ–1/ಎಫ್–35/24–25/1582–84 — ದಿನಾಂಕ: 31.08.2024

ಟೆಂಡರ್ ಪ್ರಕಟಣೆ
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ಕಾಮಗಾರಿಗಳಿಗೆ ಬಿಡ್‌ಗಳನ್ನು ಆಹ್ವಾನಿಸಿದೆ:
1) ನೆಲಮಂಗಲ ಟಿ.ಎಲ್.ಎಂ ಉಪವಿಭಾಗ ವ್ಯಾಪ್ತಿಯಲ್ಲಿ ಬರುವ 220ಕೆವಿ ನೆಲಮಂಗಲ–ಅಂಚೇಪಾಳ್ಯ ಮತ್ತು ನೆಲಮಂಗಲ–ಮಾಗಡಿ ಡಿಸಿ ಮಾರ್ಗದ ಗೋಪುರ ಸಂಖ್ಯೆ 107–108ರ ನಡುವಿನ ಮಧ್ಯಂತರ ಗೋಪುರಗಳ ಲಂಭಾಂತರ ಅಳತೆಯನ್ನು ಎತ್ತರಿಸುವ ಕೆಲಸಕ್ಕೆ.
2) ನೆಲಮಂಗಲ ಟಿ.ಎಲ್.ಎಂ ಉಪವಿಭಾಗ ವ್ಯಾಪ್ತಿಯಲ್ಲಿ ಬರುವ 220ಕೆವಿ ನೆಲಮಂಗಲ–ಅಂಚೇಪಾಳ್ಯ ಮತ್ತು ನೆಲಮಂಗಲ–ಮಾಗಡಿ ಡಿಸಿ ಮಾರ್ಗದ ಗೋಪುರ ಸಂಖ್ಯೆ 111–112ರ ನಡುವಿನ ಮಧ್ಯಂತರ ಗೋಪುರಗಳ ಲಂಭಾಂತರ ಅಳತೆಯನ್ನು ಎತ್ತರಿಸುವ ಕೆಲಸಕ್ಕೆ.
ಕೆಪಿಪಿ ಪೋರ್ಟಲ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ವಿಷಯಕ್ಕೆ ಸಂಬಂಧಿಸಿದಂತೆ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್: https://kptcl.karnataka.gov.in ಹೈಪರ್‌ಲಿಂಕ್ "E Procurement KPTCL" or https://kppp. karnataka.gov.in ಗೆ ಲಾಗಿನ್ ಆಗಿ ದಿನಾಂಕ: 09.09.2024 ರಂದು ಅಥವಾ ನಂತರ ಪಡೆಯಬಹುದು.
ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ನಿ), ರಾಮನಗರ ವೃತ್ತ, ಕವಿಪ್ರನಿನಿ, ಆರ್.ಆರ್. ನಗರ ಮೆಟ್ರೊ ಸ್ಟೇಷನ್ ಎದುರು, ಪಂತರಪಾಳ್ಯ, ಮೈಸೂರು ರಸ್ತೆ, ಬೆಂಗಳೂರು–560 026.

ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್
(CIN: U70102KA1937PLC001292)
ಸ್ಟಾಕ್ ಎಕ್ಸ್‌ಚೇಂಜ್ ಟವರ್ಸ್, ನಂ. 51, 1ನೇ ಕ್ರಾಸ್, ಜೆ. ಸಿ. ರಸ್ತೆ, ಬೆಂಗಳೂರು 560027 ಫೋನ್: 080–41575566
ಇಮೇಲ್: ed_secretary@bgse.co.in; Website:www.bgse.co.in

61ನೇ ವಾರ್ಷಿಕ ಸರ್ವಸದಸ್ಯರ ಸಭೆಯ (AGM) ಸೂಚನೆ

ಎಜಿಎಮ್ ಸೂಚನೆ: ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್ (ಕಂಪನಿ), ತನ್ನ ಅರವತ್ತೊಂದನೆಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು (ಎಜಿಎಮ್) ಶುಕ್ರವಾರ, 27ನೇ ಸೆಪ್ಟೆಂಬರ್, 2024 ರಂದು ಬೆಳಿಗ್ಗೆ 09.30 ಗಂಟೆಗೆ ಒಂದು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದೆಯೇ, ಕಂಪನಿಗಳ ಅಧಿನಿಯಮ, 2013ರ ಅನ್ವಯವಾಗುವ ನಿಬಂಧನೆಗಳನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (MCA) ಹೊರಡಿಸಿರುವ ಸಂ. 14/2020 ದಿ.08 ಏಪ್ರಿಲ್ 2020, 17/2020 ದಿ.13 ಏಪ್ರಿಲ್ 2020, 20/2020 ದಿ.05 ಮೇ 2020, 10/2022 ದಿ.28 ಡಿಸೆಂಬರ್ 2022, ಮತ್ತು ನಂತರದ ಸುತ್ತೋಲೆಗಳು ಅದರಲ್ಲಿ ಇತ್ತೀಚಿನದೆಂದರೆ 09/2023 ದಿ. ಸೆಪ್ಟೆಂಬರ್ 25, 2023 (ಇವುಗಳನ್ನು ಒಟ್ಟಾಗಿ 'ಎಂಸಿಎ ಸುತ್ತೋಲೆಗಳು' ಎಂದು ಉಲ್ಲೇಖಿಸಿದ್ದೇವೆ) ಈ ಎಲ್ಲ ಸುತ್ತೋಲೆಗಳ ಜೊತೆ ಓದಿಕೊಂಡ ಪ್ರಕಾರ ವಿಡಿಯೊ ಕಾನ್ಫರೆನ್ಸ್ (VC) ಅಥವಾ ಇತರೆ ಶ್ರವಣ–ದೃಶ್ಯ ಮಾಧ್ಯಮಗಳ (OAVM) ಮೂಲಕ ನಡೆಸಲು ಉದ್ದೇಶಿಸಿದೆ ಎಂದು ಈ ಮೂಲಕ ಕಂಪನಿಯ ಸದಸ್ಯರೆಲ್ಲರಿಗೂ ಸೂಚನೆಯನ್ನು ನೀಡಲಾಗುತ್ತಿದೆ.

ದಾಖಲೆಗಳ ಲಭ್ಯತೆ: ಯಾರೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಡಿಪಾಸಿಟರಿ ಪಾರ್ಟಿಸಿಪೆಂಟರು (DPs) ಮತ್ತು ಕಂಪನಿಯೊಂದಿಗೆ/ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರೊಂದಿಗೆ (RTA) ನೋಂದಾಯಿಸಿಕೊಂಡಿದ್ದಾರೋ ಅಂತಹ ಸದಸ್ಯರೆಲ್ಲರಿಗೂ 04ನೇ ಸೆಪ್ಟೆಂಬರ್, 2024 ರಂದು ಕಂಪನಿಯ 61ನೇ ಎಜಿಎಮ್ ಸೂಚನೆಯ ಮತ್ತು 2023–24 ಸಾಲಿನ ವಾರ್ಷಿಕ ವರದಿಯ ಪ್ರತಿಗಳನ್ನು ಕಳುಹಿಸಲಾಗಿದೆ. ಜೊತೆಗೆ, ಈ ದಾಖಲೆಗಳು ಕಂಪನಿಯ ವೆಬ್‌ಸೈಟ್ www.bgse.co.in ನಲ್ಲೂ ಲಭ್ಯವಿರುವಂತೆ ವ್ಯವಸ್ಥೆ ಮಾಡಲಾಗಿದೆ.

ಇ–ಮತದಾನ: ಸಿಡಿಎಸ್‌ಎಲ್ ಸಂಸ್ಥೆಯು ರಿಮೋಟ್ ಇ–ಮತದಾನದ ಸೌಲಭ್ಯವನ್ನು ಒದಗಿಸುತ್ತಿದೆ ಮತ್ತು ರಿಮೋಟ್ ಇ–ಮತದಾನವು ಮಂಗಳವಾರ, 24ನೇ ಸೆಪ್ಟೆಂಬರ್, 2024 ರಂದು ಬೆಳಗ್ಗೆ 09.00ಕ್ಕೆ (ಭಾ.ಕಾ) ಆರಂಭವಾಗಿ ಗುರುವಾರ, 26ನೇ ಸೆಪ್ಟೆಂಬರ್, 2024 ರಂದು ಸಂಜೆ 05.00ಕ್ಕೆ (ಭಾ.ಕಾ) ಕೊನೆಯಾಗುತ್ತದೆ. ಈ ಅವಧಿಯಲ್ಲಿ, ಅಂತಿಮ ದಿನಾಂಕವಾದ ಶುಕ್ರವಾರ, 20ನೇ ಸೆಪ್ಟೆಂಬರ್, 2024 ರಂದು ಕಂಪನಿಯ ಷೇರುಗಳನ್ನು ಭೌತಿಕ ರೂಪದಲ್ಲೋ ಅಥವಾ ಡೀಮ್ಯಾಟ್ ರೂಪದಲ್ಲೋ ಹೊಂದಿರುವ ಷೇರುದಾರರು ತಮ್ಮ ಮತಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಚಲಾಯಿಸಬಹುದಾಗಿರುತ್ತದೆ.

ಯಾವ ಸದಸ್ಯರಿಗೆ VC ಮೂಲಕ ಸಭೆಯನ್ನು ಪ್ರವೇಶಿಸಲು ಮತ್ತು ಅದರಲ್ಲಿ ಭಾಗವಹಿಸಲು ತಾಂತ್ರಿಕ ನೆರವು ಅಗತ್ಯವೋ ಅಂತಹ ಸದಸ್ಯರು ಇ–ಮತದಾನ ಸೇವೆಯನ್ನು ಒದಗಿಸುತ್ತಿರುವ ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (ಸಿಡಿಎಸ್‌ಎಲ್) ಅನ್ನು ಸಂಪರ್ಕಿಸಬಹುದು; ಸಂಪರ್ಕ ವ್ಯಕ್ತಿಗಳು: ಶ್ರೀಯುತರಾದ ನಿತಿನ್ ಕುಂದರ್ (022–23058738); ಭವೇಶ್ ಪಿಂಪುತ್ಕರ್ (022–23058543); ರಾಕೇಶ್ ದಲ್ವಿ (022–23058542) ಇಮೇಲ್ ಐಡಿ: helpdesk.evoting@cdslindia.com

ನಿರ್ದೇಶಕರ ಮಂಡಲಿಯ ಆದೇಶದ ಮೇರೆಗೆ ಬಿಜಿಎಸ್‌ಇ ಪ್ರಾಪರ್ಟೀಸ್ ಆ್ಯಂಡ್ ಸೆಕ್ಯುರಿಟೀಸ್ ಲಿಮಿಟೆಡ್ ಪರವಾಗಿ
ಸಹಿ/– (ವಿನೋದ್ ಜಿ ಜೈನ್) ಕಾರ್ಯನಿರ್ವಾಹಕ ನಿರ್ದೇಶಕರು DIN: 00248275
ಸ್ಥಳ: ಬೆಂಗಳೂರು
ದಿನಾಂಕ: 05/08/2024

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಅಧಿಸೂಚನೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ.

1. ಸಂ: ಅ.ಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ.(ದ)/ಸ.ಕಾ.ಇಂ(ವಿ)–1/ಕ–282/2023–24/4121–26 ದಿನಾಂಕ:03.09.2024
ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಟಿಆರ್(ಎಂ)/ಬಿಎಂಎಝುಡ್(ಎಸ್)/ಇಇ(ಓ)/ಎಇಇ–1/ಇ.ಪಿ.ಆರ್–05 ರಿಂದ ಇ.ಪಿ.ಆರ್–08 ದಿನಾಂಕ: 09.10.2023 ಬೆಂಗಳೂರು, ರ ಅನ್ವಯ ಬೆಂ.ಮ.ಕ್ಷೇ.ವ. ದಕ್ಷಿಣ ವೃತ್ತದ ವ್ಯಾಪ್ತಿಯಲ್ಲಿ ಬರುವ ವಿವಿಧ 220/66ಕೆವಿ ಮತ್ತು 66/11 ಕೆವಿ ಉಪಕೇಂದ್ರಗಳಿಗೆ ಭದ್ರತಾ ಸಿಬ್ಬಂದಿಗಳನ್ನು ಒದಗಿಸಲು ಪ್ಯಾಕೇಜ್ 3, 4, 6 ಮತ್ತು 7 ರ ಗಳಿಗೆ ಕರೆ–3 ಬಿಡ್‌ಗಳನ್ನು ಆಹ್ವಾನಿಸಿದೆ.

2. ಸಂ: ಅ.ಇಂ(ವಿ)/ಪ್ರ(ನಿ)/ಬೆಂ.ಮ.ಕ್ಷೇ.ವ.(ದ)/ಸ.ಕಾ.ಇಂ(ವಿ)–1/ಕ–180/2024–25/4129–31 ದಿನಾಂಕ:03.09.2024
ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಟಿಆರ್(ಎಂ)/ಬಿಎಂಎಝುಡ್(ಎಸ್)/ಇಇ(ಓ)/ಎಇಇ–1/24–25/ಇ.ಪಿ.ಆರ್–10, ಕರೆ–1 ದಿನಾಂಕ: 03.09.2024ರ ಅನ್ವಯ ಬೆಂ.ಮ.ಕ್ಷೇ.ವ. ದಕ್ಷಿಣ ವೃತ್ತದ ಅಡಿಯಲ್ಲಿ ಬರುವ ಟಿ.ಎಲ್.ಎಂ. ಉಪ–ವಿಭಾಗ ಹೂಡಿ ವ್ಯಾಪ್ತಿಯ ಚಿಕ್ಕಬಸವನಪುರ ಲೇಕ್ ಹತ್ತಿರ ಹಾದು ಹೋಗಿರುವ 220ಕೆವಿ ಹೂಡಿ – ಬೇಗೂರು ಒಂಟಿ ಮಾರ್ಗದ ಟವರ್ ಸಂಖ್ಯೆ 11 ಮತ್ತು 13ರ ನಡುವೆ 01 ಸಂಖ್ಯೆ ಡಿಬಿ+0/ಡಿಇ+0 ಎನ್‌ಬಿಟಿ, ಮಧ್ಯಂತರ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿಗಳನ್ನು ನಿರ್ವಹಿಸಲು ಬಿಡ್‌ಗಳನ್ನು ಆಹ್ವಾನಿಸಿದೆ.

ಟೆಂಡರ್‌ಗಳಿಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ಗೆ ಹೈಪರ್‌ಲಿಂಕ್ "E Procurement KPTCL" ನಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ:05.09.2024ಕ್ಕೆ (ಕ್ರಮ ಸಂಖ್ಯೆ 1) ಮತ್ತು ದಿನಾಂಕ: 06.09.2024 (ಕ್ರಮ ಸಂಖ್ಯೆ 2) ರಂದು ಅಥವಾ ತದ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.
ಸಹಿ/– ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ನಿ) ಬೆಂ.ಮ.ಕ್ಷೇ.ವ. ದಕ್ಷಿಣ ವೃತ್ತ, ಕವಿಪ್ರನಿನಿ, ಕಛೇರಿ ಸಂಕೀರ್ಣ, ಎ.ಆರ್.ವೃತ್ತ, ಬೆಂಗಳೂರು–09

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.
ಸಂ: ಬೆಂಅಪ್ರಾ/ನಯೋಸ/CLU-115/1270/2024–25 — ದಿನಾಂಕ: 03.09.2024

ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ–2015 ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 540 ಬೆಂಆಸೇ 2004, ದಿನಾಂಕ 22/06/2007 ರಲ್ಲಿ ಅನುಮೋದನೆಯಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರ ಅಡಿಯಲ್ಲಿ ಪ್ರಶ್ನಿತ ಜಮೀನಿನ ಸಾರಿಗೆ ಮತ್ತು ಸಂಪರ್ಕ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 69 (4) ರನ್ವಯ ಈ ಕೆಳಕಂಡ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಸಲಹೆ/ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಎ. ಶಿವಣ್ಣ	ಬೆಂಗಳೂರು ಪೂರ್ವ	ಬಿದರಹಳ್ಳಿ ಹೋಬಳಿ	ದೊಡ್ಡ ಬನಹಳ್ಳಿ	105/2	1–15	ಸಾರಿಗೆ–ಸಂಪರ್ಕ	ವಸತಿ

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಪುರಸಭಾ ಕಾರ್ಯಾಲಯ, ಬಂಗಾರಪೇಟೆ
web:bangarpettown.mrc.gov.in, Email Id:itstaff_ulb_bangarpet@yahoo.co.in
Phone:08153-253222
ಸಂಖ್ಯೆ:ಪುಸಬಂ/ತಾಂತ್ರಿಕ/ಟೆಂಡರ್5/2024–25 — ದಿನಾಂಕ:30.08.2024

ಟೆಂಡರ್ ಪ್ರಕಟಣೆ

ಬಂಗಾರಪೇಟೆ ಪುರಸಭಾ ವ್ಯಾಪ್ತಿಯಲ್ಲಿ 2024–25 ನೇ ಸಾಲಿನ 15ನೇ ಹಣಕಾಸು ಕಾಮಗಾರಿಯನ್ನು ಕೈಗೊಳ್ಳಲು ಕೆಟಿಪಿಪಿ ಆಧ್ಯಾದೇಶ 2000ದ ಅನ್ವಯ ಶೇಕಡ/ಐಟಂವಾರು ದರಗಳ ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳ ವಿವರಗಳನ್ನು https://www.kppp.karnataka.gov.in ವೆಬ್‌ಸೈಟ್‌ನಿಂದ ಪಡೆಯಬಹುದಾಗಿರುತ್ತದೆ. (1) ಕಾಮಗಾರಿ ವಿವರ: DMA/2024-25/OW/WORK_INDENT28678. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 19.00. ಇಎಂಡಿ (ರೂ.ಗಳಲ್ಲಿ): 47,500/–.
(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 14.09.2024ರ ಸಂಜೆ: 17:30 ಘಂಟೆಯವರೆಗೆ ಸಲ್ಲಿಸುವುದು. (2) ಟೆಂಡರ್‌ನ ದಾಖಲೆಗಳನ್ನು https://www.kppp.karnataka.gov.in ನಲ್ಲಿ ತೆರೆಯುವ ದಿನಾಂಕ: 17.09.2024 ರಂದು ಬೆಳಿಗ್ಗೆ: 11.00 ಗಂಟೆಗೆ. (3) ಹೆಚ್ಚಿನ ಮಾಹಿತಿಗಾಗಿ https://www.kppp.karnataka.gov.in ನಲ್ಲಿ ನೋಡಿಕೊಳ್ಳುವುದು.
ಸಹಿ/– (ಶ್ರೀ ಎಂ.ಗೋವಿಂದ) ಅಧ್ಯಕ್ಷರು, ಪುರಸಭೆ, ಬಂಗಾರಪೇಟೆ — ಸಹಿ/– (ಶ್ರೀಮತಿ ಚಂದ್ರವೇಣಿ) ಉಪಾಧ್ಯಕ್ಷರು, ಪುರಸಭೆ, ಬಂಗಾರಪೇಟೆ — ಸಹಿ/– (ಶ್ರೀ ವಿ. ಸತ್ಯನಾರಾಯಣ) ಮುಖ್ಯಾಧಿಕಾರಿ, ಪುರಸಭೆ, ಬಂಗಾರಪೇಟೆ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:213/ಕೆಎಸ್‌ಎಂಸಿಎ/2024–25

COFFEE DAY
Brewing new possibilities.
ಕಾಫೀ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್
ನೋಂದಾಯಿತ ಮತ್ತು ಕಾರ್ಪೊರೇಟ್ ಕಚೇರಿ: 23/2, ಕಾಫೀ ಡೇ ಸ್ಕ್ವೇರ್, ವಿಠ್ಠಲ ಮಲ್ಯ ರಸ್ತೆ, ಬೆಂಗಳೂರು–560001, ಕರ್ನಾಟಕ, ಭಾರತ.
ಫೋನ್: 080–40012345; ಫ್ಯಾಕ್ಸ್: 080–40012650.
ವೆಬ್‌ಸೈಟ್: www.coffeeday.com; ಇ–ಮೇಲ್: investors@coffeedaygroup.com
ಸಿಐಎನ್: L55101KA2008PLC046866

ಕಾಫೀ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್‌ನ 16ನೇ ವಾರ್ಷಿಕ ಮಹಾಸಭೆಯ ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ,
1. ಕಾಫೀ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್‌ನ 16ನೇ ವಾರ್ಷಿಕ ಮಹಾಸಭೆಯನ್ನು ಶುಕ್ರವಾರ, ಸೆಪ್ಟಂಬರ್ 27, 2024 ರಂದು ಬೆಳಗ್ಗೆ 11:00 (ಐಎಸ್‌ಟಿ) ಗಂಟೆಗೆ ವಿಡಿಯೊ ಕಾನ್ಫರೆನ್ಸಿಂಗ್ (ವಿಸಿ) ಅಥವಾ ಇತರೆ ಆಡಿಯೊ ವಿಷುಯಲ್ ಮೀನ್ಸ್ (ಒಎವಿಎಂ) ಮೂಲಕ ವಿಡಿಯೊ ಕಾನ್ಫರೆನ್ಸ್ ('ವಿಸಿ)/ಇತರೆ ಆಡಿಯೊ ವಿಷುಯಲ್ ಮೀನ್ಸ್ ('ಒಎವಿಎಂ') ವಿಧಾನದಲ್ಲಿ ('ಇ–ಎಜಿಎಂ') ಹಮ್ಮಿಕೊಳ್ಳಲಾಗುತ್ತಿದ್ದು, ಸದರಿ ಮಹಸಾಭೆಯಲ್ಲಿ, ಒಂದು ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಉಪಸ್ಥಿತಿ ಇಲ್ಲದೆಯೆ, ಎಜಿಎಂ ನೋಟಿಸ್‌ನಲ್ಲಿ ('ನೋಟಿಸ್') ಉಲ್ಲೇಖಿಸಲಾಗಿರುವ ಸಾಮಾನ್ಯ ವ್ಯವಹಾರಗಳನ್ನು ಚರ್ಚಿಸಲಾಗುತ್ತದೆ.
2. ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 108 ಅನ್ನು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 20, ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ('ಸೆಬಿ') (ಲಿಸ್ಟಿಂಗ್ ಆಬ್ಲಿಗೇಶನ್ಸ್ ಅಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಯಮಗಳು, 2015ರ ನಿಯಮ 44 ಮತ್ತು ಇನ್ನಿತರ ಯಾವುದೇ ಅನ್ವಯಿಕ ನಿಯಮಗಳೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಜೊತೆಗೆ ದಿನಾಂಕ ಮೇ 5, 2020ರ ಸುತ್ತೋಲೆಯನ್ನು ದಿನಾಂಕ ಏಪ್ರಿಲ್ 8, 2020, ಏಪ್ರಿಲ್ 13, 2020ರ ಸುತ್ತೋಲೆ ಹಾಗೂ ಮುಂದುವರಿದಂತೆ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ದಿನಾಂಕ ಡಿಸೆಂಬರ್ 28, 2022ರ ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ದಿನಾಂಕ ಮೇ 12, 2020 ('ಎಂಸಿಎ ಸುತ್ತೋಲೆಗಳು'), ಸೆಬಿ ಹೊರಡಿಸಿರುವ ದಿನಾಂಕ ಮೇ 12, 2020ರ ಸುತ್ತೋಲೆ, ದಿನಾಂಕ 13.01.2021ರ ಸಾಮಾನ್ಯ ಸುತ್ತೋಲೆ ಹಾಗೂ ಮುಂದುವರಿದಂತೆ ದಿನಾಂಕ ಜನವರಿ 5, 2023ರ ಸೆಬಿ/ಎಚ್‌ಒ/ಸಿಎಫ್‌ಡಿ/ಪಿಒಡಿ–2/ಪಿ/ಸಿಐಆರ್/2023/4 ಸುತ್ತೋಲೆಗಳೊಂದಿಗೆ ಓದಿಕೊಂಡಂತೆ ಪ್ರದತ್ತವಾದ ನಿಯಮಗಳ ಪ್ರಕಾರ ಸದರಿ ಎಜಿಎಂ ಸಭೆಯನ್ನು ಆಯೋಜಿಸಲಾಗುತ್ತಿದೆ.
3. ಕಂಪನಿಯ 16ನೇ ಎಜಿಎಂ ನೋಟಿಸ್‌ನ್ನು ಮತ್ತು ಹ.ವ.2024ನೇ ಸಾಲಿನ ವಾರ್ಷಿಕ ವರದಿಯನ್ನು, ಕಂಪನಿ/ಡೆಪಾಸಿಟರಿ ಪಾರ್ಟಿಸಿಪಂಟ್ಸ್ ಇವರಲ್ಲಿ ನೋಂದಾಯಿತ ಸದಸ್ಯರ ಇಮೇಲ್ ಐಡಿಗಳಿಗೆ ವಿದ್ಯುನ್ಮಾನ ವಿಧಾನದ ಮುಖಾಂತರ ರವಾನಿಸಲಾಗಿದೆ. ಸದರಿ ನೋಟಿಸ್ ಮತ್ತು ವಾರ್ಷಿಕ ವರದಿಯು ಕಂಪನಿಯ www.coffeeday.com ಮತ್ತು ಕಂಪನಿಯ ಷೇರುಗಳು ಪಟ್ಟಿಯಾಗಿರುವ ಸ್ಟಾಕ್ ಎಕ್ಸ್‌ಚೇಂಜ್ ಬಿಎಸ್‌ಇ ಲಿಮಿಟೆಡ್‌ನ www.bseindia.com ಹಾಗೂ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ www.nseindia.com ವೆಬ್‌ಸೈಟ್‌ಗಳಲ್ಲಿ ಮತ್ತು ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನ ('ಎನ್‌ಎಸ್‌ಡಿಎಲ್') https://www.evoting.nsdl.com ವೆಬ್‌ಸೈಟ್‌ನಲ್ಲಿ ಕೂಡ ಲಭ್ಯವಿರುತ್ತವೆ.

SMART BAZAAR
Reliance
ಮಾಡಿರಿ ಹಬ್ಬದ ಸಿದ್ಧತೆ
ಸ್ಮಾರ್ಟ್ ಬಜಾರ್‌ಗೆ ಬನ್ನಿರಿ
BUY 1 GET 1 ಉಚಿತವಾಗಿ ಪಡೆಯಿರಿ 500 + ಉತ್ಪನ್ನಗಳ ಮೇಲೆ
ಹಬ್ಬಗಳ ವರ್ಣರಂಜಿತ ಫ್ಯಾಷನ್
ವ್ಯಾಪಕ ಶ್ರೇಣಿಯ ಸಿಹಿತಿನಿಸುಗಳು, ಚಾಕೊಲೇಟ್‌ಗಳು ಮತ್ತು ಡ್ರೈಫ್ರೂಟ್ಸ್
ಪ್ರತಿಯೊಂದೂ MRP ಗಿಂತ ಕಡಿಮೆ ದರದಲ್ಲಿ
ತೆಂಗಿನ ಕಾಯಿ 1 ಯೂನಿಟ್
ಮಾರುಕಟ್ಟೆ ಬೆಲೆ ₹28
ಸ್ಮಾರ್ಟ್ ಬೆಲೆ ₹22
ಸೇಬು ಸಿಮ್ಲಾ 1 kg
ಸ್ಮಾರ್ಟ್ ಬೆಲೆ ₹165
ಮಾರುಕಟ್ಟೆ ಬೆಲೆ ₹240
ಗುಡ್ ಲೈಫ್ ಅಕ್ಕಿ ಹಿಟ್ಟು 500 g / 1 kg
BUY 1 GET 1 FREE
ಎಮ್‌ಆರ್‌ಪಿ ₹49 ರಿಂದ
ಮೊಸಂಬಿ 1 kg
ಮಾರುಕಟ್ಟೆ ಬೆಲೆ ₹65
ಸ್ಮಾರ್ಟ್ ಬೆಲೆ ₹45
ಗುಡ್ ಲೈಫ್ / ನೇಚರ್ಸ್ ಚಾಯ್ಸ್ / ಬೋಲಸ್ ಪಂಚಮೇವಾ ಮಿಕ್ಸಡ್ ಡ್ರೈ ಫ್ರೂಟ್ಸ್ 250 g ರಿಂದ (ಆಯ್ದ ಪ್ರಕಾರಗಳು)
ಸ್ಮಾರ್ಟ್ ಬೆಲೆ ₹199
ಎಮ್‌ಆರ್‌ಪಿ ₹250 ರಿಂದ
ಗುಡ್ ಲೈಫ್ ಡ್ರೈ ಕೊಕೊನಟ್ ಪೌಡರ್ 250 g
ಎಮ್‌ಆರ್‌ಪಿ ₹125
ಸ್ಮಾರ್ಟ್ ಬೆಲೆ ₹65
ನಂದಿನಿ ಶುದ್ಧ ತುಪ್ಪ 1 L
ಎಮ್‌ಆರ್‌ಪಿ ₹630
ಸ್ಮಾರ್ಟ್ ಬೆಲೆ ₹585
ಎಮ್‌ಆರ್‌ಪಿ ₹90
ಸ್ಮಾರ್ಟ್ ಬೆಲೆ ₹72
ಪಾರ್ಥ್ ಜ್ಯಾಗರಿ 950 g
ಉಳಿಸಿರಿ ₹65
ಎಮ್‌ಆರ್‌ಪಿ ₹300 ರಿಂದ
ಸ್ಮಾರ್ಟ್ ಬೆಲೆ ₹235 ರಿಂದ
ಲಾಲ್ ಕೇಸರ್ ಮೋದಕ್ 200 g
ಸ್ಮಾರ್ಟ್ ಆಫರ್‌ಗಳು ಫ್ಲ್ಯಾಟ್ 20% ಕಡಿತ
ಎಮ್‌ಆರ್‌ಪಿ ₹150 ರಿಂದ
ಸ್ಮಾರ್ಟ್ ಬೆಲೆ ₹120 ರಿಂದ
ಸ್ಮಾರ್ಟ್ ಬೆಲೆ ₹189 ರಿಂದ
ಎಮ್‌ಆರ್‌ಪಿ ₹210 ರಿಂದ
ಅಮುಲ್ ಆವಸರ್ ಕಾಜು ಕತ್ಲಿ 200 g / 500 g
ಎಮ್‌ಆರ್‌ಪಿ ₹199 ರಿಂದ
ಸ್ಮಾರ್ಟ್ ಬೆಲೆ ₹99 ಕಡಿತ
ಅಲಂಕಾರಿಕ ಎಲ್ಇಡಿ ಲೈಟ್ಸ್ ರೇಂಜ್
ಟಾಟಾ ಗೋಲ್ಡ್ ಲೀಫ್ ಚಹಾ 500 g
2/3 ಟೈರ್ ಸ್ಟೀಮರ್
ಎಮ್‌ಆರ್‌ಪಿ ₹1399 ರಿಂದ
ಸ್ಮಾರ್ಟ್ ಬೆಲೆ ₹599 ರಿಂದ
ಸ್ಮಾರ್ಟ್ ಆಫರ್‌ಗಳು ಫ್ಲ್ಯಾಟ್ 50% ಕಡಿತ
ಎಮ್‌ಆರ್‌ಪಿ ₹55 ರಿಂದ
ಸ್ಮಾರ್ಟ್ ಬೆಲೆ ₹28 ರಿಂದ
ಎಮ್‌ಆರ್‌ಪಿ ₹220
ಸ್ಮಾರ್ಟ್ ಬೆಲೆ ₹109
ಶುಭಕಾರ್ಟ್ ದರ್ಶನ ಕರ್ಪೂರ ಪೂಜಾ ಆಯಿಲ್ 900 ml
ಪೂಜಾ ಅಗತ್ಯತೆ (ತುಪ್ಪದ ಬತ್ತಿ / ಹತ್ತಿಯ ಬತ್ತಿ / ಅಗರಬತ್ತಿ / ಸಾಂಬ್ರಾಣಿ ಕಪ್ಗಳು) (ಆಯ್ದ ಪ್ರಕಾರಗಳು)
FEDERAL BANK YOUR PERFECT BANKING PARTNER
10% Instant Discount with Federal Bank Cards
24th Aug - 15th Sep 2024
Discount up to ₹500 on Debit & Credit Cards | Valid once per card. | Minimum order value of ₹3000
CRED scan and pay with CRED
UPTO ₹100* cashback
on purchases worth ₹500 and more.
Min Cashback ₹10
offer valid from 1st Sept to 30th Sept 2024.
ನಿಮ್ಮ ಹತ್ತಿರದ ಸ್ಟೋರ್ ಹುಡುಕಲು ಸ್ಕ್ಯಾನ್ ಮಾಡಿ
ನಿಮ್ಮ ಹತ್ತಿರದ ಸ್ಟೋರ್ ಭೇಟಿ ನೀಡಿ
JioMart
SMART SUPERSTORE
ಈಗ ತೆರೆದಿದೆ
ಬಂಗಾರಪೇಟೆ: ಕೆ ಜಿ ಎಫ್ ಮುಖ್ಯ ರಸ್ತೆ, ಟೋಟಲ್ ಗ್ಯಾಸ್ ನ ಎದುರು, ಬಂಗಾರಪೇಟೆ.
SMART BAZAAR
SMART SUPERSTORE
ಬೆಂಗಳೂರು: ಶೆಲ್ ಪೆಟ್ರೋಲ್ ಪಂಪ್ ಪಕ್ಕದಲ್ಲಿ, ಇಸ್ಕಾನ್ ದೇವಸ್ಥಾನದ ಹತ್ತಿರ, ರಾಜಾಜಿನಗರ • ಬೆಂಗಳೂರು ಸೆಂಟ್ರಲ್ ಮಾಲ್ ಎದುರು, ರಾಗಿಗುಡ್ಡ, ಜಯನಗರ 9 ನೇ ಬ್ಲಾಕ್ • ರಾಯಲ್ ಮೀನಾಕ್ಷಿ ಮಾಲ್, ಬನ್ನೇರುಘಟ್ಟ ರಸ್ತೆ • ಜಿಟಿ ವರ್ಲ್ಡ್ ಮಾಲ್, ಮಾಗಡಿ ಮುಖ್ಯ ರಸ್ತೆ, ಪ್ರಸನ್ನ ಥಿಯೇಟರ್ ಪಕ್ಕ • ಸಂಗೀತ ಅಪಾರ್ಟ್‌ಮೆಂಟ್ ಹತ್ತಿರ, ಹಳೆಯ ಗೀತಾಂಜಲಿ ಥಿಯೇಟರ್, ಮಲ್ಲೇಶ್ವರಂ • ಬ್ರಿಗೇಡ್ ಮಿಲೇನಿಯಮ್ ಹತ್ತಿರ, RBI ಲೇಔಟ್, 7 ನೇ ಹಂತ, J.P. ನಗರ • ಸೋಲ್ ಸ್ಪೇಸ್ ಸ್ಪಿರಿಟ್, ಬೆಳ್ಳಂದೂರ್. • ವಿಜಯಾ ಬ್ಯಾಂಕ್ ಕಾಲೋನಿ, ಔಟರ್ ರಿಂಗ್ ರೋಡ್, ಬಾಣಸವಾಡಿ. • ಮಾರುತಿ ಆರ್ಕೇಡ್, ಭದ್ರಪ್ಪ ಲೇಔಟ್, ಔಟರ್ ರಿಂಗ್ ರೋಡ್ ಹೆಬ್ಬಾಳ. • ರಿಲಯನ್ಸ್ ಡಿಜಿಟಲ್ ಪಕ್ಕದಲ್ಲಿ, ಹೆಣ್ಣೂರು-ಬಾಗಲೂರು ಮುಖ್ಯ ರಸ್ತೆ, ಕೊತ್ತನೂರು • ಕೆಳ ಮಹಡಿ, ಫೀನಿಕ್ಸ್ ಮಾರ್ಕೆಟ್ ಸಿಟಿ, ಮಹದೇವಪುರ ಮುಖ್ಯ ರಸ್ತೆ • ಟ್ರೆಂಡ್ಸ್ ಪಕ್ಕ, ಕತ್ರಿಗುಪ್ಪೆ ರಸ್ತೆ, ಬನಶಂಕರಿ 3 ನೇ ಹಂತ • ರಾಯಭಾರ ಕಚೇರಿ ಪ್ಯಾರಾಗಾನ್, ಐಟಿಪಿಎಲ್ ಮುಖ್ಯ ರಸ್ತೆ, ಎದುರು. ಕುಂದಲಹಳ್ಳಿ ಗೇಟ್ ಬಸ್ ನಿಲ್ದಾಣ • ಬೆಂಗಳೂರು: ಅಕ್ಷಯ ನಗರ: ಡಿಎಲ್ ಎಫ್ ನ್ಯೂ ಟೌನ್ ಹತ್ತಿರ, ಬೇಗೂರ್ - ಹುಳಿಮಾವು ರಸ್ತೆ • ಚಂದಾಪುರ: ಗುಲ್ಲಿ ರೆಡ್ಡಿ ಲೇಔಟ್, ಚಂದಾಪುರ ಅತ್ತಿಬೆಲೆ ಹೋಬಳಿ, ಆನೇಕಲ್ ಮುಖ್ಯ ರಸ್ತೆ • ಮೋನಾರ್ಕ್ ಸೆರೆನಿಟಿ: ಥಣಿಸಂದ್ರ ಮುಖ್ಯ ರಸ್ತೆ. ಥಣಿಸಂದ್ರ. • ಮಾಳಗಾಲ ರೋಡ್: ಮಾಳಗಾಲ ಮುಖ್ಯ ರಸ್ತೆ, ನಾಗರಭಾವಿ 2 ನೇ ಹಂತ, ಗಂಗಮ್ಮ ಗಾರ್ಡನ್ಸ್. • ವಿದ್ಯಾರಣ್ಯಪುರ: ಮಾರ್ಸ್ ಎನ್‌ಕ್ಲೇವ, ದೊಡ್ಡಬೊಮ್ಮಸಂದ್ರ ಮುಖ್ಯ ರಸ್ತೆ. ವಿದ್ಯಾರಣ್ಯಪುರ • ವಿಜ್ಞಾನನಗರ: ಶೆಲ್ ಪೆಟ್ರೋಲ್ ಬಂಕ್ ಹತ್ತಿರ, ವಿಭೂತಿಪುರಹಳ್ಳಿ, ವಿಜ್ಞಾನನಗರ • ವಿಜಯನಗರ ಟಿಟಿಎಮ್‌ಸಿ: ಮಾರುತಿ ಮಂದಿರ ಹತ್ತಿರ • ಕೆ ಆರ್ ಪುರಂ: ಬೆತ್ತಲ್ ನಗರ, ಬಸವನಪುರ್ ಮುಖ್ಯ ರಸ್ತೆ, ಕೆ ಆರ್ ಪುರಂ • ಭಾರತೀಯ ಮಾಲ್ ಆಫ್ ಬೆಂಗಳೂರು: ಭಾರತೀಯ ಸಿಟಿ, ಆರ್ ಕೆ ಹೆಗ್ಡೆ ನಗರ, ಥಣಿಸಂದ್ರ ಮುಖ್ಯ ರಸ್ತೆ. • ಎಲೆಕ್ಟ್ರಾನಿಕ್ ಸಿಟಿ: ಶ್ರೀಧರ್ ರೆಡ್ಡಿ ಪ್ರಾಪರ್ಟಿ, ರುಚಿ ಸಾಗರ ಹೋಟೆಲ್ ಹತ್ತಿರ ಹಂತ 2 • ಹರಳೂರು ರೋಡ್: ಪಿಎಸ್‌ಆರ್ ಫೆಲಿಸಿಟಿ, ಡಿಎಸ್‌ಆರ್ ಅಲ್ಟಿಮ ಅಪಾರ್ಟ್‌ಮೆಂಟ್ ಹತ್ತಿರ. • ಎನ್‌ಆರ್‌ಐ ಲೇಔಟ್: ಮುಖ್ಯ ರಸ್ತೆ, ಎಚ್‌ಡಿಎಫ್‌ಸಿ ಬ್ಯಾಂಕ್ ಹತ್ತಿರ, ಕಲ್ಕೆರೆ ಗ್ರಾಮ. • ಡಿವಿನಿಟಿ ಮಾಲ್: ಮೈಸೂರು ರಸ್ತೆ, ನಾಯಂಡಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ. • ಕನಕಪುರ: ಕೋಡಿಹಳ್ಳಿ ರೋಡ್, ಎಚ್‌ಡಿಎಫ್‌ಸಿ ಮತ್ತು ಆಕ್ಸಿಸ್ ಬ್ಯಾಂಕ್ ನಡುವೆ. • ತುಮಕೂರು: ಎಮ್‌ಜಿ ಸ್ಟೇಡಿಯಮ್‌ನ ಪಕ್ಕದಲ್ಲಿ, ಕುವೆಂಪು ನಗರ.

ಯಶವಂತಪುರ ಮೇಲ್ಸೇತುವೆ: ನಸುಕಿನಲ್ಲಿ ನಡೆದ ಅವಘಡ, 30 ಅಡಿ ಕೆಳಕ್ಕೆ ಬಿದ್ದ ಕಾರು

ಐ.ಟಿ ಉದ್ಯೋಗಿ ಸಾವು: ನಾಲ್ವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಯಶವಂತಪುರದಲ್ಲಿ ಮಂಗಳವಾರ ನಸುಕಿನ ವೇಳೆ ಸಂಭವಿಸಿದ ಅಪಘಾತದಲ್ಲಿ ಕಾರೊಂದು ಮೇಲ್ಸೇತುವೆಯಿಂದ ಕೆಳಕ್ಕೆ ಬಿದ್ದು ಸಾಫ್ಟ್‌ವೇರ್ ಕಂಪನಿ ಉದ್ಯೋಗಿಯೊಬ್ಬರು ಮೃತಪಟ್ಟು, ನಾಲ್ವರು ಗಾಯಗೊಂಡಿದ್ದಾರೆ.

ತಮಿಳುನಾಡಿನ ಸೇಲಂ ನಿವಾಸಿ ಎಸ್.ಶಬರೀಶ್ (29) ಮೃತಪಟ್ಟಿದ್ದು, ಮಿಥುನ್ ಚಕ್ರವರ್ತಿ (28), ಶಂಕರ್ ರಾಮ್ (29), ಅನುಶ್ರೀ (25) ಹಾಗೂ ಬೈಕ್ ಚಾಲಕ ಮಂಜುನಾಥ್ (38) ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಿಥುನ್ ಚಕ್ರವರ್ತಿ ಸ್ಥಿತಿ ಗಂಭೀರವಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಬೈಕ್‌ಗೆ ಡಿಕ್ಕಿ ಹೊಡೆದ ಕಾರು ಮೇಲ್ಸೇತುವೆಯಿಂದ ಸುಮಾರು 30 ಅಡಿ ಕೆಳಕ್ಕೆ ಬಿದ್ದಿದ್ದು ಅನಾಹುತಕ್ಕೆ ಕಾರಣವಾಗಿದೆ ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

‘ಕಾರಿನಲ್ಲಿದ್ದ ನಾಲ್ವರೂ ಸಾಫ್ಟ್‌ವೇರ್ ಉದ್ಯೋಗಿಗಳಾಗಿದ್ದು, ಅಮೆರಿಕ ಪ್ರವಾಸಕ್ಕೆ ತೆರಳುವುದಕ್ಕೆ ವೀಸಾ ಅರ್ಜಿ ಕೇಂದ್ರದಿಂದ ವೀಸಾ ಪಡೆದುಕೊಳ್ಳಲು ಬೆಂಗಳೂರಿಗೆ ಬಂದಿದ್ದರು. ವಿದೇಶ ಪ್ರವಾಸಕ್ಕೆಂದು ಒರಾಯನ್ ಮಾಲ್‌ನಲ್ಲಿ ನಾಲ್ವರೂ ಬಟ್ಟೆ ಸೇರಿದಂತೆ ಅಗತ್ಯ ಸಾಮಗ್ರಿ ಖರೀದಿಸಿದ್ದರು. ನಂತರ ರೆಸ್ಟೋರೆಂಟ್‌ವೊಂದಕ್ಕೆ ತೆರಳಿ ಪಾರ್ಟಿ ನಡೆಸಿದ್ದರು. ತಡರಾತ್ರಿ ತನಕ ಪಾರ್ಟಿ ನಡೆಸಿದ್ದ ಅವರು ಸ್ಯಾಂಕಿ ರಸ್ತೆ ಕಡೆಯಿಂದ ಯಶವಂತಪುರ ಮೇಲ್ಸೇತುವೆ ಮಾರ್ಗವಾಗಿ ತುಮಕೂರು ರಸ್ತೆ ಕಡೆಗೆ ಕಾರಿನಲ್ಲಿ ತೆರಳುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಮಂಗಳವಾರ ನಸುಕಿನ 4ರ ಸುಮಾರಿಗೆ ಮೇಲ್ಸೇತುವೆಯಲ್ಲಿ ವೇಗವಾಗಿ ತೆರಳುತ್ತಿದ್ದ ಕಾರು ಬೈಕ್‌ಗೆ ಡಿಕ್ಕಿಯಾಗಿದೆ. ನಂತರ, ರಸ್ತೆ ವಿಭಜಕಕ್ಕೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಕಾರಿನ ಒಂದು ಬಾಗಿಲು ತೆರೆದುಕೊಂಡು ಅನುಶ್ರೀ ರಸ್ತೆ ಬದಿಗೆ ಬಿದ್ದಿದ್ದರು. ಚಾಲಕ ಮಿಥುನ್ ಮೇಲ್ಸೇತುವೆಯಿಂದ ಹೊರಕ್ಕೆ ಹಾರಿ ಬಿದ್ದಿದ್ದರು. ಮತ್ತಿಬ್ಬರು ಕಾರು ಸಹಿತ ಮೇಲ್ಸೇತುವೆಯಿಂದ ಕೆಳಕ್ಕೆ ಬಿದ್ದಿದ್ದರು. ಘಟನೆಯಲ್ಲಿ ಬೈಕ್ ಚಾಲಕ ಮಂಜುನಾಥ್‌ಗೂ ಗಾಯವಾಗಿದೆ’ ಎಂದು ಪೊಲೀಸರು ಹೇಳಿದರು.

ಅಪಘಾತದಿಂದ ನುಜ್ಜುಗುಜ್ಜಾಗಿರುವ ಕಾರು

ಆಟೊ ಚಾಲಕರ ನೆರವು: ‘ನಸುಕಿನಲ್ಲಿ ರಸ್ತೆಯಲ್ಲಿ ವಾಹನ ಸಂಚಾರ ವಿರಳ ಆಗಿತ್ತು. ಅದೇ ವೇಳೆಯಲ್ಲಿ ಅಪಘಾತವಾಗಿದೆ.

ಅಪಘಾತ ನಡೆದ ಬಳಿಕ ಜೋರಾದ ಶಬ್ದ ಕೇಳಿಬಂತು. ತಿರುಗಿ ನೋಡುವಷ್ಟರಲ್ಲಿ ಕಾರು ಕೆಳಕ್ಕೆ ಬಿದ್ದಿತ್ತು. ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದೆವು. ಪೊಲೀಸರ ನೆರವಿನಲ್ಲಿ ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಲಾಯಿತು’ ಎಂದು ಸಂಚಾರ ಪೊಲೀಸರು ಹೇಳಿದರು.

ಘಟನೆಯಿಂದ ಕಾರು ಸಂಪೂರ್ಣ ನುಜ್ಜುಗುಜ್ಜಾಗಿದೆ. ಬೈಕ್‌ನ ಮುಂಭಾಗಕ್ಕೆ ಹಾನಿಯಾಗಿದೆ. ಯಶವಂತಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾಲಿ ರೈಡ್ ತಂದ ಆಪತ್ತು

ವಿದೇಶಿ ಪ್ರವಾಸಕ್ಕೆ ತೆರಳುವ ಸಂಭ್ರಮದಲ್ಲಿ ಎಲ್ಲರೂ ತಡರಾತ್ರಿವರೆಗೂ ಪಾರ್ಟಿ ನಡೆಸಿ, ಮದ್ಯ ಸೇವಿಸಿದ್ದರು ಎನ್ನಲಾಗಿದೆ. ಮದ್ಯ ಸೇವನೆ ಬಳಿಕ ಎಲ್ಲರೂ ನಗರದಲ್ಲಿ ‘ಜಾಲಿ ರೈಡ್’ ಹೊರಟಿದ್ದರು. ಆಗ ಅಪಘಾತವಾಗಿದೆ ಎಂದು ಹೇಳಲಾಗಿದೆ.

‘ಕಾರನ್ನು ಪರಿಶೀಲನೆ ನಡೆಸಲಾಗಿದೆ. ಕಾರಿನಲ್ಲಿ ಮದ್ಯದ ಒಂದು ಬಾಟಲಿ ಸಿಕ್ಕಿದೆ’ ಎಂದು ಮೂಲಗಳು ಹೇಳಿವೆ.

‘ಗಾಯಾಳುಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರು ಚೇತರಿಕೆಯಾದ ಬಳಿಕ ಮದ್ಯ ಸೇವನೆ ಮಾಡಿದ್ದರೆ ಇಲ್ಲವೆ? ಎಂಬುದರ ಕುರಿತು ಮಾಹಿತಿ ಪಡೆದುಕೊಳ್ಳಲಾಗುವುದು’ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಪ್ರತಿಭಟನಾ ಸಭೆಗೆ ಗುರುಪ್ರಸಾದ್ ಕೆರಗೋಡು, ಮಾವಳ್ಳಿ ಶಂಕರ್ ತಮಟೆ ಬಾರಿಸಿ ಚಾಲನೆ ನೀಡಿದರು. ದಸಂಸ ಮುಖಂಡ ಎನ್‌. ವೆಂಕಟೇಶ್, ಶೋಷಿತ ಸಮುದಾಯಗಳ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ, ವಿ.ನಾಗರಾಜ್, ಅನಂತ್ ನಾಯ್ಕ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

‘ರಾಜ್ಯಪಾಲರ ನಡೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವನ್ನು ಬಿಜೆಪಿ, ಜೆಡಿಎಸ್ ರಾಜ್ಯಪಾಲರ ಮೂಲಕ ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿವೆ ಎಂದು ಆರೋಪಿಸಿ ದಲಿತ ಸಂಘರ್ಷ ಸಮಿತಿಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

‘ರಾಜ್ಯಪಾಲರ ಹಠಾವೋ ರಾಜ್ಯ ಬಚಾವೋ’, ‘ಕೋಮುವಾದಿ ಬಿಜೆಪಿ–ಜೆಡಿಎಸ್ ಪಕ್ಷಗಳಿಗೆ ಧಿಕ್ಕಾರ’ ಎಂದು ಪ್ರತಿಭಟನಕಾರರು ಘೋಷಣೆ ಕೂಗಿದರು.

ಸಮಿತಿಯ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು ಮಾತನಾಡಿ, ‘ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸುಳ್ಳು ಸುದ್ದಿ ಪ್ರಚಾರ ಮಾಡುತ್ತಿದ್ದು, ಅವರ ವರ್ಚಸ್ಸಿಗೆ ಧಕ್ಕೆ ತರುತ್ತಿವೆ’ ಎಂದು ದೂರಿದರು.

‘ನಾವು ಕಾಂಗ್ರೆಸ್ ಪಕ್ಷದವರಲ್ಲ, ಕಾಂಗ್ರೆಸ್ ಸಂವಿಧಾನಾತ್ಮಕವಾಗಿ ನಡೆದುಕೊಳ್ಳುತ್ತದೆ ಎಂಬ ನಂಬಿಕೆಯಿಂದ ಅದರ ಪರವಾಗಿದ್ದೇವೆ’ ಎಂದರು.

ಸಮಿತಿ ಮುಖಂಡ ಇಂದೂಧರ ಹೊನ್ನಾಪುರ, ‘ಮುಡಾ ಪ್ರಕರಣದಲ್ಲಿ ಶ್ರೀಸಾಮಾನ್ಯರಿಗೆ ಇರುವಷ್ಟು ಜ್ಞಾನ ನಮ್ಮ ರಾಜ್ಯಪಾಲರಿಗಿಲ್ಲ. ರಾಜ್ಯಪಾಲರು ಕೇಂದ್ರ ಸರ್ಕಾರದ ಏಜೆಂಟರಂತೆ ವರ್ತಿಸುತ್ತಿದ್ದಾರೆ’ ಎಂದು ಆರೋಪಿಸಿದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, ‘ಶೋಷಿತ ಸಮುದಾಯಗಳಿಗೆ ಅಧಿಕಾರ ಸಿಕ್ಕರೆ ಮೇಲ್ಜಾತಿಯವರ ಹೊಟ್ಟೆಯಲ್ಲಿ ಬೆಂಕಿ ಬೀಳುತ್ತದೆ. ಸಿದ್ದರಾಮಯ್ಯರನ್ನು ಅಲುಗಾಡಿಸಲು ಯಾರಿಂದಲೂ ಸಾಧ್ಯವಿಲ್ಲ’ ಎಂದು ಹೇಳಿದರು.

‘ಹಿಂದುಳಿದ ವರ್ಗದವರು ಮುಖ್ಯಮಂತ್ರಿಯಾದರೆ ಇವರಿಗೆ ಎಲ್ಲಿಲ್ಲದ ಸಂಕಟ. ದಲಿತರು ಮುಖ್ಯಮಂತ್ರಿ ಆಗಬೇಕು. ಅದಕ್ಕಾಗಿ ಸಂದರ್ಭ ಕೂಡಿ ಬರಬೇಕಿದೆ’ ಎಂದು ಹೇಳಿದರು.

ಜಾಮೀನಿನ ಮೇಲೆ ಹೊರ ಬಂದು ಕಳ್ಳತನ

ಬೆಂಗಳೂರು: ಹಗಲು ವೇಳೆ ಮನೆಗೆ ನುಗ್ಗಿ ಚಿನ್ನಾಭರಣ ಕಳ್ಳತನ ಮಾಡುತ್ತಿದ್ದ, ಹಳೇ ಗುಡ್ಡದಹಳ್ಳಿ ನಿವಾಸಿ ನಾಗರಾಜ್ ಎಂಬವನನ್ನು ಮಾರತ್‌ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಧಿತ.

ಈತನಿಂದ ₹8 ಲಕ್ಷ ಮೌಲ್ಯದ 118 ಗ್ರಾಂ ಚಿನ್ನಾಭರಣ, 203 ಗ್ರಾಂ ಬೆಳ್ಳಿ ಸಾಮಗ್ರಿ, ಒಂದು ಬೈಕ್ ಅನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

‘ಆರೋಪಿ ಕಳ್ಳತನ ಪ್ರಕರಣದಲ್ಲಿ ಬಂಧಿತನಾಗಿದ್ದು, ಜೈಲಿನಲ್ಲಿದ್ದ. ಜಾಮೀನಿನ ಮೇಲೆ ಹೊರಬಂದಿದ್ದು, ಮತ್ತೆ ಕೃತ್ಯ ನಡೆಸುತ್ತಿದ್ದ. ‘ಆರೋಪಿ ಮಾರತ್‌ಹಳ್ಳಿ, ಆನೇಕಲ್, ಕೋಣನಕುಂಟೆ, ಸೂರ್ಯನಗರ ವ್ಯಾಪ್ತಿಯ 12 ಪ್ರಕರಣಗಳು ಪತ್ತೆಯಾಗಿವೆ. ಆರೋಪಿ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಗಮನ ಬೇರೆಡೆ ಸೆಳೆದು 60 ಮೊಬೈಲ್ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಬಸ್‌ನಲ್ಲಿ ಪ್ರಯಾಣಿಕರ ಗಮನ ಬೇರೆಡೆಗೆ ಸೆಳೆದು ಮೊಬೈಲ್ ಫೋನ್‌ಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ರವಿ ಬಂಧಿತ. ಈತನಿಂದ ₹10 ಲಕ್ಷ ಮೌಲ್ಯದ 60 ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

‘ಆನೇಕಲ್ ತಾಲ್ಲೂಕಿನ ಮಾಯಸಂದ್ರದ ವ್ಯಕ್ತಿಯೊಬ್ಬರು ದೂರು ನೀಡಿದ್ದರು ಎಂದು ಪೊಲೀಸರು ತಿಳಿಸಿದರು.

‘ಪ್ರಯಾಣಿಕನ ಸೋಗಿನಲ್ಲಿ ಬಿಎಂಟಿಸಿ ಬಸ್ ಏರುತ್ತಿದ್ದ ಆರೋಪಿ, ಸಹ ಪ್ರಯಾಣಿಕರ ಗಮನವನ್ನು ಬೇರೆಡೆಗೆ ಸೆಳೆದು ಮೊಬೈಲ್ ಹಾಗೂ ಬೆಲೆ ಬಾಳುವ ವಸ್ತುಗಳನ್ನು ಕಳವು ಮಾಡುತ್ತಿದ್ದ’ ಎಂದು ಪೊಲೀಸರು ಹೇಳಿದರು.

ರವಿ

‘ಕೃತ್ಯ ಎಸಗಿದ ನಂತರ ಆರೋಪಿ ಬಸ್‌ನಲ್ಲಿ ಆಂಧ್ರಪ್ರದೇಶಕ್ಕೆ ತೆರಳುತ್ತಿದ್ದ. ಅಲ್ಲಿ ಕಡಿಮೆ ಬೆಲೆಗೆ ಮೊಬೈಲ್ ಮಾರಾಟ ಮಾಡುತ್ತಿದ್ದ. ಐ–ಫೋನ್ ಬಿಡಿಭಾಗ ತೆಗೆದು ಮಾರಾಟ ಮಾಡುತ್ತಿದ್ದ. ಕಳ್ಳತನ ಮಾಡಿದ ಎಲ್ಲ ಮೊಬೈಲ್‌ಗಳನ್ನು ಮಾರಾಟ ಮಾಡಿದ ಮೇಲೆ ನಗರಕ್ಕೆ ವಾಪಸ್ ಬರುತ್ತಿದ್ದ’ ಎಂದು ಪೊಲೀಸರು ಮಾಹಿತಿ ನೀಡಿದರು.

ಕದ್ದ ವಾಹನ ಬಳಸಿ ಚಿನ್ನದ ಸರ ಕಳ್ಳತನ

ಬೆಂಗಳೂರು: ಚಿನ್ನದ ಸರ, ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಜೆ.ಪಿ.ನಗರ ಪೊಲೀಸರು ಬಂಧಿಸಿ, ₹9 ಲಕ್ಷ ಮೌಲ್ಯದ 109.8 ಗ್ರಾಂ ತೂಕದ ಚಿನ್ನದ ಸರ, ಮೂರು ದ್ವಿಚಕ್ರ ವಾಹನ ವಶಪಡಿಸಿಕೊಂಡಿದ್ದಾರೆ.

ಗುರಪ್ಪನಪಾಳ್ಯದ ಸೈಯದ್ ಪರ್ವೇಜ್ ಬಂಧಿತ ಆರೋಪಿ. ಈತ ಎಸ್.ಜಿ.ಪಾಳ್ಯ ಠಾಣೆಯಲ್ಲಿ ರೌಡಿಶೀಟರ್ ಆಗಿದ್ದು, ಈತನ ವಿರುದ್ಧ ಕೊಲೆ, ಸುಲಿಗೆ, ದರೋಡೆ ಸೇರಿ 43 ಪ್ರಕರಣಗಳಿವೆ ಎಂದು ನಗರ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಮಾರೇನಹಳ್ಳಿ ನಿವಾಸಿ ಮಹಿಳೆಯೊಬ್ಬರು ಮನೆಯಲ್ಲಿ ಮಲಗಿದ್ದ ವೇಳೆ ಆ. 14 ರಂದು ರಾತ್ರಿ ಕಿಟಕಿಯಿಂದ ಕೈ ಹಾಕಿ ಮಾಂಗಲ್ಯ ಸರ ಕಿತ್ತುಕೊಳ್ಳಲು ಪ್ರಯತ್ನಿಸಿದ್ದಾನೆ. ಮಹಿಳೆ ಬಿಗಿಯಾಗಿ ಸರ ಹಿಡಿದಿದ್ದು, ಅರ್ಧ ಸರವನ್ನು ಮಾತ್ರ ಕಿತ್ತುಕೊಂಡು ಹೋಗಿದ್ದಾನೆ. ಆರೋಪಿ 7ನೇ ತರಗತಿವರೆಗೆ ಓದಿದ್ದು, ಕದ್ದ ವಾಹನ ಬಳಸಿ ಆರೋಪಿ ಸರಗಳ್ಳತನ ಮಾಡುತ್ತಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಆರೋಪಿ ಬಂಧಿಸಿದ ಜೆ.ಪಿ.ನಗರ ಠಾಣೆ ಪೊಲೀಸರಿಗೆ ₹10 ಸಾವಿರ ನಗದು ಬಹುಮಾನವನ್ನು ದಯಾನಂದ ಘೋಷಿಸಿದರು.

ಕಾರು ಡಿಕ್ಕಿ, ಬೈಕ್ ಸವಾರ ಸಾವು (ಆನೇಕಲ್ ವರದಿ): ತಾಲ್ಲೂಕಿನ ತಿರುಮಗೊಂಡನಹಳ್ಳಿ ಕಾರು ಡಿಕ್ಕಿ ಹೊಡೆದು ಬೈಕ್ ಸವಾರ ಮೃತಪಟ್ಟು, ಹಿಂಬದಿ ಸವಾರಳಿಗೆ ಗಾಯವಾಗಿರುವ ಘಟನೆ ಮಂಗಳವಾರ ನಡೆದಿದೆ.

ಬೆಂಗಳೂರಿನ ಅಬ್ಬಿಗೆರೆ ಕೌಶಿಕ್ (26) ಮೃತಪಟ್ಟಿದ್ದು, ಹಿಂಬದಿಯಲ್ಲಿ ಕುಳಿತಿದ್ದ ಈತನ ತಂಗಿ ವೈಷ್ಣವಿ ತೀವ್ರವಾಗಿ ಗಾಯಗೊಂಡಿದ್ದಾರೆ. ಬೆಂಗಳೂರಿನಿಂದ ಹೊಸೂರಿನತ್ತ ತೆರಳುತ್ತಿದ್ದಾಗ ಈ ಅವಘಡ ನಡೆದಿದೆ. ಸೂರ್ಯಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಸಂದೀಪ್ ಘೋಷ್ ಅಮಾನತು

ಕೋಲ್ಕತ್ತ (ಪಿಟಿಐ): ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಅವರನ್ನು ಪಶ್ಚಿಮ ಬಂಗಾಳ ಸರ್ಕಾರ ಸೇವೆಯಿಂದ ಅಮಾನತು ಮಾಡಿದೆ. ಹಣಕಾಸು ಅಕ್ರಮ ಸಂಬಂಧ ಸಿಬಿಐ, ಘೋಷ್ ಅವರನ್ನು ಬಂಧಿಸಿದೆ.

ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ, ಹತ್ಯೆ ಕೃತ್ಯ ನಡೆದ 26 ದಿನದ ಬಳಿಕ ಅಮಾನತುಪಡಿಸಲಾಗಿದೆ. ಕೃತ್ಯ ನಡೆದಾಗ ಘೋಷ್ ಅವರೇ ವೈದ್ಯಕೀಯ ಕಾಲೇಜು ಪ್ರಾಂಶುಪಾಲರಾಗಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

KRJS GROUP OF INSTITUTIONS
REQUIRES
RJS- Institute of Management Studies
PRINCIPAL - 1
Qual: MBA with Ph.D with 10 Years exp. in teaching or 5 years exp. as Principal.
CJR RJS Marathalli College
PRINCIPAL - 1
Qual: Any Post Graduation with 10 yrs of Academic exp. Or 5 Years exp. as Principal.
RJS PU College, Koramangala
English Lecturer -1
DBM & RJS School
English Teacher -1
English & Kannada Steno -1
Salary as per KRJS norms.
Apply within 07 days to: The General Secretary, Karnataka Reddyjana Sangha, No.1, Mahayogi Vemana Road, 3rd block, Koramangala, Bangalore-34, by Post / E-mail, Ph : 080-25534194
E-Mail : krjsest1925@gmail.com
www.reddyjanasangha.org.

HOLY ANGEL'S High School Hampinagar, Vijayanagar, Bengaluru-560104 Phone: 23404465/23202042 holyangels.highschool rpclayout@gmail.com Requires Experienced Trained Teachers to handle Nursery, Higher Primary (CBZ) & English Teacher for High School (MA.BE.d). Only English Medium Candidates need to apply

DH Classifieds More value, more impact ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
9731810277
9886213331
9845114560

ST. FRANCIS COLLEGE
Affiliated to Bengaluru City University
Approved by AICTE
Recognized under section 2(f) of the UGC Act, 1956: ISO 9001:2015 Certified
P.B.No. 3417, 3rd Block, 8th Main, Koramangala, Bengaluru-560034. Tel: 080-25531037/38
Cell Ph: 8792265704, Website: www.stfranciscollege.edu.in
FACULTY RECRUITMENT
Applications are invited for the post of **Associate / Assistant Professors** in the following Department.
MANAGEMENT BBA & MBA
Qualification: PG with NET/SET/Ph.D with minimum of 55% marks at PG level
Experience: Above 3 years
Job Location: Koramangala, Bengaluru
Interested and Eligible Candidates may send their resume along with recent passport size photograph, copies of qualification and experience certificate to the
Email-ID:
director@stfranciscollege.edu.in
admin@stfranciscollege.edu.in
by mentioning the post and department applying for in the subject line within 15 days.

WANTED FEMALE Computer Staff, P.E, Hindi Teacher Primary, Driver for School winger Bus. Vijayanagar, Bangalore. Contact: 8431812577/ 7204225487.

MORNING GLORY SCHOOL, Shanthinagar, Bangalore-27, REQUIRED for PRIMARY CLASS TEACHERS. Call: 9900231096 9342597945

TEACHER REQUIRED for Social and Science for Kenmore school Basavanagudi, whatsapp 9901501185 or email kenmoreschool@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

M S PU and DEGREE COLLEGE
R.T. Nagar, Bangalore-560 032
REQUIRES
Faculty for Commerce: CEBA, SEBA
Science: PCMB, PCMC
all subjects
experience or freshers can also apply
part -time / full time
Walk-in interview
Send your updated resume to:
manasa.edu.trust@gmail.com
99860 06003, 98444 56549

VIDYA NIKETAN SCHOOL, HEBBAL, Affiliated to I.C.S.E/ ISC/ IGCSE Invites applications from-well qualified experienced Post Graduate Lady Teachers for 1) English for IGCSE/ High School. 2) Special Educator. Please-apply immediately to: vidyaniketanresume @gmail.com Vidya Niketan School #30, Kempapura, Hebbal Bangalore-24. Ph:23331531 23531340

Multiple Vacancy

HBC HENNUR BANASWADI COSMOPOLITAN CLUB
Kalyan Nagar
Looking for individuals with qualifications and experience to fill the following positions.
1) Floor Managers,
2) Receptionist (M and F),
3) Office Assistant,
4) Helper,
5) Bar Waiter,
6) Billiards Marker.
Send your resume to below mentioned email or directly Walk-in to the Club.
hbcc.bangalore@gmail.com
C-7,80 Feet Road, 2nd Block, Kalyan Nagar, Bangalore- 43

ALL TIME ALERT SECURITY SERVICES Basavangudi, Bangalore -560004. Required FIELD OFFICER and OPERATION MANAGER, 3 years experience. Area: Bangalore City. 9739530301 9538530301 08041632211

General

WANTED (1) B.Sc/ Diploma/ Post-Graduate. Salary Rs. 15,000- 25,000 (2) M.Sc/ Diploma/ Post-Graduate. Salary Rs 20,000- 30,000 (3) Graduate with basic knowledge of Computer. Salary Rs. 15,000- 20,000. (Freshers/ Experienced) 'CHANDU SERVICES' Bangalore-90. 9743678488, 9535433281

"OFFICE EXECUTIVE for`Office and`Marketing (Dental Equipments Pvt.Ltd Company) preferably Female's-with MBA`or`any Graduation with`good English,Hindi speaking`& Computer skills.Contact: 9844016274"

"WANTED ATTENDER 24 Hours service for Elderly person No Reddy's & No Naidu's Salary 15000/- at`J.P.Nagar. Contact: 8088174438"

WANTED FULL Time/ Part Time English Typist with fluency over Kannada for Advocates office at Jayanagar. Whatsapp the Resume: 9448359935.

PUBLIC NOTICE

KARNATAKA REDDYJANA SANGHA
TENDER NOTICE
Sealed quotations are invited from reputed Suppliers to provide:
a) Internet Service of 500 Mbps Internet Leased Line connection (1:1)
b) Renewal of FortiGate Firewall 200F to Vemana Institute of Technology, Koramangala, Bangalore - 560034.
c) Construction of additional 7th and 8th floors on existing Girls Hostel building, KRJS Campus, Koramangala
Quotation to be Submitted : The General Secretary, KRJS, No.1, Mahayogi Vemana Road, 3rd Block, Koramangala, Bangalore - 34. By Post / personal.
For more details, visit: www.reddyjanasangha.org
E-mail : krjsho25@gmail.com
Contact : 080-25529874, 080-25534194 or 9945450345.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COMMERCIAL PROPERTY Suitable for Banks, Storage Spaces, Office Spaces, Garements, PG Accomodation etc. Ground Floor and First Floor. Available Each Floor 1300sqft MEI Road Yeshwantpura. Contact No : 9743610556

REAL ESTATE BUYING

Commerical

Multiple Locations

WANTED RUNNING EDUCATION INSTITUTION with Good Students Strength (State/CBSC/ ICSC) OR 1-5 Acre Land with Clear Title in & Around Bangalore OR Any Dist. Head Quarters in Karnataka. (100% Cheque Payment) Contact: +917483410747 Brokers Excuse.

REAL ESTATE SELLING

Flat

Banashankari

WHO SAID buying a house in Bangalore is not easy? 2 Bhk Flat-600 Sqft-A Katha-Rs 45 Lakhs.3/8 Bookings CarPark,Interiors Free.Construction starts Sept'24. Contact 9591072498

BUSINESS

Business Offers

Finance

URGENT LOAN avail @3.5% per annum Business, Personal, Projects, Takeover all types Loans OM Sai Finance. Phone: 8826494700.

TRAVEL CORNER

ಕ್ಲಾಸಿಫೈಡ್ಸ್

ದಸರಾ ಹಾಗೂ ದೀಪಾವಳಿ ಹಬ್ಬದ ಪ್ರಯುಕ್ತ ರಿಯಾಯಿತಿ ದರದಲ್ಲಿ ಪ್ರವಾಸಗಳು
9900080793

ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ Orchid



6 ದಿನಗಳ ಬಾಲಿ–ಇಂಡೋನೇಷಿಯ ಪ್ರವಾಸ
ಲ್ಯಾಂಡ್ ಆಫ್ ಗಾಡ್, ಲ್ಯಾಂಡ್ ಆಫ್ ಹೆರಿಟೇಜ್, ಮೌಂಟೈನ್ಸ್, ಬೀಚಸ್ ಮತ್ತು ಫಾರೆಸ್ಟ್ಸ್ ಜೊತೆಗೆ ಗರುಡ ವಿಷ್ಣು ಟೆಂಪಲ್

7/11 ದಿನಗಳ ಸಿಂಗಾಪುರ–ಮಲೇಶಿಯ–ಥೈಲ್ಯಾಂಡ್ ಪ್ರವಾಸ
ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್ ಜೊತೆಗೆ ಸಿ ಅಕ್ವೇರಿಯಂ, ವಿಂಗ್ಸ್ ಆಫ್ ಟೈಮ್, ಯುನಿವರ್ಸಲ್ ಸ್ಟುಡಿಯೋ
ಮಲೇಶಿಯ : ಕೌಲಾಲಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ, ಜಂಟಿಂಗ್ ಹೈಲ್ಯಾಂಡ್, ಕೆ.ಎಲ್. ಟವರ್
ಥೈಲ್ಯಾಂಡ್ : ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್, ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್

6 ದಿನಗಳ ದುಬೈ ಶಾಪಿಂಗ್ ಫೆಸ್ಟಿವಲ್ –2025
ದುಬೈ ಸಿಟಿ ಟೂರ್, ಬುರ್ಜ್ ಖಲೀಫಾ, ಡೌ ಕ್ರೂಸ್, ಡೆಸರ್ಟ್ ಸಫಾರಿ, ಅಬುಧಾಬಿ ಸಿಟಿ ಟೂರ್, ಶಾರ್ಜ ಸಿಟಿ ಟೂರ್, ಮಿರಾಕಲ್ ಗಾರ್ಡನ್, ಗ್ಲೋಬಲ್ ವಿಲೇಜ್ ಹಾಗು ಇತರೆ

18 ದಿನಗಳ ಗ್ರ್ಯಾಂಡ್ ಯು.ಕೆ. ಯುರೋಪ್ – 10 ದೇಶಗಳು
ಯುಕೆ, ನೆದರ್‌ಲ್ಯಾಂಡ್ಸ್, ಬೆಲ್ಜಿಯಂ, ಫ್ರಾನ್ಸ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಲೆಚಿನ್‌ಸ್ಟೈನ್, ಆಸ್ಟ್ರಿಯಾ, ಇಟಲಿ, ವ್ಯಾಟಿಕನ್

7 / 11 ದಿನಗಳ ವಿಯೇಟ್ನಾಮ್ ಮತ್ತು ಕಾಂಬೋಡಿಯಾ ಪ್ರವಾಸ
ವಿಯೇಟ್ನಾಮ್ : ಹನಾಯ್ ನಗರ, ಡಾನ್ಹಾಗ್, ಹ ಲಾಂಗ್ ಬೇ, ಹೊ ಚಿ ಮಿನ್
ಕಾಂಬೋಡಿಯಾ : ಸಿಯಾಮ್‌ರಿಪ್, ನಾಮ್‌ಪೆನ್ ಇತ್ಯಾದಿ

6 ದಿನಗಳ ಶ್ರೀಲಂಕಾ ಪ್ರವಾಸ
ಸ್ಯಾಂಡ್ ಬೀಚ್, ಭಕ್ತ ಹನುಮಾನ್ ಟೆಂಪಲ್, ರಾವಣ ಎಲ್ಲೆ ಹಿಲ್ಸ್, ಶ್ರೀಲಂಕ ಕಲ್ಚರಲ್ ಶೋ, ಕ್ಯಾಂಡಿ ಲೇಕ್, ಸೀತ ಅಶೋಕವನ, ಡಿವುರಂಪೋಲ, ಗಾಯತ್ರಿ ಪೀಠಂ, ಕೊಲಂಬೋ ಸಿಟಿ ಟೂರ್

8 ದಿನಗಳ ಹಿಸ್ಟಾರಿಕಲ್ ಈಜಿಪ್ಟ್
ಕೈರೋ ಸಿಟಿ ಟೂರ್, 4 ದಿನಗಳ ನೈಲ್ ನದಿ 5 ಸ್ಟಾರ್ ಕ್ರೂಸ್, ಆಸ್ವಾನ್ ಹಾಗೂ ಲಕ್ಸರ್ ನಗರ ವೀಕ್ಷಣೆ

ಸಂಪರ್ಕಿಸಿ 9900080796 / 9900080792 / 9900093613
ನಂ. 98, 1ನೇ ಮಹಡಿ, ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು

PERSONAL

Change of Name

CHANGE OF NAME
I, **Rajanna Vijaya Kumar @ Kumara,** residing at # 32, 1st Main Road, 10th Cross, Chamarajpet, Bengaluru-560018, have changed my name to **R. VIJAYA KUMAR** vide affidavit dated 03/09/2024 before Notary Onkarappa. N.R, Bengaluru. Henceforth I shall be called as **R. VIJAYA KUMAR** only

I, HARIPRAKASHA, Residing at 169, 'Akshaya' 4th cross Andanappa Layout Byraveshwaranagar Bagalagunte, Bengaluru-73 have changed my name as HARIPRAKASH. B. vide affidavit dated 3/9/2024 before Notary V.Anjanappa Bengaluru

CONNECT

ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಸಂಪರ್ಕಿಸುವ ರಸ್ತೆ ಗುಂಡಿಮಯ • ದುಸ್ತರವಾದ ಬಸ್‌ಗಳ ಸಂಚಾರ

ಬಿಎಂಟಿಸಿ ಚಾಲಕರಿಗೆ 'ಗುಂಡಿ' ಸವಾಲು

ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಬೃಹತ್ ಗುಂಡಿ ಬಿದ್ದಿದೆ ಪ್ರಜಾವಾಣಿ ಚಿತ್ರಗಳು: ರಂಜು ಪಿ.

• ಖಲೀಲಅಹ್ಮದ ಶೇಖ

ಬೆಂಗಳೂರು: ರಾಜಧಾನಿ ಬೆಂಗಳೂರಿನ ಸಾರ್ವಜನಿಕ ಸಾರಿಗೆಯ ಜೀವನಾಡಿಯಾಗಿರುವ ಕೆಂಪೇಗೌಡ ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಪ್ರವೇಶ ಕಲ್ಪಿಸುವ ರಸ್ತೆಯುದ್ದಕ್ಕೂ ಬೃಹದಾಕಾರದ ಗುಂಡಿಗಳು ಬಿದ್ದಿವೆ. ರಸ್ತೆ ಹದಗೆಟ್ಟಿರುವುದರಿಂದ ಬಿಎಂಟಿಸಿ ಬಸ್‌ಗಳ ಸಂಚಾರಕ್ಕೆ ತೀವ್ರ ತೊಡಕಾಗಿದೆ.

ಗುಬ್ಬಿ ತೋಟದಪ್ಪ ರಸ್ತೆ ಮತ್ತು ಧನ್ವಂತರಿ ರಸ್ತೆಯ ಮೂಲಕ ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಭಾರಿ ಸಂಖ್ಯೆಯ ಬೃಹತ್ ಗುಂಡಿಗಳು ಬಿದ್ದಿವೆ. ಸಂಪೂರ್ಣವಾಗಿ ಹದಗೆಟ್ಟಿರುವ ಈ ರಸ್ತೆಯ ಮೂಲಕವೇ ಬಿಎಂಟಿಸಿ ಎಲ್ಲ ಬಸ್‌ಗಳು ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಪ್ರವೇಶಿಸಬೇಕಿವೆ. ಗುಂಡಿಗಳಲ್ಲಿ ಇಳಿಸದೆಯೇ ಬಸ್‌ಗಳನ್ನು ನಿಲ್ದಾಣದೊಳಕ್ಕೆ ತರುವುದು ಮತ್ತು ಹೊರಕ್ಕೆ ಕೊಂಡೊಯ್ಯುವುದಕ್ಕೆ ಚಾಲಕರು ಹರಸಾಹಸಪಡುವಂತಾಗಿದೆ.

ಈ ರಸ್ತೆಯಲ್ಲಿ ಪ್ರತಿನಿತ್ಯ ಬಿಎಂಟಿಸಿಯ ಏಳು ಸಾವಿರಕ್ಕೂ ಅಧಿಕ ಬಸ್‌ಗಳು ಸಂಚರಿಸುತ್ತವೆ. ನಿತ್ಯ ಲಕ್ಷಾಂತರ ಪ್ರಯಾಣಿಕರು ಈ ಮಾರ್ಗದಲ್ಲೇ ಪ್ರಯಾಣಿಸುತ್ತಾರೆ. ಆದರೆ, ರಸ್ತೆ ಗುಂಡಿಗಳು ಮಾತ್ರ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ.

ಇಲ್ಲಿಂದ ನಗರದ ವಿವಿಧ ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುವ ಹಾಗೂ ನಿಲ್ದಾಣ ಪ್ರವೇಶಿಸುವ ಎಲ್ಲ ಬಸ್‌ಗಳು ಈ ರಸ್ತೆಯ ಮೂಲಕವೇ ಸಂಚರಿಸಬೇಕು. ಮಳೆ ಬಂದರೆ ಗುಂಡಿಗಳಲ್ಲಿ ನೀರು ತುಂಬಿಕೊಳ್ಳುತ್ತದೆ. ಚಾಲಕರು ಅರಿವಿಲ್ಲದೆ ಬಸ್‌ಗಳನ್ನು ಗುಂಡಿಗಿಳಿಸಿದಾಗ ಪ್ರಯಾಣಕರು ತೊಂದರೆಗೀಡಾಗುತ್ತಿದ್ದಾರೆ. ಈ ರಸ್ತೆಯಲ್ಲಿ ದ್ವಿಚಕ್ರ ವಾಹನಗಳ ಸಂಚಾರಕ್ಕೂ ಅವಕಾಶವಿದೆ. ಬಿಸಿಲು ಹೆಚ್ಚಿದಾಗ ದೂಳು ಕಣ್ಣಿಗೆ ತುಂಬಿಕೊಂಡು ದ್ವಿಚಕ್ರ ವಾಹನ ಸವಾರರು ನಿತ್ಯವೂ ಪರದಾಡುತ್ತಿದ್ದಾರೆ.

'ಮೆಜೆಸ್ಟಿಕ್ ಬಸ್ ನಿಲ್ದಾಣದ ಮುಂಭಾಗದಲ್ಲಿರುವ ಕೆಂಪೇಗೌಡ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಪ್ರವೇಶ ಕಲ್ಪಿಸುವ ರಸ್ತೆಯಲ್ಲಿ ವೈಟ್ ಟಾಪಿಂಗ್ ಮಾಡಲಾಗಿದೆ. ಆದರೆ, ಮೆಜೆಸ್ಟಿಕ್ ಬಿಎಂಟಿಸಿ ಬಸ್ ನಿಲ್ದಾಣಕ್ಕೆ ಸಂಪರ್ಕಿಸುವ ರಸ್ತೆ ಮಾತ್ರ ಗುಂಡಿಮಯವಾಗಿದೆ. ನಾಲ್ಕೈದು ತಿಂಗಳ ಹಿಂದೆ ಈ ರಸ್ತೆ ಚೆನ್ನಾಗಿತ್ತು. ಇತ್ತೀಚೆಗೆ ಶುರುವಾದ ಮಳೆಯಿಂದ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ವಾಹನ ಚಾಲಕರು ಒಂದು ಗುಂಡಿಯನ್ನು ತಪ್ಪಿಸಲು ಹೋಗಿ ಮತ್ತೊಂದು ಗುಂಡಿಯಲ್ಲಿ ಬಸ್ ಓಡಿಸುತ್ತಿದ್ದಾರೆ. ಇದರಿಂದ, ಪ್ರಯಾಣಿಕರಿಗೆ ಕಿರಿಕಿರಿ ಆಗುತ್ತಿದೆ' ಎಂದು ಪ್ರಯಾಣಿಕ ಹನುಮಂತ ದೂರಿದರು.

'ಬೆಳಿಗ್ಗೆ 8ರಿಂದ 11 ಗಂಟೆಯವರೆಗೆ ಹಾಗೂ ಸಂಜೆ 4 ರಿಂದ ರಾತ್ರಿ 8 ಗಂಟೆಯವರೆಗೆ ನಿಲ್ದಾಣಕ್ಕೆ ಬರುವ ನೂರಾರು ಬಸ್‌ಗಳಿಂದ ವಿಪರೀತ ದಟ್ಟಣೆ ಆಗುತ್ತಿದೆ. ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ, ಬಸ್‌ಗಳು ನಿಧಾನ ಗತಿಯಲ್ಲಿ ಸಂಚರಿಸುತ್ತಿವೆ. ಆದರೂ ಮಳೆ ಸಂದರ್ಭದಲ್ಲಿ ಈ ಹಾದಿಯಲ್ಲಿ ಸಾಗುವಾಗ ಬಸ್‌ಗಳಿಗೆ ಸಾಕಷ್ಟು ಹಾನಿಯಾಗುತ್ತಿದೆ. ಈ ಬಗ್ಗೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗುತ್ತಿಲ್ಲ. ಸಂಬಂಧಪಟ್ಟವರು ಕೂಡಲೇ ರಸ್ತೆ ದುರಸ್ತಿಗೆ ಆದ್ಯತೆ ನೀಡಬೇಕು' ಎಂದು ಹವಾನಿಯಂತ್ರಿತ ವೋಲ್ವೊ ಬಸ್ ಚಾಲಕರೊಬ್ಬರು ಅಳಲು ತೋಡಿಕೊಂಡರು.

ಬಸ್‌ಗಳ ವಿವರ

755 ವೋಲ್ವೊ ಬಸ್‌ಗಳು

6,202 ಸಾಮಾನ್ಯ ಬಸ್‌ಗಳು

'ಬಿಬಿಎಂಪಿಯಿಂದ ವೈಟ್ ಟಾಪಿಂಗ್'

'ಮೆಜೆಸ್ಟಿಕ್‌ನ ಬಿಎಂಟಿಸಿ ಬಸ್ ನಿಲ್ದಾಣ ಪ್ರವೇಶಿಸುವ ರಸ್ತೆಯು ಸಾರಿಗೆ ನಿಗಮದ ವ್ಯಾಪ್ತಿಯಲ್ಲಿರುವ ಆಂತರಿಕ ರಸ್ತೆ. ಆದರೆ, ರಸ್ತೆ ದುರಸ್ತಿಗೆ ತನ್ನ ಬಳಿ ಹಣ ಲಭ್ಯವಿಲ್ಲ ಎಂದು ಬಿಎಂಟಿಸಿ ಹೇಳಿದೆ. ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಲು ಈ ರಸ್ತೆಯಲ್ಲಿ ಬಿಬಿಎಂಪಿ ವತಿಯಿಂದಲೇ ವೈಟ್ ಟಾಪಿಂಗ್ ಮಾಡಲಾಗುವುದು' ಎಂದು ಬಿಬಿಎಂಪಿಯ ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಮೆಜೆಸ್ಟಿಕ್ ಬಸ್ ನಿಲ್ದಾಣದಿಂದ ತೆರಳುವ ಮಾರ್ಗದಲ್ಲಿ ಬಿದ್ದಿರುವ ಗುಂಡಿಗಳಲ್ಲಿ ಕಲ್ಲುಗಳನ್ನು ಹಾಕಿದ್ದಾರೆ ಪ್ರಜಾವಾಣಿ ಚಿತ್ರ: ರಂಜು ಪಿ.

ಜನರು ಏನಂತಾರೆ...

ರಾಜಾಜಿನಗರದಿಂದ ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ತಲುಪಲು 20 ನಿಮಿಷ ಬೇಕಾಗುತ್ತದೆ. ನಿಲ್ದಾಣದ ಮುಂಭಾಗದ ರಸ್ತೆ ಹಾಳಾಗಿರುವುದರಿಂದ ಬಿಎಂಟಿಸಿ ಬಸ್ ನಿಲ್ದಾಣ ಪ್ರವೇಶಿಸಲು ಕನಿಷ್ಠ ಹತ್ತು ನಿಮಿಷ ಕಾಯಬೇಕು

ರವಿ, ಯಲಹಂಕ



ಮೆಜೆಸ್ಟಿಕ್ ಬಸ್ ನಿಲ್ದಾಣ ಸಂಪರ್ಕಿಸುವ ರಸ್ತೆ ಗುಂಡಿಮಯವಾಗಿದ್ದು, ಬಸ್ ಸಂಚಾರಕ್ಕೆ ಯೋಗ್ಯವಾಗಿಲ್ಲ. ಪ್ರತಿನಿತ್ಯ ಒಂದಿಲ್ಲೊಂದು ಸಾರ್ವಜನಿಕ ವಾಹನಕ್ಕೆ ಹಾನಿಯಾಗುತ್ತಿದೆ. ಪ್ರಯಾಣಿಕರಿಗೂ ತೊಂದರೆ ಆಗುತ್ತಿದೆ

ರಾಮು, ಪ್ರಯಾಣಿಕ

'ಇ–ತ್ಯಾಜ್ಯ ಸಂಸ್ಕರಣೆ, ಮರುಬಳಕೆಗೆ ಆದ್ಯತೆ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಸರಕ್ಕೆ ಹಾನಿ ಮಾಡುತ್ತಿರುವ ತ್ಯಾಜ್ಯದ ಸಂಸ್ಕರಣೆ, ಪುನರ್ ಬಳಕೆ, ಪುನರ್ ನಿರ್ಮಾಣದಂತಹ ಕ್ರಮಗಳ ಮೂಲಕ ವಿಲೇವಾರಿ ಮಾಡುವುದು ಅಗತ್ಯವಾಗಿದೆ' ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ನಗರದಲ್ಲಿ ಮಂಗಳವಾರ ನಡೆದ ಐದನೇ ರೀ ಕಾಮರ್ಸ್ ಎಕ್ಸ್‌ಪೊದಲ್ಲಿ ಮಾತನಾಡಿದ ಅವರು, 'ಇ–ತ್ಯಾಜ್ಯ, ಬ್ಯಾಟರಿ, ಯಂತ್ರೋಪಕರಣಗಳ ಮರುಬಳಕೆ ಮಾಡುವುದು ಈ ಹೊತ್ತಿನ ಆದ್ಯತೆಯಾಗಬೇಕಿದೆ. ಇದರಿಂದ ಆರ್ಥಿಕ ಲಾಭವೂ ಇದ್ದು, ಪರಿಸರ ಸಂರಕ್ಷಣೆಯಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

'ಹವಾಮಾನ ಬದಲಾವಣೆ ಅತಿ ದೊಡ್ಡ ಸವಾಲಾಗಿದೆ. ಉತ್ತರ ಕನ್ನಡದ ಶಿರೂರು, ಕೇರಳದ ವಯನಾಡು ಭಾಗದಲ್ಲಿ ಸಂಭವಿಸಿದ ಭೂ ಕುಸಿತ ನಮಗೆಲ್ಲರಿಗೂ ಎಚ್ಚರಿಕೆ ಗಂಟೆಯಾಗಿದೆ. ಗಾಳಿ, ನೀರಿನ ಮಾಲಿನ್ಯ ಹೆಚ್ಚಾಗುತ್ತಿದೆ. ಎಲ್ಲರೂ ಜಾಗೃತರಾಗಬೇಕಿದೆ' ಎಂದರು.

ರೀ ಎಕ್ಸ್‌ಪೊ ಆಯೋಜಕರು ಮತ್ತು ಉರ್ಧವ್ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವೆಂಕಟರೆಡ್ಡಿ ಡಿ. ಪಾಟೀಲ್ ಮಾತನಾಡಿ, 'ಸಂಸ್ಕರಣೆಯನ್ನು ಬಲಪಡಿಸುವುದು ನಮ್ಮ ಮೂಲ ಧ್ಯೇಯ. ಈ ನಿಟ್ಟಿನಲ್ಲಿ ಪಾಲುದಾರರ ಸಂಖ್ಯೆ ಹೆಚ್ಚಾಗಬೇಕು. ಮೊಬೈಲ್, ಲ್ಯಾಪ್‌ಟಾಪ್ ಮತ್ತಿತರ ವಸ್ತುಗಳನ್ನು ಮರು ಸಂಸ್ಕರಣೆ ಮಾಡಿ ಮರು ಬಳಕೆಗೆ ಯೋಗ್ಯವಾದ ರೀತಿಯಲ್ಲಿ ಸಜ್ಜುಗೊಳಿಸಬೇಕಾಗಿದೆ' ಎಂದರು.

ಪತಿಗೆ ಪ್ರತ್ಯೇಕವಾಗಿ ವಾಸಿಸುವಂತೆ ಹೇಳುವುದು ಕ್ರೌರ್ಯ: ಕೋರ್ಟ್

ಪ್ರಜಾವಾಣಿ ವಾರ್ತೆ

ಲಖನೌ: ಪತಿಗೆ ಪ್ರತ್ಯೇಕ ಕೋಣೆಯಲ್ಲಿ ವಾಸಿಸುವಂತೆ ಹೇಳುವುದು, ಆತನ ಜೊತೆ ಬಾಳ್ವೆಗೆ ನಿರಾಕರಿಸುವುದು ಮಾನಸಿಕ, ದೈಹಿಕ ಕಿರುಕುಳಕ್ಕೆ ಸಮನಾಗುತ್ತದೆ, ಇದು ವಿಚ್ಛೇದನ ನೀಡಲು ಆಧಾರವಾಗುತ್ತದೆ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ.

ವಿಚ್ಛೇದನ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದ ಕೌಟುಂಬಿಕ ನ್ಯಾಯಾಲಯದ ಕ್ರಮ ಪ್ರಶ್ನಿಸಿ ಪತಿಯೊಬ್ಬರು ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ರಾಜನ್ ರಾಯ್ ಮತ್ತು ಸುಭಾಷ್ ವಿದ್ಯಾರ್ಥಿ ಅವರು ಇದ್ದ ವಿಭಾಗೀಯ ಪೀಠವು ಈ ಮಾತು ಹೇಳಿದೆ. 'ಮಾನಸಿಕ ಕ್ರೌರ್ಯವನ್ನು ನೇರವಾದ ಸಾಕ್ಷ್ಯಗಳ ಮೂಲಕ ಸಾಬೀತು ಮಾಡುವುದು ಕಷ್ಟ. ಪ್ರಕರಣದ ಸಂದರ್ಭ ಹಾಗೂ ವಾಸ್ತವಾಂಶಗಳನ್ನು ಪರಿಗಣಿಸಿ, ಅದನ್ನು ತೀರ್ಮಾನಿಸಬೇಕು' ಎಂದು ಅದು ಹೇಳಿದೆ.

ಪತ್ನಿಯು ತನಗೆ ಆಕೆಯ ಕೊಠಡಿ ಪ್ರವೇಶಿಸಲು ಅವಕಾಶ ಕೊಡುತ್ತಿರಲಿಲ್ಲ. ಆಕೆಯು ತನ್ನ ಜೊತೆ ಬಾಳ್ವೆ ನಡೆಸಲು ಒಪ್ಪುತ್ತಿಲ್ಲ ಮತ್ತು ವೈವಾಹಿಕ ಹೊಣೆಯನ್ನು ಆಕೆ ನಿಭಾಯಿಸುತ್ತಿಲ್ಲ ಎಂಬುದನ್ನು ಪತಿಯು ಸ್ಪಷ್ಟವಾಗಿ ಹೇಳಿದ್ದಾರೆ. ಪತ್ನಿಯು ವೈವಾಹಿಕ ಸಂಬಂಧವನ್ನು ತೊರೆದಿದ್ದಳು ಎಂದು ಅನ್ನಿಸುತ್ತದೆ ಎಂದು ಕೋರ್ಟ್ ಹೇಳಿದೆ.

ಜೊತೆಯಾಗಿ ಬಾಳ್ವೆ ನಡೆಸುವುದು ಹಾಗೂ ಲೈಂಗಿಕ ಸಂಬಂಧ ಹೊಂದುವುದು ವೈವಾಹಿಕ ಸಂಬಂಧದ ಅಗತ್ಯ ಅಂಶ. ಆದರೆ ಇದಕ್ಕೆ ಪತ್ನಿಯು ನಿರಾಕರಿಸಿದರೆ, ಪತಿಗೆ ಬೇರೆ ಕೊಠಡಿಯಲ್ಲಿ ವಾಸಿಸುವಂತೆ ಒತ್ತಾಯಿಸಿದರೆ, ಆಕೆಯ ಆತನ ವೈವಾಹಿಕ ಹಕ್ಕುಗಳನ್ನು ನಿರಾಕರಿಸಿದಂತೆ ಆಗುತ್ತದೆ. ಇದು ಆತನ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಅದು ದೈಹಿಕ ಹಾಗೂ ಮಾನಸಿಕ ಕ್ರೌರ್ಯ ಕೂಡ ಆಗುತ್ತದೆ ಎಂದು ಪೀಠ ಹೇಳಿದೆ.

ವಿಚಾರಸಂಕಿರಣದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಆರೋಪ

ರಾಜಕೀಯ ಲಾಭಕ್ಕೆ ಸುಳ್ಳು ಸುದ್ದಿ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಳ್ಳು ಸುದ್ದಿಗಳನ್ನು ಹರಡುವ ಮೂಲಕ ಕೆಲ ಪಕ್ಷಗಳು ರಾಜಕೀಯ ಲಾಭ ಪಡೆಯಲು ಹವಣಿಸುತ್ತಿವೆ. ಸುಳ್ಳು ಸುದ್ದಿಗಳಿಂದಾಗಿಯೇ ಕೋಮು ಗಲಭೆಗಳು ನಡೆದು, ಜನರ ಜೀವಕ್ಕೂ ಅಪಾಯ ಎದುರಾಗಿವೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಇಲಾಖೆ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಹಯೋಗದಲ್ಲಿ 'ಸುಳ್ಳು ಸುದ್ದಿ ಸಾಮಾಜಿಕ ನ್ಯಾಯದ ಮೇಲೆ ಪರಿಣಾಮ' ವಿಷಯ ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ವಿಚಾರಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ಜಾಲತಾಣಗಳಲ್ಲಿ ನೈಜ ಹಾಗೂ ಸುಳ್ಳು ಸುದ್ದಿಗಳ ನಡುವಿನ ವ್ಯತ್ಯಾಸ ಸುಲಭಕ್ಕೆ ನಿಲುಕದಂತಾಗಿದೆ. ಸತ್ಯವಲ್ಲದ ಸುದ್ದಿಗಳನ್ನು ನಂಬಿ ಕೆಲವರು ಸಮಾಜದಲ್ಲಿ ಅಶಾಂತಿ ಸೃಷ್ಟಿಸುತ್ತಾರೆ' ಎಂದರು.

'ಮುಂದಿನ 20-30 ವರ್ಷಗಳಲ್ಲಿ ದೇಶದ ಮುಸ್ಲಿಮರ ಸಂಖ್ಯೆ ಹೆಚ್ಚಾಗುತ್ತದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮನೆಗಳಲ್ಲಿನ ಚಿನ್ನವನ್ನೂ ಕಿತ್ತುಕೊಳ್ಳುತ್ತಾರೆ ಎಂಬುದೂ ಸೇರಿದಂತೆ ಹಲವು ತಪ್ಪು ಮಾಹಿತಿಗಳನ್ನು ಬಿತ್ತುವ ಮೂಲಕ ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಇಂತಹ ಸುದ್ದಿಗಳನ್ನು ಜಾಲತಾಣಗಳಲ್ಲಿ ಹರಿಬಿಡುವ ಮೊದಲು ಸತ್ಯಾನ್ವೇಷಣೆ ಮಾಡಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

'ಕಳೆದ 10 ವರ್ಷಗಳಿಂದ ಈಚೆಗೆ ತಪ್ಪು ಮಾಹಿತಿ ಹರಡುವ ಪ್ರವೃತ್ತಿ ಹೆಚ್ಚಾಗಿದೆ. ಕೋಲಾಹಲ ಸೃಷ್ಟಿಸುವ ಸುದ್ದಿಗಳಿಗೆ ಒಲವು ತೋರಿದ್ದಾರೆ. ಕೆಲ ಮಾಧ್ಯಮಗಳೂ ಅಂತಹ ಸುದ್ದಿಗಳ ಬೆನ್ನು ಬೀಳುತ್ತಿವೆ. ಮುದ್ರಣ, ರೇಡಿಯೊ, ದೃಶ್ಯ ಮಾಧ್ಯಮಗಳ ವಿಶ್ವಾಸಾರ್ಹ ಸುದ್ದಿಗಳನ್ನೂ ನಂಬದ ಸ್ಥಿತಿಗೆ ಸಮಾಜ ತಲುಪಿದೆ' ಎಂದರು.

ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಬಿ.ಕೆ.ರವಿ ಮಾತನಾಡಿ, 'ಮುಖ್ಯವಾಹಿನಿಗಳು ಸಾಮಾಜಿಕ ಜಾಲತಾಣದ ಸುದ್ದಿಗಳನ್ನು ನಿತ್ಯವೂ ವಿಮರ್ಶೆಗೆ ಒಳಪಡಿಸಬೇಕು. ತಪ್ಪು ಮಾಹಿತಿ ಪ್ರಸಾರ ಮಾಡದೇ ಇರುವ ನಿರ್ಧಾರ ಪ್ರಕಟಿಸಬೇಕು. ಸರ್ಕಾರಗಳು ಮಾಧ್ಯಮವನ್ನು ನಿಯಂತ್ರಿಸುವ ಪರಿಸ್ಥಿತಿ ತಂದುಕೊಳ್ಳಬಾರದು' ಎಂದರು.

ವಿಚಾರಸಂಕಿರಣದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಿದ್ಯಾರ್ಥಿಗಳೊಂದಿಗೆ ಚರ್ಚೆ ನಡೆಸಿದರು. ಆಯೇಶಾ ಖಾನಂ, ಬಿ.ಕೆ. ರವಿ, ಹೇಮಂತ್ ನಿಂಬಾಳ್ಕರ್, ಸಿ. ರೂಪಾ ಹಾಜರಿದ್ದರು ಪ್ರಜಾವಾಣಿ ಚಿತ್ರ

'ಅಧಿಕಾರಕ್ಕಾಗಿ ಜಾಲತಾಣ ದುರ್ಬಳಕೆ'

ಸುಳ್ಳು ಸುದ್ದಿಗಳು ಸಮಾಜ ಮತ್ತು ಪ್ರಜಾಪ್ರಭುತ್ವದ ಸ್ವರೂಪಕ್ಕೆ ಧಕ್ಕೆ ತರುತ್ತಿವೆ. ಅಧಿಕಾರಕ್ಕಾಗಿ ಇಂತಹ ಸುದ್ದಿಗಳನ್ನು ಕೆಲ ರಾಜಕೀಯ ಪಕ್ಷಗಳೇ ಹಬ್ಬಿಸುತ್ತಿವೆ ಎಂದು ಪತ್ರಕರ್ತ ಶ್ರೀನಿವಾಸನ್ ಜೈನ್ ಹೇಳಿದರು.

ರಾಜಕಾರಣಿಗಳು ತಮ್ಮ ಹಿತಾಸಕ್ತಿ ಸಾಧನೆಗಾಗಿ ಜಾಲತಾಣಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಕೆಲವರು ಗೊತ್ತಿದ್ದೂ ಸೃಷ್ಟಿಸುವ ಸುಳ್ಳು ಸುದ್ದಿಗಳನ್ನು, ಇನ್ನೂ ಕೆಲವರು ಗೊತ್ತಿಲ್ಲದೇ ಜಾಲತಾಣಗಳಲ್ಲಿ ಹರಿಬಿಡುತ್ತಾರೆ ಎಂದರು. 'ಹಿಂದೆ ಉತ್ತರ ಪ್ರದೇಶದಲ್ಲಿ ಅಧಿಕಾರದಲ್ಲಿದ್ದ ಸಮಾಜವಾದಿ ಪಕ್ಷ ದೀಪಾವಳಿಗಿಂತ ಮುಸ್ಲಿಮರ ಹಬ್ಬದಲ್ಲಿ ಹೆಚ್ಚು ವಿದ್ಯುತ್ ಸರಬರಾಜು ಮಾಡಿತ್ತು ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಆರೋಪ ಮಾಡಿದ್ದರು. ಅಂಕಿಅಂಶಗಳನ್ನು ಪರಿಶೀಲಿಸಿದಾಗ ಸತ್ಯ ಬಯಲಾಯಿತು. ಅಧಿಕಾರ, ಚುನಾವಣಾ ಲಾಭಕ್ಕಾಗಿ ಇಂತಹ ಸುಳ್ಳು ಸುದ್ದಿ ಹಬ್ಬಿಸುವವರನ್ನು ಸಮಾಜದ ಮುಂದೆ ಸತ್ಯದ ಸಹಿತ ನಿಲ್ಲಿಸಿದಾಗ ಅಪಪ್ರಚಾರಗಳಿಗೆ ಕಡಿವಾಣ ಹಾಕಲು ಸಾಧ್ಯ' ಎಂದು ಹೇಳಿದರು.

ಪ್ರಬಂಧ ಮಂಡನೆ

ಪ್ರಜಾವಾಣಿ ವಾರ್ತೆ

ಡಾ.ಎಚ್.ಎಸ್. ನಟರಾಜ್ ಸೆಟ್ಟಿ

ಬೆಂಗಳೂರು: ಯುರೋಪಿಯನ್ ಸೊಸೈಟಿ ಆಫ್ ಕಾರ್ಡಿಯಾಲಜಿ ಸಂಸ್ಥೆಯು ಲಂಡನ್‌ನಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕ ಸಮ್ಮೇಳನದಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಹೃದ್ರೋಗ ತಜ್ಞ ಡಾ.ಎಚ್.ಎಸ್. ನಟರಾಜ್ ಸೆಟ್ಟಿ ಪ್ರಬಂಧ ಮಂಡಿಸಿದ್ದಾರೆ.

ಈ ಸಮ್ಮೇಳನ ಆಗಸ್ಟ್ 30ರಿಂದ ಸೆಪ್ಟೆಂಬರ್ 2ರವರೆಗೆ ನಡೆದಿದೆ. 'ಎಚ್‌ಐವಿ ಮತ್ತು ಹೃದಯ ರಕ್ತನಾಳದ ಕಾಯಿಲೆಗಳು' ಎಂಬ ವಿಷಯದ ಮೇಲೆ ಅವರು ಪ್ರಬಂಧ ಮಂಡಿಸಿದರು. ಈ ಸಮ್ಮೇಳನದಲ್ಲಿ ವಿವಿಧ ದೇಶಗಳ ಹೃದ್ರೋಗ ತಜ್ಞರು ಪಾಲ್ಗೊಂಡು, ಹೃದ್ರೋಗಗಳ ಬಗ್ಗೆ ಚರ್ಚಿಸಿದರು.

ಚಿತ್ರಾವಳಿ

ಜಯನಗರದ ವಿಜಯ ಸಂಯುಕ್ತ ಪಿಯು ಕಾಲೇಜಿನಲ್ಲಿ ಮಂಗಳವಾರ ನಡೆದ 'ವಿಜಯ ವಾರಿಧಿ' ಅಂತರ ಶಾಲಾ ಸ್ಪರ್ಧೆ ಕಾರ್ಯಕ್ರಮದಲ್ಲಿ (ಎಡದಿಂದ) ಸೀತಾರಾಮ ಶಾಸ್ತ್ರಿ, ವಿಜಯ ಎಜುಕೇಶನ್ ಇನ್‌ಸ್ಟಿಟ್ಯೂಟ್ ಟ್ರಸ್ಟ್‌ನ ಅಧ್ಯಕ್ಷ ಹಾಗೂ ಸಿಇಒ ಕೆ.ಸಿ. ರಘುನಂದನ್, ಸಂಸದ ಡಾ.ಸಿ.ಎನ್. ಮಂಜುನಾಥ್, ಪರಿಸರವಾದಿ ಸುರೇಶ್ ಹೆಬ್ಳೀಕರ್, ಎನ್.ಎಸ್. ಶ್ರೀನಿವಾಸ್ ಮೂರ್ತಿ ಭಾಗವಹಿಸಿದ್ದರು



ಮೆಜೆಸ್ಟಿಕ್‌ನಲ್ಲಿರುವ 'ನಮ್ಮ ಮೆಟ್ರೊ' ನಾಡಪ್ರಭು ಕೆಂಪೇಗೌಡ ನಿಲ್ದಾಣದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಹಸಿರು ಮಾರ್ಗದಿಂದ ನೇರಳೆ ಮಾರ್ಗಕ್ಕೆ ಬದಲಾಯಿಸುವ ಮತ್ತೊಂದು ಪ್ರವೇಶ ದ್ವಾರವನ್ನು ಪ್ರಯಾಣಿಕರ ಬಳಕೆಗೆ ಈಚೆಗೆ ಮುಕ್ತಗೊಳಿಸಲಾಗಿದೆ

ಮನೆ–ಮನೆಗೆ ಸುದ್ದಿ ಹಂಚುವವರಿಗೆ ಗೌರವ

ಪತ್ರಿಕಾ ವಿತರಕರ ದಿನ ಇಂದು

ಹಲವರಿಗೆ ಪ್ರತಿದಿನ ಆರಂಭವಾಗುವುದೇ ಅಂದಿನ ದಿನಪತ್ರಿಕೆಗಳನ್ನು ತೆರೆದು ಕೂತಾಗ. ಅಂತಹವರ ದಿನ ಆರಂಭವಾಗುವುದಕ್ಕೆ ದುಡಿಯುವ ಪತ್ರಿಕಾ ವಿತರಕರಿಗೆ ಕತ್ತಲಲ್ಲೇ ದಿನ ಆರಂಭವಾಗುತ್ತದೆ. ಮುದ್ರಣಾಲಯಗಳಿಂದ ಬಂದ ಪತ್ರಿಕೆಗಳನ್ನು ಜೋಡಿಸಿ, ಮನೆಮನೆಗೆ ಸುದ್ದಿ ತಲುಪಿಸುವ ಪತ್ರಿಕಾ ವಿತರಕರದ್ದು ಕೈಗಾರಿಕೋತ್ತರ ವಿಶ್ವದ ಅತ್ಯಂತ ಹಳೆಯ ಕೆಲಸಗಳಲ್ಲಿ ಒಂದು. ಚಳಿ–ಮಳೆ–ಗಾಳಿಯೆನ್ನದೆ ಕತ್ತಲಲ್ಲಿ ಎದ್ದು ಮನೆ–ಮನೆಗೆ ಪೇಪರ್ ಹಾಕುವ ಮಂದಿಯನ್ನು ಗೌರವಿಸಲೆಂದೇ ಸೆಪ್ಟೆಂಬರ್ 4ರಂದು 'ವಿಶ್ವ ಪತ್ರಿಕಾ ವಿತರಕರ ದಿನ' ಆಚರಿಸಲಾಗುತ್ತದೆ. ಅಪ್ಪನೊಂದಿಗೆ ಪೇಪರ್ ಹಾಕಲು ಹೋಗುತ್ತಿದ್ದು, ಈಗ ದೊಡ್ಡ ಹುದ್ದೆಯಲ್ಲಿದ್ದರೂ ತಮ್ಮ ಮೊದಲ ಕೆಲಸವನ್ನು ಬಿಡದ ಕೆಲವರ ಕತೆ ಇಲ್ಲಿದೆ. ಒಬ್ಬರು ಎಂಜಿನಿಯರ್, ಮತ್ತೊಬ್ಬರು ಎಂಜಿನಿಯರಿಂಗ್ ಮೆಟ್ಟಿಲು ಹತ್ತುತ್ತಿರುವವರು... ಅಪ್ಪನ ಕೆಲಸ ಎಂಬ ಹೆಮ್ಮೆಯ ಜತೆಗೆ, ಆಗುವಷ್ಟೂ ದಿನ ಸುದ್ದಿ ಹಂಚುತ್ತೇವೆ ಎಂಬ ದೃಢನಿಲುವು ಇಬ್ಬರದ್ದೂ. ಈ ಇಬ್ಬರ ನೆಪದಲ್ಲಿ ಎಲ್ಲ ಪತ್ರಿಕಾ ವಿತರಕರಿಗೆ ಗೌರವ

'ಕ್ಷೇಮನಿಧಿ ಹೆಚ್ಚಿಸಿ'

ಏನೇ ನಿಂತರೂ ಪೇಪರ್ ವಿತರಿಸುತ್ತಾ ಮನೆ–ಮನೆಗೆ ಸುದ್ದಿ ಹಂಚುವ ಈ ಕೆಲಸ ನಿಲ್ಲುವುದಿಲ್ಲ. ಆದರೆ ಪತ್ರಿಕಾ ವಿತರಕರ ಕೆಲಸಕ್ಕೆ ಯಾವುದೇ ಭದ್ರತೆ ಇಲ್ಲದೇ ಇರುವುದು ದೊಡ್ಡ ಕೊರತೆ. 2018ರಲ್ಲಿ ಸ್ಥಾಪಿಸಿದ್ದ ಕ್ಷೇಮನಿಧಿಯಿಂದ ಹೆಚ್ಚಿನ ಉಪಯೋಗ ಆಗುತ್ತಿಲ್ಲ. ಪೇಪರ್ ವಿತರಿಸುವಾಗ ಅಪಘಾತವಾದರೆ, ನಾಯಿ ಕಚ್ಚಿದರೆ ಚಿಕಿತ್ಸೆಗೆ ಹಣ ಹೊಂದಿಸಲು ಮತ್ತು ಅಕಾಲಿಕವಾಗಿ ಮೃತಪಟ್ಟರೆ ಪರಿಹಾರ ಒದಗಿಸಲು ಕ್ಷೇಮನಿಧಿಯನ್ನು ₹10 ಕೋಟಿಗೆ ಹೆಚ್ಚಿಸಬೇಕು.

ಕೆ. ಶಂಭುಲಿಂಗ, ರಾಜ್ಯಾಧ್ಯಕ್ಷ, ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ

ಪತ್ರಿಕಾ ವಿತರಕ ಎಂಜಿನಿಯರ್

ನಾನಿನ್ನೂ ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಅಪ್ಪನ ಜತೆ ಪೇಪರ್ ಹಾಕಲು ಹೋಗುತ್ತಿದ್ದೆ. ಬಹುಶಃ 1991 ಇರಬೇಕು, ನಾನು ಮೊದಲು ಪೇಪರ್ ಹಾಕಲು ಹೋಗಿದ್ದು. ಅದರಿಂದ ಬಂದ ಹಣ ನನ್ನ ಖರ್ಚಿಗೆ ಆಗುತ್ತಿತ್ತು. ಪಾಕೆಟ್ ಮನಿಗೆಂದು ಅಪ್ಪನ ಬಳಿ ಕೇಳುವ ಅಗತ್ಯ ಇರುವುದಿಲ್ಲ ಎಂದು ಆ ಕೆಲಸವನ್ನು ಕಾಲೇಜು ದಿನಗಳಲ್ಲೂ ಮುಂದುವರೆಸಿದೆ. ಈಗ ಎಂಜಿನಿಯರ್ ಆಗಿದ್ದರೂ ದಿನ ಬೆಳಗಿನ ಜಾವ ಎದ್ದು ಈ ಕೆಲಸವನ್ನೂ ಮಾಡುತ್ತೇನೆ. ಇದರಿಂದಲೇ ದುಡಿಯಬೇಕು ಎಂಬ ಅನಿವಾರ್ಯ ಇಲ್ಲ. ಆದರೆ ನನ್ನಪ್ಪ ಈಗಲೂ ಏಜೆನ್ಸಿ ನಡೆಸುತ್ತಾರೆ. ನಾನೂ ಅವರೊಂದಿಗೆ ಕೈಜೋಡಿಸುತ್ತೇನೆ. ಹುಡುಗರು ಬರದೇ ಇದ್ದ ದಿನ ನಾನೇ ಖುದ್ದು ಬೀಟ್‌ಗೆ ಹೋಗಿ, ಮನೆಮನೆಗೆ ಪತ್ರಿಕೆ ಹಂಚುವ ಕೆಲಸ ಮಾಡುತ್ತೇನೆ. ನಾನೇನೋ ದೊಡ್ಡ ಹುದ್ದೆಯಲ್ಲಿದ್ದೇನೆ ಎಂಬ ಹಮ್ಮು ಇಲ್ಲ. ಇದರಲ್ಲಿ ನನಗೆ ಖುಷಿಯಿದೆ.

ದೀಪಕ್ ಎಲ್.ಎಂ ಕಾಮಾಕ್ಯ ಜಂಕ್ಷನ್ ಬಳಿಯ ಶಾಮಣ್ಣ ಪಾರ್ಕ್ ಬಳಿ ಪತ್ರಿಕೆ ವಿತರಣೆ ಏಜೆನ್ಸಿ ನಡೆಸುವ ಮುನಿಸ್ವಾಮಿ ಎಲ್. (68) ಅವರ ಮಗ ಮತ್ತು ಸಾಫ್ಟ್‌ವೇರ್ ಎಂಜಿನಿಯರ್

ರ‍್ಯಾಂಕ್ ವಿದ್ಯಾರ್ಥಿ ಈ ಪೇಪರ್ ಬಾಯ್

ನನ್ನಪ್ಪನದೇ ಏಜೆನ್ಸಿ ಇದೆ. ಆರೇಳು ವರ್ಷಗಳಿಂದ ನಾನೂ ಪೇಪರ್ ಹಾಕುವ ಕೆಲಸ ಮಾಡುತ್ತಿದ್ದೇನೆ. ನನ್ನ ಓದಿನ ಇತರ ಖರ್ಚುಗಳನ್ನು ಅದರಲ್ಲೇ ಸರಿದೂಗಿಸುತ್ತಿದ್ದೇನೆ. ಅಪ್ಪನಿಗೆ ಸಹಾಯ ಮಾಡುತ್ತಿದ್ದೇನೆ ಎಂಬ ತೃಪ್ತಿಯೊಂದಿಗೆ, ನನ್ನ ಖರ್ಚೂ ಹುಟ್ಟುತ್ತದೆ. ಈ ಬಗ್ಗೆ ನನಗೆ ಹೆಮ್ಮೆ ಇದೆ. ಪ್ರತಿದಿನ ಈ ಕೆಲಸಕ್ಕೆ ಎರಡು–ಮೂರು ತಾಸು ವಿನಿಯೋಗಿಸಿದರೂ ನನ್ನ ಓದಿಗೆ ಯಾವುದೇ ತೊಂದರೆ ಆಗಿಲ್ಲ. ದಿನಾ ಬೆಳಿಗ್ಗೆ ಎದ್ದು ಪೇಪರ್ ಹಾಕುತ್ತಲೇ ಎಸ್‌ಎಸ್‌ಎಲ್‌ಸಿಯಲ್ಲಿ 625 ಅಂಕ ಪಡೆದಿದ್ದೇನೆ, ಪಿಯುಸಿಯಲ್ಲಿ 600ಕ್ಕೆ 570 ಅಂಕ ಪಡೆದಿದ್ದೇನೆ. ಈಗ ಎಂಜಿನಿಯರಿಂಗ್ ಓದುತ್ತಿದ್ದೇನೆ. ಈಗಲೂ ಪ್ರತಿದಿನ ಎದ್ದು ಪೇಪರ್ ಹಂಚಲು ಹೋಗುತ್ತೇನೆ. ನಾನು ಈ ಕೆಲಸ ಮಾಡಿಕೊಂಡು ಓದುತ್ತಿದ್ದೇನೆ ಎಂದು ಸ್ನೇಹಿತರಿಗೂ ನನ್ನ ಬಗ್ಗೆ ಖುಷಿ ಇದೆ. ಮುಂದೆ ಬೇರೆ ಕೆಲಸಕ್ಕೆ ಸೇರಿದಾಗಲೂ, ಯಾವುದೇ ಅಡಚಣೆ ಆಗದಿದ್ದರೆ ಆಗಲೂ ಪೇಪರ್ ಹಂಚುವುದನ್ನು ಬಿಡುವುದಿಲ್ಲ.

ಮೋನಿಷ್ ಗೌಡ ಎನ್.ಡಿ. ನಗರದ ವಿಜಯನಗರ ವ್ಯಾಪ್ತಿಯಲ್ಲಿ ಪೇಪರ್ ಏಜೆನ್ಸಿ ಹೊಂದಿರುವ ದೇವರಾಜು ಎನ್. ಅವರ ಪುತ್ರ, ಎಂಜಿನಿಯರಿಂಗ್ ವಿದ್ಯಾರ್ಥಿ

ಅತ್ಯಾಚಾರ ಎಸಗಿ, ಬೆತ್ತಲೆ ನೃತ್ಯ ಮಾಡುವಂತೆ ಒತ್ತಾಯ

ಐವರ ವಿರುದ್ಧ ಎಫ್‌ಐಆರ್

ಇಂದೋರ್ (ಪಿಟಿಐ): 34 ವರ್ಷ ವಯಸ್ಸಿನ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿ, ಆಕೆ ಬೆತ್ತಲಾಗಿ ನರ್ತಿಸುವಂತೆ ಒತ್ತಡ ಹೇರಿದ ಆರೋಪದ ಅಡಿ ಐದು ಮಂದಿ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಆದರೆ ಇದುವರೆಗೆ ಯಾರನ್ನೂ ಬಂಧಿಸಿಲ್ಲ.

ಗಮನಾರ್ಹ ಸಂಗತಿ ಎಂದರೆ, ಪೊಲೀಸರು ಯಾವುದೇ ಕ್ರಮ ಜರುಗಿಸುತ್ತಿಲ್ಲ ಎಂದು ದೂರಿ ಮಹಿಳೆಯು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಮಧ್ಯಪ್ರದೇಶ ಹೈಕೋರ್ಟ್, ಮಹಿಳೆಯ ದೂರನ್ನು 90 ದಿನಗಳಲ್ಲಿ ಇತ್ಯರ್ಥಪಡಿಸುವಂತೆ ಸೂಚಿಸಿದ 19 ದಿನಗಳ ನಂತರ ಈ ಎಫ್‌ಐಆರ್ ದಾಖಲಾಗಿದೆ.

ಆರೋಪಿಗಳು ತನ್ನನ್ನು ಜೂನ್ 11ರಂದು ಬಲಾತ್ಕಾರದಿಂದ ಗೋದಾಮಿಗೆ ಕರೆದೊಯ್ದಿದ್ದರು. ಅಲ್ಲಿ ಅವರು ತನ್ನ ಮೇಲೆ ಅತ್ಯಾಚಾರ ಎಸಗಿದರು. ಅಲ್ಲದೆ, ಟಿ.ವಿ.ಯಲ್ಲಿ ಕೆಲವು ದೃಶ್ಯಗಳನ್ನು ವೀಕ್ಷಿಸಿ, ತನ್ನ ಜೊತೆ ಅನೈಸರ್ಗಿಕ ಬಗೆಯಲ್ಲಿ ಲೈಂಗಿಕ ಕ್ರಿಯೆ ನಡೆಸಿದರು ಎಂದು ಮಹಿಳೆಯು ದೂರಿನಲ್ಲಿ ತಿಳಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಬೆಲ್ಟ್‌ನಿಂದ ಹೊಡೆದು, ಅರ್ಧ ಗಂಟೆ ಬೆತ್ತಲಾಗಿ ನರ್ತಿಸುವಂತೆ ಒತ್ತಡ ಹೇರಿದರು ಎಂದು ಕೂಡ ಆಕೆ ದೂರಿದ್ದಾರೆ. ಐವರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್ನುಗಳ ಅಡಿಯಲ್ಲಿ ಸೋಮವಾರ ತಡರಾತ್ರಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿ ಹೇಳಿದರು. ವಿಸ್ತೃತ ತನಿಖೆ ನಡೆಯುತ್ತಿದೆ ಎಂದು ಡಿಸಿಪಿ ಅಭಿನಯ್ ವಿಶ್ವಕರ್ಮ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ. ಆರೋಪಿಗಳ ಹೆಸರನ್ನು ಕೂಡ ಅವರು ಬಹಿರಂಗಪಡಿಸಿಲ್ಲ.

ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ಸೂಚನೆ

'ಅರಣ್ಯ ಒತ್ತುವರಿ ನಿಷ್ಠುರವಾಗಿ ತಡೆಯಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರಣ್ಯ ಒತ್ತುವರಿಯನ್ನು ಅತ್ಯಂತ ನಿಷ್ಠುರವಾಗಿ ತಡೆಯಬೇಕು' ಎಂದು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ಸೂಚನೆ ನೀಡಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ಮಂಗಳವಾರ ನಡೆದ ಕಾರ್ಯಕ್ರಮಮದಲ್ಲಿ 46 ಅರಣ್ಯ ಅಧಿಕಾರಿ ಮತ್ತು ಸಿಬ್ಬಂದಿಗೆ 'ಮುಖ್ಯಮಂತ್ರಿಗಳ ವಿಶಿಷ್ಟ ಸೇವಾ ಪದಕ' ಪ್ರದಾನ ಮತ್ತು 267 ಅರಣ್ಯ ವೀಕ್ಷಕರಿಗೆ ನೇಮಕಾತಿ ಪತ್ರ ವಿತರಿಸಿ ಅವರು ಮಾತನಾಡಿದರು.

'ಕಾಡು ಪ್ರಾಣಿಗಳಿಗೆ ಆಹಾರ, ಮೇವು ಮತ್ತು ನೀರು ಕಾಡಿನ ಒಳಗೇ ಅಗತ್ಯವಿದ್ದಷ್ಟು ದೊರೆತರೆ ಅವು ಕಾಡಿನಿಂದ ಹೊರಗೆ ಬರುವುದಿಲ್ಲ. ಆಗ ಮಾನವ-ಪ್ರಾಣಿ ಸಂಘರ್ಷಕ್ಕೆ ತಡೆ ಬೀಳುತ್ತದೆ. ಅರಣ್ಯದ ಪ್ರಮಾಣ ಇನ್ನೂ ಹೆಚ್ಚಾಗಬೇಕಿದೆ. ಅರಣ್ಯ ಸಂಪತ್ತು ಕಾಪಾಡುವ ವಿಚಾರದಲ್ಲಿ ಪದಕ ಪುರಸ್ಕೃತರ ಜವಾಬ್ದಾರಿ ಇನ್ನಷ್ಟು ಹೆಚ್ಚಾಗಿದೆ' ಎಂದ ಅವರು, 'ಆಯಾ ವರ್ಷದ ಪದಕವನ್ನು ಆಯಾ ವರ್ಷವೇ ವಿತರಿಸಬೇಕು' ಎಂದೂ ಸೂಚನೆ ನೀಡಿದರು.

'ಆನೆ ಮತ್ತು ಮಾನವ ಸಂಘರ್ಷದಿಂದ ಜೀವ, ಬೆಳೆ ಉಳಿಸಲು ರೈಲ್ವೆ ಬ್ಯಾರಿಕೇಡ್ ಪರಿಹಾರವಾಗಿದೆ. ಈವರೆಗೆ ಸುಮಾರು 333 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಿಸಲಾಗಿದ್ದು, 101 ಕಿ.ಮೀ. ಕಾಮಗಾರಿ ಪ್ರಗತಿಯಲ್ಲಿದೆ. 324 ಕಿ.ಮೀ. ತಡೆಗೋಡೆ ನಿರ್ಮಾಣಕ್ಕೆ ಎರಡು ವರ್ಷದಲ್ಲಿ ₹500 ಕೋಟಿ ಅನುದಾನ ನೀಡಬೇಕು' ಎಂದು ಮುಖ್ಯಮಂತ್ರಿ ಬಳಿ ಅರಣ್ಯ ಸಚಿವ ಈಶ್ವರ ಖಂಡ್ರೆ ಮನವಿ ಮಾಡಿದರು.

ಒತ್ತುವರಿ ತೆರವಿನ ಬಗ್ಗೆ ವಿವರಿಸಿದ ಖಂಡ್ರೆ, 'ಕಳೆದ ವರ್ಷದಿಂದ ಸುಮಾರು 2,500 ಎಕರೆ ಒತ್ತುವರಿ ತೆರವು ಮಾಡಲಾಗಿದೆ. ಹೊಸದಾಗಿ 11,559 ಎಕರೆ ಭೂಮಿಯನ್ನು ಅಧಿಸೂಚಿತ ಅರಣ್ಯ ಅಥವಾ ಮೀಸಲು ಅರಣ್ಯ ಎಂದು ಘೋಷಿಸಲಾಗಿದೆ' ಎಂದರು.

'ಇಲಾಖೆಯ ವರ್ಗಾವಣೆಯಲ್ಲಿ ಪಾರದರ್ಶಕತೆ ತರಲಾಗಿದೆ. ಡಿಆರ್‌ಎಫ್‌ಒ ವರೆಗಿನ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ನಡೆಸಲಾಗುತ್ತಿದೆ. ಬಹು ದಿನಗಳಿಂದ ಬಡ್ತಿ ಸಿಗದ ಸಿಬ್ಬಂದಿಗೆ ಬಡ್ತಿ ನೀಡಲಾಗಿದೆ. ರಾಜ್ಯದಲ್ಲಿ ಹಸಿರು ಹೊದಿಕೆ ಹೆಚ್ಚಿಸಲು 5 ಕೋಟಿ ಗಿಡ ನೆಡುವ ಸಂಕಲ್ಪ ಮಾಡಲಾಗಿದ್ದು, ಗುರಿ ಮೀರಿದ ಸಾಧನೆಯೊಂದಿಗೆ 5.48 ಕೋಟಿ ಗಿಡ ನೆಟ್ಟು ಜಿಯೋ ಟ್ಯಾಗ್ ಮಾಡಲಾಗಿದೆ' ಎಂದರು.

'ಬೆಂಗಳೂರಿನಲ್ಲಿ ಲಾಲ್ ಬಾಗ್, ಕಬ್ಬನ್ ಪಾರ್ಕ್ ಮಾದರಿಯಲ್ಲಿ ದೊಡ್ಡ ಉದ್ಯಾನಗಳನ್ನು ನಿರ್ಮಿಸಬೇಕಾಗಿದೆ. ಎಚ್‌ಎಂಟಿ ಬಳಿ ಇರುವ ಅರಣ್ಯ ಭೂಮಿಯನ್ನು ಮರಳಿ ಪಡೆದು ಅಲ್ಲಿ ಲಾಲ್ ಬಾಗ್ ಮಾದರಿಯಲ್ಲಿ ಉದ್ಯಾನ ನಿರ್ಮಿಸುವ ಯೋಜನೆಯಿದೆ' ಎಂದರು.

ಮುಖ್ಯಾಂಶಗಳು

- 267 ಅರಣ್ಯ ವೀಕ್ಷಕರಿಗೆ ನೇಮಕಾತಿ ಪತ್ರ
- 540 ಗಸ್ತು ಪಾಲಕರ ನೇಮಕಾತಿಗೆ ಶೀಘ್ರ ಪರೀಕ್ಷೆ
- 46 ಅರಣ್ಯ ಸಿಬ್ಬಂದಿಗೆ 'ಮುಖ್ಯಮಂತ್ರಿ ಪದಕ'

ಅರಣ್ಯ ಅಧಿಕಾರಿ ಮತ್ತು ಸಿಬ್ಬಂದಿಗೆ 'ಮುಖ್ಯಮಂತ್ರಿಗಳ ವಿಶಿಷ್ಟ ಸೇವಾ ಪದಕ' ಪ್ರದಾನ ಮತ್ತು ಅರಣ್ಯ ವೀಕ್ಷಕರಿಗೆ ನೇಮಕಾತಿ ಪತ್ರ ವಿತರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅರಣ್ಯ ಸಚಿವ ಈಶ್ವರ ಖಂಡ್ರೆ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ತಂತ್ರಜ್ಞಾನ





ಬ್ರೌಸರ್‌ನಲ್ಲಿ 'ಟ್ಯಾಬ್ ಗ್ರೂಪ್ಸ್'

ಏಕಕಾಲಕ್ಕೆ ವಿಭಿನ್ನ ವಿಷಯಗಳ ಮೇಲೆ ಕೆಲಸ ಮಾಡುವಲ್ಲಿ 'ಟ್ಯಾಬ್ ಗ್ರೂಪ್ಸ್' ಸಹಕಾರಿ



ಅವಿನಾಶ್ ಬಿ.

ಪೈಪೋಟಿಯ ಈ ಕಾಲದ ಉದ್ಯೋಗಕ್ಷೇತ್ರದಲ್ಲಿ ವಿಶೇಷವಾಗಿ ಏಕಕಾಲದಲ್ಲಿ ಹಲವು ಕೆಲಸಗಳನ್ನು ನಿಭಾಯಿಸಬೇಕಾದ 'ಮಲ್ಟಿಟಾಸ್ಕಿಂಗ್' ಅನಿವಾರ್ಯತೆಯಿದೆ. ಇದು ವೃತ್ತಿಪರತೆಯ ಮೂಲಭೂತ ಆವಶ್ಯಕತೆಯೂ ಹೌದು. ಕಂಪ್ಯೂಟರ್‌ನಲ್ಲಿ ಕೆಲಸ ಮಾಡುವವರಿಗಂತೂ ಹಲವು ಜಾಲತಾಣಗಳು, ಹಲವು 'ಎಚ್‌ಟಿಎಂಎಲ್' ಫೈಲುಗಳನ್ನೆಲ್ಲ ತೆರೆದಿಡುವುದು ಅತ್ಯಗತ್ಯ. ಗೂಗಲ್ ಕ್ರೋಮ್, ಮೈಕ್ರೋಸಾಫ್ಟ್ ಎಡ್ಜ್, ಆ್ಯಪಲ್ ಸಫಾರಿ, ಮೋಝಿಲಾ ಫೈರ್‌ಫಾಕ್ಸ್ ಮುಂತಾದ ಬ್ರೌಸರ್‌ಗಳು ಈ ಕಾರಣಕ್ಕಾಗಿಯೇ ಹಲವು ಟ್ಯಾಬ್‌ಗಳನ್ನು ತೆರೆದಿಟ್ಟು ಕೆಲಸ ಮಾಡಬಹುದಾದ ವೈಶಿಷ್ಟ್ಯಗಳನ್ನು ಜನರಿಗೆ ಉಚಿತವಾಗಿಯೇ ನೀಡುತ್ತಿದೆ. ಇದು ನಮ್ಮ-ನಿಮ್ಮ ಕೆಲಸದ ವೇಗವನ್ನು ಹೆಚ್ಚಿಸುವುದಕ್ಕೆ ಅನುಕೂಲ.

ಗೂಗಲ್ ಕ್ರೋಮ್ ಬ್ರೌಸರ್‌ನಲ್ಲಿ ಈ ಟ್ಯಾಬ್‌ಗಳನ್ನು ತೆರೆದಿಟ್ಟು, ಅದನ್ನೊಂದು ಗುಂಪು ಮಾಡಿ 'ಪಿನ್' ಮಾಡಿಟ್ಟುಕೊಂಡರೆ ಇವತ್ತು ಕೆಲಸ ಮುಗಿಸುವುದು ಕಷ್ಟವಾದರೂ, ನಾಳೆಗೆ ಅವನ್ನೆಲ್ಲ ಪುನಃ ಹುಡುಕುವಂತಾಗದೆ, ಕ್ಷಿಪ್ರವಾಗಿ ತೆರೆದು ಕೆಲಸವನ್ನು ಮುಂದುವರಿಸಲು ಅನುಕೂಲ ಮಾಡುವ ವೈಶಿಷ್ಟ್ಯದ ಬಗ್ಗೆ ಹೆಚ್ಚಿನವರಿಗೆ ತಿಳಿದಿಲ್ಲ. ಸಾಫ್ಟ್‌ವೇರ್ ಉದ್ಯಮದಲ್ಲಿರುವ ಕೆಲವರಿಗೆ ಇದು ಗೊತ್ತಿದೆಯಾದರೂ, ಜನಸಾಮಾನ್ಯರಿಗೂ ಏಕಕಾಲದಲ್ಲಿ ಹಲವು ಬ್ರೌಸರ್ ಟ್ಯಾಬ್‌ಗಳನ್ನು ತೆರೆದಿಟ್ಟು ಕೆಲಸ ಮಾಡಲು ಉಪಯೋಗವಾಗಬಹುದಾದ ಮಾಹಿತಿ ಇಲ್ಲಿದೆ.

ಏನಿದು ಟ್ಯಾಬ್ ಗ್ರೂಪ್ಸ್?

ಬ್ರೌಸರ್‌ನಲ್ಲಿ ಹೊಸ ವಿಂಡೋದ ಬದಲು, ಒಂದೇ ವಿಂಡೋದಲ್ಲಿ ಹಲವು ಟ್ಯಾಬ್‌ಗಳನ್ನು ತೆರೆಯಲು ಅಡ್ರೆಸ್ ಬಾರ್ ಬಲತುದಿಯಲ್ಲಿ '+' ಚಿಹ್ನೆ ಎಲ್ಲರೂ ನೋಡಿರುತ್ತೀರಿ. ಈ ಟ್ಯಾಬ್‌ಗಳಲ್ಲಿ ಜಾಲತಾಣದ ಪುಟಗಳನ್ನು ಒಂದೊಂದಾಗಿ ತೆರೆಯುತ್ತಾ ಹೋದರೆ, ಒಂದೇ ವಿಂಡೋದಲ್ಲಿ ಎಲ್ಲವೂ ಇರುವಂತಾಗುತ್ತದೆ. ಅದರ ಮುಂದುವರಿದ ಭಾಗವೇ ಈ 'ಟ್ಯಾಬ್ ಗ್ರೂಪ್ಸ್'. ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದ ಜಾಲತಾಣಗಳನ್ನು ಬೇರೆ ಬೇರೆ ಟ್ಯಾಬ್‌ಗಳಲ್ಲಿ ತೆರೆದಿಟ್ಟು, ಅವುಗಳನ್ನು ಒಟ್ಟುಗೂಡಿಸಿ, ಬೇಕೆಂದಾಗ ಮಾತ್ರ ಎಲ್ಲವನ್ನೂ ಏಕಕಾಲಕ್ಕೆ ತೆರೆಯುವ ವೈಶಿಷ್ಟ್ಯವಿದು. ಉದಾಹರಣೆಗೆ, ಹಣಕಾಸುವಿಷಯ, ಷೇರುಗಳ ವಿಚಾರ, ಇತರ ಯಾವುದೇ ನಿರ್ದಿಷ್ಟ ವಿಷಯಗಳ ಬಗೆಗೆ ಹಲವು ಜಾಲತಾಣಗಳನ್ನು ಏಕಕಾಲದಲ್ಲಿ ವಿಭಿನ್ನ ಟ್ಯಾಬ್‌ಗಳಲ್ಲಿ ತೆರೆದಿಟ್ಟು, ಅವಲೋಕನ ಮಾಡಬೇಕಾಗಬಹುದು. ತೆರೆದಿಟ್ಟ ವಿಭಿನ್ನ ವಿಷಯಗಳ ಟ್ಯಾಬ್‌ಗಳನ್ನು ವ್ಯವಸ್ಥಿತವಾಗಿಟ್ಟರೆ, ಕೆಲಸಕ್ಕೆ ವೇಗ ದೊರೆಯುತ್ತದೆ.

ಟ್ಯಾಬ್ ಗ್ರೂಪ್ಸ್ ರಚಿಸಲು ಬ್ರೌಸರ್ ವಿಂಡೋದ ಬಲ ಮೇಲ್ತುದಿಯಲ್ಲಿ ರೈಟ್-ಕ್ಲಿಕ್ ಮಾಡಿದಾಗ ಕಾಣಿಸುವ ಮೆನು. ಹಾಗೂ ಈಗಾಗಲೇ ರಚಿಸಲಾಗಿರುವ ಗ್ರೂಪ್ಸ್ (ಬೇರೆ ಬೇರೆ ಬಣ್ಣಗಳಲ್ಲಿ).

ಟ್ಯಾಬ್ ಗ್ರೂಪ್ಸ್ ರಚಿಸುವುದು ಹೇಗೆ?

ಕ್ರೋಮ್ ಬ್ರೌಸರ್‌ನಲ್ಲಿ ತೆರೆದಿಟ್ಟ ಟ್ಯಾಬ್‌ನ ಮೇಲ್ಭಾಗದ ಬಾರ್‌ನಲ್ಲಿ ಮೌಸ್ ಬಲ-ಕ್ಲಿಕ್ ಮಾಡಿ. ಆಗ ಕಾಣಿಸಿಕೊಳ್ಳುವ ವಿಂಡೋದಲ್ಲಿ 'Add Tab to New Group' ಎಂಬ ಆಯ್ಕೆ ಗೋಚರಿಸುತ್ತದೆ. ಅದನ್ನು ಕ್ಲಿಕ್ ಮಾಡಿ. ಆ ಗ್ರೂಪ್‌ಗೆ ಹೆಸರು ಮತ್ತು ನಿರ್ದಿಷ್ಟ ಬಣ್ಣ ಕೊಡುವ ಆಯ್ಕೆಯೂ ಅಲ್ಲೇ ಕಾಣಿಸುತ್ತದೆ. ತೆರೆದಿರುವ ಬೇರೊಂದು ಬ್ರೌಸರ್ ವಿಂಡೋ ಅಥವಾ ಟ್ಯಾಬ್ ಮೇಲೆ ಬಲ-ಕ್ಲಿಕ್ ಮಾಡಿದಾಗ, 'Add to Tab Groups' ಅಥವಾ 'Add Tab To New Group' ಎಂದೂ ಕಾಣಿಸಿಕೊಳ್ಳುತ್ತದೆ. ಆಯ್ಕೆ ಮಾಡಿಕೊಳ್ಳಿ. ಹೀಗೆ, ನಮಗೆ ಬೇಕಾದ ವಿಷಯದ ಕುರಿತಾಗಿ ಹಲವಾರು ಟ್ಯಾಬ್ ಗ್ರೂಪ್‌ಗಳನ್ನು ರಚಿಸಿ, ಅದಕ್ಕೆ ತತ್ಸಂಬಂಧಿತ ಹೆಸರುಗಳನ್ನು ಕೊಡುತ್ತಹೋಗಬಹುದು. ನಂತರ, ಅಲ್ಲೇ (ಮೇಲ್ಭಾಗದಲ್ಲಿ ಟ್ಯಾಬ್ ಮೇಲೆ) ಬಲ-ಕ್ಲಿಕ್ ಮಾಡಿ, 'Save Group' ಒತ್ತಲು ಮರೆಯಬೇಡಿ. ಹಾಗಿದ್ದರೆ ಮಾತ್ರ, ಕ್ರೋಮ್ ಬ್ರೌಸರ್ ಮುಚ್ಚಿದರೂ, ಮತ್ತೊಮ್ಮೆ ತೆರೆದಾಗ ಆ ಗ್ರೂಪ್ ತೆರೆಯಲು ನಿಮಗೆ ಸಾಧ್ಯವಾಗುತ್ತದೆ.

ಮುಂದೆ, ಬೇರೆ ಟ್ಯಾಬ್‌ಗಳನ್ನು ಈ ಗ್ರೂಪ್‌ಗೆ ಸೇರಿಸಬೇಕಿದ್ದರೆ, ಟ್ಯಾಬ್ ಮೇಲ್ಭಾಗದಲ್ಲಿ ಬಲ-ಕ್ಲಿಕ್ ಮಾಡಿದರೆ ಸಿಗುವ ಆಯ್ಕೆ ಮಾಡಿಕೊಳ್ಳಬಹುದು. ಅಲ್ಲದೆ, ಇಡೀ ಟ್ಯಾಬ್ ಅನ್ನೇ ಎಳೆದು ಗ್ರೂಪ್‌ನ ಮೇಲೆ ಬಿಡಬಹುದು (ಡ್ರ್ಯಾಗ್ ಆ್ಯಂಡ್ ಡ್ರಾಪ್).

ಇನ್ನು, ನಾವು ಗುರುತು ಮಾಡಿಕೊಂಡ ಟ್ಯಾಬ್ ಮೇಲೆ ಒಂದು ಸಲ ಕ್ಲಿಕ್ ಮಾಡಿದಾಗ, ಅದರೊಳಗಿರುವ ಎಲ್ಲ ಟ್ಯಾಬ್‌ಗಳೂ ಒಂದೇ ಟ್ಯಾಬ್‌ನಲ್ಲಿ ಗುಂಪಾಗಿ ಕೂಡಿಕೊಳ್ಳುತ್ತವೆ (ಮಿನಿಮೈಸ್). ಮತ್ತೊಮ್ಮೆ ಕ್ಲಿಕ್ ಮಾಡಿದರೆ, ಎಲ್ಲವೂ ಪ್ರತ್ಯೇಕ ಟ್ಯಾಬ್‌ಗಳಲ್ಲಿ ತೆರೆದುಕೊಳ್ಳುತ್ತವೆ. ಇದರಿಂದ ಒಂದು ಸಮಯಕ್ಕೆ ಒಂದು ವಿಷಯದ ಬಗೆಗೆ ಮಾತ್ರವೇ ಗಮನ ಕೇಂದ್ರೀಕರಿಸಿ, ಅದಕ್ಕೆ ಸಂಬಂಧಿಸಿದ ಕೆಲಸ ಮಾಡಿ ಮುಗಿಸುವಲ್ಲಿ ಅನುಕೂಲ ಒದಗಿಸುತ್ತದೆ. ಆ ದಿನದ ಕೆಲಸ ಮುಗಿಸಿ ಬ್ರೌಸರ್ ಮುಚ್ಚಿ, ನಂತರ ಪುನಃ ಅದನ್ನು ತೆರೆದಾಗ ಈ ಟ್ಯಾಬ್ ಗ್ರೂಪ್‌ಗಳು ನಮಗೆ ಬ್ರೌಸರ್‌ನ ಎಡ-ಮೇಲ್ಭಾಗದಲ್ಲಿ ಗೋಚರಿಸುತ್ತವೆ. ಅದನ್ನು ಕ್ಲಿಕ್ ಮಾಡಿ ಪುನಃ ತೆರೆದು ಕೆಲಸ ಮುಂದುವರಿಸ ಬಹುದು. ನಿರ್ದಿಷ್ಟ ಟ್ಯಾಬ್ ಗ್ರೂಪ್‌ನ ಕೆಲಸ ಮುಗಿಯಿತು ಎಂದಾದಾಗ, ಅದೇ ಟ್ಯಾಬ್ ಗ್ರೂಪ್ ಮೇಲೆ ಬಲ-ಕ್ಲಿಕ್ ಮಾಡಿ 'Ungroup' ಕ್ಲಿಕ್ ಮಾಡಿದರಾಯಿತು.

ಸ್ಮಾರ್ಟ್ ಫೋನ್‌ಗಳಲ್ಲಿ ಹೇಗೆ?

ಮೊಬೈಲ್ ಫೋನ್‌ನ ಕ್ರೋಮ್ ಬ್ರೌಸರ್‌ನಲ್ಲಿಯೂ ಈ ರೀತಿ ಟ್ಯಾಬ್ ಗ್ರೂಪ್‌ಗಳನ್ನು ಮಾಡಬಹುದು. ಟ್ಯಾಬ್‌ಗಳನ್ನು ನೋಡಲು ಬ್ರೌಸರ್ ವಿಳಾಸ ದಾಖಲಿಸುವ ಅಡ್ರೆಸ್ ಬಾರ್ ಪಕ್ಕದಲ್ಲೇ ತೆರೆದಿರುವ ಟ್ಯಾಬ್‌ಗಳ ಸಂಖ್ಯೆ ತೋರಿಸುವ ಚೌಕಾಕಾರದ ಒಂದು ಐಕಾನ್ ಇರುತ್ತದೆ. ಅದನ್ನು ಕ್ಲಿಕ್ ಮಾಡಿ, ತೆರೆದಿರುವ ಟ್ಯಾಬ್‌ಗಳನ್ನು ಸ್ಪರ್ಶಿಸಿ ಒಂದರ ಮೇಲೊಂದು ಎಳೆದು ಬಿಡಿ (ಡ್ರ್ಯಾಗ್ ಆ್ಯಂಡ್ ಡ್ರಾಪ್). ಆಗ ಗ್ರೂಪ್ ರಚನೆಯಾಗುತ್ತದೆ ಮತ್ತು ಅದಕ್ಕೆ ಹೆಸರು ಕೂಡ ಕೊಡಬಹುದು. ಡೀಫಾಲ್ಟ್ ಆಗಿ ಟ್ಯಾಬ್‌ಗಳ ಸಂಖ್ಯೆಯನ್ನು ಅದು ತಿಳಿಸುತ್ತದೆ. ಅದನ್ನು ಅಳಿಸಿ ನಮಗೆ ಬೇಕಾದ ಹೆಸರನ್ನು ನಮೂದಿಸಬಹುದು.

ಈ ರೀತಿ ಟ್ಯಾಬ್‌ಗಳನ್ನು ಗ್ರೂಪ್ ಮಾಡಿಟ್ಟುಕೊಳ್ಳುವುದು ವಿದ್ಯಾರ್ಥಿಗಳಿಂದ ಹಿಡಿದು, ಉದ್ಯೋಗಸ್ಥರಿಗೆ, ಸಂಶೋಧಕರಿಗೆ, ಟೆಕಿಗಳಿಗೆ – ಹೀಗೆ ಎಲ್ಲರಿಗೂ ಉಪಯೋಗ. ಆದರೆ, ಇದಕ್ಕೆ ಗೂಗಲ್ ಕ್ರೋಮ್ ಬ್ರೌಸರ್‌ಗೆ ಜಿಮೇಲ್ ಮೂಲಕ ಲಾಗಿನ್ ಆಗಿರಬೇಕಾಗುತ್ತದೆ ಎಂಬುದು ನೆನಪಿರಲಿ. ❖

ಲ್ಯಾಬ್‌ನಲ್ಲಿ ಸಿದ್ಧವಾದ ರಕ್ತಕೋಶಗಳು!

ಅಮೃತೇಶ್ವರಿ ಬಿ.

ನಾವು ಬದುಕಿರಲು ಅತ್ಯವಶ್ಯಕವಾದ ಉಸಿರಾಟ, ರಕ್ತಪರಿಚಲನೆ, ಜೀರ್ಣಕ್ರಿಯೆ, ಹೃದಯಬಡಿತ, ರಕ್ತ ಉತ್ಪಾದನೆ, ಮಾಂಸಖಂಡಗಳ ಬೆಳವಣಿಗೆ ಮುಂತಾದ ಯಾವುದೇ ಭೌತಿಕ ಕ್ರಿಯೆಗಳಾದರೂ ನಮ್ಮ ಮನಸ್ಸು ಅಥವಾ ಬುದ್ಧಿಯನ್ನು ಕೇಳಿ ನಡೆಯುತ್ತವೆಯೇ? ಇಲ್ಲ. ಇನ್ನು, ರಕ್ತ ಉತ್ಪಾದನೆ ಎಂದಾಗ ಯಾವುದೇ ಆರೋಗ್ಯವಂತನ ದೇಹದಲ್ಲಿ ಅವನ ಅರಿವಿಗೇ ಬಾರದಂತೆ ರಕ್ತಉತ್ಪತ್ತಿಯ ಕ್ರಿಯೆ ಸುಲಭವಾಗಿ ಜರುಗುತ್ತಿರುತ್ತದೆ. ಇದು ಪ್ರಕೃತಿ ಎಲ್ಲ ಜೀವಸಂಕುಲಗಳಿಗೂ ನೀಡಿರುವ ಶಕ್ತಿ ಹಾಗೂ ವರದಾನ. ಆದರೆ ದುರದೃಷ್ಟವಶಾತ್ ಕೆಲವರು ಲ್ಯುಕೇಮಿಯಾ, ಬ್ಲಡ್ ಕ್ಯಾನ್ಸರ್, ಅಸ್ಥಿಮಜ್ಜೆ ವೈಫಲ್ಯಗಳಂತಹ ಆರೋಗ್ಯದ ಸಮಸ್ಯೆಗಳಿಗೆ ತುತ್ತದಾಗ ಅವರ ದೇಹ ತನಗೆ ಅವಶ್ಯವಿರುವ ರಕ್ತವನ್ನು ಉತ್ಪಾದಿಸಿಕೊಳ್ಳಲು ಶಕ್ತವಾಗಿರುವುದಿಲ್ಲ. ಆಗ ಅವರದೇ ರಕ್ತದ ಗುಂಪಿನವರು ತಮ್ಮ ರಕ್ತವನ್ನು ರೋಗಿಗೆ ದಾನ ಮಾಡಬೇಕಾಗುತ್ತದೆ. ಆದರೆ ಇದಕ್ಕೆ ಮತ್ತೊಬ್ಬ ಆರೋಗ್ಯವಂತನಾದ ವ್ಯಕ್ತಿಗಾಗಿ ಹುಡುಕಾಟ ನಡೆಸಿ, ದಾನಿಯು ಒಪ್ಪಿದರೆ, ಅವರ ರಕ್ತಪರೀಕ್ಷೆ ಮಾಡಿ, ಕೊನೆಗೆ ರಕ್ತವನ್ನು ಪಡೆಯಬೇಕು. 'ಬ್ಲಡ್ ಬ್ಯಾಂಕ್'ಗಳು ಬಂದಿರುವುದರಿಂದ ಸ್ವಲ್ಪ ಮಟ್ಟಿಗೆ ಈ ತೊಂದರೆ ಕಡಿಮೆಯಾಗಿರಬಹುದೆನ್ನಿ. ಮಕ್ಕಳಿಗೆ ಸರಿಹೊಂದುವಂತಹ ದಾನಿಗಳು ಸಿಗುವುದು ಕಷ್ಟಸಾಧ್ಯವಾದ್ದರಿಂದ ಮಕ್ಕಳಲ್ಲಿ ಈ ರಕ್ತ ಸಂಬಂಧಿ ತೊಂದರೆ ಕಾಣಿಸಿಕೊಂಡರೆ ಚಿಕಿತ್ಸಾಮಾರ್ಗಗಳು ಕಷ್ಟ. ಹಾಗೇನಾದ್ರೂ ತದ್ವಿರುದ್ಧವಾದ ಕೋಶಗಳನ್ನು ಸೇರಿಸಿಬಿಟ್ಟರಂತೂ ಅದು ರೋಗಿಯ ಸ್ವಂತ ಕೋಶಗಳನ್ನೇ ಹೊಡೆದುರುಳಿಸಿ, ಗಂಭೀರ ಸಮಸ್ಯೆಗಳನ್ನು ಉಂಟುಮಾಡುತ್ತವೆ; ರೋಗಿಗಳು ಕೆಲವೊಮ್ಮೆ ಮರಣಿಸುವ ಸಾಧ್ಯತೆಗಳೂ ಇವೆ. ಹಾಗಾಗಿ ರೋಗಿನಿರ್ದಿಷ್ಟ ರಕ್ತಕೋಶಗಳನ್ನು ತಯಾರಿಸಿದಾಗ ಇಂತಹ ತೊಡಕುಗಳನ್ನು ಸುಲಭವಾಗಿ ಪರಿಹರಿಸಬಹುದು. ದಾನಿಗಳ ಹುಡುಕಾಟ ನಡೆಸಬೇಕಿಲ್ಲ. ಮಾತ್ರವಲ್ಲ, ಈ ರೀತಿಯ 'ಜೀನೋಮ್ ಎಡಿಟಿಂಗ್' ರೋಗಿಯ ಮೂಲಸಮಸ್ಯೆಗಳನ್ನು ಸರಿಪಡಿಸಲು ಅನುಕೂಲಿಯಾಗುತ್ತದೆ. ಹಾಗಾದರೆ ಇತರೆ ಔಷಧಗಳಂತೆ ರಕ್ತಕೋಶಗಳನ್ನೂ ಪ್ರಯೋಗಾಲಯಗಳಲ್ಲಿ ತಯಾರಿಸಬಹುದಾಗಿದ್ದರೆ ಹೇಗಿರುತ್ತಿತ್ತು?

ಆಸ್ಟ್ರೇಲಿಯಾದ ಮೆಲ್ಬೋರ್ನ್‌ನಲ್ಲಿರುವ 'ಮುರ್ಡಾಕ್ ಚಿಲ್ಡ್ರನ್ ರಿಸರ್ಚ್ ಇನ್ಸ್ಟಿಟ್ಯೂಟ್'ನ (ಎಂಸಿಆರ್‌ಐ) ಸಂಶೋಧಕರು ಮನುಷ್ಯನ ರಕ್ತವನ್ನೇ ಹೋಲುವ ರಕ್ತಕೋಶಗಳನ್ನು ಪ್ರಯೋಗಾಲಯದಲ್ಲಿ ತಯಾರಿಸಿದ್ದಾರಂತೆ. ಹಾಗೆಂದು 'ಎಂಸಿಆರ್‌ಐ'ನ ಸಂಶೋಧಕರು 'ನೇಚರ್ ಬಯೋಟೆಕ್ನಾಲಜಿ' ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ. ಈ ಸಂಶೋಧನೆಯು ಲ್ಯುಕೇಮಿಯಾ ಮತ್ತು ಅಸ್ಥಿಮಜ್ಜೆ ವೈಫಲ್ಯಗಳಂತಹ ದೌರ್ಬಲ್ಯವಿರುವ ಮಕ್ಕಳಿಗೆ ಅತಿ ಶೀಘ್ರದಲ್ಲಿ, ಆಯಾ ಮಕ್ಕಳ ದೇಹಕ್ಕೆ ಸೂಕ್ತವಾದಂತಹುದೇ ಚಿಕಿತ್ಸೆಯನ್ನು ಒದಗಿಸಲು ಅನುಕೂಲವಾಗುತ್ತದೆಯಂತೆ.

ಈ ಪ್ರಯೋಗದಲ್ಲಿ ಸಂಶೋಧಕರು 'ಸ್ಟೆಮ್ ಸೆಲ್'ಗಳನ್ನು ಬಳಸಿಕೊಂಡಿದ್ದಾರೆ. ನಮ್ಮ ಚರ್ಮ, ರಕ್ತನಾಳಗಳು, ಮಿದುಳು, ಅಸ್ಥಿಮಜ್ಜೆ ಇಂತಹ ಭಾಗಗಳಲ್ಲಿ ಕಂಡುಬರುವ, ಇತರೆ ವಿಭಿನ್ನ ಕೋಶಗಳನ್ನು ತಯಾರಿಸಬಲ್ಲ, ಹಾಗೂ ತನ್ಮೂಲಕ ದೇಹದ ದುರಸ್ತಿ ಕಾರ್ಯವನ್ನು ಮಾಡಬಲ್ಲ ಸಾಮರ್ಥ್ಯವಿರುವ ವಿಶೇಷ ಬಗೆಯ ಕೋಶಗಳೇ ಸ್ಟೆಮ್ ಸೆಲ್‌ಗಳು. ರೋಗಿಯ ಸ್ಟೆಮ್ ಸೆಲ್‌ಗಳನ್ನು ತೆಗೆದುಕೊಂಡು ಅದನ್ನೇ ಹೋಲುವ ರಕ್ತಕೋಶಗಳನ್ನು ತಯಾರಿಸಿ ಅಸ್ಥಿಮಜ್ಜೆಯ ಕಸಿಯಲ್ಲಿ ಬಳಸಬಹುದಂತೆ. ಆಗ ರೋಗಿಯ ದೇಹದಲ್ಲಿ ಆರೋಗ್ಯವಂತ ರಕ್ತಕಣಗಳ ಸೃಷ್ಟಿ ಸುಲಭವಾಗುತ್ತದೆ ಎನ್ನುತ್ತಾರೆ, ಪ್ರೊಫೆಸರ್ ಎಲಿಜಬೆತ್ ಮತ್ತು ತಂಡದವರು.

ಆದರೆ, ಇದೇನೂ ಸುಲಭದ ಕೆಲಸವಲ್ಲ. ರೋಗಿಯ ದೇಹದಿಂದ ಕೋಶಗಳನ್ನು ತೆಗೆದುಕೊಂಡು, ಕಸಿ ಮಾಡಲು ಸೂಕ್ತವಾದ ರಕ್ತಕೋಶಗಳನ್ನು ತಯಾರಿಸಿ ದೇಹದೊಳಗೆ ತೂರಿಸುವುದು ರೋಗಿಯ ಮೇಲೆ ಬಹಳಷ್ಟು ಪರಿಣಾಮ ಬೀರುತ್ತದೆ. ಮುಖ್ಯವಾಗಿ ಹೀಗೆ ತಯಾರಾಗುವ ರಕ್ತಕೋಶಗಳ ಪ್ರಮಾಣ ಮತ್ತು ಶುದ್ಧತೆಯಲ್ಲಿ ಬಹಳ ಎಚ್ಚರಿದಿಂದಿರಬೇಕು. ಅಂತೂ ಎಲಿಜಬೆತ್ ಮತ್ತು ತಂಡದವರು ಕಸಿ ಮಾಡಲು ಯೋಗ್ಯವಾದ, ಮನುಷ್ಯನ ಭ್ರೂಣದಲ್ಲಿ ಸ್ವಾಭಾವಿಕವಾಗಿರುವ ರಕ್ತಕಣಗಳನ್ನೇ ಹೋಲುವ ರಕ್ತಕೋಶಗಳನ್ನು ತಯಾರಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ರಕ್ತಕೋಶಗಳನ್ನು ಪರೀಕ್ಷಿಸಲು ಸಂಶೋಧಕರು ರೋಗನಿರೋಧಕ ಶಕ್ತಿಯಿಲ್ಲದ, ದುರ್ಬಲವಾಗಿರುವ ಇಲಿಗಳ ದೇಹಕ್ಕೆ ಚುಚ್ಚಿದ್ದಾರೆ. ವೇಗವಾಗಿ ರಕ್ತಕೋಶಗಳು ಅಸ್ಥಿಮಜ್ಜೆಗಳಾಗಿ ಕಾರ್ಯಪ್ರವೃತ್ತಿಯಾಗಿದ್ದನ್ನು ಗಮನಿಸಿದ್ದಾರೆ. ಜೊತೆಗೆ ಅದರ ಕಾರ್ಯವನ್ನು ಆರೋಗ್ಯವಂತ ರಕ್ತಕೋಶಗಳ ಕಾರ್ಯದೊಂದಿಗೆ ಹೋಲಿಸಿ ನೋಡಿದ್ದಾರೆ. ಅವು ಯಶಸ್ವಿಯಾಗಿ ಅಸ್ಥಿಮಜ್ಜೆಯಂತೆಯೇ ಕಾರ್ಯನಿರತವಾದದ್ದನ್ನು ಖಚಿತಪಡಿಸಿಕೊಂಡಿದ್ದಾರೆ. ದಾನಿಗಳಿಂದ ಪಡೆದ ರಕ್ತವನ್ನು ಶೇಖರಿಸುವ ರೀತಿಯಲ್ಲಿಯೇ ಹೀಗೆ ಪ್ರಯೋಗಾಲಯದಲ್ಲಿ ತಯಾರಿಸಿದ ಕೋಶಗಳನ್ನೂ ಶೇಖರಿಸಿಟ್ಟು, ಬೇಕಾದಾಗ ಬಳಸಿಕೊಳ್ಳಬಹುದಂತೆ.

ರಕ್ತಕ್ಕೆ ಸಂಬಂಧಿಸಿದ ಇತರ ರೋಗಗಳನ್ನೂ ಗುಣಪಡಿಸುವುದಕ್ಕೆ ಈ ರಕ್ತಕೋಶಗಳ ತಯಾರಿಕೆ ನೆರವಾಗಬಲ್ಲದು ಎನ್ನುವುದು ಸಂಶೋಧಕರ ವಿಶ್ವಾಸ. ನಮ್ಮ ದೇಹದೊಳಗೆ ಆಮ್ಲಜನಕವನ್ನು ಪೂರೈಸಲು ಕೆಂಪುರಕ್ತಕಣಗಳು ಹಾಗೂ ರಕ್ಷಣಾ ವ್ಯವಸ್ಥೆಗೆ ಬಿಳಿರಕ್ತಕಣಗಳು ಬೇಕು. ಗಾಯಗಳಿಂದ ರಕ್ತಸ್ರಾವವಾಗದಂತೆ ಅದನ್ನು ಹೆಪ್ಪುಗಟ್ಟಿಸಲು 'ಕಿರುತಟ್ಟೆಗಳು' (ಪ್ಲೇಟ್‌ಲೆಟ್ಸ್) ಬೇಕು. ಇಂತಹ ವಿಭಿನ್ನ ಕೋಶಗಳು ಹೇಗೆ ರಚನೆಗೊಂಡು ಕಾರ್ಯನಿರ್ವಹಿಸುತ್ತವೆ ಎನ್ನುವುದು ಪತ್ತೆಯಾದರೆ ಪರಿಹಾರ ಸುಲಭ ಎನ್ನುತ್ತಾರೆ, ಎಲಿಜಬೆತ್. ಅಂತೂ ಈ ಗಂಭೀರವಾದ ರಕ್ತಸಂಬಂಧಿ ರೋಗಗಳ ಚಿಕಿತ್ಸೆಗಾಗಿ ಬೇಕಾದ ರಕ್ತಕ್ಕಾಗಿ ದಾನಿಗಳನ್ನು ಹುಡುಕಾಡಬೇಕಾದ ಅನಿವಾರ್ಯತೆಯನ್ನು ತಗ್ಗಿಸುವ ಸಂಶೋಧನೆಯೊಂದು ಚುರುಕಾಗಿ ನಡೆಯುತ್ತಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಎಸ್ಎಲ್‌ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ವಿದ್ಯುಚ್ಛಕ್ತಿ

29) ಕೆಳಗಿನವುಗಳನ್ನು ಸಮಾಂತರವಾಗಿ ಸಂಪರ್ಕಿಸಿದಾಗ ಸಮಾನ ರೋಧವನ್ನು ನಿರ್ಣಯಿಸಿ (A) 1 Ω, ಮತ್ತು 10^6 Ω, (B) 1 Ω, ಮತ್ತು 10^3 Ω, ಮತ್ತು 10^6 Ω,

ಉತ್ತರ:– (A) (ಎ) 1 Ω, ಮತ್ತು 10^6 Ω, ಇವುಗಳನ್ನು ಸಮಾಂತರವಾಗಿ ಸಂಪರ್ಕಿಸಿದಾಗ ರೋಧ,

$$\frac{1}{R}=\frac{1}{1}+\frac{1}{10^6}=1\Omega$$

$$\therefore R=\frac{10}{1+10^6}=\frac{10^6}{10^6}=1\Omega$$

ಸಮಾನ ರೋಧ = 1 Ω,

ಉತ್ತರ:– (B) 1 Ω, ಮತ್ತು 10^3 Ω, ಮತ್ತು 10^6 Ω ಇವುಗಳನ್ನು ಸಮಾಂತರವಾಗಿ ಸಂಪರ್ಕಿಸಿದಾಗ ರೋಧ

$$R=\frac{1}{1}+\frac{1}{10^3}+\frac{1}{10^6}$$

$$=\frac{10+10^3+1}{10^6}$$

$$=\frac{1000000}{1001001}=0.999\Omega$$

ಸಮಾನ ರೋಧ = 0.999 Ω,

30) ಒಂದು ವಿದ್ಯುತ್ ದೀಪದ ರೋಧ 100Ω, ಒಂದು ಟೋಸ್ಟರ್‌ನ ರೋಧ 50Ω, ಹಾಗೂ ನೀರಿನ ಫಿಲ್ಟರ್‌ನ ರೋಧ 500Ω ಇವುಗಳನ್ನು 220 V ಆಕರಕ್ಕೆ ಸಮಾಂತರವಾಗಿ ಜೋಡಿಸಲಾಗಿದೆ. ಈ ಮೂರು ಉಪಕರಣಗಳು ಬಳಸುವಷ್ಟೇ ವಿದ್ಯುತ್ ಪ್ರವಾಹವನ್ನು ಬಳಸುವ ಒಂದು ಇಸ್ತ್ರಿ ಪೆಟ್ಟಿಗೆಯನ್ನು ಅದೇ ಆಕರಕ್ಕೆ ಜೋಡಿಸಲಾಗಿದೆ. ಈ ಇಸ್ತ್ರಿ ಪೆಟ್ಟಿಗೆಯ ರೋಧ ಮತ್ತು ಅದರ ಮೂಲಕ ಪ್ರವಹಿಸುವ ವಿದ್ಯುತ್ ಪ್ರಮಾಣವೆಷ್ಟು?

ಉತ್ತರ:– ವಿದ್ಯುತ್ ದೀಪದ ರೋಧ R_1 = 100Ω

ಟೋಸ್ಟರ್‌ನ ರೋಧ R_2 = 50Ω,

ನೀರಿನ ಫಿಲ್ಟರ್‌ನ ರೋಧ R_3 = 500Ω

ವಿಭವಾಂತರ = 220 V

$$\frac{1}{R}=\frac{1}{R_1}+\frac{1}{R_2}+\frac{1}{R_3}$$

$$=\frac{1}{100}+\frac{1}{50}+\frac{1}{500}$$

ಓಮ್‌ನ ನಿಯಮದಂತೆ

$$V=IR$$

$$I=\frac{V}{R}$$

$$I=\frac{220}{500x16}=\frac{220x16}{500}$$

$$=7.04A$$

ಮೂರು ಉಪಕರಣಗಳಿಂದ 7.04 A ವಿದ್ಯುತ್ ದೊರೆಯುತ್ತದೆ. ಈ ಮೂರು ಉಪಕರಣಗಳು ಬಳಸುವಷ್ಟೇ ವಿದ್ಯುತ್ ಪ್ರವಾಹವನ್ನು ಬಳಸುವ ಒಂದು ಇಸ್ತ್ರೀ ಪೆಟ್ಟಿಗೆಯನ್ನು ಅದೇ ಆಕರಕ್ಕೆ ಜೋಡಿಸಲಾಗಿದೆ.

220 V = 7.04 **A**

ಓಮ್‌ನ ನಿಯಮದಂತೆ

$$V=IR$$

$$R=\frac{V}{I}$$

$$I=\frac{220}{7.04}=31.25$$

$$=31.5\ \Omega$$

ಇಸ್ತ್ರೀ ಪೆಟ್ಟಿಗೆಯ ರೋಧ =31.25 Ω

ಇದರಲ್ಲಿ ಪ್ರವಹಿಸುವ ವಿದ್ಯುತ್= = 7.04 A

31) ವಿದ್ಯುತ್ ಉಪಕರಣಗಳನ್ನು ಸರಣಿ ಕ್ರಮದಲ್ಲಿ ಜೋಡಿಸುವ ಸ್ಥಾನದಲ್ಲಿ ಬದಲು ಸಮಾಂತರವಾಗಿ ಜೋಡಿಸುವುದರಿಂದ ಆಗುವ ಪ್ರಯೋಜನೆಗಳೇನು ?

ಉತ್ತರ:– ಸಮಾಂತರ ಮಂಡಲವು ವಿದ್ಯುತ್ ಉಪಕರಣಗಳ ಮೂಲಕ ವಿದ್ಯುತ್ ಪ್ರವಾಹವನ್ನು ವಿಭಜಿಸುತ್ತದೆ ಸಮಾಂತರ ಮಂಡಳದಲ್ಲಿನ ಒಟ್ಟು ರೋಧವು ಕಡಿಮೆಯಾಗುತ್ತದೆ, ನಿರ್ದಿಷ್ಟವಾಗಿ ಪ್ರತಿಯೊಂದು ವಿದ್ಯುತ್ ಉಪಕರಣವು ವಿಭಿನ್ನ ರೋಧವನ್ನು ಹೊಂದಿರುವಾಗ ಮತ್ತು ವಿದ್ಯುತ್ ಪ್ರವಾಹದ ಅಗತ್ಯವಿರುವ ಸಂದರ್ಭಗಳಲ್ಲಿ ಇದು ಸಹಾಯಕವಾಗಿರುತ್ತದೆ.

32) ತಾಪನ ಘಟಕಗಳು ಹೊಳೆಯುವಂತೆ ವಿದ್ಯುತ್ ಹೀಟರ್‌ನ ಸುರುಳಿಯು ಏಕೆ ಹೊಳೆಯುವುದಿಲ್ಲ?

ಉತ್ತರ:– ತಾಪನ ಘಟಕಗಳು ರೋಧಕಗಳಾಗಿವೆ, ಜೌಲ್‌ನ ಉಷ್ಣೋತ್ಪಾದನಾ ನಿಯಮದ ಪ್ರಕಾರ ತಾಪ ಘಟಕವು ಉತ್ಪತ್ತಿ ಮಾಡುವ ಉಷ್ಣವು ಅದರ ರೋಧಕ್ಕೆ ಅನುಪಾತದಲ್ಲಿರುತ್ತದೆ.

ವಿದ್ಯುತ್ ಹೀಟರ್‌ನ ರೋಧವು ಹೆಚ್ಚಾಗಿರುತ್ತದೆ. ತಾಪನ ಘಟಕದ ಮೂಲಕ ವಿದ್ಯುತ್ ಹರಿದಾಗ ಬಿಸಿ ಹೆಚ್ಚಾಗಿ ಕೆಂಪಗೆ ಹೊಳೆಯಲು ಪ್ರಾರಂಭಿಸುತ್ತದೆ. ಆದರೆ ವಿದ್ಯುತ್ ಹೀಟರ್‌ನ ಸುರಳಿಯ ರೋಧವು ಕಡಿಮೆ ಇರುವುದರಿಂದ ಅದರ ಮೂಲಕ ವಿದ್ಯುತ್ ಹರಿದಾಗ ಕೆಂಪಗೆ ಹೊಳೆಯುವುದಿಲ್ಲ.

33) ಕೆಳಗಿನ ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಿ

1. ರೋಧ **R** ಹೊಂದಿರುವ ಒಂದು ತಂತಿಯನ್ನು ಐದು ಸಮಾನ ಭಾಗಗಳಾಗಿ ಕತ್ತರಿಸಲಾಗಿದೆ, ನಂತರ ಈ ಭಾಗಗಳನ್ನು ಸಮಾನಾಂತರವಾಗಿ ಸಂಪರ್ಕಿಸಲಾಗುತ್ತದೆ. ಈ ಸಂಯೋಜನೆಯ ರೋಧವು **R′** ಆದರೆ, **R/R′** ನ ಅನುಪಾತವು ______

(a) 1/25 (b) 1/5
(c) 5 (d) 25

ಉತ್ತರ:–ಡಿ

2. ಈ ಕೆಳಗಿನ ಯಾವ ಪದಗಳು ಮಂಡಲದಲ್ಲಿ ವಿದ್ಯುತ್ ಸಾಮರ್ಥ್ಯವನ್ನು ಪ್ರತಿನಿಧಿಸುವುದಿಲ್ಲ ? (ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC BIOLOGY

MOLECULAR BASIS OF INHERITANCE

63. Write a brief note on the Repressible Operon System.

Ans:- **(.....Contd)**

the operon system remains switched on. A complete repressor is formed only when a no-proteinaceous corepressor joins the aporepressor.



Working of tryptophan operon.

Corepressor is commonly a product of the operon. Normally it is metabolized as soon as it is formed. Therefore, corepressor does not accumulate. but, if the metabolic pathway is blocked or it is available from outside source, the corepressor binds with the aporepressor to produce repressor. The repressor comes in contact with operator gene and blocks its activity. In tryptophan operon one of its product, amino acid tryptophan, acts as a corepressor.

2) Promoter Gene (trp-P) - this gene is the recognition as well as initiation point for RNA polymerase. RNA polymerase attaches to promoter gene. It can pass over to structural genes provided the operator gene is in the functional state.

3) Operator Gene (trp-O) - The gene lies in the passage-way between promoter and structural genes. Normally it remains switched on so that RNA polymerase can pass over from promoter gene to structural gene and bring about transcription. The operator gene can be switched off when both aporepressor and corepressor join together to form repressor. The repressor binds to operator gene to interrupt movement of RNA polymerase.

4) Leader Attenuator (LA) **Complex** - It lies between operator and structural genes. Attenuator slows down the activity of polymerase enzyme when tryptophan concentration begins to rise, this happens without blocking the operon.

5) Structural Genes - Tryptophan operon has five structural genes which are preceded by a leader sequence. The various structural genes are trp E, trp D, trp C, trp B and trp A. In the switched on state the structural genes produce a polycistronic *m*RNA. The *m*RNA forms five types of enzymes E, D, C, B, A which convert chorismic acid to amino acid tryptophan.

64. Write a brief note on the Inducible Operon System (Lactose Operon).

Ans:- Inducible Operon System - It is regulated operon system in which the structural genes remain switched off unless and until an inducer is present in the medium. It occurs in catabolic pathways. Inducer can be a substrate of one of its enzymes. Lac operon of *Escherichia coli* is an inducible operon system which was discovered by Jacob and Monod (1961). The various parts of lac operon are as follows -

1) Regulator Gene (i Gene) - It produces *m*RNA that synthesizes a biochemical called **repressor.** The repressor of lac operon is a tetrameric protein having a molecular weight of 1,60,000. The repressor protein has two sides, a head-piece for attaching to operator gene and a groove for attachment of inducer.

2) Promoter Gene - The gene possesses 2 sites, one for cAMP and other for RNA polymerase. Promoter gene becomes active only after combining with cAMP and a cAMP induced catabolic activator protein (CAP). It then functions as a recognition point for RNA polymerase. RNA polymerase becomes functional and it is able to pass over the operator gene and reach structural genes.



Working of *lac*-operon.

3) Operator Gene - It controls the expressibility of the operon. It is normally switched off due to binding of repressor over it. However, if the repressor is withdrawn by the inducer, the gene allows RNA polymerase to pass from promoter gene to structural gene. In lac operon the operator gene is small, 27 base pairs long. The gene is made of palindromic or self complementary sequences.

Inducer - is a chemical of diverse nature like metabolite, hormone, substrate, etc. It can bind with repressor to free the operator gene. In *lac* operon the inducer is lactose or galactoside.

4) Structural Genes- *Lac* operon of *Escherichia coli* has 3 structural genes, Z, Y and A. In the induced operon the structural genes transcribe a polycistronic *m*RNA which produces 3 enzymes such as galactosidase, galactoside permease and galactoside acetylase. **Galactoside permease** is required for entry of lactose or

(Contd...)

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಭೆ • ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆ

ತಡೆಯಾಜ್ಞೆ ಗೊಂದಲದ ಮಧ್ಯೆ ಮೊದಲ ಸಭೆ

ಪ್ರಜಾವಾಣಿ ವಾರ್ತೆ

ಮೈಸೂರು: ಹೈಕೋರ್ಟ್ ತಡೆಯಾಜ್ಞೆ ಕುರಿತ ಗೊಂದಲದ ನಡುವೆಯೇ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೊದಲ ಸಭೆಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಮಂಗಳವಾರ ಚಾಮುಂಡಿ ಬೆಟ್ಟದ ದಾಸೋಹ ಭವನದ ಸಭಾಂಗಣದಲ್ಲಿ ನಡೆಯಿತು.

'ಬೆಟ್ಟದ ಆಸ್ತಿ ವಿವಾದವು ಹೈಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿದ್ದು, ತಡೆಯಾಜ್ಞೆಯು ಸೆಪ್ಟೆಂಬರ್ 5ರವರೆಗೆ ಜಾರಿಯಲ್ಲಿದೆ. ಹೀಗಾಗಿ ಪ್ರಾಧಿಕಾರದ ಸಭೆ ನಡೆಸುವುದು ಕಾನೂನಿನ ಉಲ್ಲಂಘನೆಯಾಗಲಿದ್ದು, ಸಭೆಯನ್ನು ರದ್ದುಪಡಿಸಬೇಕು' ಎಂದು ರಾಜವಂಶಸ್ಥ ಪ್ರಮೋದಾದೇವಿ ಒಡೆಯರ್ ಚಾಮುಂಡೇಶ್ವರಿ ದೇಗುಲ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗೆ ಸೋಮವಾರವೇ ಪತ್ರ ಬರೆದು ಆಕ್ಷೇಪಿಸಿದ್ದರು. ಆದರೂ ಸರ್ಕಾರ ಪೂರ್ವ ನಿಗದಿಯಂತೆ ಸಭೆ ನಡೆಸಿತು.

ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ತಡೆಯಾಜ್ಞೆಯು ಆಗಸ್ಟ್ 22 ರಂದು ತೆರವುಗೊಂಡಿದೆ. ಸದ್ಯ ಯಾವುದೇ ತಡೆಯಾಜ್ಞೆ ಇಲ್ಲ. ನ್ಯಾಯಾಲಯದ ತೀರ್ಮಾನದಂತೆಯೇ ಮೊದಲ ಸಭೆ ನಡೆಸಿದ್ದೇವೆ' ಎಂದು ಸ್ಪಷ್ಟಪಡಿಸಿದರು.

'ಬೆಟ್ಟದ ದೇಗುಲದ ನಿರ್ವಹಣೆಗೆ ಈ ಹಿಂದೆಯೂ ಸರ್ಕಾರದ ಅಧೀನದಲ್ಲಿ ಆಡಳಿತ ಮಂಡಳಿ ಇತ್ತು. ಸದಸ್ಯರನ್ನು, ಅಧ್ಯಕ್ಷರನ್ನು ಸರ್ಕಾರವೇ ನೇಮಿಸುತ್ತಿತ್ತು' ಎಂದರು.

ಸಭೆಯಿಂದ ಸಂಸದ ಯದುವೀರ್ ದೂರ: ರಾಜ ವಂಶಸ್ಥರೂ ಆದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಚಾಮುಂಡಿ ಬೆಟ್ಟದ ಪ್ರಾಧಿಕಾರದ ಸಭೆಯೇ ಅಕ್ರಮ. ಇದು ನ್ಯಾಯಾಂಗ ನಿಂದನೆಯಾಗುತ್ತದೆ. ಸೆ. 5 ವರೆಗೆ ತಡೆಯಾಜ್ಞೆ ಜಾರಿಯಲ್ಲಿದ್ದರೂ ಮುಖ್ಯಮಂತ್ರಿ ಯಾವ ಆಧಾರದಲ್ಲಿ ತೆರವಾಗಿದೆ ಎಂದು ಹೇಳಿದ್ದಾರೋ ಗೊತ್ತಿಲ್ಲ' ಎಂದು ಹೇಳಿದರು.

'ನ್ಯಾಯಾಂಗ ನಿಂದನೆಗೊಳಪಡುವ ಸಭೆಗೆ ಹೋಗಲಿಲ್ಲ. ಹೀಗಾಗಿ ಪಾಲ್ಗೊಂಡಿಲ್ಲ. ಯಾವುದೇ ಕಾರಣಕ್ಕೂ ಪ್ರಾಧಿಕಾರ ರಚನೆಯಾಗಬಾರದು. ಅದರಿಂದ ನಮ್ಮ ನಂಬಿಕೆ, ಆಚರಣೆ, ಪರಂಪರೆಗೆ ಧಕ್ಕೆಯಾಗುತ್ತದೆ. ಯದುವಂಶದವರು ಚಾಮುಂಡಿ ಬೆಟ್ಟದ ಪೋಷಕರು. ಈ ಹಕ್ಕನ್ನು ನಾವು ಯಾವತ್ತೂ ಬಿಟ್ಟು ಕೊಡುವುದಿಲ್ಲ. ಬೆಟ್ಟವನ್ನು ನಿಯಂತ್ರಣ ಮಾಡಲು ಸರ್ಕಾರ ಪ್ರಾಧಿಕಾರ ರಚನೆ ಮಾಡುತ್ತಿದೆ. ಅದು ಸರಿಯಲ್ಲ. ದೇವಸ್ಥಾನಗಳ ಹುಂಡಿ ಹಣ ಆಯಾ ದೇವಸ್ಥಾನದ ಅಭಿವೃದ್ಧಿಗೆ ಬಳಕೆಯಾಗಬೇಕು' ಎಂದು ಆಗ್ರಹಿಸಿದರು.

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ಪೂಜೆ ಸಲ್ಲಿಸಿದರು. ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಸಚಿವ ಡಾ. ಎಚ್‌.ಸಿ. ಮಹದೇವಪ್ಪ, ಶಾಸಕರಾದ ಕೆ. ಹರೀಶ್ ಗೌಡ, ರವಿಶಂಕರ್, ಚಾಮುಂಡಿ ಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರೂಪಾ ಜೊತೆಗಿದ್ದರು — ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.

ನೀಲನಕ್ಷೆ ರಚನೆ; ಒತ್ತುವರಿ ತೆರವಿಗೆ ಕ್ರಮ

ಚಾಮುಂಡಿ ಬೆಟ್ಟದ ಮುಂದಿನ ಐದು ವರ್ಷಗಳ ಅಭಿವೃದ್ಧಿಯ ನೀಲನಕ್ಷೆ ರಚನೆ, ಐದು ದೇವಾಲಯಗಳ ಜೀರ್ಣೋದ್ಧಾರ, ಅಪಘಾತ ನಿಯಂತ್ರಣಕ್ಕೆ ಟ್ರಾನ್ಸ್‌ಪೋರ್ಟ್ ರಚನೆ ಸೇರಿದಂತೆ ಹಲವು ನಿರ್ಣಯಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೊದಲ ಸಭೆಯು ಕೈಗೊಂಡಿತು.

'ದೇವಾಲಯದ ಖಾತೆಯಲ್ಲಿ ಸದ್ಯ ₹169 ಕೋಟಿಯಷ್ಟು ನಿಶ್ಚಿತ ಠೇವಣಿ ಇದ್ದು, ವಾರ್ಷಿಕ ಸರಾಸರಿ ₹20–25 ಕೋಟಿಯಷ್ಟು ನಿವ್ವಳ ಆದಾಯ ಬರುತ್ತಿದೆ. ಹೀಗಾಗಿ ಪ್ರಾಧಿಕಾರಕ್ಕೆ ಹಣದ ಕೊರತೆ ಇಲ್ಲ. ಅದನ್ನು ಬಳಸಿಕೊಂಡು ಪ್ರಾಧಿಕಾರದ ವ್ಯಾಪ್ತಿಯ 24 ದೇವಾಲಯಗಳನ್ನು ಅಭಿವೃದ್ಧಿಪಡಿಸಲಾಗುವುದು. ದೇವಸ್ಥಾನಗಳಿಗೆ ಸೇರಿದ ಆಸ್ತಿಗಳ ಸರ್ವೆ ನಡೆಸಿ ಒತ್ತುವರಿ ತೆರವುಗೊಳಿಸಲಾಗುವುದು' ಎಂದು ಸಿದ್ದರಾಮಯ್ಯ ಮಾಹಿತಿ ನೀಡಿದರು.

'ದೇವಸ್ಥಾನಕ್ಕೆ ಬರುವವರಿಗೆ ಯಾವುದೇ ವಸ್ತ್ರ ನಿಯಮ ನಿಗದಿಪಡಿಸುವುದಿಲ್ಲ. ಜಾತಿ-ಧರ್ಮಗಳ ಬೇಧವಿಲ್ಲದೇ ಎಲ್ಲರೂ ಬರಬಹುದು' ಎಂದರು.

ಸಚಿವರಾದ ರಾಮಲಿಂಗಾರೆಡ್ಡಿ, ಎಚ್.ಕೆ. ಪಾಟೀಲ, ಎಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್ ಸಭೆಯಲ್ಲಿ ಪಾಲ್ಗೊಂಡರು. ಇದಕ್ಕೂ ಮುನ್ನ ಸಿದ್ದರಾಮಯ್ಯ ಚಾಮುಂಡೇಶ್ವರಿ ದೇಗುಲದಲ್ಲಿ ಪೂಜೆ ಸಲ್ಲಿಸಿದರು.

ಪತ್ರಿಕಾ ವಿತರಕರ ರಾಜ್ಯ ಸಮ್ಮೇಳನ 8ರಂದು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ, ಜಿಲ್ಲಾ ಕಾರ್ಯನಿರತ ಪತ್ರಿಕಾ ಹಂಚಿಕೆದಾರರ, ವಿತರಕರ ಸಂಘದಿಂದ ಸೆ.8 ರಂದು ನಗರದಲ್ಲಿ ಪತ್ರಿಕಾ ವಿತರಕರ 4ನೇ ರಾಜ್ಯ ಮಟ್ಟದ ಸಮ್ಮೇಳನ ಆಯೋಜಿಸಲಾಗಿದೆ ಎಂದು ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಕೆ.ಶಂಭುಲಿಂಗ ತಿಳಿಸಿದರು.

'ಮುರುಘಾ ಮಠದ ಅನುಭವ ಮಂಟಪದಲ್ಲಿ ಇಡೀ ದಿನ ನಡೆಯುವ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಳಿಗ್ಗೆ 11.30ಕ್ಕೆ ಉದ್ಘಾಟಿಸಲಿದ್ದಾರೆ. ನಂತರ ಪ್ರತಿಭಾ ಪುರಸ್ಕಾರ, 'ವಿತರಕರ ಅಂದು- ಇಂದು- ಮುಂದೆ' ವಿಷಯದ ಚರ್ಚಾ ಗೋಷ್ಠಿ ನಡೆಯಲಿದೆ. 3,000ಕ್ಕೂ ಹೆಚ್ಚು ವಿತರಕರು, ಸಚಿವರು, ಶಾಸಕರು ಭಾಗವಹಿಸಲಿದ್ದಾರೆ' ಎಂದು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಎಸ್ಎಸ್ಎಲ್‌ಸಿ, ಪಿಯುಸಿ ಓದುತ್ತಿರುವ ಪತ್ರಿಕಾ ವಿತರಕರು ಹಾಗೂ ವಿತರಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ. ಸಮ್ಮೇಳನದ ಅಂಗವಾಗಿ ಅಂದು ಬೆಳಿಗ್ಗೆ 8ಕ್ಕೆ ನಗರದಲ್ಲಿ ಪತ್ರಿಕಾ ವಿತರಕರ ಜಾಥಾ ನಡೆಯಲಿದ್ದು, ವಿವಿಧ ಮಠಾಧೀಶರು ಪಾಲ್ಗೊಳ್ಳುವರು ಎಂದರು.

ರಾಜ್ಯದಲ್ಲಿ 40,000 ಪತ್ರಿಕಾ ವಿತರಕರಿದ್ದೇವೆ. ಒಕ್ಕೂಟದಲ್ಲಿ 3,500 ವಿತರಕರು ನೋಂದಾಯಿಸಿಕೊಂಡಿದ್ದಾರೆ. ನಿತ್ಯ ಮನೆಮನೆಗೆ ಪತ್ರಿಕೆ ವಿತರಣೆ ಮಾಡುವವರನ್ನು ಸರ್ಕಾರ ನಿರ್ಲಕ್ಷಿಸಿದೆ. ಕೋವಿಡ್ ಸಮಯದಲ್ಲಿ ವಿತರಕರು ಸಮಸ್ಯೆ ಅನುಭವಿಸಿದರು. ಈ ವೇಳೆ ಹಲವು ವಿತರಕರನ್ನು ಕಳೆದುಕೊಂಡಿದ್ದೇವೆ. ಅಂದಿನಿಂದಲೇ ಒಕ್ಕೂಟ ರಚಿಸಿಕೊಂಡು ಸಮಸ್ಯೆ ಪರಿಹಾರಕ್ಕೆ ಹೋರಾಟ ಮಾಡುತ್ತಿದ್ದೇವೆ. ನಮಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಶಕ್ತಿಯಾಗಿ ನಿಂತಿದೆ. ಈಗ ಸರ್ಕಾರದಿಂದ ಸ್ಪಂದನೆ ದೊರೆಯುತ್ತಿದ್ದು, 'ಇ-ಶ್ರಮ್' ಯೋಜನೆಯಡಿ ಅರ್ಜಿ ಹಾಕಲು ಅನುಮತಿ ಲಭಿಸಿದೆ' ಎಂದರು.

'ಕೆಲ ಬೇಡಿಕೆಗಳಿಗೆ ಸರ್ಕಾರದಿಂದ ಸ್ಪಂದನೆ ದೊರೆತಿದೆ. ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿಗೆ ಸರ್ಕಾರ ₹10 ಕೋಟಿ ಮೀಸಲಿರಿಸುವಂತೆ ಸಮ್ಮೇಳನದಲ್ಲಿ ಒತ್ತಾಯಿಸಲಾಗುತ್ತದೆ. ಈ ಬಾರಿಯೂ ರಾಜ್ಯೋತ್ಸವ ಪ್ರಶಸ್ತಿ ನೀಡಬೇಕು ಎಂದು ಮನವಿ ಮಾಡಲಾಗುತ್ತದೆ' ಎಂದರು.

ಒಕ್ಕೂಟದ ರಾಜ್ಯ ಸಂಘಟನಾ ಕಾರ್ಯದರ್ಶಿ ವಾಸುದೇವ ನಾಡೂರು, ಜಿಲ್ಲಾ ಘಟಕದ ಅಧ್ಯಕ್ಷ ಎಸ್.ತಿಪ್ಪೇಸ್ವಾಮಿ ಇದ್ದರು.

ಈದ್ಗಾದಲ್ಲಿ ಗಣೇಶ ಹಬ್ಬ : ಪಾಲಿಕೆಯಿಂದ ಅನುಮತಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ನಗರದ ಈದ್ಗಾ ಮೈದಾನದಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ರಾಣಿ ಚನ್ನಮ್ಮ ಮೈದಾನ ಗಜಾನನ ಉತ್ಸವ ಮಹಾಮಂಡಳಿಗೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಈ ವರ್ಷವೂ ಅನುಮತಿ ನೀಡಿದೆ. ಮಂಡಳಿಯ ಪದಾಧಿಕಾರಿಗಳಿಗೆ ಪಾಲಿಕೆ ಆಯುಕ್ತ ಈಶ್ವರ ಉಳ್ಳಾಗಡ್ಡಿ ಅನುಮತಿ ಪತ್ರ ವಿತರಿಸಿದರು.

'ಸೆಪ್ಟೆಂಬರ್ 7ರಿಂದ 9ರವರೆಗೆ ಉತ್ಸವ ಆಚರಿಸಬಹುದು. ಸೂಚಿಸಿದ ಜಾಗದಲ್ಲೇ ಪೆಂಡಾಲ್ ಹಾಕಬೇಕು. ಬೇರೆ ಯಾವುದೇ ರೀತಿ ಬಾವುಟ, ಭಿತ್ತಿ ಪತ್ರ, ಬ್ಯಾನರ್, ಬಂಟಿಂಗ್ಸ್ ಅಳವಡಿಸಬಾರದು. 19 ಷರತ್ತುಗಳನ್ನೂ ಪಾಲಿಸಬೇಕು' ಎಂದು ಆಯುಕ್ತರು ತಿಳಿಸಿದರು.

'ಈ ಸಲವೂ ನಮ್ಮ ಮಹಾಮಂಡಳಕ್ಕೆ ಗಣೇಶಮೂರ್ತಿ ಪ್ರತಿಷ್ಠಾಪನೆಗೆ ಅನುಮತಿ ಸಿಕ್ಕಿದೆ. ಉತ್ಸವಕ್ಕೆ ಸಿದ್ಧತೆ ನಡೆದಿದೆ' ಎಂದು ಮಹಾಮಂಡಳದ ಅಧ್ಯಕ್ಷ ಸಂಜೀವ ಬಡಸ್ಕರ್ ಹೇಳಿದರು.

ನಗರಗಳಲ್ಲಿ 10 ಸಾವಿರ 'ಕ್ರಶ್' ಕೇಂದ್ರ

ಪ್ರಜಾವಾಣಿ ವಾರ್ತೆ

ತುಮಕೂರು: ಗ್ರಾಮೀಣ ಪ್ರದೇಶದಲ್ಲಿ ಆರಂಭಿಸಿರುವ ಶಿಶು ಪಾಲನಾ ಕೇಂದ್ರಗಳ ಮಾದರಿಯಲ್ಲಿ ನಗರ, ಪಟ್ಟಣ ಪ್ರದೇಶಗಳಲ್ಲಿ 10 ಸಾವಿರ 'ಕ್ರಶ್' ಕೇಂದ್ರಗಳನ್ನು (ಮಕ್ಕಳ ಪಾಲನಾ ಕೇಂದ್ರ) ಮುಂದಿನ ವರ್ಷಗಳಲ್ಲಿ ತೆರೆಯಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದ್ದಾರೆ.

ಲಕ್ಷ್ಮಿ ಹೆಬ್ಬಾಳಕರ

ನಗರದಲ್ಲಿ ಮಂಗಳವಾರ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದ ಅವರು, 'ರಾಜ್ಯದಲ್ಲಿ 10 ಸಾವಿರ ಕ್ರಶ್ ಕೇಂದ್ರ ತೆರೆಯಲು ಕೇಂದ್ರ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಪ್ರಾಯೋಗಿಕವಾಗಿ ರಾಜ್ಯದಲ್ಲಿ ಜಾರಿ ಮಾಡಲಾಗುತ್ತಿದೆ' ಎಂದರು.

ಅಂಗನವಾಡಿ ಕೇಂದ್ರಗಳ ಪಕ್ಕದಲ್ಲೇ ಪ್ರತ್ಯೇಕವಾಗಿ ಮಕ್ಕಳ ಪಾಲನಾ ಕೇಂದ್ರ ತೆರೆಯಲಾಗುತ್ತದೆ. 6 ತಿಂಗಳಿಂದ 3 ವರ್ಷದ ಮಕ್ಕಳನ್ನು ಇಲ್ಲಿ ಪಾಲನೆ ಮಾಡಲಾಗುತ್ತದೆ. ಮನೆಗೆಲಸ, ಕಾರ್ಖಾನೆ, ಇತರ ಕೆಲಸಗಳಿಗೆ ಹೋಗುವ ಮಹಿಳೆಯರು ತಮ್ಮ ಮಕ್ಕಳನ್ನು ಈ ಕೇಂದ್ರಗಳಲ್ಲಿ ಬಿಟ್ಟು ಹೋಗಬಹುದು ಎಂದು ಹೇಳಿದರು.

17 ಸಾವಿರ ಅಂಗನವಾಡಿ: ರಾಜ್ಯದಲ್ಲಿ ಮುಂದಿನ ವರ್ಷಗಳಲ್ಲಿ 17 ಸಾವಿರ ಅಂಗನವಾಡಿ ಕೇಂದ್ರ ತೆರೆಯಲು ಕೇಂದ್ರ ಸರ್ಕಾರ ಮಂಜೂರಾತಿ ನೀಡಿದ್ದು, ಅದಕ್ಕಾಗಿ ₹104 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಮುಂದಿನ ದಿನಗಳಲ್ಲಿ ಅಂಗನವಾಡಿ ಕೇಂದ್ರಗಳಲ್ಲೇ ಎಲ್‌ಕೆಜಿ, ಯುಕೆಜಿ ಆರಂಭಿಸಲು ಉದ್ದೇಶಿಸಲಾಗಿದೆ. ಹಾಗಾಗಿ ಆಧುನಿಕ ಮಾದರಿಯಲ್ಲಿ ಕೇಂದ್ರಗಳನ್ನು ಸ್ಥಾಪಿಸಬೇಕು ಎಂದು ತಿಳಿಸಿದರು.

ಗೃಹಲಕ್ಷ್ಮಿ ಸಂಘ: ಮುಂದಿನ ದಿನಗಳಲ್ಲಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳನ್ನು 'ಗೃಹಲಕ್ಷ್ಮಿ' ಸಂಘಗಳನ್ನಾಗಿ ಪ್ರತಿಬಿಂಬಿಸಬೇಕು. ಗೃಹಲಕ್ಷ್ಮಿ ಯೋಜನೆ ಯಿಂದ ಬರುವ ಹಣವನ್ನು ಉಳಿತಾಯ ಮಾಡಿ, ಕಿರು ಉದ್ಯಮ ಸ್ಥಾಪಿಸುವಂತೆ ಈ ಸಂಘಗಳ ಸದಸ್ಯರನ್ನು ಪ್ರೋತ್ಸಾಹಿಸಬೇಕು ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, 'ಕೋಲಾರ, ಕೊಪ್ಪಳ, ಯಾದಗಿರಿ ಜಿಲ್ಲೆಯ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಗಣೇಶ ಹಬ್ಬಕ್ಕೂ ಮುನ್ನವೇ ಬಾಕಿ ವೇತನ ನೀಡಲಾಗುವುದು' ಎಂದು ಭರವಸೆ ನೀಡಿದರು.

ಕೇಂದ್ರದಿಂದ ಅನುದಾನ ಬರುವುದು ವಿಳಂಬವಾಗಿದ್ದು, ಈಗಾಗಲೇ ಪತ್ರ ಬರೆಯಲಾಗಿದೆ. ವೇತನ ವಿಳಂಬವಾಗುವುದು ಇದೇ ಮೊದಲಲ್ಲ. ಕೇಂದ್ರದ ಅನುದಾನ ವಿಳಂಬವಾದಾಗ ಸಮಸ್ಯೆ ಎದುರಾಗುತ್ತದೆ. ನಂತರ ಸರಿ ಹೋಗುತ್ತದೆ ಎಂದರು.

ಮೊಬೈಲ್ ಬಳಕೆ ಬೇಡ ಎಂದಿದ್ದಕ್ಕೆ ಬಾಲಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮೊಬೈಲ್ ಫೋನ್ ಬಳಸದಂತೆ ಪಾಲಕರು ಹೇಳಿದ್ದಕ್ಕೆ ಸಮೃದ್ಧ ಸಜ್ಜನ (14) ಎಂಬ ಬಾಲಕ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ನಗರದ ಬೈರಿದೇವರಕೊಪ್ಪದ ಗಾಮನಗಟ್ಟಿ ರಸ್ತೆಯ ರಾಧಿಕಾ ಪಾರ್ಕ್‌ನಲ್ಲಿ ಸೋಮವಾರ ತಡರಾತ್ರಿ ನಡೆದಿದೆ.

'8ನೇ ತರಗತಿಯ ವಿದ್ಯಾರ್ಥಿ ಸಮೃದ್ಧ ಸಜ್ಜನ ಮೊಬೈಲ್ ಫೋನ್ ಹೆಚ್ಚು ಬಳಸುತ್ತಿದ್ದ. ಪಾಲಕರು ಬುದ್ದಿವಾದ ಹೇಳಿದ್ದರಿಂದ ಬೇಸರಗೊಂಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ನೀಟ್, ಸಿಇಟಿ: 'ಚಾಯ್ಸ್'ಗೆ ಇಂದೂ ಇದೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಮೊದಲ ಸುತ್ತಿನ ಸೀಟು ಹಂಚಿಕೆಯಾದ ವಿದ್ಯಾರ್ಥಿಗಳಿಗೆ 'ಚಾಯ್ಸ್' ದಾಖಲಿಸಲು ಸೆ.4ರ ಮಧ್ಯಾಹ್ನ 12ರವರೆಗೆ ಅವಕಾಶ ನೀಡಲಾಗಿದೆ.

'ಸೆ.3ರವರೆಗೆ 92 ಸಾವಿರ ವಿದ್ಯಾರ್ಥಿಗಳು ಆಯ್ಕೆ ಪೂರ್ಣಗೊಳಿಸಿದ್ದಾರೆ. ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿರುವ ಸುಮಾರು 15 ಸಾವಿರ ಅಭ್ಯರ್ಥಿಗಳು ಇನ್ನೂ ಚಾಯ್ಸ್ ದಾಖಲು ಮಾಡಿಲ್ಲ. ಶುಲ್ಕ ಪಾವತಿಗೆ ಸಂಜೆ 4ರವರೆಗೆ ಅವಕಾಶ ಇದೆ. ನಿಗದಿತ ಅವಧಿಯೊಳಗೆ ದಾಖಲು ಮಾಡಿಕೊಳ್ಳದಿದ್ದರೆ ಅಂತಹ ಅಭ್ಯರ್ಥಿಗಳ ಸೀಟು ರದ್ದಾಗಲಿದೆ' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ನಾವಡಗೆ ಎಂವಿಸೀ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಂ. ಶ್ರೀ. ಪ್ರತಿಷ್ಠಾನ ನೀಡುವ 'ಸಾವಿತ್ರಮ್ಮ–ಪ್ರೊ.ಎಂ.ವಿ. ಸೀ.ಸಾಹಿತ್ಯಪುರಸ್ಕಾರ'ಕ್ಕೆ ಸಂಶೋಧಕರಾದ ಮಂಗಳೂರಿನ ಎ.ವಿ. ನಾವಡ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 30 ಸಾವಿರ ನಗದು, ಸ್ಮರಣ ಫಲಕ ಮತ್ತು ಅಭಿನಂದನಾ ಪತ್ರ ಒಳಗೊಂಡಿದೆ. ಮಲ್ಲೇಪುರಂ ಜಿ. ವೆಂಕಟೇಶ್, ಎಚ್‌.ಟಿ. ಪೋತೆ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ. ಸಂಶೋಧನಾ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದವರನ್ನು ಪರಿಗಣಿಸಬೇಕೆಂಬ ನಿಬಂಧನೆಯಂತೆ ಈ ಆಯ್ಕೆ ಮಾಡಲಾಗಿದೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ಬೆಂಗಳೂರಿನ ಎನ್.ಆರ್. ಕಾಲೊನಿಯಲ್ಲಿರುವ ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ಸೆಪ್ಟೆಂಬರ್ 9ರಂದು ನಡೆಯುವ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

31 ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಶಾಲೆಗಳ 20 ಹಾಗೂ ಪ್ರೌಢಶಾಲೆಗಳ 11 ಶಿಕ್ಷಕರನ್ನು 2024–25ನೇ ಸಾಲಿನ ರಾಜ್ಯಮಟ್ಟದ ಶಿಕ್ಷಕರ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಪ್ರಾಥಮಿಕ ಶಾಲಾ ಶಿಕ್ಷಕರು:

ಚಿಕ್ಕೋಡಿ ಉಳ್ಳಾಗಡ್ಡಿವಾಡಿ ಶಾಲೆಯ ಪದ್ಮಶ್ರೀ ಸುರೇಶ, ಕಲಬುರಗಿ ಜಿಲ್ಲೆ ಭೂಸಣಗಿಯ ಮಲ್ಲಿಕಾರ್ಜುನ ಎಸ್. ಸಿರಸಿಗಿ, ದಾವಣಗೆರೆ ಜಿಲ್ಲೆ ಹಿಂಡಸಘಟ್ಟ ಕ್ಯಾಂಪ್‌ನ ಬಿ. ಅರುಣ್‌ಕುಮಾರ್, ಮೈಸೂರು ಜಿಲ್ಲೆ ಹಿನಕಲ್‌ನ ಕೆ.ಎಸ್. ಮಧುಸೂದನ್, ಬೆಳಗಾವಿ ಜಿಲ್ಲೆ ಅಂಬೇವಾಡಿಯ ಅಸ್ಮಾ ಇಸ್ಮಾಯಿಲ್, ದಕ್ಷಿಣ ಕನ್ನಡದ ನೀರ್ಕೆರೆ ಮೂಡಬಿದ್ರಿಯ ಕೆ. ಯಮುನಾ, ಹಾವೇರಿ ಜಿಲ್ಲೆಯ ಜಮೀರ್ ಅಬ್ದುಲ್, ಬೆಂಗಳೂರು ದಕ್ಷಿಣ ಜಿಲ್ಲೆಯ ಚಂದಾಪುರದ ಜಿ. ರಂಗನಾಥ, ಚಿಕ್ಕಬಳ್ಳಾಪುರ ಜಿಲ್ಲೆಯ ಇನಮಿಂಚೇನಹಳ್ಳಿಯ ಸುಶೀಲಮ್ಮ, ಮಧುಗಿರಿಯ ಬಸವನಹಳ್ಳಿಯ ಎಸ್.ವಿ. ರಮೇಶ್, ಧಾರವಾಡ ಜಿಲ್ಲೆ ಹಳೇಹುಬ್ಬಳ್ಳಿಯ ಹನುಮಂತಪ್ಪ ಎಂ. ಕುಂದರಗಿ, ಚಿತ್ರದುರ್ಗ ಜಿಲ್ಲೆ ಹೊಸಹಟ್ಟಿಯ ಆರ್. ಟಿ. ಪರಮೇಶ್ವರಪ್ಪ, ಶಿರಸಿ ಜೋಗೇಶ್ವರ ಹಳ್ಳದ ರಾಮಚಂದ್ರ ಶೇಷಾಜಪ್ಪ ಕಲಾಲ, ಶಿವಮೊಗ್ಗ ಗುತ್ಯಪ್ಪ ಕಾಲೊನಿಯ ಎಂ. ಭಾಗೀರಥಿ, ವಿಜಯನಗರ ಜಿಲ್ಲೆ ಹಿರೇಕೊಳಚಿಯ ಎಲ್. ಮಧುನಾಯ್ಕ, ರಾಮನಗರ ಜಿಲ್ಲೆ ಅರಳಾಳು ಸಂದ್ರದ ಪಿ. ಸುರೇಶ, ಯಾದಗಿರಿ ಜಿಲ್ಲೆ ಬಸ್ಸಾಪುರದ ನೀಲಪ್ಪ ಎಸ್. ತೆಗ್ಗಿ, ಉತ್ತರ ಕನ್ನಡ ಜಿಲ್ಲೆಯ ಹೊನ್ನೆಮಡಿಯ ರಾಘವೇಂದ್ರ ಎಸ್. ಮಡಿವಾಳ, ದೊಡ್ಡಬಳ್ಳಾಪುರದ ಬೀಡಿಕೆರೆಯ ಎಚ್.ಎಂ. ಮಂಗಳಕುಮಾರಿ, ಗದಗ ಜಿಲ್ಲೆ ಬಸಾಪುರದ ರತ್ನಾಬಾಯಿ.

ಪ್ರೌಢಶಾಲಾ ಶಿಕ್ಷಕರು: ಚಿಕ್ಕಮಗಳೂರು ಜಿಲ್ಲೆ ಲೋಕನಾಥಪುರದ ಆರ್. ಡಿ.ರವೀಂದ್ರ, ಬೆಂಗಳೂರು ಗ್ರಾಮಾಂತರದ ಟಿ. ಬೇಗೂರಿನ ಟಿ.ಕೆ. ರವಿಕುಮಾರ್, ಉತ್ತರ ಕನ್ನಡ ಹಿರೇಗುತ್ತಿಯ ಮಹಾದೇವ ಬೊಮ್ಮಗೌಡ, ಶಿವಮೊಗ್ಗ ಜಿಲ್ಲೆ ಹೊಸೂರು–ಗುಡ್ಡೆಕೇರಿಯ ಟಿ. ವೀರೇಶ, ಧಾರವಾಡ ಜಿಲ್ಲೆ ಇಂಗಳಹಳ್ಳಿಯ ಕಳಕ ಮಲ್ಲೇಶ ಪಟ್ಟಣಶೆಟ್ಟಿ, ಬೆಂಗಳೂರು ಉತ್ತರ ಜಿಲ್ಲೆಯ ನೆಲಗದರಹಳ್ಳಿಯ ಎಸ್. ಶ್ಯಾಮಲಾ, ಉಡುಪಿ ಜಿಲ್ಲೆ ರಂಜಾಳದ ವಿನಾಯಕ ನಾಯ್ಕ, ಬೆಂಗಳೂರು ದಕ್ಷಿಣ ಜಿಲ್ಲೆ ಕೋನಪ್ಪನ ಅಗ್ರಹಾರದ ಸಿ. ಪದ್ಮಾವತಿ, ವಿಜಯಪುರ ಜಿಲ್ಲೆ ನಾದ ಕೆ.ಡಿ.ಯ ಶಶಿಕಲಾ ಲಕ್ಷ್ಮಣ ಬಡಿಗೇರ, ಚಿಕ್ಕಬಳ್ಳಾಪುರ ಜಿಲ್ಲೆ ಹಂಪಸಂದ್ರದ ಹರೀಶ್ ರಾಜ ಅರಸ್, ದಕ್ಷಿಣ ಕನ್ನಡದ ಗುರುವಾಯನಕೆರೆಯ ಚಿತ್ರಕಲಾ ಶಿಕ್ಷಕ ಕೆ. ವಿಶ್ವನಾಥ ಗೌಡ.

ಪ್ರಶಸ್ತಿಗೆ ಆಯ್ಕೆಯಾದ ಶಿಕ್ಷಕರಿಗೆ ಸೆ. 5ರಂದು ನಡೆಯುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ₹25 ಸಾವಿರ ನಗದು ನೀಡಿ, ಗೌರವಿಸಲಾಗುವುದು ಎಂದು ಶಿಕ್ಷಣ ಇಲಾಖೆ ಹೇಳಿದೆ.

ಬೆಲ್ಲದ ನಡೆ ಮೇಲ್ಪಂಕ್ತಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸಭೆ ಬಿಜೆಪಿ ಉಪನಾಯಕ ಅರವಿಂದ ಬೆಲ್ಲದ ಅವರು ತಾವು ಬಳಸಿದ ಪದದ ಬಗ್ಗೆ ಸ್ವತಃ ಬೇಸರ ವ್ಯಕ್ತಪಡಿಸಿ, ಪತ್ರದ ಮೂಲಕ ಕ್ಷಮೆ ಕೇಳಿ ಹೊಸ ತಲೆಮಾರಿನ ರಾಜಕಾರಣಿಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಈ ಕುರಿತು 'ಎಕ್ಸ್'ನಲ್ಲಿ ಬರೆದುಕೊಂಡಿರುವ ಸಿದ್ದರಾಮಯ್ಯ, 'ರಾಜಕೀಯವು ಬರೀ ಟೀಕೆ, ಆರೋಪ–ಪ್ರತ್ಯಾರೋಪಗಳಿಂದಲೇ ತುಂಬಿ ಹೋಗುತ್ತಿರುವ ಈ ಕಾಲದಲ್ಲಿ ಅರವಿಂದ ಬೆಲ್ಲದ ಅವರ ನಡೆ ಮೌಲ್ಯಯುತ ರಾಜಕಾರಣದ ಜೀವಂತಿಕೆಯ ಸಂಕೇತವಾಗಿ ಕಾಣುತ್ತಿದೆ. ಪಶ್ಚಾತ್ತಾಪಕ್ಕಿಂತ ದೊಡ್ಡ ಪ್ರಾಯಶ್ಚಿತ್ತ ಬೇರೊಂದಿಲ್ಲ ಎಂಬ ಮಾತು ಈ ಸಂದರ್ಭಕ್ಕೆ ಹೆಚ್ಚು ಅರ್ಥಪೂರ್ಣವೆನಿಸುತ್ತಿದೆ' ಎಂದಿದ್ದಾರೆ.

'ಜಿಂದಾಲ್ ಕಂಪನಿಗೆ ಭೂಮಿ ನೀಡಿರುವ ನಮ್ಮ ಸರ್ಕಾರದ ತೀರ್ಮಾನವನ್ನು ವಿರೋಧಿಸಿ ಮಾತನಾಡುವಾಗ ಅರವಿಂದ ಬೆಲ್ಲದ ಅವರು ವೈಯಕ್ತಿಕವಾಗಿ ನಿಂದನೆ ಮಾಡಿದ್ದರು. ತಮ್ಮ ತಪ್ಪಿನ ಅರಿವಾಗಿ ಪತ್ರದ ಮೂಲಕ ಕ್ಷಮೆ ಕೋರಿದ್ದಾರೆ. ಅವರ ಈ ನಡೆಯನ್ನು ನಾನು ಅತ್ಯಂತ ಮುಕ್ತವಾಗಿ ಸ್ವಾಗತಿಸುತ್ತೇನೆ. ಅವರ ಬಗ್ಗೆ ನನ್ನ ಮನಸ್ಸಿನಲ್ಲಿ ದ್ವೇಷವಾಗಲಿ, ಬೇಸರವಾಗಲಿ ಯಾವುದೂ ಇಲ್ಲ' ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

'ನಾನೂ ಒಂದೆರಡು ಬಾರಿ ಬಾಯ್ತಪ್ಪಿನಿಂದ ಏಕವಚನ ಬಳಕೆ ಮಾಡಿ ನಂತರ ವಿಷಾದ ವ್ಯಕ್ತಪಡಿಸಿದ್ದೇನೆ. ಆ ತಪ್ಪು ಮರುಕಳಿಸದಂತೆ ತಿದ್ದಿಕೊಳ್ಳುವ ಪ್ರಯತ್ನ ಮಾಡಿದ್ದೇನೆ. ನನ್ನ ಸುದೀರ್ಘ 40 ವರ್ಷಗಳ ರಾಜಕೀಯ ಜೀವನದಲ್ಲಿ ವಿಪಕ್ಷಗಳ ಹಲವು ಕಿರಿಯ, ಹಿರಿಯ ನಾಯಕರಿಂದ ವೈಯಕ್ತಿಕ ನಿಂದನೆ, ಚಾರಿತ್ರ್ಯ ಹನನ ಮಾಡುವ ಪದಗಳ ಬಳಕೆ ಕೇಳಿದ್ದೇನೆ' ಎಂದು ಹೇಳಿದ್ದಾರೆ.

ನಿಧನ ವಾರ್ತೆ

ರಾಜಾ ಚೆಂಡೂರ್

ಬೆಂಗಳೂರು: ಲೇಖಕ ಹಾಗೂ ಅನುವಾದಕ ರಾಜಾ ಚೆಂಡೂರ್ (65) ಅವರು ಮಂಗಳವಾರ ನಿಧನರಾಗಿದ್ದಾರೆ.

ಅವರಿಗೆ ಪತ್ನಿ ಹಾಗೂ ಪುತ್ರಿ ಇದ್ದಾರೆ. ರಾಜರಾಜೇಶ್ವರಿ ನಗರದ ಪಟ್ಟಣಗೆರೆಯ ನಿವಾಸಿಯಾಗಿದ್ದ ಅವರು, ಬಹು ಅಂಗಾಂಗ ವೈಫಲ್ಯ ಸಮಸ್ಯೆ ಎದುರಿಸುತ್ತಿದ್ದರು. ಅನಾರೋಗ್ಯ ಸಮಸ್ಯೆ ತೀವ್ರ ಸ್ವರೂಪ ಪಡೆದಿದ್ದರಿಂದ ಅವರನ್ನು ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಂಗಳವಾರ ಬೆಳಿಗ್ಗೆ 10 ಗಂಟೆಗೆ ನಿಧನರಾದರು.

ಮಧ್ಯಾಹ್ನ 3 ಗಂಟೆಗೆ ಚಾಮರಾಜಪೇಟೆಯ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನಡೆಸಲಾಗಿದೆ.

ರಾಜಾ ಚೆಂಡೂರ್ ಅವರು ತೆಲುಗು ಲೇಖಕ ಯಂಡಮೂರಿ ವೀರೇಂದ್ರನಾಥ್ ಅವರ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಸ್ವಂತ ಕೃತಿಗಳನ್ನೂ ರಚಿಸಿದ್ದಾರೆ. ತಮ್ಮ ಭಾಗೀರಥಿ ಪ್ರಕಾಶನದಿಂದ ಹಲವು ಕೃತಿಗಳನ್ನು ಹೊರತಂದಿದ್ದಾರೆ. ಕಿರುತೆರೆ ಧಾರಾವಾಹಿಗಳಿಗೂ ಸಂಭಾಷಣೆ ಬರೆದಿದ್ದಾರೆ.

ಶ್ರೀನಿವಾಸಯ್ಯ

ತುಮಕೂರು: ವಿದ್ಯಾರ್ಥಿ ವಲಯದಲ್ಲಿ 'ಜಿಎಂಎಸ್' ಎಂದೇ ಹೆಸರಾಗಿದ್ದ ನಿವೃತ್ತ ಪ್ರಾಂಶುಪಾಲ, ಚಿಂತಕ ಪ್ರೊ.ಜಿ.ಎಂ. ಶ್ರೀನಿವಾಸಯ್ಯ (91) ಸೋಮವಾರ ರಾತ್ರಿ ನಗರದಲ್ಲಿ ನಿಧನರಾದರು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದರು. ತೀವ್ರ ಅಸ್ವಸ್ಥರಾದ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಮೃತರಿಗೆ ಪುತ್ರಿ, ಮೊಮ್ಮಕ್ಕಳು ಇದ್ದಾರೆ. ನಗರದ ಗಾರ್ಡನ್ ರಸ್ತೆಯಲ್ಲಿರುವ ರುದ್ರಭೂಮಿಯಲ್ಲಿ ಮಂಗಳವಾರ ಅಂತ್ಯಸಂಸ್ಕಾರ ನೆರವೇರಿತು.

ಗುಬ್ಬಿ ತಾಲ್ಲೂಕಿನ ಹೊಸಪಾಳ್ಯದಲ್ಲಿ 1933 ಸೆಪ್ಟೆಂಬರ್ 7ರಂದು ಜನಿಸಿದ್ದ ಅವರು ಮೈಸೂರು ವಿಶ್ವವಿದ್ಯಾಲಯ ದಿಂದ ಇತಿಹಾಸದಲ್ಲಿ ಎಂ.ಎ ಪದವಿ ಪಡೆದಿದ್ದರು. ಇತಿಹಾಸವನ್ನು ಸಮಗ್ರವಾಗಿ ತಿಳಿದುಕೊಂಡಿದ್ದು ಏಷ್ಯಾ ಇತಿಹಾಸ ಕುರಿತು ನಿರರ್ಗಳವಾಗಿ ಮಾತನಾಡುತ್ತಿದ್ದರು. ಹಾಸನ, ಕೋಲಾರ ಜಿಲ್ಲೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ತುಮಕೂರು ಕಲಾ ಕಾಲೇಜು ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸಿ ದ್ದರು. ಹಂಪಿ ಕನ್ನಡ ವಿಶ್ವವಿದ್ಯಾಲಯ, ತುಮಕೂರು ವಿಶ್ವವಿದ್ಯಾಲಯ ಸಿಂಡಿಕೇಟ್ ಸದಸ್ಯರಾಗಿಯೂ ಕೆಲಸ ಮಾಡಿದ್ದರು.

ದೋಷಾರೋಪ 4,500 ಪುಟ

ಒಂದನೇ ಪುಟದಿಂದ...

ತನಿಖಾಧಿಕಾರಿಗಳು 4,500ಕ್ಕೂ ಹೆಚ್ಚು ಪುಟಗಳ ದೋಷಾರೋಪ ಪಟ್ಟಿ ಸಿದ್ಧಮಾಡಿಕೊಂಡಿದ್ದಾರೆ. 240ಕ್ಕೂ ಅಧಿಕ ಸಾಕ್ಷಿಗಳ ಹೇಳಿಕೆ ದಾಖಲು ಮಾಡಿಕೊಂಡಿದ್ದಾರೆ. ಘಟನೆ ನಡೆದ ದಿನ ಹೋಟೆಲ್‌ನಲ್ಲಿ ದರ್ಶನ್ ಜತೆ ಸೇರಿ ಪಾರ್ಟಿ ಮಾಡಿದ್ದ ನಟ ಚಿಕ್ಕಣ್ಣ ಅವರನ್ನು ಸಾಕ್ಷಿದಾರನಾಗಿ ಮಾಡಲಾಗಿದೆ. ಕೊಲೆ ಪ್ರಕರಣದಲ್ಲಿ ದರ್ಶನ್ ಅವರನ್ನು ಮೊದಲ ಆರೋಪಿಯಾಗಿ ಹೆಸರಿಸುವ ಸಾಧ್ಯತೆಯೂ ಇದೆ ಎಂದು ಮೂಲಗಳು ತಿಳಿಸಿವೆ.

ನಟ ದರ್ಶನ್ ಈವರೆಗೂ ಜಾಮೀನು ಕೋರಿ ಅರ್ಜಿ ಸಲ್ಲಿಸಿಲ್ಲ. ಆದರೆ ಅವರ ಆಪ್ತೆ ಪವಿತ್ರಾ ಗೌಡ ಹಾಗೂ ಇತರರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು 57ನೇ ನಗರ ಸಿವಿಲ್ ನ್ಯಾಯಾಲಯವು ವಜಾಗೊಳಿಸಿದೆ. ಆರೋಪಪಟ್ಟಿ ಸಲ್ಲಿಕೆಯಾದ ಬಳಿಕ ಜಾಮೀನಿಗೆ ಅರ್ಜಿ ಸಲ್ಲಿಸಲು ದರ್ಶನ್ ನಿರ್ಧರಿಸಿದ್ದಾರೆ ಎಂದು ಅವರ ಆಪ್ತ ಮೂಲಗಳು ಹೇಳಿವೆ.

'ಹೈದರಾಬಾದ್ ವಿಧಿವಿಜ್ಞಾನ ಪ್ರಯೋಗಾಲಯದಿಂದ ಕೆಲ ಪರೀಕ್ಷಾ ವರದಿಗಳು ಬರುವುದು ಬಾಕಿ ಇದೆ. ವರದಿ ಬಾಕಿ ಇಟ್ಟುಕೊಂಡು ಇನ್ನೆರಡು ದಿನಗಳಲ್ಲಿ ಆರೋಪಪಟ್ಟಿ ಸಲ್ಲಿಸಲಾಗುವುದು. ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪರಿಶೀಲನೆ ಮಾಡುತ್ತಿದ್ದಾರೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ದರ್ಶನ್‌ಗೆ ವಿಶೇಷ ಆತಿಥ್ಯ: ತನಿಖೆ ಆರಂಭ

ಪರಪ್ಪನ ಅಗ್ರಹಾರದಲ್ಲಿ ನಟ ದರ್ಶನ್ ಹಾಗೂ ಸಹಚರರಿಗೆ ವಿಶೇಷ ಆತಿಥ್ಯ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಸಿಸಿಬಿ ಜಂಟಿ ಪೊಲೀಸ್ ಕಮಿಷನರ್ ಡಾ. ಚಂದ್ರಗುಪ್ತ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ. ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ ಅಲಿಯಾಸ್ ನಾಗರಾಜ್, ಕುಳ್ಳ ಸೀನಾ ಸೇರಿದಂತೆ 20 ರೌಡಿಗಳನ್ನು ವಿವಿಧ ಕಾರಾಗೃಹಗಳಿಗೆ ಸ್ಥಳಾಂತರ ಮಾಡುವಂತೆ ಕೋರಿ ಕೋರ್ಟ್‌ಗೆ ಮನವಿ ಮಾಡಲಾಗಿದೆ. ಕಾರಾಗೃಹಗಳ ಇಲಾಖೆಯ ಡಿಜಿಪಿಗೂ ಪತ್ರ ಬರೆಯಲಾಗಿದೆ ಎಂದು ಕಮಿಷನರ್ ಬಿ. ದಯಾನಂದ ತಿಳಿಸಿದರು.

ಜಾರಕಿಹೊಳಿ ದೆಹಲಿ ಭೇಟಿ ಕುತೂಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ, ಸಚಿವ ಸತೀಶ ಜಾರಕಿಹೊಳಿ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿರುವುದು ಕುತೂಹಲಕ್ಕೆ ಕಾರಣವಾಗಿದೆ.

ರಾಹುಲ್ ಸೇರಿದಂತೆ ಹೈಕಮಾಂಡ್‌ನ ಕೆಲವು ನಾಯಕರನ್ನು ಎರಡು ದಿನಗಳ ಹಿಂದೆ ದೆಹಲಿಯಲ್ಲಿ ಭೇಟಿ ಮಾಡಿರುವ ಸತೀಶ ಜಾರಕಿಹೊಳಿ, ರಾಜ್ಯ ರಾಜಕೀಯದ ಸದ್ಯದ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಅಲ್ಲದೆ, ತಮ್ಮ ಆಪ್ತರ ಬಳಿ ಈ ಕುರಿತು ಮಾತುಕತೆ ನಡೆಸಿದ್ದಾರೆ ಎಂದು ಗೊತ್ತಾಗಿದೆ. ಆದರೆ, ದೆಹಲಿಗೆ ಹೋಗಿ ಬಂದಿರುವ ವಿಚಾರದಲ್ಲಿ ಬಹಿರಂಗವಾಗಿ ಅವರು ಎಲ್ಲಿಯೂ ಮಾಹಿತಿ ಹಂಚಿಕೊಂಡಿಲ್ಲ. ಮಾಧ್ಯಮಗಳಿಗೂ ಪ್ರತಿಕ್ರಿಯೆ ನೀಡದೆ ಅಂತರ ಕಾಯ್ದುಕೊಂಡಿದ್ದಾರೆ.

ಇತ್ತೀಚೆಗೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದ ಸತೀಶ ಜಾರಕಿಹೊಳಿ, ಬಳಿಕ ಗೃಹ ಸಚಿವ ಜಿ. ಪರಮೇಶ್ವರ ಅವರನ್ನೂ ಭೇಟಿ ಮಾಡಿ ಚರ್ಚೆ ನಡೆಸಿದ್ದರು.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ತಮ್ಮ ವಿರುದ್ಧ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. ಈ ಮಧ್ಯೆ, ಸತೀಶ ಜಾರಕಿಹೊಳಿ ಅವರ ಈ ನಡೆ ಚರ್ಚೆಗಳಿಗೆ ಕಾರಣವಾಗಿದೆ.

ಈ ವಿಚಾರವಾಗಿ ಮಂಗಳವಾರ ಪ್ರತಿಕ್ರಿಯಿಸಿದ ಗೃಹ ಸಚಿವ ಜಿ. ಪರಮೇಶ್ವರ, 'ಸತೀಶ ಪದೇ ಪದೇ ದೆಹಲಿಗೆ ಭೇಟಿ ನೀಡುತ್ತಿರುವುದರಲ್ಲಿ ವಿಶೇಷ ಏನೂ ಇಲ್ಲ. ಮುಖ್ಯಮಂತ್ರಿ ರೇಸ್ ಏನೂ ಇಲ್ಲ. ಅವರು ಯಾವುದೋ ಕಾರಣಕ್ಕೆ ಭೇಟಿ ಮಾಡುತ್ತಾರೆ. ದೆಹಲಿಗೆ ಹೋದರೆ ಹೈಕಮಾಂಡ್ ನಾಯಕರನ್ನು ಭೇಟಿ ಮಾಡುವುದು ಸಂಪ್ರದಾಯ. ಎಲ್ಲದಕ್ಕೂ ರಾಜಕೀಯ ಬಣ್ಣ ಹಾಕುವುದು ಬೇಡ' ಎಂದರು.

ಮೊಬೈಲ್ ಕರೆ, ಎಸ್‌ಎಂಎಸ್, ಅಂತರ್ಜಾಲ ಬಳಕೆ ನಿರ್ಬಂಧ

ಕಾರಾಗೃಹಗಳಿಗೆ ಅತ್ಯಾಧುನಿಕ ಜಾಮರ್ ಶೀಘ್ರ

• ಹರಿಶಂಕರ್ ಆರ್.

ಬಳ್ಳಾರಿ: ರಾಜ್ಯದ ಎಂಟು ಕೇಂದ್ರ ಕಾರಾಗೃಹಗಳಿಗೆ ಮೊಬೈಲ್ ಫೋನ್ ಕರೆ ನಿಯಂತ್ರಣ ವ್ಯವಸ್ಥೆ (ಥ್ರೀ ಟವರ್ ಹಾರ್ಮೋನಿಯಸ್ ಕಾಲ್ ಬ್ಲಾಕಿಂಗ್ ಸಿಸ್ಟಮ್) ಎಂಬ ಅತ್ಯಾಧುನಿಕ ಜಾಮರ್‌ಗಳ ಅಳವಡಿಕೆ ಕಾರ್ಯ ಶೀಘ್ರವೇ ನೆರವೇರಲಿದ್ದು, ಈ ಸಂಬಂಧ ಟೆಂಡರ್ ಪ್ರಕ್ರಿಯೆ ನಡೆದಿದೆ.

ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಈಗಾಗಲೇ ಈ ಜಾಮರ್ ವ್ಯವಸ್ಥೆಯಿದೆ. ದಕ್ಷಿಣ ವಲಯದ ಮೈಸೂರು, ಶಿವಮೊಗ್ಗ ಕಾರಾಗೃಹ, ಮಹಿಳಾ ಕಾರಾಗೃಹ, ಉತ್ತರ ವಲಯದ ಬಳ್ಳಾರಿ, ಧಾರವಾಡ, ಬೆಳಗಾವಿ, ವಿಜಯಪುರ ಮತ್ತು ಕಲಬುರಗಿಯ ಕೇಂದ್ರ ಕಾರಾಗೃಹಗಳಲ್ಲಿ ಜಾಮರ್ ಅಳವಡಿಕೆ ಆಗಬೇಕಿದೆ.

ಜಾಮರ್ ಅಳವಡಿಕೆಗೆ ಸಂಬಂಧಿಸಿದಂತೆ ಆಯಾ ಕಾರಾಗೃಹಗಳ ವಿನ್ಯಾಸ, ಸ್ಥಿತಿಗತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹ ಪ್ರಕ್ರಿಯೆ ನಡೆದಿದೆ.

ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ಈ ಮೊದಲು 2ಜಿ ಸಾಮರ್ಥ್ಯದ ಜಾಮರ್ ಗಳಿದ್ದವು. ತಂತ್ರಜ್ಞಾನ ಅಭಿವೃದ್ಧಿ ಆದ ಬಳಿಕ ಅವು ಸಮರ್ಥವಾಗಿ ಕಾರ್ಯನಿರ್ವಹಿಸುವಲ್ಲಿ ವಿಫಲವಾದವು. 3ಜಿ ಸಾಮರ್ಥ್ಯಕ್ಕೆ ನವೀಕರಿಸಿದರೂ ಹೆಚ್ಚು ಪ್ರಯೋಜನ ಆಗಲಿಲ್ಲ. ಇದರ ಹಿನ್ನೆಲೆಯಲ್ಲಿ ಅತ್ಯಾಧುನಿಕ ಮಾದರಿಯ ಜಾಮರ್‌ಗಳ ಅಳವಡಿಕೆ ಬಗ್ಗೆ ಸರ್ಕಾರ ಚಿಂತನೆ ನಡೆಸಿತ್ತು. ಬೆಂಗಳೂರಿನ ಕಾರಾಗೃಹದಲ್ಲಿನ ನಟ ದರ್ಶನ್ ಚಿತ್ರ, ವಿಡಿಯೊಗಳು ವೈರಲ್ ಆದ ಬಳಿಕ ಅತ್ಯಾಧುನಿಕ ಮಾದರಿಯ ಜಾಮರ್‌ಗಳ ಅಳವಡಿಕೆ ಅನಿವಾರ್ಯ ಎಂಬ ಚರ್ಚೆ ನಡೆಯಿತು.

'ಅತ್ಯಾಧುನಿಕ ಜಾಮರ್‌ಗಳ ಅಳವಡಿಕೆ ಬಳಿಕ ಕಾರಾಗೃಹಗಳಲ್ಲಿ ಮೊಬೈಲ್ ಫೋನ್ ಮತ್ತು ಅಂತರ್ಜಾಲ ಬಳಕೆ ಸಂಪೂರ್ಣವಾಗಿ ನಿಯಂತ್ರಣಕ್ಕೆ ಬರುತ್ತದೆ. ಕಾರಾಗೃಹದ ಅಧಿಕಾರಿಗಳು ಮತ್ತು ಸಿಬ್ಬಂದಿ ಸಂವಹನಕ್ಕೆ ಸ್ಥಿರ ದೂರವಾಣಿ ಸೌಲಭ್ಯ, ಇ-ಮೇಲ್, ವಾಕಿಟಾಕಿ ಮಾತ್ರ ಬಳಸಬೇಕಾಗುತ್ತದೆ' ಎಂದು ಕಾರಾಗೃಹದ ಅಧಿಕಾರಿಯೊಬ್ಬರು ತಿಳಿಸಿದರು.

ಕೇಂದ್ರ ಕಾರಾಗೃಹಗಳಲ್ಲಿ ಟಿ–ಎಚ್‌ಸಿಬಿಎಸ್ ಎಂಬ ಜಾಮರ್‌ಗಳ ಅಳವಡಿಸಲಾಗುವುದು. ಅನಧಿಕೃತ ಸಂವಹನ ತಡೆಗೆ ಟಿ–ಎಚ್‌ಸಿಬಿಎಸ್ ವ್ಯವಸ್ಥೆ ನೆರವಾಗಲಿದೆ. ಟಿ.ಪಿ ಶೇಷ, ಉಪ ಮಹಾನಿರೀಕ್ಷಕರು, ಕಾರಾಗೃಹ ಇಲಾಖೆ, ಉತ್ತರ ವಲಯ

ಜಾಮರ್ ಹೇಗೆ ಪರಿಣಾಮಕಾರಿ?

ದೂರವಾಣಿ ಕರೆ ನಿಯಂತ್ರಣ ವ್ಯವಸ್ಥೆ (ಟಿ–ಎಚ್‌ಸಿಬಿಎಸ್) ಕಾರಾಗೃಹಗಳಲ್ಲಿ ಅಳವಡಿಸುವ ಮುನ್ನ ಟೆಲಿಕಾಂ ಸೇವಾ ಪೂರೈಕೆದಾರರು ಆಯಾ ಪ್ರದೇಶದಲ್ಲಿನ ಸಿಗ್ನಲ್‌ಗಳ ವ್ಯಾಪ್ತಿ, ಸಾಮರ್ಥ್ಯ ಮತ್ತು ಗುಣಮಟ್ಟ ಪರಿಶೀಲಿಸುತ್ತಾರೆ. ನಂತರ ನಿರ್ದಿಷ್ಟ ಪ್ರದೇಶದ ಸಿಗ್ನಲ್, ಪ್ರಮಾಣ ಹೊಂದಾಣಿಕೆ ಮಾಡುತ್ತಾರೆ. ಈ ಜಾಮರ್ ಮೊಬೈಲ್ ಫೋನ್ ಕರೆ ನಿಯಂತ್ರಣದ ಜೊತೆಗೆ ಎಸ್‌ಎಂಎಸ್ ಮತ್ತು ಅಂತರ್ಜಾಲ ಬಳಕೆ ನಿರ್ಬಂಧಿಸುತ್ತದೆ. ಇದು ಕಾರಾಗೃಹಕ್ಕೆ ಸೀಮಿತವಾಗಿ ಸಮರ್ಪಕವಾಗಿ ಅಳವಡಿಕೆ ಆಗಬೇಕು. ಇಲ್ಲದಿದ್ದರೆ, ಆಯಾ ಕಾರಾಗೃಹದ ಸುತ್ತಮುತ್ತಲ ಪ್ರದೇಶದಲ್ಲಿ ದೂರವಾಣಿ ಸೇವೆಯಲ್ಲಿ ವ್ಯತ್ಯಯವಾಗುತ್ತದೆ.

ಜಮ್ಮು ಕಾಶ್ಮೀರ, ಬಿಹಾರ, ತಮಿಳುನಾಡು, ರಾಜಸ್ಥಾನ ಮತ್ತು ಉತ್ತರ ಪ್ರದೇಶದ ತಿಹಾರ್ ಕಾರಾಗೃಹ ಸೇರಿದಂತೆ ದೇಶದ ಬಹುತೇಕ ರಾಜ್ಯಗಳಲ್ಲಿ ಈ ಜಾಮರ್ ವ್ಯವಸ್ಥೆಯನ್ನು ಈಗಾಗಲೇ ಅಳವಡಿಸಲಾಗಿದೆ.

ದರ್ಶನ್‌ಗೆ ಟಿವಿ ಕೊಡಲು ನಿರ್ಣಯ

ಬಳ್ಳಾರಿ: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಯಾಗಿ ಬಳ್ಳಾರಿಯ ಕೇಂದ್ರ ಕಾರಾಗೃಹದಲ್ಲಿರುವ ನಟ ದರ್ಶನ್, ತಮಗೆ ಟಿವಿ ಒದಗಿಸುವಂತೆ ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

'ದರ್ಶನ್ ಮನವಿಗೆ ಸಮ್ಮತಿ ಸಿಕ್ಕಿದ್ದು, ಒಂದೆರಡು ದಿನಗಳಲ್ಲಿ ಟಿವಿ ಲಭ್ಯವಾಗಲಿದೆ. ಕಾರಾಗೃಹದ ಹೊರ ಆವರಣದಲ್ಲಿ 10 ಹೊಸ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಭದ್ರತೆ ಹೆಚ್ಚಿಸುವ ದೃಷ್ಟಿಯಿಂದ ಸಿಸಿಟಿವಿ ಕ್ಯಾಮೆರಾಗಳ ಸಂಖ್ಯೆ ಹೆಚ್ಚಿಸಲಾಗಿದೆ' ಎಂದು ಕಾರಾಗೃಹದ ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಯೋಗ ವಾಣಿ

WE ARE HIRING
for
SHETTAR
S.C. SHETTAR & SONS PVT. LTD.

SALES EXECUTIVE (MALE)
• Exposure in Iron, Steel & Roofing Industry
• Qualification : Any Graduate
• Experience : 1-2 Years in Field
Interested Candidate Send your Resume to:
94489 91442

Rajeshwari National School
(Residential School - Grade 5 to 10)
www.rajeshwariedu.com
प्रदीपयेम जगत्सर्वम्

APPOINTMENTS
An English Medium School has following vacancies
PRINCIPAL: M.Sc./M.A. B.Ed. with administrative experience as Principal/Vice Principal or as an academic co-ordinator.

TEACHING FACULTY

MATHEMATICS	- M.Sc. B.Ed.	PHYSICS	- M.Sc. B.Ed.
CHEMISTRY	- M.Sc. B.Ed.	BIOLOGY	- M.Sc. B.Ed.
SOCIAL SCIENCE	- M.A. B.Ed.	HINDI	- M.A. B.Ed.
ENGLISH	- M.A. B.Ed.	KANNADA	- M.A. B.Ed.
SANSKRIT	- M.A. B.Ed.		

Minimum 2 years of teaching experience.
MANAGER - Admissions & Public Relations
• Computer knowledge and fluency in English is a must for all the above positions
• Salary will be at par with the best in the industry

Send or mail your resume before 15.09.2024 to:
Rajeshwari National School
Radha Farms, Sanoor Village
Karkala Taluk - 574 114
Udupi District, Karnataka
Ph: +91 80953 41169, 87621 19917
Email : info@rajeshwariedu.com

ಛಲವಾದಿ ವಿರುದ್ಧ ರಾಜ್ಯಪಾಲರಿಗೆ ದೂರು

ಸಿ.ಎ ನಿವೇಶನದಲ್ಲಿ 'ಧಮ್ ಬಿರಿಯಾನಿ' ಹೋಟೆಲ್ ತೆರೆದ ಆರೋಪ • ಪರಿಷತ್ ಸದಸ್ಯತ್ವ ರದ್ದತಿಗೆ ಕಾಂಗ್ರೆಸ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣದ ಉದ್ದೇಶಕ್ಕೆ ಪಡೆದ ಸಿ.ಎ ನಿವೇಶನದಲ್ಲಿ 'ಧಮ್ ಬಿರಿಯಾನಿ' ಹೋಟೆಲ್ ನಡೆಸುವ ಮೂಲಕ ಅಕ್ರಮ ಎಸಗಿರುವ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರನ್ನು ಪರಿಷತ್ ಸದಸ್ಯತ್ವ ಸ್ಥಾನದಿಂದ ಅನರ್ಹ ಮಾಡಬೇಕು' ಎಂದು ಆಗ್ರಹಿಸಿ ವಿಧಾನ ಪರಿಷತ್ತಿನ ಕಾಂಗ್ರೆಸ್ ಪಕ್ಷದ ಹಾಲಿ ಮತ್ತು ಮಾಜಿ ಸದಸ್ಯರ ನಿಯೋಗ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮಂಗಳವಾರ ದೂರು ಸಲ್ಲಿಸಿ, ಮನವಿ ಮಾಡಿದೆ.

ವಿಧಾನ ಪರಿಷತ್ತಿನ ಮುಖ್ಯ ಸಚೇತಕ ಸಲೀಂ ಅಹಮದ್, ಎಂ.ಆರ್. ಸೀತಾರಾಮ್, ಮಂಜುನಾಥ ಭಂಡಾರಿ, ವಸಂತಕುಮಾರ್, ಪುಟ್ಟಣ್ಣ, ಎಸ್. ರವಿ, ಎಚ್.ಪಿ. ಸುಧಾಮ್ ದಾಸ್, ದಿನೇಶ್ ಗೂಳಿಗೌಡ ಸೇರಿದಂತೆ 11 ಹಾಲಿ ಹಾಗೂ ರಮೇಶ್‌ಬಾಬು, ಎಂ. ನಾರಾಯಣಸ್ವಾಮಿ ಸೇರಿದಂತೆ ಐವರು ಮಾಜಿ ಸದಸ್ಯರು ಈ ಮನವಿ ಸಲ್ಲಿಸಿದ್ದಾರೆ.

ರಾಜ್ಯಪಾಲರನ್ನು ಭೇಟಿ ಮಾಡಿದ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಲೀಂ ಅಹಮದ್, 'ಆದರ್ಶ ಶಾಲೆ ಮತ್ತು ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿರುವ ಛಲವಾದಿ ನಾರಾಯಣಸ್ವಾಮಿ, ಹೊಸಕೋಟೆಯಲ್ಲಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಸಿ.ಎ ನಿವೇಶನ ಪಡೆದಿದ್ದರು. 2006ರಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಟೆಲಿ ಕಮ್ಯೂನಿಕೇಷನ್‌ಗೆ ನೋಂದಾಯಿಸಿಕೊಂಡಿರುವ ಆ ಜಾಗದಲ್ಲಿ ಈಗ ಧಮ್ ಬಿರಿಯಾನಿ ಹೋಟೆಲ್ ಇದೆ. ಈ ವಿಚಾರವಾಗಿ ರಾಜ್ಯಪಾಲರನ್ನು ಭೇಟಿ ಮಾಡಿ ತಕ್ಷಣ ಕ್ರಮ ತೆಗೆದುಕೊಳ್ಳುವಂತೆ ಮನವಿ ಮಾಡಿದ್ದೇವೆ' ಎಂದರು.

ದೂರಿನಲ್ಲಿದ್ದ ಅಂಶಗಳನ್ನು ವಿವರಿಸಿದ ರಮೇಶ್ ಬಾಬು, '2002–2005ರ ನಡುವೆ ಕರ್ನಾಟಕ ಗೃಹ ಮಂಡಳಿ ಸದಸ್ಯರಾಗಿದ್ದ ನಾರಾಯಣಸ್ವಾಮಿ, ಈ ವೇಳೆ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಶಾಲೆಗೆ ಕಟ್ಟಡ ಕಟ್ಟಲು ಸಿ.ಎ ನಿವೇಶನವನ್ನು 2004ರಲ್ಲಿ ಪಡೆದಿದ್ದ ಅವರು, 2006ರಲ್ಲಿ ಕ್ರಯಪತ್ರ ಮಾಡುವಾಗ ನಿವೇಶನ ಪಡೆದ ಉದ್ದೇಶವನ್ನು ಟೆಲಿ ಕಮ್ಯೂನಿಕೇಶನ್ ಮತ್ತು ಪಬ್ಲಿಕ್ ಸರ್ವೀಸ್ ಎಂದು ಬದಲಾಯಿಸಿದ್ದಾರೆ. ಸದ್ಯ ಈ ನಿವೇಶನದಲ್ಲಿ ಧಮ್ ಬಿರಿಯಾನಿ ಹೋಟೆಲ್ ಇದೆ. ಅಧಿಕಾರ ದುರುಪಯೋಗ ಮಾಡಿಕೊಂಡು ಮೈಸೂರಿನ ಹೆಬ್ಬಾಳದಲ್ಲಿಯೂ ಕೈಗಾರಿಕಾ ನಿವೇಶನ ಪಡೆದಿದ್ದಾರೆ. ಅವರ ಮೇಲೆ ಬಿಎನ್‌ಎಸ್ 316, 318 ಸೆಕ್ಷನ್ ಅಡಿ ಮೋಸ ಹಾಗೂ ನಂಬಿಕೆದ್ರೋಹ ಕಾರಣಕ್ಕೆ ಕ್ರಮ ತೆಗೆದುಕೊಳ್ಳುವಂತೆ ದೂರು ಸಲ್ಲಿಸಿದ್ದೇವೆ' ಎಂದರು.

'ಸಿ.ಎ ನಿವೇಶನ ಹಂಚಿಕೆಯಲ್ಲಿ ಅಕ್ರಮ ನಡೆದಿದ್ದರೆ ಮರಳಿ ಪಡೆಯಬೇಕೆಂದು 2023ರಲ್ಲಿ ಹೈಕೋರ್ಟ್ ತೀರ್ಪು ನೀಡಿದೆ' ಎಂದು ಸುಧಾಮ್ ದಾಸ್ ಹೇಳಿದರೆ, 'ಹಿಂದೆ ಮಲ್ಲಿಕಾರ್ಜುನ ಖರ್ಗೆ ಅವರಿಂದ ಅಧಿಕಾರ ಪಡೆದಿದ್ದ ಛಲವಾದಿ ನಾರಾಯಣಸ್ವಾಮಿ, ಈಗ ಅವರ ವಿರುದ್ಧ ಮಾತನಾಡುತ್ತಿದ್ದಾರೆ' ಎಂದು ಮಂಜುನಾಥ ಭಂಡಾರಿ ವಾಗ್ದಾಳಿ ನಡೆಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ವಿಜಯ್ ಮುಳಗುಂದ, ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ದಿನೇಶ್ ಗೂಳಿಗೌಡ, ಜಗದೇವ್ ಗುತ್ತೇದಾರ್, ತಿಪ್ಪಣ್ಣಪ್ಪ ಕಮಕನೂರ, ಚಂದ್ರಶೇಖರ ಪಾಟೀಲ, ಕೆಪಿಸಿಸಿ ಎಸ್.ಸಿ ವಿಭಾಗದ ಅಧ್ಯಕ್ಷ ಧರ್ಮಸೇನ, ಕೆಪಿಸಿಸಿ ಉಪಾಧ್ಯಕ್ಷ ಶರಣಪ್ಪ ಮಟ್ಟೂರು, ಎಂ. ನಾರಾಯಣ ಸ್ವಾಮಿ ಇದ್ದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಮಂಗಳವಾರ ಭೇಟಿ ಮಾಡಿದ ವಿಧಾನ ಪರಿಷತ್‌ನ ಹಾಲಿ ಮತ್ತು ಮಾಜಿ ಸದಸ್ಯರು ದೂರು ಸಲ್ಲಿಸಿದರು

> **ನಾವು ನೀಡಿರುವ ಎಲ್ಲ ದಾಖಲೆ ಪರಿಶೀಲಿಸಿದ ರಾಜ್ಯಪಾಲರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅಧಿಕಾರಿಗಳನ್ನು ಕಳುಹಿಸಿ ಪರಿಶೀಲಿಸುವ ಭರವಸೆ ನೀಡಿದ್ದಾರೆ**
> **ಸಲೀಂ ಅಹಮದ್**
> ವಿಧಾನ ಪರಿಷತ್ತಿನ ಮುಖ್ಯ ಸಚೇತಕ

ಮರುಪ್ರಶ್ನೆ ಕೇಳಿದ ರಾಜ್ಯಪಾಲ?

ಛಲವಾದಿ ನಾರಾಯಣಸ್ವಾಮಿ ವಿರುದ್ಧ ದೂರು ನೀಡುತ್ತಿದ್ದಂತೆ, '2002–05ರಲ್ಲಿ ನಿಯಮ ಉಲ್ಲಂಘಿಸಿ ನಿವೇಶನ ಪಡೆದಿರುವ ವಿಷಯವಿದು. ಇಷ್ಟು ವರ್ಷ ಏನು ಮಾಡುತ್ತಿದ್ದಿರಿ? ಈವರೆಗೂ ಯಾಕೆ ದೂರು ಕೊಡಲಿಲ್ಲ' ಎಂದು ರಾಜ್ಯಪಾಲರು ಪ್ರಶ್ನಿಸಿದ್ದಾರೆ ಎಂದು ಗೊತ್ತಾಗಿದೆ. ಅದಕ್ಕೆ ಕಾಂಗ್ರೆಸ್ ನಾಯಕರು, 'ಈಗ ದಾಖಲೆಗಳು ಸಿಕ್ಕಿವೆ. ಹೀಗಾಗಿ ದೂರು ನೀಡುತ್ತಿದ್ದೇವೆ' ಎಂದಿದ್ದಾರೆ.

'ಗೃಹ ಮಂಡಳಿ ನಿರ್ದೇಶಕ ಆಗಿದ್ದಾಗ ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದಾರೆ ಎನ್ನುತ್ತಿದ್ದೀರಿ. ಮುಡಾ ಪ್ರಕರಣವೂ ಇದೇ ರೀತಿ ಅಲ್ಲವೇ? ಎರಡೂ ಪ್ರಕರಣಗಳಿಗೂ ಹೋಲಿಕೆ ಇದೆಯಲ್ಲವೇ' ಎಂದು ರಾಜ್ಯಪಾಲರು ಮರು ಪ್ರಶ್ನೆ ಹಾಕಿದ್ದಾರೆ. ರಾಜ್ಯಪಾಲರ ಮಾತಿಗೆ, ಕಾಂಗ್ರೆಸ್ ನಾಯಕರು 'ಮುಡಾ ಪ್ರಕರಣವೇ ಬೇರೆ. ಈ ಪ್ರಕರಣವೇ ಬೇರೆ. ದಾಖಲೆಗಳನ್ನು ನೋಡಿ' ಎಂದಿದ್ದಾರೆ ಎಂದೂ ಗೊತ್ತಾಗಿದೆ.

ಸುದ್ದಿ 2 ನಿಮಿಷ

ಸುಧಾಕರ್ ವಿರುದ್ಧ ಮುಲಾಜಿಲ್ಲದೆ ಕ್ರಮ: ಶಾಸಕ ಪ್ರದೀಪ್ ಈಶ್ವರ್

ಬೆಂಗಳೂರು: ಕೋವಿಡ್ ಅಕ್ರಮಕ್ಕೆ ಸಂಬಂಧಿಸಿದಂತೆ ಸಂಸದ ಡಾ.ಕೆ. ಸುಧಾಕರ್ ವಿರುದ್ಧ ಸರ್ಕಾರ ಮುಲಾಜಿಲ್ಲದೇ ಕ್ರಮ ತೆಗೆದುಕೊಳ್ಳಲಿದೆ ಎಂದು ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಹೇಳಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಮ್ಮ ಸರ್ಕಾರ ಅವರನ್ನು ಸುಮ್ಮನೆ ಬಿಡುವ ಪ್ರಶ್ನೆಯೇ ಇಲ್ಲ. ಅವರು ತಾತ್ಕಾಲಿಕವಾಗಿ ಸ್ವಲ್ಪ ದಿನ ತಳ್ಳಬಹುದು. ಯಾವತ್ತಾದೂ ಒಂದು ದಿನ ಸುಧಾಕರ್ ಅವರ ತಲೆಗೆ ಬಂದೇ ಬರುತ್ತದೆ' ಎಂದರು.

'ಕೋವಿಡ್ ಸಂದರ್ಭದಲ್ಲಿ ಸಾಕಷ್ಟು ತಪ್ಪುಗಳು ಆಗಿವೆ. ₹500ಕ್ಕೆ ಒಂದರಂತೆ ಮುಖಗವುಸು ಖರೀದಿಸಿದ್ದಾರೆ. ಅಂತಹ ಮುಖಗವುಸು ಯಾವ ಮೆಡಿಕಲ್ ಶಾಪ್‌ನಲ್ಲಿ ಸಿಗುತ್ತದೆಯೋ ಗೊತ್ತಿಲ್ಲ. ಕೋವಿಡ್‌ನಲ್ಲಿ ತಪ್ಪು ಮಾಡಿದವರಿಗೆ ಕಾನೂನು ಪ್ರಕಾರ ಯಾವಾಗ ಶಿಕ್ಷೆ ಸಿಗುತ್ತದೆಯೋ ಗೊತ್ತಿಲ್ಲ. ಆದರೆ, ಕೋವಿಡ್ ಕಳ್ಳರಿಗೆ ಜನತಾ ನ್ಯಾಯಾಲಯ ಶಿಕ್ಷೆ ನೀಡಿದೆ. ಸುಧಾಕರ್ ವಿಚಾರದಲ್ಲಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಖಡಕ್ ನಿರ್ಧಾರ ತೆಗೆದುಕೊಳ್ಳುತ್ತಾರೆ' ಎಂದು ಅವರು ಹೇಳಿದರು.

'ಸಂಸತ್ ಚುನಾವಣೆಯಲ್ಲಿ ಸಾವಿರಾರು ಕೋಟಿ ಹಣ ಖರ್ಚು ಮಾಡಿ ಗೆದ್ದಿದ್ದಾರೆ. ನಾನು ಚಿಕ್ಕಬಳ್ಳಾಪುರದಲ್ಲಿ ಅವರ ಮತಗಳಿಕೆ ಪ್ರಮಾಣ ಕಡಿಮೆ ಮಾಡುವಲ್ಲಿ ಶ್ರಮಿಸಿದ್ದೇನೆ' ಎಂದು ತಿಳಿಸಿದರು.

'ಕಾಂಗ್ರೆಸ್‌ನವರು ಸತ್ಯ ಹರಿಶ್ಚಂದ್ರರಲ್ಲ' ಎಂಬ ಸುಧಾಕರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, '2013 ರಲ್ಲಿ ಆಂಜಿನಪ್ಪ ಅವರಿಗೆ ಟಿಕೆಟ್ ತಪ್ಪಿಸಿ ತಮಗೇ ಟಿಕೆಟ್ ತಂದುಕೊಂಡರು. ಆಗ ಇವರು ಹರಿಶ್ಚಂದ್ರರಾಗಿದ್ದರಾ? ಎಚ್.ಡಿ.ಕುಮಾರಸ್ವಾಮಿ ಸರ್ಕಾರವನ್ನು ಪತನಗೊಳಿಸುವಲ್ಲಿ ಸುಧಾಕರ್ ಪ್ರಮುಖ ಪಾತ್ರವಹಿಸಿದ್ದರು. ಆಗ 'ಬಾಂಬೆ ಬಾಯ್ಸ್' ಆಗಿದ್ದ ಇವರು ಸತ್ಯ ಹರಿಶ್ಚಂದ್ರರಾಗಿದ್ದರೆ' ಎಂದೂ ಪ್ರಶ್ನಿಸಿದರು.

'ಓದುವ ಅಭಿಯಾನ' ಆರಂಭ

ಬೆಂಗಳೂರು: ಕಥೆಗಳ ಮೂಲಕ ಶಾಲಾ ಮಕ್ಕಳಲ್ಲಿ ಓದುವ ಅಭಿರುಚಿ ಮೂಡಿಸಲು ಮುಂದಾಗಿರುವ ಶಾಲಾ ಶಿಕ್ಷಣ ಇಲಾಖೆ, ಅದಕ್ಕಾಗಿ 'ಓದುವ ಅಭಿಯಾನ'ವನ್ನೇ ರೂಪಿಸಿದೆ.

ಸೆ.3ರಿಂದ 21 ದಿನಗಳು ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ರಾಜ್ಯದ ಎಲ್ಲ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ 1ರಿಂದ 7ನೇ ತರಗತಿ ಮಕ್ಕಳಿಗೆ ಪ್ರತಿ ದಿನ ಕತೆ ಹೇಳುವ ಮೂಲಕ, ಮಕ್ಕಳಿಂದ ಕಥೆ ಹೇಳಿಸುವ ಮೂಲಕ ಓದುವ ಹವ್ಯಾಸ ರೂಢಿಸಲಾಗುತ್ತದೆ.

ಮಕ್ಕಳಲ್ಲಿ ಓದುವ ಕೌಶಲ, ಸಂಸ್ಕೃತಿ ಮತ್ತು ಅಭ್ಯಾಸ ಬೆಳೆಸಲು ಈ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಓದುವ ಚಟುವಟಿಕೆಗಳನ್ನು ಶಿಕ್ಷಣ ಇಲಾಖೆಯೇ ಸಿದ್ಧಪಡಿಸಿದೆ. ವಿವಿಧ ವಿಷಯಗಳನ್ನು ಕಥೆಯ ರೂಪದಲ್ಲಿ ಪ್ರಸ್ತುತ ಪಡಿಸಲಾಗಿದೆ. ಮಕ್ಕಳ ಸ್ನೇಹಿಯಾಗಿ ರೂಪಿಸಿರುವ ಪ್ರತಿ ಕಥೆಯನ್ನೂ ಪಿಡಿಎಫ್ ರೂಪದಲ್ಲಿ ನೀಡಲಾಗಿದೆ. ಪಟ್ಟಿಯಲ್ಲಿರುವ ಕಥೆಗಳನ್ನು ಬಳಸಿಕೊಂಡು ಪ್ರತಿ ದಿನ ಬೆಳಿಗ್ಗೆ 11ರಿಂದ 11.30ರವರೆಗೆ ಅರ್ಧ ಗಂಟೆ ವಾಚನ ನಡೆಯಲಿದೆ.

ಈ ಅಭಿಯಾನದಲ್ಲಿ ಮಕ್ಕಳು, ಶಿಕ್ಷಕರಷ್ಟೇ ಅಲ್ಲದೆ, ಕ್ಷೇತ್ರ, ವಿಭಾಗ, ಜಿಲ್ಲೆ ಹಾಗೂ ರಾಜ್ಯಮಟ್ಟದ ಅಧಿಕಾರಿಗಳು ಸಹ ತಮ್ಮ ನೆಚ್ಚಿನ ಪುಸ್ತಕಗಳನ್ನು ಮಕ್ಕಳಿಗೆ ಪರಿಚಯ ಮಾಡಿಕೊಡಲಿದ್ದಾರೆ. ನಿಗದಿತ ಸಮಯದಲ್ಲಿ ಕಡ್ಡಾಯವಾಗಿ ಓದುವ ಹವ್ಯಾಸ ರೂಢಿಸುವ ಜತೆಗೆ, ಬೆಳಗಿನ ಪ್ರಾರ್ಥನೆ, ಗ್ರಂಥಾಲಯದ ಅವಧಿಯಲ್ಲೂ ಸಮಯ ಮೀಸಲಿಡಬಹುದಾಗಿದೆ.

ಕಾನೂನು ಹೋರಾಟ ಮಾಡಲು ಬಿಡಿ, ಗೆಲ್ಲುತ್ತೇನೆ: ಶಿವಲಿಂಗೇಗೌಡ

ಪ್ರಜಾವಾಣಿ ವಾರ್ತೆ

ಹಾಸನ: 'ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿನಾಕಾರಣ ಸಿಲುಕಿಸಲಾಗಿದೆ. ಪ್ರಕರಣದ ಕುರಿತು ಸಂಪೂರ್ಣ ಓದಿದ್ದೇನೆ. ನನಗೆ ಕಾನೂನು ಹೋರಾಟ ಮಾಡಲು ಬಿಡಿ. ಗೆದ್ದು ಬರುತ್ತೇನೆ. ಇಲ್ಲವಾದರೆ, ನಿಮ್ಮ ಮನೆಯಲ್ಲಿ ಜೀತ ಮಾಡಲು ಸಿದ್ಧ' ಎಂದು ಗೃಹ ಮಂಡಳಿ ಅಧ್ಯಕ್ಷ, ಶಾಸಕ ಕೆ.ಎಂ. ಶಿವಲಿಂಗೇಗೌಡ ಸವಾಲು ಹಾಕಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಭೂಮಿ ಇಲ್ಲದೇ ನಿವೇಶನ ಹಂಚಿಕೆಯ ನಿರ್ಣಯ ಮಾಡಲು, ನೋಂದಣಿ ಮಾಡಲು ಹೇಗೆ ಸಾಧ್ಯ? ಇದೆಲ್ಲ ಗೊತ್ತಿದ್ದರೂ ವಿರೋಧಿಗಳ ವಕೀಲರು ಇಲ್ಲಸಲ್ಲದ ವಕಾಲತ್ತು ಮಾಡಿದ್ದಾರೆ. ಇದರಿಂದ ಸಿದ್ದರಾಮಯ್ಯ ಹೊರಬರಲಿದ್ದಾರೆ. ಹಗರಣವನ್ನು ಸರ್ಕಾರ ನ್ಯಾಯಾಂಗ ತನಿಖೆಗೆ ಒಪ್ಪಿಸಿದ್ದರೂ ವಿರೋಧ ಪಕ್ಷಗಳು ಹೋರಾಡಲು ಹೊರಟಿರುವುದು ಹಾಸ್ಯಾಸ್ಪದ' ಎಂದರು.

'ಅರ್ಜಿ ಕಾನೂನು ಬದ್ಧವಾಗಿರುವುದರಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪುತ್ರನ ಟ್ರಸ್ಟ್‌ಗೆ ನಿವೇಶನ ನೀಡಲಾಗಿದೆ. ಎಂ.ಬಿ. ಪಾಟೀಲ ಸಚಿವರಾಗಿದ್ದರೂ ಈ ವಿಷಯದಲ್ಲಿ ಅಧಿಕಾರಿಗಳೇ ತೀರ್ಮಾನಿಸುತ್ತಾರೆ' ಎಂದರು.

'ಕಾಂಗ್ರೆಸ್‌ನ ಹಿರಿಯ ಮುಖಂಡರಾದ ಆರ್.ವಿ. ದೇಶಪಾಂಡೆ ಹಲವು ಬಾರಿ ಸಚಿವರಾಗಿದ್ದವರು. ಹೀಗಾಗಿ ಮುಖ್ಯಮಂತ್ರಿಯಾಗುವ ಇಚ್ಛೆಯನ್ನು ಹೊರಹಾಕಿದ್ದಾರೆ. ಅದಕ್ಕೆ ಬೇರೆ ಅರ್ಥ ಕಲ್ಪಿಸುವುದು ಬೇಡ' ಎಂದರು.

ಮುಡಾ ಹಿಂದಿನ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅಮಾನತು

ತಪ್ಪೊಪ್ಪಿಕೊಂಡ ಸರ್ಕಾರ: ಆರ್.ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಮುಡಾ) 50:50 ಅನುಪಾತದಲ್ಲಿ ನಿಯಮ ಬಾಹಿರವಾಗಿ ನಿವೇಶನ ವಿತರಿಸಿರುವ ಅಂಶವನ್ನು ಪ್ರಮುಖವಾಗಿ ಪರಿಗಣಿಸಿ ಹಿಂದಿನ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರನ್ನು ಅಮಾನತು ಮಾಡುವ ಮೂಲಕ ಸರ್ಕಾರ ತನ್ನ ತಪ್ಪನ್ನು ಒಪ್ಪಿಕೊಂಡಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಗೆ, ಪೂರ್ವಾನ್ವಯ ವಾಗುವಂತೆ 50:50 ಅನುಪಾತದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿರುವುದೂ ತಪ್ಪು ಎನ್ನುವುದು ಸರ್ಕಾರಕ್ಕೆ ಮನವರಿಕೆ ಆಗಿದೆ ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ನಮ್ಮ ಸರ್ಕಾರ ಇದ್ದಾಗ ತಾಂತ್ರಿಕ ಸಮಿತಿ ನೇಮಿಸಲಾಗಿತ್ತು. ಆ ಸಮಿತಿ ಮುಡಾ ಅಕ್ರಮದ ಬಗ್ಗೆ ವರದಿ ನೀಡಿ 10 ತಿಂಗಳು ಕಳೆದಿದೆ. ಆದರೆ, ಈ ಸರ್ಕಾರ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ತನಿಖೆ ನಡೆಯುತ್ತಿರುವಾಗಲೇ ತಪ್ಪಿತಸ್ಥ ಅಧಿಕಾರಿ ದಿನೇಶ್‌ಕುಮಾರ್ ಅವರನ್ನು ಹಾವೇರಿ ವಿಶ್ವವಿದ್ಯಾಲಯದ ಕುಲಸಚಿವರನ್ನಾಗಿ ನೇಮಕ ಮಾಡಲಾಗಿತ್ತು. ಈಗ ದಿಢೀರನೇ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಲಾಗಿದೆ. ಮುಡಾ ಹಗರಣ ಬಯಲಿಗೆ ಬಂದ ನಂತರ ಸಿದ್ದರಾಮಯ್ಯ ಗಲಿಬಿಲಿಗೊಂಡಿದ್ದಾರೆ, ಮಂಕಾಗಿದ್ದಾರೆ ಮತ್ತು ಮಾನಸಿವಾಗಿ ಕುಗ್ಗಿ ಹೋಗಿದ್ದಾರೆ. ರಾಜೀನಾಮೆ ಕೊಟ್ಟು ತಮ್ಮ ಗೌರವವನ್ನು ಕಾಪಾಡುವುದರ ಜತೆಗೆ ರಾಜ್ಯದ ಗೌರವವನ್ನೂ ಉಳಿಸಬೇಕು' ಎಂದು ಹೇಳಿದರು.

'ಬೆಂಗಳೂರಿನಲ್ಲಿ ಕಮಿಷನ್ ಆಸೆಗಾಗಿ ಗುತ್ತಿಗೆದಾರರಿಗೆ ಪಾವತಿಸಬೇಕಾಗಿರುವ ₹1,500 ಕೋಟಿಯನ್ನು ತಡೆ ಹಿಡಿದಿದ್ದು, ಇದರಿಂದ ಗುತ್ತಿಗೆದಾರರು ಪ್ರತಿಭಟನೆ ಮಾಡುತ್ತಿದ್ದಾರೆ. ಬೆಂಗಳೂರಿನ ಎಲ್ಲ ಕಡೆಗಳಲ್ಲಿ ಕಸದ ರಾಶಿ ಬಿದ್ದಿದೆ. ರಸ್ತೆಗಳು ಗುಂಡಿ ಬಿದ್ದಿದ್ದು, ವಾಹನ ಸವಾರರು ಪರದಾಡುತ್ತಿದ್ದಾರೆ. ಇದು ಕಾಸಿಲ್ಲದ ಬ್ರ್ಯಾಂಡ್ ಬೆಂಗಳೂರು' ಎಂದು ಅಶೋಕ ಅವರು ಲೇವಡಿ ಮಾಡಿದರು.

ಎಸ್‌ಸಿ ಮೋರ್ಚಾದಿಂದ ರಾಜ್ಯವ್ಯಾಪಿ ಹೋರಾಟ



ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ವಿರುದ್ಧ ಕಾಂಗ್ರೆಸ್ ಮುಖಂಡರು ಮತ್ತು ಶಾಸಕರು ಕೆಟ್ಟ ಶಬ್ದಗಳಿಂದ ಮಾತನಾಡುತ್ತಿದ್ದಾರೆ ಎಂದು ಆರೋಪಿಸಿರುವ ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾದ್ಯಂತ ಹೋರಾಟ ನಡೆಸಲು ನಿರ್ಧರಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮೋರ್ಚಾ ಅಧ್ಯಕ್ಷ ಮತ್ತು ಶಾಸಕ ಸಿಮೆಂಟ್ ಮಂಜುನಾಥ್, ಛಲವಾದಿ ಅವರು ವಿರೋಧ ಪಕ್ಷದ ನಾಯಕನಾಗಿ ಕಾಂಗ್ರೆಸ್ ಪಕ್ಷದ ಮುಖಂಡರ ಅಕ್ರಮಗಳ ವಿರುದ್ಧ ಮಾತನಾಡಿ ತನಿಖೆಗೆ ಒತ್ತಾಯಿಸಿದ್ದಾರೆ. ಇದರಲ್ಲಿ ತಪ್ಪೇನಿದೆ? ಮಲ್ಲಿಕಾರ್ಜುನ ಖರ್ಗೆ ಅವರ ಬಗ್ಗೆ ಅಪಾರ ಗೌರವವಿದೆ. ಆದರೆ, ಅವರನ್ನು ಪ್ರಶ್ನಿಸಬಾರದು ಎಂದೇನಿಲ್ಲ ಎಂದರು. 'ಛಲವಾದಿ ನಾರಾಯಣಸ್ವಾಮಿ ಅವರು ಬಿಜೆಪಿಯ ದಲಿತ ನಾಯಕರು. ಕಾಂಗ್ರೆಸ್ ನಾಯಕರು ಅವರ ಬಗ್ಗೆ ಮಾತನಾಡುವಾಗ ಯೋಚಿಸಿ ಮಾತನಾಡಬೇಕು' ಎಂದು ಎಚ್ಚರಿಸಿದರು.

ಅನುರಾಧಾ ದೇಸಾಯಿಗೆ 'ಆದರ್ಶ ಜೈನ ಮಹಿಳಾ ರತ್ನ ಪ್ರಶಸ್ತಿ'

ಬೆಂಗಳೂರು: ಪಂಡಿತರತ್ನ ಎ.ಶಾಂತಿರಾಜ ಶಾಸ್ತ್ರಿ ಟ್ರಸ್ಟ್ ನೀಡುವ 'ಆದರ್ಶ ಜೈನ ಮಹಿಳಾರತ್ನ ಪ್ರಶಸ್ತಿ'ಗೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಹಿರಿಯ ವಿಜ್ಞಾನಿ ಅನುರಾಧಾ ಬಿ. ದೇಸಾಯಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಅನುರಾಧ 'ಚಂದ್ರಯಾನ-3' ಯೋಜನೆಯ ಯಶಸ್ಸಿನಲ್ಲಿ ಪ್ರಮುಖ ಪಾತ್ರವಹಿಸಿದ್ದರು.ಕೆ.ಆರ್. ರಸ್ತೆಯಲ್ಲಿರುವ ಜೈನ ಭವನದಲ್ಲಿ ಅಕ್ಟೋಬರ್ 27ರಂದು ಮಧ್ಯಾಹ್ನ 2 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಇದೇ ವೇಳೆ ಪ್ರತಿಭಾ ಪುರಸ್ಕಾರವನ್ನೂ ಪ್ರದಾನ ಮಾಡಲಾಗುತ್ತದೆ ಎಂದು ಟ್ರಸ್ಟ್ ಅಧ್ಯಕ್ಷ ಎಸ್. ಜಿತೇಂದ್ರಕುಮಾರ್ ತಿಳಿಸಿದ್ದಾರೆ.

ಕರ್ನಾಟಕ ಸರಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ
(ಜಿಲ್ಲಾ ನಗರಾಭಿವೃದ್ಧಿ ಕೋಶ ಹಾವೇರಿ ಜಿಲ್ಲೆ, ಹಾವೇರಿ)
☎ : 08375-249097 e-mail :eedudchaver@gmail.com
ನಂ: ಜಿ.ನ.ಕೋ./ಸ್ವ.ಭಾ.ಮಿ–2/ಟೆ.ಪ್ರ/02/2024–25 ದಿನಾಂಕ : 31–08–2024

ಟೆಂಡರ ಪ್ರಕಟಣೆ

ಈ ಮೂಲಕ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ಹಾವೇರಿ ನಗರಸಭೆ, ರಾಣೇಬೆನ್ನೂರು ನಗರಸಭೆ, ಪುರಸಭೆ ಹಾನಗಲ್ಲ ಸವಣೂರು, ಬಂಕಾಪುರ, ಶಿಗ್ಗಾಂವ, ಬ್ಯಾಡಗಿ ಹಾಗೂ ಪಟ್ಟಣ ಪಂಚಾಯತಿ ಹಿರೇಕೆರೂರು, ಗುತ್ತಲ, ರಟ್ಟಿಹಳ್ಳಿ ನಗರ ಸ್ಥಳೀಯ ಸಂಸ್ಥೆಗಳಿಗೆ ಈ ಕೆಳಕಂಡ ಇಂಡೆಂಟ್ ಸಂಖ್ಯೆ ಟೆಂಡರನ್ನು ಆಹ್ವಾನಿಸಿದ್ದು, ಇಚ್ಛೆಯುಳ್ಳ ಅರ್ಹ ಗುತ್ತಿಗೆದಾರರು ಇ-ಪ್ರಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಟೆಂಡರನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಇ-ಪ್ರಕ್ಯೂರಮೆಂಟ್ ವೆಬ್‌ಸೈಟ್ https://kppp.karnataka.gov.in ರಲ್ಲಿ ಪ್ರಕಟಿಸಲಾಗಿದ್ದು, ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕಾರ್ಯಾಲಯದಲ್ಲಿ ಪಡೆಯಬಹುದಾಗಿದೆ.

ಕ್ರ.ಸಂ.	ಇಂಡೆಂಟ್ ಸಂಖ್ಯೆ	ಟೆಂಡರಗಿಟ್ಟ ಮೊತ್ತ (ಲಕ್ಷಗಳಲ್ಲಿ)
1	DMA/2024-25/IND3311	12,29,382.00
2	DMA/2024-25/IND3310	48,84,783.00
3	DMA/2024-25/IND3309	33,71,453.00
4	DMA/2024-25/IND3308	94,29,061.00
5	DMA/2024-25/IND3307	98,78,050.00

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಹಾವೇರಿ
DIPR/HVR//259/2024-2025

ಪರಿಷೆ ಚಿತ್ರದುರ್ಗ ಜಿಲ್ಲೆಯ ಗೌರಸಮುದ್ರದ ಪ್ರಸಿದ್ಧ ಮಾರಮ್ಮದೇವಿಯ ದೊಡ್ಡ ಪರಿಷೆಯು ತುಂಬಲು ಎಂಬಲ್ಲಿ ಮಂಗಳವಾರ ನಡೆಯಿತು. ಭಕ್ತರು ವಾಡಿಕೆಯಂತೆ ಕಂಬ ಹತ್ತಿ ದೀಪ ಹಚ್ಚಿದರು – ಪ್ರಜಾವಾಣಿ ಚಿತ್ರ/ ಕೊಂಡ್ಲಹಳ್ಳಿ ಜಯಪ್ರಕಾಶ

'ರಾಜ್ಯಪಾಲರಿಗೆ ಕಪ್ಪು ಬಾವುಟ ಪ್ರದರ್ಶನ'

ಬೆಂಗಳೂರು: 'ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡಿರುವ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ನೀಡಿರುವ ರಾಜ್ಯಪಾಲರು ಹೋಗುವ ಕಾರ್ಯಕ್ರಮಗಳಲ್ಲೆಲ್ಲಾ ಕಪ್ಪು ಬಾವುಟ ಪ್ರದರ್ಶಿಸುತ್ತೇವೆ' ಎಂದು ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಸಂಚಾಲಕ ಮಾವಳ್ಳಿ ಶಂಕರ್ ಹೇಳಿದ್ದಾರೆ.

ರಾಜ್ಯಪಾಲರ ವಿರುದ್ಧದ ಹೋರಾಟದಲ್ಲಿ ಶೋಷಿತ ಸಮುದಾಯಗಳ ಎಲ್ಲರೂ ಭಾಗಿಯಾಗಬೇಕು ಎಂದು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಮಾಧ್ಯಮಗೋಷ್ಠಿಯಲ್ಲಿ ಒಕ್ಕೂಟವು ಕರೆ ನೀಡಿದೆ.

'ಅಮಾನತು ಆದೇಶವೇ ಹಗರಣದ ದಾಖಲೆ'

ಪ್ರಜಾವಾಣಿ ವಾರ್ತೆ

ಟಿ.ಎಸ್.ಶ್ರೀವತ್ಸ

ಮೈಸೂರು: 'ಮುಡಾದ ಹಿಂದಿನ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಅವರನ್ನು ಸೇವೆಯಿಂದ ಅಮಾನತುಪಡಿಸಿ ಆದೇಶಹೊರಡಿಸುವ ಮೂಲಕ ರಾಜ್ಯ ಸರ್ಕಾರವೇ ಹಗರಣದ ಬಗ್ಗೆ ಹೈಕೋರ್ಟ್‌ಗೆಮಹತ್ವದ ದಾಖಲೆ ಒದಗಿಸಿದೆ' ಎಂದು ಶಾಸಕ ಟಿ.ಎಸ್.ಶ್ರೀವತ್ಸ ಪ್ರತಿಪಾದಿಸಿದರು.

ಇಲ್ಲಿ ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, 'ನಾವು ಆರಂಭದಿಂದ ಮಾಡಿರುವ ಆರೋಪಗಳನ್ನೇ ಪುಷ್ಟೀಕರಿಸಿ ಸರ್ಕಾರ ಅಮಾನತು ಮಾಡಿದೆ. ಆದರೆ ಡಿ.ಬಿ. ನಟೇಶ್ ಅವರನ್ನು ಇನ್ನೂ ಮುಟ್ಟಿಲ್ಲ. ಇಬ್ಬರ ವಿರುದ್ಧವೂ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಬಂಧಿಸಬೇಕು. ಸಿದ್ದರಾಮಯ್ಯ ಯಾವುದೇ ಸಭೆಗೆ ಬರುತ್ತಾರೆಂದರೆ ಅಧಿಕಾರಿಗಳು ಹೆದರುತ್ತಿದ್ದರು. ಆದರೆ ಈ ಇಬ್ಬರು ಅಧಿಕಾರಿಗಳು ಅವರನ್ನೇ ಹತೋಟಿಯಲ್ಲಿಟ್ಟಿರುವುದು ವಿಷಾದನೀಯ' ಎಂದರು.

'ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು ಇಲಾಖೆಯ ನಿರ್ವಹಣೆಯಲ್ಲಿ ವಿಫಲರಾಗಿರುವುದರಿಂದ ಮುಖ್ಯಮಂತ್ರಿಗೆ ಈ ಸ್ಥಿತಿ ಬಂದಿದೆ' ಎಂದರು.

'ಸಿ.ಎಂ ಬದಲಾವಣೆ ವಿಷಯ ಅಪ್ರಸ್ತುತ'

ಧಾರವಾಡ/ಗದಗ/ಶಿರಸಿ: 'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾರೆ. ಬೇರೆಯವರು ಮುಖ್ಯಮಂತ್ರಿಯಾಗುವ ವಿಷಯ ಈಗ ಅಪ್ರಸ್ತುತ. ಎಂಟು ಬಾರಿ ಶಾಸಕರಾಗಿರುವ ಆರ್.ವಿ.ದೇಶಪಾಂಡೆ ಅವರು ಹಿರಿಯರಾಗಿದ್ದು, ಸಿದ್ದರಾಮಯ್ಯ ಅವರು ಒಪ್ಪಿದರೆ ಮುಖ್ಯಮಂತ್ರಿ ಆಗಬಹುದೆಂದು ಸಹಜವಾಗಿ ಹೇಳಿದ್ದಾರೆ' ಎಂದು ಸಚಿವ ಎನ್.ಎಸ್.ಭೋಸರಾಜು ತಿಳಿಸಿದರು.

'ಹೈಕಮಾಂಡ್, ಶಾಸಕರು, ಸಂಸದರು ಎಲ್ಲರೂ ಸಿದ್ದರಾಮಯ್ಯ ಬೆಂಬಲವಾಗಿ ನಿಂತಿದ್ದಾರೆ. ಸಿದ್ದರಾಮಯ್ಯ ವಿರುದ್ಧ ಪ್ರಕರಣವೂ ಇಲ್ಲ. ಕೋರ್ಟ್‌ನಲ್ಲಿ ಏನೂ ಆಗುವುದಿಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಗದಗನಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಸಂಸದ ಬಸವರಾಜ ಬೊಮ್ಮಾಯಿ, 'ಆರ್.ವಿ.ದೇಶಪಾಂಡೆ ಅವರ ಹೇಳಿಕೆ ಬಗ್ಗೆ ವ್ಯಾಖ್ಯಾನಿಸಲ್ಲ. ಅವರ ಹೇಳಿಕೆ ನಂತರ ಕಾಂಗ್ರೆಸ್‌ನಲ್ಲಿ ಹಲವು ಪ್ರತಿಕ್ರಿಯೆಗಳು ಬಂದಿವೆ. ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿ ಇಲ್ಲ ಎನ್ನುವುದಕ್ಕೆ ಕೈ ನಾಯಕರ ಪ್ರತಿಕ್ರಿಯೆಯೇ ಸಾಕ್ಷಿ' ಎಂದರು.

ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಶಾಸಕ ಆರಗ ಜ್ಞಾನೇಂದ್ರ, 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಉರುಳಿ ಬೀಳುವ ಹಂತ ತಲುಪಿದೆ. ಆದರೂ ಅಲ್ಲಿ ಹಲವರು ಮುಖ್ಯಮಂತ್ರಿ ಗಾದಿಯತ್ತ ಚಿತ್ತ ನೆಟ್ಟಿರುವುದು ಹಾಸ್ಯಾಸ್ಪದ ಸಂಗತಿ' ಎಂದರು.

ನಗರದಲ್ಲಿ ಮಂಗಳವಾರ ಪತ್ರಕರ್ತರ ಜತೆ ಮಾತನಾಡಿದ ಅವರು, 'ಮುಖ್ಯಮಂತ್ರಿ ರೇಸ್‌ನಲ್ಲಿ ಆರ್.ವಿ. ದೇಶಪಾಂಡೆ ಒಬ್ಬರೇ ಅಲ್ಲ, ಬಹಳ ಜನರಿದ್ದಾರೆ. ಆದರೆ ಈ ಸರ್ಕಾರವೇ ಉಳಿಯುವುದಿಲ್ಲ. ಹಸಿದ ಹುಲಿಯಂತೆ ಕಾಂಗ್ರೆಸ್ ಸಚಿವರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ದಿನಕ್ಕೊಂದು ಹಗರಣ ಸುತ್ತಿಕೊಳ್ಳುತ್ತ ಸರ್ಕಾರದ ಬುಡ ಅಲ್ಲಾಡುತ್ತಿದೆ' ಎಂದರು.

ಮುಡಾ ಹಗರಣ

ರಕ್ಷಣೆಗೆ ಆರ್‌ಟಿಐ ಕಾರ್ಯಕರ್ತ ಮನವಿ

ಮೈಸೂರು: 'ಮುಡಾ ಹಗರಣಕ್ಕೆ ಸಂಬಂಧಿಸಿ ನಿರಂತರವಾಗಿ ದಾಖಲೆ ಬಿಡುಗಡೆ ಮಾಡುತ್ತಿದ್ದು, ಅದನ್ನು ಸಹಿಸದೇ ಭ್ರಷ್ಟರ ಗುಂಪು ನನ್ನ ವಿರುದ್ಧ ಸಂಚು ರೂಪಿಸಿದೆ. ಗುಂಪೊಂದು ಹಲ್ಲೆಗೆ ಪ್ರಯತ್ನಿಸಿ ಜೀವ ಬೆದರಿಕೆ ಹಾಕಿದ್ದು, ರಕ್ಷಣೆ ನೀಡಬೇಕು' ಎಂದು ಕೋರಿ ಮಾಹಿತಿ ಹಕ್ಕು ಕಾರ್ಯಕರ್ತ ಎನ್. ಗಂಗರಾಜು ಇಲ್ಲಿನ ನಗರ ಪೊಲೀಸ್ ಆಯುಕ್ತರಿಗೆ ಮಂಗಳವಾರ ದೂರು ಸಲ್ಲಿಸಿದ್ದಾರೆ.

'ಸೆ. 1ರಂದು ಕಾರಿನಲ್ಲಿ ಕುಟುಂಬ ಸಮೇತ ತುರುವೇಕೆರೆಗೆ ಹೋಗಿ ವಾಪಸಾಗುತ್ತಿದ್ದಾಗ ಪಾಂಡವಪುರ–ಶ್ರೀರಂಗಪಟ್ಟಣ ಮಧ್ಯೆ ಬೈಕ್‌ನಲ್ಲಿ ಹಿಂಬಾಲಿಸಿದ ದುಷ್ಕರ್ಮಿಗಳು ಕಾರು ಅಡ್ಡಗಟ್ಟಿ ಹಲ್ಲೆಗೆ ಯತ್ನಿಸಿದರು. ಟ್ರಾಫಿಕ್ ಹೆಚ್ಚಾಗಿದ್ದರಿಂದ ಪರಾರಿಯಾದರು. ಹಲ್ಲೆಗೆ ಯತ್ನಿಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

> **ನಾನು ಯಾವ ರೇಸ್‌ನಲ್ಲೂ (ಮುಖ್ಯಮಂತ್ರಿ ಹುದ್ದೆ) ಇಲ್ಲ. ನಾನು ರೇಸ್‌ನಲ್ಲಿ ಓಡುವ ಕುದುರೆಯೂ ಅಲ್ಲ, ಕತ್ತೆನೂ ಅಲ್ಲ**
> **ಬಿ.ಕೆ.ಹರಿಪ್ರಸಾದ್,** ವಿಧಾನ ಪರಿಷತ್ ಸದಸ್ಯ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕಾಮಗಾರಿ ವಿಭಾಗ: ಬೆಂಗಳೂರು
ಸಂ: ಕರಾನಿ/ಕಾನಿಅ/ಬೆಂ/ಕಿಅ/232/2024–25 ದಿನಾಂಕ: 03–09–2024
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 06,07,08,09 & 10/2024–25

ಕೆಪಿಪಿ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ದ್ವಿ ಲಕೋಟೆ ಆಧಾರದ ಮೇಲೆ ಈ ಕೆಳಕಂಡ ಕಾಮಗಾರಿ ಕೆಲಸಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರುಗಳು ಇ–ಆಡಳಿತ ರವರೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಸದರಿ ಟೆಂಡರ್‌ಗಳಲ್ಲಿ ಯಾವುದೇ ತಿದ್ದುಪಡಿ/ದಿನಾಂಕಗಳಲ್ಲಿನ ಬದಲಾವಣೆಗಳಿದ್ದಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಈ ಕುರಿತು ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಕ್ರ. ಸಂ.	ಟೆಂಡರ್ ಪ್ರಕಟಣೆಯ ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ	ಮುಂಗಡ ಠೇವಣಿ ರೂ.ಗಳಲ್ಲಿ
1.	06/ 2024–25	ಕ.ರಾ.ರ.ಸಾ.ನಿಗಮದ ಕೋಲಾರ ಬಸ್ ಘಟಕದಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ಕಾಮಗಾರಿ.	19.50	50,000/–
2.	07/ 2024–25	ಕ.ರಾ.ರ.ಸಾ.ನಿಗಮದ ಕೆಜಿಎಫ್ ಬಸ್ ಘಟಕದಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ಕಾಮಗಾರಿ.	19.50	50,000/–
3.	08/ 2024–25	ಕ.ರಾ.ರ.ಸಾ.ನಿಗಮದ ಮುಳಬಾಗಿಲು ಬಸ್ ಘಟಕದಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ಕಾಮಗಾರಿ. (ಪರಿಶಿಷ್ಟ ಜಾತಿಯವರಿಗೆ ಮಾತ್ರ)	19.50	25,000/–
4.	09/ 2024–25	ಕ.ರಾ.ರ.ಸಾ.ನಿಗಮದ ಶ್ರೀನಿವಾಸಪುರ ಬಸ್ ಘಟಕದಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ಕಾಮಗಾರಿ. (ಪರಿಶಿಷ್ಟ ಪಂಗಡದವರಿಗೆ ಮಾತ್ರ)	19.50	25,000/–
5.	10/ 2024–25	ಕ.ರಾ.ರ.ಸಾ.ನಿಗಮದ ಮಾಲೂರು ಬಸ್ ಘಟಕದಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ಕಾಮಗಾರಿ.	19.50	50,000/–

ಕಾಲಾವಧಿ ತಿಂಗಳಲ್ಲಿ (ಮಳೆಗಾಲ ಸೇರಿ) : 02

ಹೆಚ್ಚಿನ ವಿವರಗಳನ್ನು https://www.kppp.karnataka.gov.in ವೆಬ್‌ಸೈಟ್‌ಗೆ ಲಾಗ್‌ಆನ್ ಮಾಡಿ ನೋಡಿಕೊಳ್ಳುವುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕ.ರಾ.ರ.ಸಾ.ನಿಗಮ, ಕಾಮಗಾರಿ ವಿಭಾಗ, ಬೆಂಗಳೂರು
ವಾಸಾಸಂಇ/ವಾ.ಪ್ರ/1828/ಎಂಎಎ/2024–25

ಸಚಿವ ಜಿ. ಪರಮೇಶ್ವರ ನೇತೃತ್ವದ ಆಯ್ಕೆ ಸಮಿತಿ ಸಭೆಯಲ್ಲಿ ತೀರ್ಮಾನ

ನಿಗಮ– ಮಂಡಳಿ: 'ಕೈ' ಕಾರ್ಯಕರ್ತರಿಗೆ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ನಿಗಮ–ಮಂಡಳಿಗಳ ನಿರ್ದೇಶಕ, ಸದಸ್ಯ ಸ್ಥಾನಗಳಿಗೆ ಒಂದು ಸಾವಿರಕ್ಕೂ ಕಾಂಗ್ರೆಸ್ ಕಾರ್ಯಕರ್ತರನ್ನು ಶೀಘ್ರದಲ್ಲಿ ನೇಮಕ ಮಾಡಿಕೊಳ್ಳಲು ಗೃಹ ಸಚಿವ ಜಿ. ಪರಮೇಶ್ವರ ನೇತೃತ್ವದ ಆಯ್ಕೆ ಸಮಿತಿ ನಿರ್ಧರಿಸಿದೆ.

'ರಾಜ್ಯದಲ್ಲಿರುವ 80ಕ್ಕೂ ಹೆಚ್ಚು ನಿಗಮ ಮಂಡಳಿಗಳಲ್ಲಿ 1,140 ಕಾರ್ಯಕರ್ತರಿಗೆ ಅವಕಾಶ ಮಾಡಿಕೊಡಲು ಉದ್ದೇಶಿಸಲಾಗಿದೆ. ಇದೇ 13ರ ಒಳಗೆ ಸಂಭವನೀಯರ ಪಟ್ಟಿ ಸಿದ್ಧಪಡಿಸಿ, ನೇಮಕ ಪ್ರಕ್ರಿಯೆ ನಡೆಸಲಾಗುವುದು' ಎಂದು ಸಮಿತಿಯ ಸದಸ್ಯರೂ ಆಗಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್ ತಿಳಿಸಿದರು.

ವಿವಿಧ ವಿಶ್ವವಿದ್ಯಾಲಯಗಳ ಸಿಂಡಿಕೇಟ್‌ಗಳಿಗೆ ಸದಸ್ಯರ ನೇಮಕವೂ ಸೇರಿದಂತೆ ಇತ್ತೀಚೆಗೆ ನಡೆದ ಕೆಲವು ನೇಮಕಾತಿಗಳಿಗೆ ಕಾಂಗ್ರೆಸ್ ಪಕ್ಷದ ವಲಯದಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ನಿಗಮ–ಮಂಡಳಿಗಳಿಗೆ ನಿರ್ದೇಶಕರು, ಸದಸ್ಯರ ಆಯ್ಕೆಗೆ ರಚಿಸಿದ ಸಮಿತಿಯ ಸಭೆ ವಿಧಾನ ಸೌಧದಲ್ಲಿ ಮಂಗಳವಾರ ನಡೆಯಿತು.

ಸಚಿವರಾದ ಸತೀಶ ಜಾರಕಿಹೊಳಿ, ಸಂತೋಷ್ ಲಾಡ್, ಜಿ.ಸಿ. ಚಂದ್ರಶೇಖರ್, ಶಾಸಕರಾದ ರಿಜ್ವಾನ್ ಹರ್ಷದ್, ರೂಪಕಲಾ ಶಶಿಧರ್, ಮುಖಂಡರಾದ ವಿ.ಆರ್. ಸುದರ್ಶನ್, ಎಂ.ಹರೀಶ್ ಕುಮಾರ್ ಸಭೆಯಲ್ಲಿದ್ದರು. ಆಯ್ಕೆ ಪ್ರಕ್ರಿಯೆಗೆ ನಿರ್ದಿಷ್ಟ ಮಾನದಂಡಗಳನ್ನು ರೂಪಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು.

ಪಕ್ಷ ಸಂಘಟನೆಗೆ ಶ್ರಮಿಸಿದ ಕಾರ್ಯಕರ್ತರನ್ನು ಯಾವುದೇ ಕಾರಣಕ್ಕೂ ಕಡೆಗಣಿಸಬಾರದು. ಈ ನಿಟ್ಟನಲ್ಲಿ ಜಿಲ್ಲಾ ಘಟಕಗಳ ಅಧ್ಯಕ್ಷರಿಂದಲೂ ಹೆಸರುಗಳನ್ನು ಪಡೆಯಬೇಕು. ಯುವ ಕಾಂಗ್ರೆಸ್, ಸಾಮಾಜಿಕ ಜಾಲತಾಣ, ಎನ್‌ಎಸ್‌ಯುಐ ಸೇರಿದಂತೆ ವಿವಿಧ ಮುಂಚೂಣಿ ಘಟಕಗಳಲ್ಲಿ ಕಾರ್ಯನಿರ್ವಹಿಸಿದ ಅರ್ಹರನ್ನು ಗುರುತಿಸಬೇಕು. ರಾಜಕೀಯವಾಗಿ ಈವರೆಗೂ ಗುರುತಿಸಿಕೊಳ್ಳದ ತಳ ಸಮುದಾಯದವರಿಗೂ ನಿಗಮ–ಮಂಡಳಿಗಳಲ್ಲಿ ಅವಕಾಶ ನೀಡಬೇಕು ಎಂದು ಪರಮೇಶ್ವರ ಸೂಚಿಸಿದರು.

ಪಕ್ಷದ ಜಿಲ್ಲಾ ಘಟಕಗಳ ಅಧ್ಯಕ್ಷರು, ಪಕ್ಷದ ಶಾಸಕರು, ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಪಕ್ಷದ ಅಭ್ಯರ್ಥಿಗಳು, ಸಂಸದರು ಮಾಜಿ ಸಂಸದರು, ಪ್ರಮುಖರು ಸೇರಿ ಹೆಸರುಗಳನ್ನು ಶಿಫಾರಸು ಮಾಡಲು ಸೂಚಿಸಲಾಗಿದೆ. ಅಲ್ಲದೆ, ಆಯ್ಕೆ ಸಮಿತಿಯಲ್ಲಿರುವ ಸದಸ್ಯರಿಗೆ ಮೂರು ಜಿಲ್ಲೆಗಳ ಉಸ್ತುವಾರಿ ನೀಡಲಾಗಿದೆ.

> **ಪಕ್ಷ ಸಂಘಟನೆಯಲ್ಲಿ 5 ವರ್ಷಗಳಿಂದ ಗುರುತಿಸಿಕೊಂಡವರಿಗೆ ನಿಗಮ–ಮಂಡಳಿಗಳಲ್ಲಿನ ನಿರ್ದೇಶಕ– ಸದಸ್ಯ ಸ್ಥಾನಗಳಲ್ಲಿ ಅವಕಾಶ ನೀಡಲು ನಿರ್ಧರಿಸಿದ್ದೇವೆ**
> **ಜಿ.ಸಿ. ಚಂದ್ರಶೇಖರ್**
> ಕೆಪಿಸಿಸಿ ಕಾರ್ಯಾಧ್ಯಕ್ಷ

ಯಾರಿಗೆ ಎಷ್ಟು ಸ್ಥಾನ?

- ಪಕ್ಷದ ಮುಂಚೂಣಿ ಘಟಕಗಳಲ್ಲಿ ಇರುವವರಿಗೆ 10 ಸ್ಥಾನ
- ಎಲ್ಲ 224 ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ ಒಬ್ಬರಂತೆ ಮಹಿಳೆಯರಿಗೆ ಅವಕಾಶ
- ಈವರೆಗೂ ಅವಕಾಶ ಸಿಗದ ಸಣ್ಣ ಸಣ್ಣ ಸಮುದಾಯಗಳಿಗೆ 275 ಸ್ಥಾನ

'ಕೆಪಿಸಿಸಿ ಟಿ.ವಿ' ಶೀಘ್ರ

'ರಾಜ್ಯ ಕಾಂಗ್ರೆಸ್ ಘಟಕದ ಚಟುವಟಿಕೆಯನ್ನು ಜನರ ಬಳಿಗೆ ತಲುಪಿಸಲು 'ಕೆಪಿಸಿಸಿ ಟಿ.ವಿ' ಹೆಸರಿನಲ್ಲಿ ಯುಟ್ಯೂಬ್ ಚಾನೆಲ್ ಆರಂಭಿಸಲು ನಿರ್ಧರಿಸಲಾಗಿದೆ. ಈ ಡಿಜಿಟಲ್ ಚಾನೆಲ್ ಮೂಲಕ ಪಕ್ಷದ ತತ್ವ, ಸಿದ್ಧಾಂತ, ರಾಜ್ಯ ಸರ್ಕಾರದ ಯೋಜನೆಗಳು, ಕೆಪಿಸಿಸಿ ಕಚೇರಿಯಲ್ಲಿ ನಡೆಯುವ ಕಾರ್ಯಕ್ರಮಗಳು, ಕೆಪಿಸಿಸಿ ಅಧ್ಯಕ್ಷರು, ಸಚಿವರು, ಮುಖಂಡರ ಹೇಳಿಕೆಗಳನ್ನು ಪ್ರಸಾರ ಮಾಡಲು ಉದ್ದೇಶಿಸಲಾಗಿದೆ. ಅಲ್ಲದೆ, ಸಂವಾದ, ಚರ್ಚೆಗಳಿಗೂ ಈ ಮಾಧ್ಯಮವನ್ನು ವೇದಿಕೆಯಾಗಿ ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಜಿ.ಸಿ. ಚಂದ್ರಶೇಖರ್ ತಿಳಿಸಿದರು.

‘ಎಲ್ಲ ಸಚಿವರೂ ಕಳ್ಳರು’

ರಾಜಸ್ಥಾನ: ಬಿಜೆಪಿ ಶಾಸಕ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಜೈಪುರ: ರಾಜಸ್ಥಾನದ ಬಿಜೆಪಿ ಶಾಸಕರೊಬ್ಬರು ತಮ್ಮದೇ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು, ಎಲ್ಲ ಸಚಿವರನ್ನು ‘ಕಳ್ಳರು’ ಎಂದು ಕರೆದಿದ್ದಾರೆ. ಇದರಿಂದ ಭಜನ್‌ಲಾಲ್ ಶರ್ಮಾ ನೇತೃತ್ವದ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಲು ವಿರೋಧ ಪಕ್ಷ ಕಾಂಗ್ರೆಸ್‌ಗೆ ಒಳ್ಳೆಯ ‘ಅಸ್ತ್ರ’ ಸಿಕ್ಕಂತಾಗಿದೆ.

ಲಾಲ್‌ಸೋಟ್ ಕ್ಷೇತ್ರದ ಶಾಸಕ ರಾಮ್ ವಿಲಾಸ್ ಮೀನಾ ಅವರು ನಗರಾಭಿವೃದ್ಧಿ ಸಚಿವ ಝಾಬರ್ ಸಿಂಗ್ ಖರ್ರಾ ವಿರುದ್ಧ ಸೋಮವಾರ ಹರಿಹಾಯ್ದಿದ್ದಾರೆ. ತಮ್ಮ ಕ್ಷೇತ್ರದಲ್ಲಿ ಖಾಲಿಯಿರುವ ಕಿರಿಯ ಎಂಜಿನಿಯರ್ ಮತ್ತು ಸಹಾಯಕ ಎಂಜಿನಿಯರ್ ಹುದ್ದೆಗಳನ್ನು ಭರ್ತಿ ಮಾಡುವ ವಿಚಾರದಲ್ಲಿ ಸಚಿವರ ಜತೆ ಮಾತಿನ ಚಕಮಕಿ ನಡೆಸಿದ್ದಾರೆ.

ಬಳಿಕ ಮಾಧ್ಯಮದವರ ಜತೆ ಮಾತನಾಡಿದ ಮೀನಾ, ಖಾಲಿ ಹುದ್ದೆಗಳ ಭರ್ತಿಗಾಗಿ ಸಚಿವರ ಕಚೇರಿಗೆ ಹಲವು ಬಾರಿ ಹೋದರೂ ಅವರು

ರಾಮ್‌ವಿಲಾಸ್

ಆಸಕ್ತಿ ತೋರುತ್ತಿಲ್ಲ ಎಂದು ದೂರಿದರು. ‘ಇಂತಹ ಮಂದಿ ನಮ್ಮ ಸರ್ಕಾರದಲ್ಲಿ ಮಂತ್ರಿಗಳಾಗಿ ಕುಳಿತಿದ್ದಾರೆ. ಅವರೆಲ್ಲರೂ ನಿದ್ದೆ ಮಾಡುತ್ತಿದ್ದಾರೆ. ಎಲ್ಲರೂ ಕಳ್ಳರು’ ಎಂದು ಅಸಮಾಧಾನ ಹೊರಹಾಕಿದ್ದಾರೆ.

ತಮ್ಮ ಕ್ಷೇತ್ರದಲ್ಲಿ ಯಾವುದೇ ಕೆಲಸಗಳು ಆಗದಿರುವುದರಿಂದ ಎಲ್ಲ ಶಾಸಕರು ಅತೃಪ್ತರಾಗಿದ್ದಾರೆ ಎಂದಿರುವ ಅವರು, ಈ ಬಗ್ಗೆ ಮುಖ್ಯಮಂತ್ರಿಗೆ ದೂರು ನೀಡುವ ಬಗ್ಗೆಯೂ ಮಾತನಾಡಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಕಾಂಗ್ರೆಸ್ ನಾಯಕ ಟೀಕಾರಾಂ ಜೂಲಿ, ‘ಬಿಜೆಪಿ ಶಾಸಕರು ತಮ್ಮದೇ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ. ಬಿಜೆಪಿ ಶಾಸಕರಿಗೇ ಸರ್ಕಾರದ ಜತೆ ಹೊಂದಾಣಿಕೆ ಆಗುತ್ತಿಲ್ಲ ಎಂದಾದರೆ, ಸಾಮಾನ್ಯ ಜನರ ಪರಿಸ್ಥಿತಿ ಏನಾಗಬೇಡ’ ಎಂದು ವ್ಯಂಗ್ಯವಾಡಿದ್ದಾರೆ.

ಅಪಹರಣಕಾರರ ನೈಜ ಹೆಸರು ಉಲ್ಲೇಖಿಸಿದ ನೆಟ್‌ಫ್ಲಿಕ್ಸ್

ನವದೆಹಲಿ/ಮುಂಬೈ (ಪಿಟಿಐ): ಒಟಿಟಿ ಪ್ಲಾಟ್‌ಫಾರ್ಮ್ ‘ನೆಟ್‌ಫ್ಲಿಕ್ಸ್’ನಲ್ಲಿ ಪ್ರಸಾರವಾಗುತ್ತಿರುವ ‘ಐಸಿ–814– ದಿ ಕಂದಹಾರ್ ಹೈಜಾಕ್’ ವೆಬ್‌ಸರಣಿಯಲ್ಲಿ ಅಪಹರಣಕಾರರ ನೈಜ ಹೆಸರನ್ನು ಮರೆಮಾಚಿದ ಕುರಿತು ವಾರ್ತಾ ಹಾಗೂ ಪ್ರಸಾರ ಸಚಿವಾಲಯವು(ಐ.ಬಿ) ಆಕ್ಷೇಪ ವ್ಯಕ್ತಪಡಿಸಿದ ಬೆನ್ನಲ್ಲೇ ‘ನೈಜ ಹೆಸರು, ಕೋಡ್ ನೇಮ್’ ಸೇರ್ಪಡೆಗೊಳಿಸಲಾಗಿದೆ’ ಎಂದು ಮಂಗಳವಾರ ತಿಳಿಸಿದೆ.

‘ವಿಮಾನ ಅಪಹರಿಸಿದವರೆಲ್ಲರೂ ಭಯೋತ್ಪಾದಕರಾಗಿದ್ದರು. ಹೀಗಿದ್ದರೂ, ವೆಬ್‌ಸರಣಿಯಲ್ಲಿ ಅಪಹರಣಕಾರರು ‘ಮುಸಲ್ಮಾನರು’ ಎಂಬ ಗುರುತನ್ನು ಮರೆಮಾಚಲಾಗಿದೆ. ನಿರ್ದೇಶಕ ಅನುಭವ್ ಸಿನ್ಹಾ ಅವರು ಕಲಾವಿದರ ಪಾತ್ರಗಳಲ್ಲಿ ಮುಸ್ಲಿಮೇತರ ಹೆಸರುಗಳನ್ನು ಹೆಚ್ಚಿಸಿ ಅಪರಾಧ ಕೃತ್ಯವನ್ನು ಮರೆಮಾಚಿದ್ದಾರೆ’ ಎಂದು ಬಿಜೆಪಿಯ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ‘ಎಕ್ಸ್’ ಮೂಲಕ ಪ್ರಶ್ನಿಸಿದ್ದರು.

ಈ ಬೆಳವಣಿಗೆ ಬೆನ್ನಲ್ಲೇ, ಮಾಹಿತಿ ಹಾಗೂ ಪ್ರಸಾರ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಜಾಜು ಅವರು ನೆಟ್‌ಫ್ಲಿಕ್ಸ್ ಇಂಡಿಯಾ ಕಾರ್ಯಕ್ರಮ ವಿಭಾಗದ ಉಪಾಧ್ಯಕ್ಷೆ ಮೋನಿಕಾ ಶೆರ್ಗಿಲ್ ಅವರಿಗೆ ಸಮನ್ಸ್ ನೀಡಿದ್ದರು. ವೆಬ್‌ಸರಣಿಯ ಕೆಲವೊಂದು ಅಂಶಗಳ ಕುರಿತು ಬಲವಾದ ಅಸಮ್ಮತಿ ವ್ಯಕ್ತಪಡಿಸಿದ್ದರು.

‘ಪ್ರೇಕ್ಷಕರ ಅನುಕೂಲಕ್ಕಾಗಿ 1999ರ ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಹರಣದ ಅಪಹರಣಕಾರರ ನೈಜ ಹೆಸರು ಹಾಗೂ ಕೋಡ್‌ನೇಮ್‌ಗಳನ್ನು ಪರಿಷ್ಕರಿಸಲಾಗುವುದು’ ಎಂದು ನೆಟ್‌ಫ್ಲಿಕ್ಸ್ ಇಂಡಿಯಾ ಕಾರ್ಯಕ್ರಮ ವಿಭಾಗದ ಉಪಾಧ್ಯಕ್ಷೆ ಶೆರ್ಗಿಲ್ ಅವರು ಜಾಜು ಭೇಟಿ ಬಳಿಕ ಹೇಳಿಕೆ ನೀಡಿದ್ದಾರೆ.

ಅಪಹರಣಕಾರರ ನೈಜ ಹೆಸರಾದ ಇಬ್ರಾಹಿಂ ಅಖ್ತರ್, ಶಾಹೀದ್ ಅಖ್ತರ್ ಸಯೀದ್, ಸನ್ನಿ, ಅಹಮ್ಮದ್‌ಖಾಜಿ, ಝಹೂರ್ ಮಿಸ್ತ್ರಿ ಹಾಗೂ ಶಾಕೀರ್ ಉಲ್ಲೇಖಿಸುವ ಜೊತೆಗೆ ‘ಭೋಲಾ’, ‘ಶಂಕರ್’, ‘ಡಾಕ್ಟರ್’, ‘ಬರ್ಗರ್’, ‘ಚೀಫ್’ ಎಂದು ಕೋಡ್ ನೇಮ್‌ಗಳನ್ನು ಭಯೋತ್ಪಾದಕರು ಬಳಸಿಕೊಂಡಿದ್ದರು.

‘ಸರಣಿಯಲ್ಲಿ ಕೋಡ್‌ನೇಮ್‌ಗಳು ಘಟನೆ ನಡೆದ ವೇಳೆ ನೈಜ ಹೆಸರುಗಳೇ ಆಗಿವೆ’ ಎಂದು ಸ್ಪಷ್ಟಪಡಿಸಿದ್ದಾರೆ.

‘ಭಾರತದಲ್ಲಿ ಕತೆ ಹೇಳುವ ಶ್ರೀಮಂತ ಸಂಸ್ಕೃತಿ ಹೊಂದಿದ್ದು, ನಮ್ಮ ಪ್ರದರ್ಶಿಸುವ ಕತೆಗಳು ಅಧಿಕೃತ ಪ್ರಾತಿನಿಧ್ಯ ಹೊಂದಿರುವುದಕ್ಕೆ ಬದ್ಧರಾಗಿದ್ದೇವೆ’ ಎಂದು ತಿಳಿಸಿದ್ದಾರೆ.

ಮೈತ್ರಿಗೆ ಸ್ವಾಗತ –ಎಎಪಿ ನಾಯಕ ಸಂಜಯ್ ಸಿಂಗ್ • ಅಂತಿಮ ತೀರ್ಮಾನವಾಗಿಲ್ಲ – ಹರಿಯಾಣ ‘ಕೈ’ ಉಸ್ತುವಾರಿ

ಹರಿಯಾಣ: ಕಾಂಗ್ರೆಸ್– ಎಎಪಿ ಮೈತ್ರಿ?

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ಹರಿಯಾಣ ವಿಧಾನಸಭೆ ಚುನಾವಣೆಗೆ ಆಮ್ ಆದ್ಮಿ ಪಕ್ಷದ (ಎಎಪಿ) ಜೊತೆಗೆ ಮೈತ್ರಿ ಹೊಂದುವ ಕುರಿತು ಕಾಂಗ್ರೆಸ್ ಪಕ್ಷ ಮಾತುಕತೆ ಆಂಭಿಸಿದೆ. ಮೈತ್ರಿ ಕುರಿತು ಮುಖಂಡ ರಾಹುಲ್‌ಗಾಂಧಿ ಅವರೇ ಒಲವು ತೋರಿದ್ದಾರೆ.

‘ಚರ್ಚೆ ಆರಂಭವಾಗಿದೆ. ಇನ್ನೂ ಅಂತಿಮಗೊಂಡಿಲ್ಲ’ ಎಂದು ಕಾಂಗ್ರೆಸ್ ಮಂಗಳವಾರ ಪ್ರತಿಕ್ರಿಯಿಸಿದೆ. ಸೀಟುಹಂಚಿಕೆಯ ಈಗಿನ ಲೆಕ್ಕಾಚಾರದ ಅನ್ವಯ ಕಾಂಗ್ರೆಸ್ ಪಕ್ಷವು ಎಎಪಿಗೆ 5, ಸಮಾಜವಾದಿ ಪಕ್ಷ, ಸಿಪಿಎಂಗೆ ತಲಾ ಒಂದು ಸ್ಥಾನ ಬಿಟ್ಟುಕೊಡಲು ಸಿದ್ಧವಿದೆ ಎನ್ನಲಾಗಿದೆ.

ಮೈತ್ರಿ ಹೊಂದುವ ಕುರಿತು ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ, ಕಾಂಗ್ರೆಸ್‌ನ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಒಲವು ವ್ಯಕ್ತಪಡಿಸಿದ್ದಾರೆ ಎಂಬ ವರದಿಗಳನ್ನು ಇದಕ್ಕೂ ಮುನ್ನ ಎಎಪಿ ನಾಯಕ, ರಾಜ್ಯಸಭೆ ಸದಸ್ಯ ಸಂಜಯ್ ಸಿಂಗ್ ಸ್ವಾಗತಿಸಿದ್ದರು.

ಮೈತ್ರಿ ಕುರಿತ ಪ್ರಶ್ನೆಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ, ಹರಿಯಾಣ ಉಸ್ತುವಾರಿ ದೀಪಕ್ ಬಬಾರಿಯ, ಎಎಪಿ ಜೊತೆ ಚರ್ಚೆ ನಡೆದಿದೆ’ ಎಂದು ದೃಢಪಡಿಸಿದರು. ಮತ್ತೊಂದು ಪ್ರಶ್ನೆಗೆ, ‘ನಾವು ಬಿಜೆಪಿ ಸೋಲಿಸಬೇಕಿದೆ. ಮತಗಳ ವಿಭಜನೆ ಆಗದಂತೆ ತಡೆಯಬೇಕಿದೆ’ ಎಂದು ಹೇಳಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಮತ್ತು ಎಎಪಿ ನಾಯಕ ರಾಘವ್ ಛಡ್ಡಾ ಸದ್ಯ ಎರಡು ಸುತ್ತಿನ ಮಾತುಕತೆ ನಡೆಸಿದ್ದಾರೆ. ಮೈತ್ರಿ ಕುರಿತು ತಾತ್ವಿಕವಾಗಿ ಒಪ್ಪಿಗೆಯಾಗಿದ್ದು, ಶೀಘ್ರ ಮೂರನೇ ಸುತ್ತಿನ ಚರ್ಚೆ ನಡೆಯಲಿದೆ ಎಂದು ಗೊತ್ತಾಗಿದೆ.

ಕಾಂಗ್ರೆಸ್ ಜೊತೆಗಿನ ಮೈತ್ರಿಯಲ್ಲಿ ಎಎಪಿ ಈಗಾಗಲೇ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿತ್ತು. ಆ ಲೆಕ್ಕದಲ್ಲಿ 10 ಸೀಟುಗಳನ್ನು ಬಿಟ್ಟುಕೊಡಬೇಕು ಎಂದು ಎಎಪಿ ಬೇಡಿಕೆ ಮಂಡಿಸಿದೆ. ಆದರೆ, ಕೇವಲ ಐದು ಕ್ಷೇತ್ರಗಳನ್ನು ಮಾತ್ರ ಬಿಟ್ಟುಕೊಡಲಷ್ಟೇ ಸಿದ್ಧವಿದೆ.

ಕಾಂಗ್ರೆಸ್ ಚುನಾವಣಾ ಸಮಿತಿ ಸಭೆಯಲ್ಲಿ ರಾಹುಲ್‌ಗಾಂಧಿ ಅವರು, ಇಂಡಿಯಾ ಮೈತ್ರಿಕೂಟದ ಪಕ್ಷಗಳಿಗೆ ಅವಕಾಶ ಕಲ್ಪಿಸಬೇಕು ಎಂದಿದ್ದರು. ಇದಕ್ಕೆ ಮಾಜಿ ಸಿ.ಎಂ ಭೂಪಿಂದರ್ ಹೂಡಾ ಅವರು, ‘ಎಎಪಿಗೆ 3–4 ಸೀಟು ಕೊಡಬಹುದು’ ಎಂದು ಪ್ರತಿಕ್ರಿಯಿಸಿದ್ದರು.

34 ಹೆಸರು ಅಂತಿಮ: ಈ ಮಧ್ಯೆ, ರಾಜ್ಯದ 34 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ ಅಂತಿಮಗೊಳಿಸಿದೆ. 22 ಮಂದಿ ಹಾಲಿ ಶಾಸಕರಿಗೂ ಟಿಕೆಟ್ ಘೋಷಿಸಿದೆ. ಇನ್ನೂ 15 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳ್ಳಬೇಕಾಗಿದೆ.

ಹರಿಯಾಣ ವಿಧಾನಸಭೆಗೆ ಅ. 5ರಂದು ಮತದಾನ ನಡೆಯಲಿದ್ದು, ಮತ ಎಣಿಕೆ ಅ. 8ರಂದು ನಡೆಯಲಿದೆ.

ಹರಿಯಾಣ ಚುನಾವಣೆ ಕುರಿತು ಮಂಗಳವಾರ ನವದೆಹಲಿಯಲ್ಲಿ ನಡೆದ ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಮುಖಂಡ ರಾಹುಲ್ ಗಾಂಧಿ ಮತ್ತು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾಗವಹಿಸಿದ್ದರು –ಪಿಟಿಐ ಚಿತ್ರ

‘ಬಿಜೆಪಿ ಜೊತೆ ಮೈತ್ರಿ ಇಲ್ಲ’

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರ ಚುನಾವಣೆಗೆ ಬಿಜೆಪಿ ಜೊತೆಗೆ ಮೈತ್ರಿ ಹೊಂದುವ ಸಾಧ್ಯತೆಗಳನ್ನು ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ತಳ್ಳಿಹಾಕಿದ್ದಾರೆ.

‘ಆದರೆ, ಚುನಾವಣೆಯ ಬಳಿಕ ಪಕ್ಷವು ಭಾಗಿಯಾಗದೇ ಸರ್ಕಾರ ರಚನೆ ಸಾಧ್ಯವೇ ಇಲ್ಲ’ ಎಂದು ಪ್ರತಿಪಾದಿಸಿದರು. ಪಕ್ಷದ ಕಚೇರಿಯಲ್ಲಿ ಮಾತನಾಡಿದ ಅವರು ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದರು.

‘ನ್ಯಾಷನಲ್ ಕಾನ್ಫರೆನ್ಸ್ ಕೇವಲ ಸರ್ಕಾರ ರಚನೆಗಾಗಿ ಚುನಾವಣೆಗೆ ಸ್ಪರ್ಧಿಸುತ್ತಿದೆ. 1947ರಿಂದಲೂ ಆ ಪಕ್ಷ ಇದನ್ನೇ ಮಾಡುತ್ತಿದೆ. ಇದರ ಹೊರತಾಗಿ ಯಾವುದೇ ಗುರಿ ಇದ್ದಂತಿಲ್ಲ’ ಎಂದು ಹೇಳಿದರು.

‘ತನ್ನ ಪಕ್ಷ ನಿರ್ದಿಷ್ಟ ಕಾರ್ಯಸೂಚಿಯೊಂದಿಗೆ ಸ್ಪರ್ಧಿಸುತ್ತಿದೆ. ನಾವು 2002ರಲ್ಲಿ ಕೇವಲ 16 ಶಾಸಕರೊಂದಿಗೆ ಸರ್ಕಾರ ರಚಿಸಿದ್ದೆವು. ದೇವರ ಕೃಪೆ ಇದ್ದರೆ ಈ ಬಾರಿಯೂ ಪಿಡಿಪಿ ಸಹಭಾಗಿತ್ವದಲ್ಲೇ ಸರ್ಕಾರ ರಚನೆಯಾಗಲಿದೆ ಎಂದು ಆಶಿಸಿದರು.

ಬಿಜೆಪಿ ಪಟ್ಟಿ ಇನ್ನಷ್ಟು ವಿಳಂಬ

ಪ್ರಜಾವಾಣಿ ವಾರ್ತೆ

ನವದೆಹಲಿ: ಹರಿಯಾಣ ವಿಧಾನಸಭೆಗೆ ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ ಇನ್ನಷ್ಟು ವಿಳಂಬವಾಗುವ ಸಾಧ್ಯತೆಗಳಿವೆ. ಪಕ್ಷದ ಹೈಕಮಾಂಡ್ ಅಂತಿಮಗೊಳಿಸಿರುವ ಕೆಲ ಹೆಸರುಗಳು ಬದಲಾಗುವ ಸೂಚನೆ ಇದೆ.

ಬಿಜೆಪಿಗೆ ಇತ್ತೀಚೆಗೆ ಸೇರ್ಪಡೆಯಾಗಿರುವ ಕೆಲ ಮುಖಂಡರಿಗೂ ಸ್ಪರ್ಧೆಗೆ ಅವಕಾಶ ಕಲ್ಪಿಸಬೇಕು ಹಾಗೂ ಅಲ್ಲದೆ, ಪ್ರತಿಪಕ್ಷ ಕಾಂಗ್ರೆಸ್ ಯಾರಿಗೆ ಟಿಕೆಟ್ ಅಂತಿಮಗೊಳಿಸಲಿದೆ ಎಂದು ಗಮನಿಸುತ್ತಿರುವುದು ಇದಕ್ಕೆ ಕಾರಣವಾಗಿದೆ. ಈ ಕುರಿತು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ಹರಿಯಾಣ ಉಸ್ತುವಾರಿ ಧರ್ಮೇಂದ್ರ ಪ್ರಧಾನ್, ಸಹ ಉಸ್ತುವಾರಿ ಬಿಪ್ಲಾಬ್ ದೇವ್ ಚರ್ಚಿಸಿದ್ದರು.

‘ಪಕ್ಷದ ಹೈಕಮಾಂಡ್ ರಾಜ್ಯದಲ್ಲಿ ಕೆಲ ಮುಖಂಡರ ಬಗ್ಗೆ ಅಸಮಾಧಾನಗೊಂಡಿದೆ. ಹೊಸ ಮುಖಗಳಿಗೂ ಅವಕಾಶ ಕಲ್ಪಿಸುವ ಕುರಿತು ಚರ್ಚೆ ನಡೆದಿದೆ’ ಎಂದು ಮೂಲಗಳು ಸ್ಪಷ್ಟಪಡಿಸಿವೆ.

ಚುನಾವಣಾ ಅಖಾಡಕ್ಕೆ ವಿನೇಶ್ ಫೋಗಟ್?

ನವದೆಹಲಿ: ಒಲಿಂಪಿಕ್ಸ್ ಕುಸ್ತಿ ಪಟು ವಿನೇಶ್ ಫೋಗಟ್ ಅವರು ಹರಿಯಾಣ ವಿಧಾನಸಭೆ ಚುನಾವಣಾ ಅಖಾಡಕ್ಕೆ ಇಳಿಯುವರೇ?

ಹೌದು ಎನ್ನುತ್ತವೆ ಹಲವು ವರದಿಗಳು. ಹರಿಯಾಣ ವಿಧಾನಸಭೆ ಚುನಾವಣೆಗೆ ವಿನೇಶಾ ಪೋಗಟ್ ಅವರನ್ನು ಕಣಕ್ಕಿಳಿಸುವ ಕುರಿತು ಕಾಂಗ್ರೆಸ್ ಪಕ್ಷ ಗಂಭೀರ ಚಿಂತನೆ ನಡೆಸಿದೆ ಎಂದು ಹೇಳಲಾಗಿದೆ.

ವಿನೇಶಾ ಸ್ಪರ್ಧೆ ಕುರಿತ ಬೆಳವಣಿಗೆಯನ್ನು ಬಿಜೆಪಿ ಸೂಕ್ಷ್ಮವಾಗಿ ಗಮನಿಸುತ್ತಿದೆ.

ವಿನೇಶ್ ಫೋಗಟ್

‘ಕಾಂಗ್ರೆಸ್ ಒಂದು ವೇಳೆ ವಿನೇಶ್ ಅವರನ್ನು ಕಣಕ್ಕಿಳಿಸಿದರೆ, ಅವರಿಗೆ ಎದುರಾಳಿಯಾಗಿ ವಿನೇಶ್ ಸಂಬಂಧಿಯೇ ಆಗಿರುವ ಬಬಿತಾ ಅವರನ್ನು ಕಣಕ್ಕಿಳಿಸಲು ಪಕ್ಷ ಚಿಂತನೆ ನಡೆಸಿದೆ’ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪ್ರಜಾ ಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2024

ಹಲ್ಲೆ ಪ್ರಕರಣ: ಮೂವರ ಬಂಧನಕ್ಕೆ ಮುಂದಾದ ರೈಲ್ವೆ ಪೊಲೀಸರು

ಮುಂಬೈ (ಪಿಟಿಐ): ಗೋಮಾಂಸ ಸಾಗಿಸುತ್ತಿದ್ದ ಅನುಮಾನದ ಅಡಿ ಹಿರಿಯ ನಾಗರಿಕರೊಬ್ಬರ ಮೇಲೆ ಮಹಾರಾಷ್ಟ್ರದ ನಾಸಿಕ್‌ನಲ್ಲಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಹಲ್ಲೆ ನಡೆಸಿದ ಆರೋಪ ಹೊತ್ತಿರುವ ಮೂವರನ್ನು ಮತ್ತೆ ಬಂಧಿಸಲು ಸರ್ಕಾರಿ ರೈಲ್ವೆ ಪೊಲೀಸರು (ಜಿಆರ್‌ಪಿ) ಮುಂದಾಗಿದ್ದಾರೆ. ಈ ಮೂವರಿಗೆ ನೀಡಿದ್ದ ಜಾಮೀನನ್ನು ನ್ಯಾಯಾಲಯವು ರದ್ದುಪಡಿಸಿದೆ.

ಪೊಲೀಸರು ಈ ಮೂವರ ವಿರುದ್ಧ ಡಕಾಯತಿ ಹಾಗೂ ಧಾರ್ಮಿಕ ಭಾವನೆಗಳಿಗೆ ಗಾಸಿ ಉಂಟುಮಾಡಿದ ಆರೋಪವನ್ನು ಹೊರಿಸಿದ ನಂತರ ನ್ಯಾಯಾಲಯವು ಜಾಮೀನು ರದ್ದುಪಡಿಸಿದೆ.

72 ವರ್ಷ ವಯಸ್ಸಿನ ಅಶ್ರಫ್ ಅಲಿ ಸಯ್ಯದ್ ಹುಸೇನ್ ಅವರ ಮೇಲೆ ಆಗಸ್ಟ್ 28ರಂದು ರೈಲಿನಲ್ಲಿ ಹಲ್ಲೆ ಮಾಡಲಾಗಿತ್ತು. ಹಲ್ಲೆಯ ವಿಡಿಯೊ ಸಾಮಾಜಿಕ ಜಾಲತಾಣಗಳ ಮೂಲಕ ವ್ಯಾಪಕವಾಗಿ ಹರಿದಾಡಿತ್ತು. ಇದಾದ ನಂತರ ಪೊಲೀಸರು ಆಕಾಶ್ ಅವ್ಹದ್, ನಿತೇಶ್ ಅಹಿರೆ, ಜಯೇಶ್ ಮೋಹಿತೆ ಎನ್ನುವವರನ್ನು ಬಂಧಿಸಿದ್ದರು. ಜಾಮೀನು ರದ್ದಾದ ನಂತರ, ಅವರನ್ನು ಪತ್ತೆ ಮಾಡಿ ಬಂಧಿಸಲು ಜಿಆರ್‌ಪಿ ಅಧಿಕಾರಿಗಳು ಮುಂದಾಗಿದ್ದಾರೆ.

ಎನ್‌ಕೌಂಟರ್: 9 ನಕ್ಸಲರ ಹತ್ಯೆ

ದಾಂತೇವಾಡ (ಪಿಟಿಐ): ಛತ್ತೀಸಗಢದ ಬಸ್ತಾರ್ ಪ್ರದೇಶದಲ್ಲಿ ಭದ್ರತಾ ಸಿಬ್ಬಂದಿ ನಡೆಸಿದ ಎನ್‌ಕೌಂಟರ್‌ನಲ್ಲಿ 9 ನಕ್ಸಲರು ಹತರಾಗಿದ್ದಾರೆ.

‘ಭದ್ರತಾ ಪಡೆಗಳ ಜಂಟಿ ತಂಡವು ನಕ್ಸಲ್ ನಿಗ್ರಹ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ ದಾಂತೇವಾಡ ಮತ್ತು ಬಿಜಾಪುರ ಜಿಲ್ಲೆಗಳ ಗಡಿಯಲ್ಲಿರುವ ಅರಣ್ಯದಲ್ಲಿ ಬೆಳಿಗ್ಗೆ 10.30ಕ್ಕೆ ಗುಂಡಿನ ಚಕಮಕಿ ನಡೆಯಿತು‘ ಎಂದು ಬಸ್ತಾರ್ ವಲಯದ ಐಜಿ ಸುಂದರರಾಜ್ ತಿಳಿಸಿದ್ದಾರೆ.

‘ಗುಂಡಿನ ಚಕಮಕಿಯು ದೀರ್ಘ ಸಮಯ ನಡೆಯಿತು. ಸಮವಸ್ತ್ರಧಾರಿ ಒಂಬತ್ತು ನಕ್ಸಲರ ಶವಗಳು ಸ್ಥಳದಲ್ಲಿ ಸಿಕ್ಕಿವೆ. ಅಲ್ಲದೆ, ಎನ್‌ಕೌಂಟರ್ ಸ್ಥಳದಿಂದ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ಭದ್ರತಾ ಸಿಬ್ಬಂದಿ ಸುರಕ್ಷಿತವಾಗಿದ್ದಾರೆ‘ ಎಂದರು.

‘ಜಿಲ್ಲಾ ಮೀಸಲು ಗಾರ್ಡ್ (ಡಿಆರ್‌ಜಿ) ಮತ್ತು ಕೇಂದ್ರೀಯ ಮೀಸಲು ಪೊಲೀಸ್ ಪಡೆಗೆ (ಸಿಆರ್‌ಪಿಎಫ್) ಸೇರಿದ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ. ಪಶ್ಚಿಮ ಬಸ್ತಾರ್ ವಿಭಾಗದ ಘಟಕಕ್ಕೆ ಸೇರಿದ ನಕ್ಸಲರ ಚಲನವಲನದ ಕುರಿತು ಲಭಿಸಿದ ಮಾಹಿತಿ ಆಧರಿಸಿ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು‘ ಎಂದು ಹೇಳಿದರು.

‘ಶಾಸಕ ಖಾನ್ ತನಿಖೆಗೆ ಸಹಕರಿಸುತ್ತಿಲ್ಲ’

ನವದೆಹಲಿ(ಪಿಟಿಐ): ‘ಆಮ್‌ಆದ್ಮಿಪಕ್ಷದ (ಎಎಪಿ) ಶಾಸಕ ಅಮಾನತ್ ಉಲ್ಲಾ ಖಾನ್ ‘ಅಕ್ರಮವಾಗಿ’ ಹಣ ಸಂಪಾದಿಸಿದಲ್ಲದೇ, ದೆಹಲಿಯಲ್ಲಿ ಸ್ಥಿರಾಸ್ತಿ ಖರೀದಿಗಾಗಿ ಭ್ರಷ್ಟಾಚಾರದಲ್ಲಿ ತೊಡಗಿದ್ದರು’ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಮಂಗಳವಾರ ಆರೋಪಿಸಿದೆ.

‘ಶಾಸಕ ಖಾನ್ ತನಿಖೆಗೆ ಸಹಕಾರ ನೀಡುತ್ತಿಲ್ಲ ಹಾಗೂ ತನಿಖೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. 14 ಬಾರಿ ಸಮನ್ಸ್ ನೀಡಲಾಗಿದ್ದರೂ, ಒಂದು ಬಾರಿ ಮಾತ್ರ ತನಿಖಾಧಿಕಾರಿ ಮುಂದೆ ಹಾಜರಾಗಿ ಹೇಳಿಕೆ ದಾಖಲಿಸಿದ್ದಾರೆ’ ಎಂದು ಇ.ಡಿ ಹೇಳಿದೆ.

ಅಮಾನತ್ ಉಲ್ಲಾ ಖಾನ್ 2016ರಿಂದ 2021ರ ವರೆಗೆ ದೆಹಲಿ ವಕ್ಫ್ ಮಂಡಳಿ ಅಧ್ಯಕ್ಷರಾಗಿದ್ದ ವೇಳೆ ಅವ್ಯವಹಾರ ನಡೆಸಿದ್ದರು ಎಂಬ ಆರೋಪಗಳ ಕುರಿತು ಸಿಬಿಐ ಮತ್ತು ದೆಹಲಿಯ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ದಾಖಲಿಸಿರುವ ಎಫ್‌ಐಆರ್‌ಗಳ ಆಧಾರದಲ್ಲಿ, ಅವರ ವಿರುದ್ಧ ಇ.ಡಿ ಹಣ ಅಕ್ರಮ ವರ್ಗಾವಣೆ ಪ್ರಕರಣ ದಾಖಲಿಸಿದೆ.

ಅಮಾನತ್ ಉಲ್ಲಾ ಖಾನ್

ಅವರ ನಿವಾಸದಲ್ಲಿ ಶೋಧದ ಬಳಿಕ, ಖಾನ್ ಅವರನ್ನು ಇ.ಡಿ ಸೋಮವಾರ ಬಂಧಿಸಿ, ಸ್ಥಳೀಯ ನ್ಯಾಯಾಲಯದ ಮುಂದೆ ಹಾಜರುಪಡಿಸಿತ್ತು.

ಕರ್ನಾಟಕ ಸರ್ಕಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ. ದಾವಣಗೆರೆ ಜಿಲ್ಲೆ
ದೂ. ಸಂ: 08189 228044. Email: ghchannagiri@gmail.com
ಸಂಖ್ಯೆ:ಸಾಆಚ/ನಾಕ್ಲಿ/ಟೆಂ/108(1)/2024–25 ದಿನಾಂಕ: 22.08.2024
ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ
ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿಯಲ್ಲಿ 2024–25ರ ಸಾಲಿನಲ್ಲಿ ನಾನ್ ಕ್ಲಿನಿಕಲ್ ಮತ್ತು 'ಡಿ' ಗ್ರೂಪ್ ಸೇವೆ ನೀಡಲು ಅಲ್ಪಾವಧಿ ಮರು ಇ-ಟೆಂಡನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಆಸಕ್ತ ಟೆಂಡರ್‌ದಾರರಿಂದ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ-28,20,000.00 ಟೆಂಡರ್ ದಸ್ತಾವೇಜನ್ನು ಡೌನ್ ಲೋಡ್ ಮಾಡಲು ಪ್ರಾರಂಭದ ದಿನಾಂಕ:04/09/2024 ಮತ್ತು ಅಪ್ ಲೋಡ್ ಮಾಡಲು ಕೊನೆಯ ದಿನಾಂಕ: 19/09/2024 ಆಗಿರುತ್ತದೆ. ತಾಂತ್ರಿಕ ಲಕೋಟೆಯನ್ನು ತೆರೆಯುವ ದಿನಾಂಕ: 21/09/2024ರ ಸಂಜೆ 4:30ರ ವರೆಗೆ ಹೆಚ್ಚಿನ ಮಾಹಿತಿಯನ್ನು ವೆಬ್ ಸೈಟ್ https://kppp.karnataka.gov.in ನಲ್ಲಿ ಲಾಗಿನ್ ಆಗಿ ಪಡೆಯಬಹುದು.
ವಾಸಾಇ/ಡಿವಿಜಿ/302/ ಕೆಎಸ್‌ಎಂಸಿಎ/2024–25 ಸಹಿ/– ಮುಖ್ಯ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ.

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ)
ನಿರ್ದೇಶಕರು ಹಾಗೂ ಡೀನ್ ರವರ ಕಛೇರಿ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು–560002.
ದೂರವಾಣಿ : 080–26700810, ಟೆಲಿ ಫ್ಯಾಕ್ಸ್: 080–26704342 ಇ-ಮೇಲ್: director_bmcri@yahoo.co.in
ಸಂಖ್ಯೆ: ಬೆಂವೈವಿಸಂಸಂ/ಸರಬ(2)/07/2024–25 ದಿನಾಂಕ: 02–09–2024
ಇ-ಟೆಂಡರ್ ಅಧಿಸೂಚನೆ
ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಕಾಯಿದೆ 1999 ರ ಪ್ರಕಾರ ಈ ಸಂಸ್ಥೆ ಹಾಗೂ ಅಧೀನದಲ್ಲಿ ಬರುವ ಆಸ್ಪತ್ರೆಗಳಿಗೆ ಅಗತ್ಯವಿರುವ ಲ್ಯಾಪ್‌ಟಾಪ್, ಕಂಪ್ಯೂಟರ್ ಮತ್ತು ಬಿಡಿಭಾಗಗಳು ಮತ್ತು SCSP / TSP ಯೋಜನೆಯಡಿಯಲ್ಲಿ ವಿದ್ಯಾರ್ಥಿಗಳಿಗೆ ವಿತರಿಸಲು ಅಗತ್ಯವಿರುವ ಲ್ಯಾಪ್‌ಟಾಪ್ ಹಾಗೂ ಈ ಸಂಸ್ಥೆಯ ಪರೀಕ್ಷಾ ಕೊಠಡಿಗೆ ಅಗತ್ಯವಿರುವ ಸಿಸಿ ಟಿವಿ ಕ್ಯಾಮರಾಗಳ ಖರೀದಿಗೆ ಇ-ಟೆಂಡರ್ ಆಹ್ವಾನಿಸಲಾಗಿದೆ.
ಟೆಂಡರ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಿಂದ ದಿನಾಂಕ: 03-09-2024 ರಿಂದ ಡೌನ್‌ಲೋಡ್ ಮಾಡಬಹುದು ಮತ್ತು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 04-10-2024 ರಂದು ಸಂಜೆ 5.00 ಗಂಟೆವರೆಗೆ. ಇ.ಎಂ.ಡಿ. ಯೊಂದಿಗೆ ಸಲ್ಲಿಸದ ಟೆಂಡರ್‌ಗಳನ್ನು ತಿರಸ್ಕರಿಸಲಾಗುತ್ತದೆ.
ಹೆಚ್ಚಿನ ವಿವರಗಳಿಗಾಗಿ ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.
ಸಹಿ/– ನಿರ್ದೇಶಕರು ಹಾಗೂ ಡೀನ್, ಬೆಂವೈವಿಸಂಸಂ, ಬೆಂಗಳೂರು.
ವಾಸಾಸಂಇ/ವಾ.ಪ್ರ/1813/ಅಡ್ವರ್ಟೋರ್/2024–25

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು
ಇ–ಮೇಲ್:www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810
ಈ ಕಛೇರಿ ಐಟಂವಾರು ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ:06/2024–25 ದಿನಾಂಕ: 30.08.2024
ಕರ್ನಾಟಕ ರಾಜ್ಯ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಈ ವಿಭಾಗ ವ್ಯಾಪ್ತಿಯ ಲೆಕ್ಕ ಶೀರ್ಷಿಕೆ 3054–03–337–0–05–200 ರಾಜ್ಯ ಹೆದ್ದಾರಿ ನಿರ್ವಹಣೆ–ನಿರ್ವಹಣೆ ವೆಚ್ಚ ಅಡಿಯಲ್ಲಿ ಅನುಮೋದನೆಯಾದ **Estimation for the work of conducting road land plan survey in respect of fixing of right of way of state highways in the jurisdiction of PWD Division Mysore** ಕಾಮಗಾರಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–3ರ ಷರತ್ತು ಮತ್ತು ನಿಯಮಗಳನ್ವಯ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆಯುನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ ಲೋಕೋಪಯೋಗಿ 3ನೇ ದರ್ಜೆ ಮತ್ತು ಮೇಲ್ಪಟ್ಟ ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/) 30.08.2024 ರಿಂದ 09.09.2024ರ ಸಂಜೆ17:00ರವರೆಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ.73.46 ಲಕ್ಷ ಹಾಗೂ ಇ.ಎಂ.ಡಿ ಮೊತ್ತ ರೂ.1.47ಲಕ್ಷಗಳಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.
DIPR/DDMYS-506/KSMCA- 340/2024-25

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಎಂ.ಪಿ. ವಿಭಾಗ, ರಾಮನಗರ.
ದೂ. : 080–2727 1259. ಇ–ಮೇಲ್ : eempdrmgm@gmail.com
ಟೆಂಡರ್ ಪ್ರಕಟಣೆ ಸಂಖ್ಯೆ : 08/2024–25 ದಿನಾಂಕ : 03–09–2024
ಟೆಂಡರ್ ಪ್ರಕಟಣೆ
ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ 4701 & 2701 ಲೆಕ್ಕ ಶೀರ್ಷಿಕೆ ಯಡಿಯಲ್ಲಿ ವಿವಿಧ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ.
ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ, ಆರ್ಥಿಕ ಬಿಡ್ ತೆರೆಯುವ ದಿನಾಂಕ, ಪೂರ್ವಭಾವಿ ಸಭೆ ನಡೆಯುವ ದಿನಾಂಕ ಹಾಗೂ ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು ಪಡೆಯಲು https://kppp.karnataka.gov.in ಅನ್ನು ಸಂಪರ್ಕಿಸುವುದು ಮತ್ತು ಮಾಹಿತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಕಾ.ನೀ.ನಿ.ನಿ., ಎಂ.ಪಿ. ವಿಭಾಗ, ರಾಮನಗರ.
ಡಿಐಪಿಆರ್/ರಾಮನಗರ/294/ಮಣಿಪಾಲ್/2024–25

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಆಡಳಿತ ಕಛೇರಿ: ಟಿ.ಟಿ.ಎಂ.ಸಿ 'ಎ' ಬ್ಲಾಕ್, 5ನೇ ಮಹಡಿ, ಬಿ.ಎಂ.ಟಿ.ಸಿ ಕಟ್ಟಡ ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು–560 027.
ದೂರವಾಣಿ: 080–22278813/14/15/16, ವೆಬ್‌ಸೈಟ್: www.ksmc.karnataka.gov.in
ಸಂ. 57/KSMCL/MECH/KMM/TMC/2024-25/1471 ದಿನಾಂಕ : 03.09.2024
ಇ–ಟೆಂಡರ್ ಆಹ್ವಾನ
ಮೈಸೂರು ಜಿಲ್ಲೆಯಲ್ಲಿರುವ ಸಂಸ್ಥೆಯ ಕಾರ್ಯ ಮ್ಯಾಗ್ನಸೈಟ್ ಗಣಿಗೆ ಹೊಸ Tractor Mounted Compressor (TMC) ಖರೀದಿಸಲು ಇ-ಟೆಂಡರ್ ಆಹ್ವಾನಿಸಲಾಗಿದೆ.
ವೇಳಾಪಟ್ಟಿ

ಟೆಂಡರ್ ದಸ್ತಾವೇಜನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	23.09.2024 ಸಂಜೆ 05.00 ಗಂಟೆಯವರೆಗೆ
ಟೆಂಡರ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ	25.09.2024 ಬೆಳಿಗ್ಗೆ 11.00 ಗಂಟೆಗೆ
ಇ.ಎಂ.ಡಿ ಮೊತ್ತ	35,000/–

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ ಹಾಗೂ ಯಾವುದೇ ಮಾಹಿತಿ ಮತ್ತು ಸಹಾಯಕ್ಕಾಗಿ ಸಂಪರ್ಕಿಸಬಹುದಾದ ಸಹಾಯವಾಣಿ ಸಂಖ್ಯೆ: 080–46010000/68948777
ಸಹಿ/– ಪ್ರಧಾನ ವ್ಯವಸ್ಥಾಪಕರು (ಆ&ಜಾ)
DIPR/CP/KAVITA/1816/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, (ಮಹದೇವಪುರ–ಕೆರೆಗಳು), ಕೊಠಡಿ ಸಂಖ್ಯೆ: 306, 3ನೇ ಮಹಡಿ, ಅನೆಕ್ಸ್–3 ಕಟ್ಟಡ, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು–560002
ನಂ.: ಕಾ.ಪಾ.ಅ/ಮಹದೇವಪುರ–ಕೆರೆಗಳು/ಟೆಂಡರ್–03/2024–25 ದಿನಾಂಕ: 03.09.2024
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಅಲ್ಪಾವಧಿ ಟೆಂಡರ್ ಪ್ರಕಟಣೆ)
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)
ಕೆಳ ಸಹಿದಾರರು ಈ ಕೆಳಗೆ ನಮೂದಿಸಿರುವ ಕಾಮಗಾರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಥವಾ ತತ್ಸಮಾನ ಕೆಪಿಡಬ್ಲ್ಯುಡಿ / ಸಿಪಿಡಬ್ಲ್ಯುಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ವೆಂಗಯ್ಯನ ಕೆರೆಯಲ್ಲಿ ಬಾಕಿ ಅಭಿವೃದ್ಧಿ ಕಾಮಗಾರಿಗಳು. **ಕಾಮಗಾರಿಯ ಮೊತ್ತ** (ರೂ. ಲಕ್ಷಗಳಲ್ಲಿ): 317.67. **ಇಎಂಡಿ** (ರೂ.ಗಳಲ್ಲಿ): 4,77,000/–, **ಗುತ್ತಿಗೆದಾರರ ಅರ್ಹತೆ:** ಸಾಮಾನ್ಯ.

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಮೂಲಕ 06.09.2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವಭಾವಿ ಸಭೆಯು 10.09.2024ರ ಮಧ್ಯಾಹ್ನ 3:30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ (ಮದೇಪು–ಕೆರೆಗಳು), ಬಿಬಿಎಂಪಿಯಲ್ಲಿ ನಡೆಯಲಿದೆ. (3) ಟೆಂಡರನ್ನು ಆನ್‌ಲೈನ್ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ 17.09.2024ರ ಸಂಜೆ 4:00ಯೊಳಗೆ ಸಲ್ಲಿಸತಕ್ಕದ್ದು. (4) ತಾಂತ್ರಿಕ ಬಿಡ್‌ಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಕಾರ್ಯಪಾಲಕ ಅಭಿಯಂತರರ ಕಛೇರಿ (ಮದೇಪು–ಕೆರೆಗಳು), ಬಿಬಿಎಂಪಿ ಇಲ್ಲಿ 18.09.2024ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ https://kppp.karnataka.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು (ಮಹದೇವಪುರ–ಕೆರೆಗಳು), ಬಿಬಿಎಂಪಿ

ನೆಫ್ರೋ–ಯುರಾಲಜಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ ನೋಂದಣಿ ಸಂ–1052/03-04)
ವಿಕ್ಟೋರಿಯ ಆಸ್ಪತ್ರೆ ಆವರಣ, ಬೆಂಗಳೂರು-560 002.
ಇ-ಮೇಲ್: nephrourology.institute@gmail.com ವೆಬ್‌ಸೈಟ್: www.nephrourology.karnataka.gov.in
ಸಂಖ್ಯೆ:ನೆಯುಸಂ/ಸಿಬ್ಬಂದಿ(1)01/2024–25 ದಿನಾಂಕ:02.09.2024
ಅಧಿಸೂಚನೆ
ನೆಫ್ರೋ–ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು ಇಲ್ಲಿನ 02 ಸಂದರ್ಶಕ ವೈದ್ಯರುಗಳ ಹುದ್ದೆಗೆ 11 ತಿಂಗಳುಗಳ ಅವಧಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳು ತಮ್ಮ ಸ್ವವಿವರವನ್ನು ಸಂಬಂಧಪಟ್ಟ ದಾಖಲೆಗಳೊಂದಿಗೆ ಆಡಳಿತಾಧಿಕಾರಿಗಳ ಕಚೇರಿ, ನೆಫ್ರೋ–ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು–560002 ಇವರಿಗೆ ದಿನಾಂಕ:10.09.2024ರ ಸಂಜೆ 4.00 ಗಂಟೆಯೊಳಗೆ ಸಲ್ಲಿಸಬಹುದಾಗಿರುತ್ತದೆ. ಹುದ್ದೆ: ಸಂದರ್ಶಕ ವೈದ್ಯರು ವಿಭಾಗ: ರೇಡಿಯಾಲಜಿ ವಿದ್ಯಾರ್ಹತೆ: ಎಂ.ಡಿ. ರೇಡಿಯಾಲಜಿ. ಸಂಚಿತ ವೇತನ: ರೂ. 1,00,000/–
ಸಹಿ/–ನಿರ್ದೇಶಕರು, ನೆಫ್ರೋ–ಯುರಾಲಜಿ ಸಂಸ್ಥೆ, ಬೆಂಗಳೂರು.

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರವರ ಕಚೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009
ಸಂಖ್ಯೆ: ಕಗೃಮಂ/ಹಂಚಿಕೆ–8/ಬೇಡಿಕೆ ಸಮೀಕ್ಷೆ ಪ್ರಕಟಣೆ/2024–25 ದಿನಾಂಕ : 23.08.2024
ಸಾರ್ವಜನಿಕ ಪ್ರಕಟಣೆ
ಕರ್ನಾಟಕ ಗೃಹ ಮಂಡಳಿ ವತಿಯಿಂದ ಬಳ್ಳಾರಿ ಜಿಲ್ಲೆಯ ಮಿಂಚೇರಿ ಬಡಾವಣೆಯಲ್ಲಿ ಅಭಿವೃದ್ಧಿಪಡಿಸುತ್ತಿರುವ LIG, MIG, HIG-I, HIG-II ವರ್ಗದ ನಿವೇಶನಗಳ ಹಂಚಿಕೆಗೆ ಅರ್ಜಿ ಸಲ್ಲಿಸಲು ಆಸಕ್ತಿಯಿರುವ ಸಾರ್ವಜನಿಕರು ಆನ್‌ಲೈನ್ ಮೂಲಕ ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿಯೊಂದಿಗೆ ಅರ್ಜಿಗಳನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 31.10.2024 ರವರೆಗೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮತ್ತು ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ : https://www.khb.karnataka.gov.in ಸಂಪರ್ಕಿಸುವುದು.
ಸಹಿ/– ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/1807/Zen/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆ.ವಿಜಯನಗರ ಜಿಲ್ಲೆ
ಸಂಖ್ಯೆ: EE/RWS&SD/VJNR/e-tender/Tech/2024-25/448 ದಿನಾಂಕ:03–09–2024
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ–07/2024–25
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರು 2024–25ನೇ ಸಾಲಿನ ಜೆ.ಜೆ.ಎಮ್ ಯೋಜನೆಯಡಿ ಅನುಮೋಧನೆಯಾದ ವಿಜಯನಗರ ಜಿಲ್ಲೆಯ 04 ಕಾಮಗಾರಿಗಳಿಗೆ ರೂ 91.40 ಲಕ್ಷ ರೂಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಇ–ಪ್ರೊಕ್ಯೂರಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಅವಧಿ ದಿನಾಂಕ:03–09–2024 ರಿಂದ 10–09–2024ರ ಸಾಯಂಕಾಲ 05.00 ಗಂಟೆಯವರೆಗೆ ನಿಗದಿಪಡಿಸಲಾಗಿದೆ ಮತ್ತು ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ತೆರೆಯುವ ದಿನಾಂಕ:11–09–2024ರಂದು ಬೆಳಿಗ್ಗೆ 05.05 ಗಂಟೆಗೆ ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ವೆಬ್‌ಸೈಟ್‌ನಲ್ಲಿ ಪಡೆಯಬಹುದು. (www.kppp.karnataka.gov.in) ಈ ಬಗ್ಗೆ ಇನ್ನು ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಹೊಸಪೇಟೆರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನೀಯರ್, ಗ್ರಾ.ನೀ.ಸ&ನೈ. ವಿಭಾಗ, ಹೊಸಪೇಟೆ.ವಿಜಯನಗರ ಜಿಲ್ಲೆ
ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/241

ವೈದ್ಯಕೀಯ ಅಧೀಕ್ಷಕರ ಕಛೇರಿ, ಕೆ.ಸಿ. ಜನರಲ್ ಆಸ್ಪತ್ರೆ
ಮಲ್ಲೇಶ್ವರಂ, ಬೆಂಗಳೂರು –560 003,
ದೂರವಾಣಿ:080–23344022, 23341771, ಇ–ಮೇಲ್:kcghoffice@gmail.com
ಸಂಖ್ಯೆ:ಕೆಸಿಜಿಆ:ಎನ್‌ಒಹೆಚ್‌ಪಿ/01/2024–25 ದಿನಾಂಕ: 04.09.2024
DHFWS/2024-25/IND0933
ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕೆಸಿ ಜನರಲ್ ಆಸ್ಪತ್ರೆ, ಮಲ್ಲೇಶ್ವರಂ ಮತ್ತು ಬೆಂಗಳೂರು ಇಲ್ಲಿಗೆ ದ್ವಿ–ಲಕೋಟೆ ಪದ್ಧತಿ ವ್ಯವಸ್ಥೆಯಲ್ಲಿ ಅಗತ್ಯವಿರುವ ಡೆಂಟಲ್ ಚೇರ್‌ಗಳನ್ನು ಪೂರೈಸಲು ಅರ್ಹ ಬಿಡ್ಡರ್‌ಗಳಿಂದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.
ಸಲಕರಣೆಗಳ ವಿವರಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ನಿಂದ ವೀಕ್ಷಿಸಬಹುದು (ಸೂಚನೆ: ಉಪ–ಏಜೆಂಟರನ್ನು ಅನುಮತಿಸಲಾಗುವುದಿಲ್ಲ.)
1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಕೆಪಿಪಿ ಪೋರ್ಟಲ್ https://kppp.karnataka.gov.in ನಿಂದ 04.09.2024ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಬಾವಿ ಸಭೆಯು ದಿನಾಂಕ: 11.09.2024 ರಂದು ಬೆಳಿಗ್ಗೆ 11:00 ಗಂಟೆಗೆ ಮಲ್ಲೇಶ್ವರಂನ ಕೆ.ಸಿ ಜನರಲ್ ಆಸ್ಪತ್ರೆಯ DNB ಸೆಮಿನಾರ್ ಹಾಲ್‌ನಲ್ಲಿ ನಡೆಯಲಿದೆ. 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 19.09.2024 ರ ಸಂಜೆ 5.00 ಗಂಟೆಯವರೆಗೆ. 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 24.09.2024 ರ ಬೆಳಿಗ್ಗೆ 11.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ನಮ್ಮ ವೆಬ್‌ಸೈಟ್‌ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.
ಸಹಿ/– ವೈದ್ಯಕೀಯ ಅಧೀಕ್ಷಕರು, ಕೆ.ಸಿ. ಜನರಲ್ ಆಸ್ಪತ್ರೆ, ಬೆಂಗಳೂರು.
ವಾಸಾಸಂಇ/ವಾಪ್ರ/ಜಿಎ/1829/2024–25

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ವಿಜನಿನಿ, ಭ.ಮೇ.ಯೋ. ವಿಭಾಗ, ನಂ.7, ಹಿರಿಯೂರು ಕ್ಯಾಂಪ್, ಚಿತ್ರದುರ್ಗ.
ದೂರವಾಣಿ ಸಂ:08194–200187 Email ID:ubpeediv07@gmail.com
ಸಂ:ಕಾ.ಇಂ/ವಿ.ಜ.ನಿ.ನಿ/ಭಮೇಯೋ/ವಿ.ನಂ.07/ಹಿ/ಕ್ಯಾಂ.ಚಿ/2023–24/03 ದಿನಾಂಕ:02.09.2024
ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನಾ, ವಿಭಾಗ ನಂ.07, ಹಿರಿಯೂರು ಕ್ಯಾಂಪ್; ಚಿತ್ರದುರ್ಗ ಇವರಿಂದ ಟೆಂಡರನ್ನು ಭದ್ರಾ ಮೇಲ್ದಂಡೆ ಯೋಜನೆಯ ಲೆಕ್ಕಶೀರ್ಷಿಕೆ DMF (District Mineral Fund) ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ Karnataka Public Procurement Portalನ https://kppp.karnataka.gov.in ಪೋರ್ಟಲ್‌ನಲ್ಲಿ ಅರ್ಹಗುತ್ತಿಗೆದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ಸಮಯದಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂ:08194–200187 ರಲ್ಲಿ ಸಂಪರ್ಕಿಸಬಹುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.
ಕಾಮಗಾರಿಯ ಹೆಸರು:– (1) Improvements to tank at Ramaghatta village in Ramagiri Hobli of Holalkere Taluk under D.M.F (VJNL/2024-25/MT/WORK¬_INDENT 92) **Amount put to tender in Lakhs:-86.23 EMD amount in Lakhs:- 1.73** The last date for submission of tender document **17.09.2024@ 5.00 PM** Date & time of Opening of Technical Bid **18.09.2024@ 5.30 PM**
(2) Improvements to Koosubavinakatte of Kumminaghatta village of Holalkere Taluk under D.M.F (VJNL/2024-25/IW/WORK-_INDENT 93) **Amount put to tender in Lakhs:- 50.61 EMD amount in Lakhs:- 1.02** The last date for submission of tender document **17.09.2024@ 5.00 PM** Date & time of Opening of Technical Bid **18.09.2024@ 5.30 PM**
DIPR/CTA/KSMCA/244/2024-25 ಸಹಿ/– ಕಾರ್ಯಪಾಲಕ ಇಂಜಿನಿಯರ್ ವಿ.ಜ.ನಿ.ನಿ, ಭ.ಮೇ.ಯೋ, ವಿಭಾಗ ನಂ.07, ಹಿರಿಯೂರು ಕ್ಯಾಂಪ್: ಚಿತ್ರದುರ್ಗ

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ. 5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 009.
ಇ–ಮೇಲ್: bmicapa@gmail.com, ದೂರವಾಣಿ: –080–22341230 / 35
ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–02/28/2024–25/816(1) ದಿನಾಂಕ: 30–08–2024
ಸಾರ್ವಜನಿಕ ಪ್ರಕಟಣೆ
[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]
ಸಿಸ್ಟರ್ ಇಮ್ಮಾಕುಲತೆ, ಸ್ವರ್ಗರಾಣಿ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ ಇವರು ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 193/3ರ 01ಎ–07ಗು, ಸರ್ವೆ ಸಂಖ್ಯೆ:193/4ರ 01ಎ–24ಗು (0ಎ–02ಗು 'ಅ' ಖರಾಬು ಸೇರಿ), ಸರ್ವೆ ಸಂಖ್ಯೆ:194/2ರ 01ಎ–38ಗು ಮತ್ತು ಸರ್ವೆ ಸಂಖ್ಯೆ:192/6ರ 0ಎ–19ಗು ಒಟ್ಟು 05ಎ–08ಗು ವಿಸ್ತೀರ್ಣದ ಜಮೀನುಗಳನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "ವ್ಯವಸಾಯ" ವಲಯದಿಂದ "ಶೈಕ್ಷಣಿಕ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನುಗಳನ್ನು ಅನುಮೋದಿತ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.
1. ಈ ಜಮೀನಿನಲ್ಲಿ ಶೈಕ್ಷಣಿಕ ಸಂಸ್ಥೆ ಅಭಿವೃದ್ಧಿಪಡಿಸುವುದರಿಂದ, ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯಾರ್ಥಿಗಳಿಗೆ ಆಧುನಿಕ ಶೈಕ್ಷಣಿಕ ಸೌಲಭ್ಯವುಳ್ಳ ಉತ್ತಮ ಶೈಕ್ಷಣಿಕ ಸಂಸ್ಥೆ ದೊರೆತಂತಾಗುತ್ತದೆ.
2. ಈ ಜಮೀನಿನಲ್ಲಿ ಶೈಕ್ಷಣಿಕ ಸಂಸ್ಥೆ ಅಭಿವೃದ್ಧಿಪಡಿಸುವುದರಿಂದ, ಸುತ್ತಮುತ್ತಲಿನ ಶಿಕ್ಷಕರಿಗೆ ಉದ್ಯೋಗ ಅವಕಾಶ ದೊರೆತಂತಾಗುತ್ತದೆ.
3. ಈ ಜಮೀನಿನಲ್ಲಿ ಶೈಕ್ಷಣಿಕ ಸಂಸ್ಥೆ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4. ಈ ಸ್ಥಳದಲ್ಲಿ ಶೈಕ್ಷಣಿಕ ಸಂಸ್ಥೆ ತೆರೆಯುವುದರಿಂದ ಕಛೇರಿಯಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಮತ್ತು ಇತರರಿಗೆ ಉದ್ಯೋಗಗಳು ದೊರೆತಂತಾಗುತ್ತದೆ.
ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.
ಸಹಿ/– ಸದಸ್ಯ ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.
DIPR/CP/RO1826/AAPL/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in

ಸುಭಾಷಿತ

ಜನರ ಗುಣ ಎಂತಹುದು ಎಂಬುದು ತಿಳಿಯಬೇಕಾದರೆ, ಅವರು ಏನನ್ನು ಪ್ರೀತಿಸುತ್ತಾರೆ ಎಂಬುದನ್ನು ಗಮನಿಸಬೇಕು. –ಸಂತ ಆಗಸ್ಟಿನ್

‘ಬುಲ್ಡೋಜರ್ ನ್ಯಾಯ’ಕ್ಕೆ ಅಸಮಾಧಾನ ಶಿಕ್ಷೆ ಆಗಬೇಕಿರುವುದು ಸರ್ಕಾರಗಳಿಗೆ

ಗಲಭೆ ಅಥವಾ ಹಿಂಸಾಚಾರ ಪ್ರಕರಣಗಳಲ್ಲಿ ಆರೋಪಿಗಳಾದ ಕೆಲವರಿಗೆ ಸೇರಿದ ಮನೆಗಳನ್ನು ಅಥವಾ ಕಟ್ಟಡಗಳನ್ನು ಬುಲ್ಡೋಜರ್ ಬಳಸಿ ಧ್ವಂಸಗೊಳಿಸುವ ಕಾರ್ಯವು ದೇಶದ ಕೆಲವು ರಾಜ್ಯಗಳಲ್ಲಿ ಚಾಲ್ತಿಯಲ್ಲಿದೆ. ಇದನ್ನು ಈಗ ‘ಬುಲ್ಡೋಜರ್ ನ್ಯಾಯ’ ಎಂದು ಗುರುತಿಸಲಾಗುತ್ತಿದೆ. ಈ ‘ನ್ಯಾಯ’ದ ಬಗ್ಗೆ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಅಕ್ರಮವಾಗಿ ನಿರ್ಮಿಸಿದ ಕಟ್ಟಡಗಳ ವಿಚಾರವಾಗಿ ಕೈಗೊಳ್ಳಬೇಕಾದ ಕ್ರಮ ಏನು ಎಂಬ ಕುರಿತಾಗಿ ಮಾರ್ಗಸೂಚಿಗಳನ್ನು ಹೊರಡಿಸುವುದಾಗಿ ಹೇಳಿದೆ. ಕೋರ್ಟ್‌ನ ಈ ಮಾತು ಇನ್ನೂ ಮೊದಲೇ ಬರಬಹುದಿತ್ತು. ಅಂದರೆ, ಬಿಜೆಪಿಯು ಅಧಿಕಾರದ ಚುಕ್ಕಾಣಿ ಹಿಡಿದಿರುವ ರಾಜ್ಯಗಳಲ್ಲಿ, ಪ್ರತೀಕಾರ ಅಥವಾ ಹಗೆ ತೀರಿಸಿಕೊಳ್ಳುವ ಉದ್ದೇಶದಿಂದ ನಡೆಯುವ ಧ್ವಂಸ ಪ್ರಕ್ರಿಯೆಯು ಸರ್ಕಾರದ ನೀತಿಯಾಗಿ ಬೇರು ಬಿಡುವ ಮೊದಲೇ ಕೋರ್ಟ್ ಈಗ ಆಡಿರುವ ಮಾತುಗಳನ್ನು ಆಡಬಹುದಿತ್ತು. ಧ್ವಂಸಕ್ಕೆ ಸಂಬಂಧಿಸಿದ ಬಿಡಿ ಪ್ರಕರಣಗಳು ಈ ಹಿಂದೆ ಕೋರ್ಟ್‌ನ ಗಮನ ಸೆಳೆದಿವೆ. ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್, ಈ ಬಗೆಯ ಧ್ವಂಸ ಕಾರ್ಯವನ್ನು ‘ಜನಾಂಗೀಯ ನಿರ್ಮೂಲನೆ’ ಎಂದು ಕೂಡ ಕಳೆದ ವರ್ಷ ಕರೆದಿತ್ತು. ಅಪರಾಧ ಕೃತ್ಯಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ವ್ಯಕ್ತಿಗಳ ಅಥವಾ ಅಂತಹ ವ್ಯಕ್ತಿಗಳ ಕುಟುಂಬದ ಸದಸ್ಯರ ಮನೆಗಳನ್ನು ಧ್ವಂಸಗೊಳಿಸುವುದನ್ನು ಶಿಕ್ಷೆಯ ರೂಪದಲ್ಲಿ ಎಲ್ಲೆಡೆಯೂ ಜಾರಿಗೆ ತರಬೇಕು ಎಂಬ ಒತ್ತಾಯ ಕೂಡ ಹಲವು ವ್ಯಕ್ತಿಗಳಿಂದ ಬಂದಿದೆ. ಅಲ್ಲದೆ, ಈ ಬಗೆಯ ಕ್ರಮವನ್ನು ಹಲವರು ಸರಿಯಾದ ಕ್ರಮ ಎಂದು ಸ್ವೀಕರಿಸಿದ್ದಾರೆ. ಇಂತಹ ‘ನ್ಯಾಯ’ವನ್ನು ಐದು ವರ್ಷಗಳ ಹಿಂದೆ ಕ್ರಿಯಾರೂಪಕ್ಕೆ ತಂದವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು. ಇಂತಹ ‘ನ್ಯಾಯ’ವನ್ನು ಈಗ ಮಧ್ಯಪ್ರದೇಶ, ಹರಿಯಾಣ ಮತ್ತು ಅಸ್ಸಾಂ ರಾಜ್ಯಗಳೂ ಅಳವಡಿಸಿಕೊಂಡಿವೆ.

ಮನೆಗಳನ್ನು ಧ್ವಂಸಗೊಳಿಸುವ ಬುಲ್ಡೋಜರ್‌ಗಳ ಹಿಂದೆ ಚಾಲಕಶಕ್ತಿಯಾಗಿ ಕೆಲಸ ಮಾಡುತ್ತಿರುವುದು ತಾರತಮ್ಯದ ರಾಜಕಾರಣ

ಬುಲ್ಡೋಜರ್ ಬಳಸಿ ಕಟ್ಟಡ ಧ್ವಂಸಗೊಳಿಸುವುದು ಕಾನೂನಿಗೆ ಅಥವಾ ರಾಜಕಾರಣಕ್ಕೆ ಸಂಬಂಧಿಸಿದ ಸಂಗತಿ ಮಾತ್ರವೇ ಅಲ್ಲ. ಇದು ಬಹುತೇಕ ಸಂದರ್ಭಗಳಲ್ಲಿ ಮುಸ್ಲಿಮರನ್ನು ಗುರಿಯಾಗಿಸಿಕೊಂಡಿರುತ್ತದೆ. ಬುಲ್ಡೋಜರ್ ಸಂಸ್ಕೃತಿಯಲ್ಲಿ ಇರುವಂತಹ ‘ದಿಢೀರ್ ನ್ಯಾಯ’ವನ್ನು ಯಾವ ಕಾನೂನು ಕೂಡ ಒಪ್ಪಲು ಸಾಧ್ಯವಿಲ್ಲ. ಕಾನೂನಿಗೆ ಅನುಗುಣವಾದ ಆಡಳಿತ ಇರುವ ಸಮಾಜದಲ್ಲಿ, ವ್ಯವಸ್ಥೆಯಲ್ಲಿ ಸರಿಯಾದ ಪ್ರಕ್ರಿಯೆಗಳ ಪಾಲನೆಯ ಮೂಲಕ ಮಾತ್ರ ನ್ಯಾಯದಾನ ಸಾಧ್ಯ. ಆದರೆ, ದುರದೃಷ್ಟದ ಸಂಗತಿಯೆಂದರೆ ‘ದಿಢೀರ್ ನ್ಯಾಯ’ವನ್ನು ವೈಭವೀಕರಿಸುವ ಹಾಗೂ ಅಂತಹ ‘ನ್ಯಾಯ’ಕ್ಕೆ ಒಪ್ಪಿಗೆ ನೀಡುವ ದೊಡ್ಡ ವರ್ಗವೊಂದು ಸಮಾಜದಲ್ಲಿ ಇದೆ. ಬುಲ್ಡೋಜರ್ ಎಂಬ ಯಂತ್ರವು ಈ ‘ದಿಢೀರ್ ನ್ಯಾಯ’ದ ಗುರುತಾಗಿದೆ. ‘ದಿಢೀರ್ ನ್ಯಾಯ’ಕ್ಕೆ ಬೇಡಿಕೆ ಹಾಗೂ ಮುಸ್ಲಿಮರ ವಿರುದ್ಧದ ಪೂರ್ವಗ್ರಹಗಳು ಒಂದುಗೂಡಿದಾಗ, ಬುಲ್ಡೋಜರ್ ಎಂಬುದು ಶಿಕ್ಷೆಯ ಹತಾರವಾಗುತ್ತದೆ. ನಡೆದಿರುವ ಅಪರಾಧವನ್ನು ಗುರುತಿಸಿ, ಸಂತ್ರಸ್ತರಿಗೆ ನ್ಯಾಯ ಕೊಡಿಸುವ ಕೆಲಸ ಇಲ್ಲಿ ಆಗುವುದಿಲ್ಲ. ಬದಲಿಗೆ, ವ್ಯಕ್ತಿಯೊಬ್ಬನನ್ನು ಆತನ ಅಸ್ಮಿತೆಯ ಕಾರಣಕ್ಕೆ ಶಿಕ್ಷೆಗೆ ಗುರಿಪಡಿಸಲು ಇದು ಒಂದು ನೆಪವಾಗುತ್ತದೆ. ಇದು ಪ್ರಭುತ್ವವೇ ಎಸಗುವ ದ್ವೇಷದ ಕೃತ್ಯವಾಗುತ್ತದೆ.

ವಾಸ್ತವದಲ್ಲಿ, ಬುಲ್ಡೋಜರ್ ನ್ಯಾಯದ ವಿಚಾರವಾಗಿ ಮಾರ್ಗಸೂಚಿಯನ್ನು ರೂಪಿಸಬೇಕಾದ ಅಗತ್ಯವೇ ಇಲ್ಲ. ಏಕೆಂದರೆ, ಯಾವುದೋ ಪ್ರಕರಣದ ಆರೋಪಿಯೊಬ್ಬರ ಮನೆಯನ್ನು ಬುಲ್ಡೋಜರ್ ಬಳಸಿ ಧ್ವಂಸಗೊಳಿಸುವುದು ಕಾನೂನಿಗೆ ಗೌರವ ಇಲ್ಲದವರು ಮಾಡುವ ಕೆಲಸ. ಇಂತಹ ಕೃತ್ಯವನ್ನು ನಿಲ್ಲಿಸಬೇಕು. ಪ್ರಕರಣವೊಂದರಲ್ಲಿ ಆರೋಪಿ ಎಂದಮಾತ್ರಕ್ಕೆ ಯಾವುದೇ ವ್ಯಕ್ತಿಯ ಮನೆಯನ್ನು ಧ್ವಂಸಗೊಳಿಸುವುದು ಎಷ್ಟು ಸರಿ ಎಂದು ಪ್ರಶ್ನಿಸುವ ಮೂಲಕ ಸುಪ್ರೀಂ ಕೋರ್ಟ್, ದೇಶದ ಕಾನೂನು ಏನಿದೆ ಎಂಬುದನ್ನು ಸ್ಪಷ್ಟಪಡಿಸಿದೆ. ವ್ಯಕ್ತಿಯೊಬ್ಬ ಅಪರಾಧಿ ಎಂದು ಸಾಬೀತಾದರೂ ಆತನ ಮನೆಯನ್ನು ಧ್ವಂಸಗೊಳಿಸಲು ಕಾನೂನಿನ ಅಡಿ ಅವಕಾಶ ಇಲ್ಲ ಎಂಬುದನ್ನು ಕೋರ್ಟ್ ಸ್ಪಷ್ಟಪಡಿಸಿದೆ. ಅಕ್ರಮವಾಗಿ ನಿರ್ಮಿಸಿದ ಕಟ್ಟಡಗಳನ್ನು ಧ್ವಂಸಗೊಳಿಸಲು ಕೆಲವು ಕಾನೂನುಗಳಲ್ಲಿ ಇರುವ ಅವಕಾಶವನ್ನು, ಕೆಲವು ವರ್ಗಗಳಿಗೆ ಸೇರಿದ ಜನರ ವಿರುದ್ಧ ಮಾತ್ರ ಬಳಸಲು ಜಾಣತನದಿಂದ ಉಪಯೋಗಿಸಿಕೊಳ್ಳಲಾಗುತ್ತಿದೆ. ಕಟ್ಟಡ ಧ್ವಂಸ ಪ್ರಕರಣಗಳಲ್ಲಿ ಕಾನೂನಿನ ಎಲ್ಲ ಪ್ರಕ್ರಿಯೆಗಳನ್ನೂ ಪೂರೈಸಲಾಗಿದೆ ಎಂದು ಉತ್ತರ ಪ್ರದೇಶ ಸರ್ಕಾರ ನೀಡಿರುವ ವಿವರಣೆಯಿಂದ ಇದು ಸ್ಪಷ್ಟವಾಗುತ್ತದೆ. ಆದರೆ, ಕೆಲವು ಕಟ್ಟಡಗಳನ್ನು ಮಾತ್ರ ಏಕೆ ಗುರಿಯಾಗಿಸಿಕೊಳ್ಳಲಾಗುತ್ತದೆ ಎಂಬುದು ಇಲ್ಲಿರುವ ಪ್ರಶ್ನೆ. ಈ ಧ್ವಂಸ ಸಂಸ್ಕೃತಿಯ ಮೂಲದಲ್ಲಿರುವುದು ಕಾನೂನನ್ನು ಬಳಕೆ ಮಾಡುವಲ್ಲಿ ಇರುವ ತಾರತಮ್ಯದ ನಡೆ. ಕೋರ್ಟ್ ರೂಪಿಸಲಿರುವ ಮಾರ್ಗಸೂಚಿಯು ಇದನ್ನು ಗಮನಿಸಬೇಕು, ಇಂತಹ ತಾರತಮ್ಯಕ್ಕೆ ಕಡಿವಾಣ ಹಾಕಬೇಕು. ಸಂತ್ರಸ್ತರಿಗೆ ಪರ್ಯಾಯ ವಸತಿಯನ್ನು ಕಲ್ಪಿಸದೆ, ಅಕ್ರಮ ಕಟ್ಟಡಗಳನ್ನು ಕೂಡ ಧ್ವಂಸಗೊಳಿಸಲು ಅವಕಾಶ ಇಲ್ಲ. ಮನೆಗಳನ್ನು ಧ್ವಂಸಗೊಳಿಸುವ ಬುಲ್ಡೋಜರ್‌ಗಳ ಹಿಂದೆ ಚಾಲಕಶಕ್ತಿಯಾಗಿ ಕೆಲಸ ಮಾಡುತ್ತಿರುವುದು ತಾರತಮ್ಯದ ರಾಜಕಾರಣ. ಇಂತಹ ಕೆಲಸ ಮಾಡುವ ಸರ್ಕಾರಗಳು ಅರಾಜಕತೆಗೆ ಉತ್ತೇಜನ ನೀಡುತ್ತಿವೆ, ಇಂತಹ ಸರ್ಕಾರಗಳನ್ನು ಶಿಕ್ಷೆಗೆ ಗುರಿಪಡಿಸಬೇಕು. ಮತ್ತೆ ಮತ್ತೆ ತಪ್ಪು ಮಾಡುವ ಸರ್ಕಾರಗಳನ್ನು ವಜಾಗೊಳಿಸಬೇಕು. ಮಾರ್ಗಸೂಚಿಗಳು ಅಂಥದ್ದೊಂದು ಅವಕಾಶ ಹೊಂದಿರಲಿವೆಯೇ ಎಂಬುದು ಈಗಿರುವ ಪ್ರಶ್ನೆ.

ದಿನದ ಟ್ವೀಟ್

ಇರಲಿ ನಾಗರಿಕ ಪ್ರಜ್ಞೆ

ಭಾರತೀಯ ಪ್ರವಾಸಿಗರು ಹೊಲಸು ಮಾಡುವ, ಉಗುಳುವಂತಹ ಕೃತ್ಯಗಳ ಮೂಲಕ ಸ್ವರ್ಗದಂತಹ ಪ್ರವಾಸಿ ತಾಣಗಳನ್ನು ಕಸದ ಗುಂಡಿಗಳಾಗಿ ಮಾರ್ಪಡಿಸುತ್ತಾರೆ. ನಾಗರಿಕ ಪ್ರಜ್ಞೆಯ ಕೊರತೆ.

ಫರ್ಹೋಸ್ ದಾರೂವಾಲ, ಉದ್ಯಮಿ

ಕಿಡಿನುಡಿ

ಬೀದಿನಾಯಿಗಳಿಗೆ ಆಹಾರ ನೀಡುವವರು ಮತ್ತು ಅವುಗಳನ್ನು ಆಶ್ರಯತಾಣಗಳಿಗೆ ಕರೆದೊಯ್ಯಲು ಬರುವ ನಗರಪಾಲಿಕೆ ಸಿಬ್ಬಂದಿಯ ಜೊತೆ ಜಗಳವಾಡುವವರು ಕನಿಷ್ಠ ₹ 5 ಲಕ್ಷ ಮುಂಗಡ ದಂಡವನ್ನು ಕಟ್ಟಬೇಕು ಮತ್ತು ಆ ನಾಯಿಗಳು ಕಚ್ಚುವ ವ್ಯಕ್ತಿಗೆ ₹ 10 ಲಕ್ಷ ನೀಡಬೇಕು. ಒಂದುವೇಳೆ ಜೀವಹಾನಿಯಾದರೆ ಜೈಲು ಶಿಕ್ಷೆ ವಿಧಿಸುವುದಕ್ಕೂ ಅವಕಾಶ ಇರಬೇಕು.

ಈಶ್ವರ್ ಸಿಂಗ್, ಬಿಸಿನೆಸ್ ಕನ್ಸಲ್‌ಟೆಂಟ್

25 ವರ್ಷಗಳ ಹಿಂದೆ

ಶನಿವಾರ, 4-9-1999

• ಇಬ್ಬರು ಭಾರತೀಯ ಸೈನಿಕರ ಬಿಡುಗಡೆಗೆ ಪಾಕ್ ಸಮ್ಮತಿ

ಇಸ್ಲಾಮಾಬಾದ್, ಸೆ. 3 (ರಾಯಿಟರ್ಸ್)– ಕಾಶ್ಮೀರದಲ್ಲಿ ಸೆರೆ ಹಿಡಿಯಲಾಗಿರುವ ಇಬ್ಬರು ಭಾರತೀಯ ಸೈನಿಕರನ್ನು ತಕ್ಷಣ ಬಿಡುಗಡೆ ಮಾಡುವುದಾಗಿ ಹೇಳಿರುವ ಪಾಕಿಸ್ತಾನ, ಅವರನ್ನು ವಶಕ್ಕೆ ತೆಗೆದುಕೊಳ್ಳುವಂತೆ ಅಂತರ-ರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆಗೆ ಹೇಳಿದೆ.

ಬಂಧಿತ ಈ ಇಬ್ಬರು ಸೈನಿಕರ ವಿಡಿಯೊ ಚಿತ್ರಣದ ತುಣುಕುಗಳನ್ನು ಮಾಧ್ಯಮಕ್ಕೆ ಬಿಡುಗಡೆ ಮಾಡಿದ ಒಂದು ದಿನದ ನಂತರ ವಿದೇಶಾಂಗ ಸಚಿವಾಲಯ ಈ ಪ್ರಕಟಣೆ ಹೊರಡಿಸಿದೆ. ಉತ್ತರ ಕಾಶ್ಮೀರದಲ್ಲಿ ಸೋಮವಾರ ನಡೆದ ಆಕ್ರಮಣದ ಸಂದರ್ಭದಲ್ಲಿ ಲ್ಯಾನ್ಸ್ ನಾಯಕ್ ರಾಂ ಸಿಂಗ್ ಮತ್ತು ಸಿಪಾಯಿ ಬಾಜಿಂದರ್ ಸಿಂಗ್ ಅವರನ್ನು ಬಂಧಿಸಿರುವುದಾಗಿ ಸಚಿವಾಲಯ ಇದಕ್ಕೆ ಮುಂಚೆ ಹೇಳಿತ್ತು.

• ಸೇನಾ ವಾಹನದ ಮೇಲೆ ಬಾಂಬ್: ಇಬ್ಬರ ಸಾವು

ಗುವಾಹಟಿ, ಸೆ. 3 (ಪಿಟಿಐ, ಯುಎನ್ಐ)– ಅಸ್ಸಾಮಿನ ನಾಗಾಂಗ್ ಜಿಲ್ಲೆಯ ಧಿಂಗ್ ಎಂಬಲ್ಲಿ ನಿನ್ನೆ ರಾತ್ರಿ ಶಂಕಿತ ಉಲ್ಫಾ ಉಗ್ರರು ಸೇನಾ ವಾಹನವೊಂದರ ಮೇಲೆ ಕೈಬಾಂಬ್ ಎಸೆದ ಘಟನೆಯಲ್ಲಿ ಸಿಆರ್‌ಪಿಎಫ್‌ನ ಒಬ್ಬ ಯೋಧ ಸಹಿತ ಇಬ್ಬರು ಸತ್ತಿದ್ದಾರೆ.

ಘಟನೆಯಲ್ಲಿ ಇತರ ಏಳು ಮಂದಿ ಗಾಯಗೊಂಡಿದ್ದಾರೆ. ಸಿಆರ್‌ಪಿಎಫ್ ಯೋಧರು ಮಾಮೂಲಿ ಗಸ್ತು ನಡೆಸುತ್ತಿದ್ದ ವೇಳೆ ಈ ದುಷ್ಕೃತ್ಯ ಸಂಭವಿಸಿತ್ತು.

50 ವರ್ಷಗಳ ಹಿಂದೆ

ಬುಧವಾರ, 4-9-1974

• ದೇವೇಗೌಡ– ಅರಸು ಸವಾಲು ಪ್ರಕರಣಕ್ಕೆ ವಿಧಾನಸಭೆ ಅಧಿವೇಶನ ಬಲಿ

ಬೆಂಗಳೂರು, ಸೆ. 3– ಸೂಚಿತ ಕಾರ್ಯಕ್ರಮದಂತೆ ಶನಿವಾರದವರೆಗೆ ಮುಂದುವರಿಯಬೇಕಿದ್ದ ವಿಧಾನಸಭೆ ಅಧಿವೇಶನವು ಮೂರು ದಿನಗಳಿಂದ ಇತ್ಯರ್ಥ ಕಾಣದ ‘ಅರಸು-ದೇವೇಗೌಡರ ಸವಾಲು– ಜವಾಬುಗಳ ಪ್ರಕರಣ’ಕ್ಕೆ ಬಲಿಯಾಗಿ, ಅನಿರ್ದಿಷ್ಟ ಕಾಲದವರೆಗೆ ಮುಂದಕ್ಕೆ ಹೋಯಿತು.

ತಾವು ಬಿಜಾಪುರದಲ್ಲಿ ಮಾಡಿದ ಭಾಷಣ ಮತ್ತು ಅದಕ್ಕೆ ಸಂಬಂಧಿಸಿದಂತೆ ವಿರೋಧ ಪಕ್ಷದ ನಾಯಕರು ಮಾಡಿರುವ ಸವಾಲಿನ ಬಗ್ಗೆ ಯಾವುದೇ ಹೇಳಿಕೆ ಕೊಡಲು ನಿರಾಕರಿಸಿದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ‘ಈ ಸಂದರ್ಭದಲ್ಲಿ ಹೇಳಿಕೆ ಸೂಕ್ತವಲ್ಲ; ಈ ಸಭೆಯಲ್ಲಿ ಹೇಳಿಕೆ ಕೊಡುವ ಅಗತ್ಯವೂ ಇಲ್ಲ’ ಎಂದು ಒಂದು ಘಟ್ಟದಲ್ಲಿ ವಿರೋಧ ಪಕ್ಷದವರಿಗೆ ಸ್ಪಷ್ಟಪಡಿಸಿದರು.

• ಕೊಯ್ನಾ ಜಲಾಶಯದಲ್ಲಿ ರಾಜ್ಯಕ್ಕೆ ಪಾಲು ಇಲ್ಲ: ಅರಸು

ಬೆಂಗಳೂರು, ಸೆ. 3– ಮಹಾರಾಷ್ಟ್ರದ ಕೊಯ್ನಾ ಜಲಾಶಯದಲ್ಲಿ ಕರ್ನಾಟಕದ ಪಾಲು ಪಡೆಯಲು ಇದ್ದ ಅವಕಾಶವನ್ನು ಕಳೆದುಕೊಂಡ ವಿಷಯವನ್ನು ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ಬಹಿರಂಗಪಡಿಸಿದರು.

ಹಲವು ರಾಜ್ಯಪಾಲರ ವಿವೇಚನಾಧಿಕಾರದ ನಡೆಗಳು ಅನುಮಾನಾತೀತವಾಗಿಲ್ಲ

ರಾಜ್ಯಪಾಲರು ನ್ಯಾಯಪಾಲರಾಗುವ ಅಗತ್ಯ

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ (ಮುಡಾ) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ ಬದಲಿ ನಿವೇಶನಗಳನ್ನು ನೀಡಿದ ವಿಷಯವು ಮುನ್ನೆಲೆಗೆ ಬಂದ ನಂತರ ನಡೆಯುತ್ತಿರುವ ವಿದ್ಯಮಾನಗಳು ಅನೇಕ ಆಯಾಮಗಳನ್ನು ಅನಾವರಣಗೊಳಿಸುತ್ತಿವೆ. ವೈಯಕ್ತಿಕ ಜಿದ್ದಾಜಿದ್ದಿ, ಜಾತಿ ಪ್ರಸ್ತಾಪ, ಭ್ರಷ್ಟಾಚಾರ, ಬೈಗುಳಾತ್ಮಕ ಆರೋಪದಂತಹ ಅಂಶಗಳ ನಡುವೆ ಬಹುಮುಖ್ಯವಾಗಿ ಸಂಸದೀಯ ಪ್ರಜಾಪ್ರಭುತ್ವದಲ್ಲಿ ರಾಜ್ಯಪಾಲರ ಪಾತ್ರ ಕುರಿತಂತೆ ಮತ್ತೆ ಪ್ರಶ್ನೆಗಳು ಎದ್ದಿವೆ.

ಮೊದಲಿಗೆ ರಾಜ್ಯಪಾಲರು ಮುಖ್ಯಮಂತ್ರಿಯವರಿಗೆ ನೋಟಿಸ್ ನೀಡಿದ್ದೇ ದೊಡ್ಡ ವಿವಾದವಾಯಿತು. ದೂರು ಸ್ವೀಕಾರಗೊಂಡ ಕೆಲವೇ ಗಂಟೆಗಳಲ್ಲಿ ಈ ನೋಟಿಸ್ ಜಾರಿಯಾದ ತರಾತುರಿಯ ಕ್ರಮ ಸಹಜವಾಗಿಯೇ ಅನುಮಾನಗಳನ್ನು ಆಹ್ವಾನಿಸಿತು. ಒಂದು ಕಡೆ, ರಾಜ್ಯಪಾಲರು ತೀವ್ರ ತರಾತುರಿಯಲ್ಲಿ ನೋಟಿಸ್ ನೀಡಿದರೆ, ಇನ್ನೊಂದು ಕಡೆ, ಕಾಂಗ್ರೆಸ್ಸಿನವರು ವಿರೋಧ ಪಕ್ಷದವರಿಗೆ ಸಂಬಂಧಿಸಿದಂತೆ ವರ್ಷದ ಹಿಂದೆ ರಾಜಭವನ ತಲುಪಿರುವ ಪ್ರಕರಣಗಳನ್ನು ದಿಢೀರ್ ಜ್ಞಾನೋದಯವಾದಂತೆ ಜ್ಞಾಪಿಸಿಕೊಂಡರು. ಈ ಎರಡೂ ನಮ್ಮ ಸಮಕಾಲೀನ ‘ಶಕ್ತಿರಾಜಕೀಯ’ದ ವಿಪರ್ಯಾಸ!

ಸಿದ್ದರಾಮಯ್ಯನವರು ಮುಡಾ ಪ್ರಕರಣದ ನೇರ ಪಾಲುದಾರರಲ್ಲ. ಅದು ಅವರ ಪತ್ನಿಯವರಿಗೆ ಸಂಬಂಧಿಸಿದ್ದು. ಬಿಜೆಪಿ ನೇತೃತ್ವದ ಸರ್ಕಾರದ ಆಡಳಿತಾವಧಿಯಲ್ಲಿ ನಿವೇಶನಗಳು ಮಂಜೂರಾದದ್ದು. ಮುಡಾದ ಅಂದಿನ ಅಧ್ಯಕ್ಷರೇ ಎಲ್ಲವೂ ನಿಯಮಾನುಸಾರ ನಡೆದಿವೆಯೆಂದೂ, ಬಿಜೆಪಿ, ಕಾಂಗ್ರೆಸ್, ಜೆಡಿಎಸ್‌ನ ಶಾಸಕರಿದ್ದ ಸಭೆಯಲ್ಲೇ ಮಂಜೂರು ಮಾಡಲಾಗಿದೆಯೆಂದೂ ಹೇಳಿದ್ದಾರೆ. ನಿಯಮ ಮತ್ತು ನೈತಿಕ ನೆಲೆಗಳು ಪ್ರತ್ಯೇಕವಾಗಿರುವ ನಮ್ಮ ಸಂದರ್ಭದಲ್ಲಿ ನಿಯಮಗಳೇ ಮುಖ್ಯವಾಗುವುದು ಅನಿವಾರ್ಯ ಆಗಿದೆ. ಇಷ್ಟಾಗಿಯೂ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದು ಯಾಕೆ?

‘ಹಿಂದುಳಿದ ವರ್ಗ’ಕ್ಕೆ ಸೇರಿದ ಮುಖ್ಯಮಂತ್ರಿಯನ್ನು ಪದಚ್ಯುತಗೊಳಿಸುವ ಪ್ರಯತ್ನ ಎನ್ನುವುದು ಒಂದು ಆಪಾದನೆ. ಇದಕ್ಕೆ ಪೂರಕವಾಗಿ ಬಲಾಢ್ಯ ಜಾತಿಗಳ ನೇತಾರರ ವಿರುದ್ಧ ತನಿಖೆ ಅಥವಾ ವಿಚಾರಣೆಗೆ ಅನುಮತಿ ಕೋರಿದ ಪ್ರಸ್ತಾವಗಳ ವಿಚಾರದಲ್ಲಿ ಕ್ರಮ ಕೈಗೊಳ್ಳದೆ, ಹಿಂದುಳಿದ ಜಾತಿಯ ನಾಯಕರ ಮೇಲೆ ಕ್ರಮಕ್ಕೆ ಮುಂದಾಗಿದ್ದಾರೆಂಬ ತರ್ಕವನ್ನು ಮಂಡಿಸಲಾಗುತ್ತಿದೆ. ಹೀಗೆ ಜಾತಿಪ್ರಧಾನ ಮಂಡನೆ ಮಾಡುವಾಗ ರಾಜ್ಯಪಾಲರು ಪರಿಶಿಷ್ಟ ಜಾತಿಯವರು ಎಂಬುದನ್ನು ಮರೆಯಬಾರದು. ಯಾಕೆಂದರೆ, ಜಾತಿ ಕಾರಣಕ್ಕೆ ರಾಜ್ಯಪಾಲರನ್ನು ಗುರಿಯಾಗಿಸಿ ಅವರ ವಿರುದ್ಧ ಆರೋಪ ಮಾಡಲಾಗುತ್ತಿದೆಯೆಂಬ ವಾದಕ್ಕೂ ಅವಕಾಶವಿದೆಯಲ್ಲ? ಆದ್ದರಿಂದ ನನಗನ್ನಿಸಿದಂತೆ, ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿಕೊಂಡು ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನದ ಫಲವೇ ಈ ಪ್ರಾಸಿಕ್ಯೂಷನ್ ಕ್ರಮ. ಇಲ್ಲಿ ಜಾತಿಗಿಂತ ‘ಪಕ್ಷ’ ಕೆಲಸ ಮಾಡಿದೆ. ಕೇಂದ್ರದಲ್ಲಿರುವ ಸರ್ಕಾರ ಮತ್ತು ಅದನ್ನು ಮುನ್ನಡೆಸುವ ಪಕ್ಷದ ಅಜೆಂಡಾವೇ ರಾಜ್ಯಪಾಲರಿಗೆ ಆದ್ಯತೆಯಾಗುವುದು ಇಂದಿನ ರಾಜಕೀಯ ವಾಸ್ತವ. ಸರ್ಕಾರವನ್ನು ಅಸ್ಥಿರಗೊಳಿಸುವ ‘ಪಕ್ಷ’ಪಾತದ ಕ್ರಮಗಳು ಹಿಂದಿನಿಂದಲೇ ರಾಜಭವನದ ಮೂಲಕ ಜಾರಿಯಾಗುತ್ತ ಬಂದಿವೆ. ಇಲ್ಲಿ ಮುಖ್ಯಮಂತ್ರಿಯವರನ್ನು ಇಕ್ಕಟ್ಟಿಗೆ ಸಿಲುಕಿಸಿದರೆ ಇಡೀ ಸರ್ಕಾರವೇ ಅಸ್ಥಿರಗೊಳ್ಳುತ್ತದೆ ಎಂಬ ತಂತ್ರವೇ ಮುಖ್ಯ ಕಾರ್ಯಸೂಚಿ ಎನ್ನಿಸುತ್ತದೆ.

ಈ ಹಿನ್ನೆಲೆಯಲ್ಲಿ ಪರ ಮತ್ತು ವಿರೋಧದ ಪ್ರತಿಭಟನೆಗಳು ನಡೆಯುತ್ತಿವೆ. ವಿಶೇಷವಾಗಿ ರಾಜ್ಯಪಾಲರ ವಿರುದ್ಧ ಕಾಂಗ್ರೆಸ್ಸಿಗರು ಆಕ್ರೋಶಭರಿತರಾಗಿದ್ದಾರೆ. ಆದರೆ ಆಕ್ರೋಶ ಹೊರಹಾಕುವ ಭರದಲ್ಲಿ ಅನುಚಿತ ಪದ ಪ್ರಯೋಗವಾಗುವುದು ಸಭ್ಯತೆಯಲ್ಲ. ಅಂತೆಯೇ ಪಾದಯಾತ್ರೆ ಸಂದರ್ಭದಲ್ಲಿ ವಿಜೃಂಭಿಸಿದ ಪರಸ್ಪರ ಏಕವಚನದ ಪ್ರಯೋಗ ಪ್ರಜಾಸತ್ತಾತ್ಮಕ ಪರಿಭಾಷೆಯಲ್ಲ. ಪ್ರತಿಭಟನೆಯ ಹಕ್ಕಿಗೆ ಶಕ್ತಿ ತುಂಬಲು ಸಂಯಮ ಮತ್ತು ಸಂಸದೀಯ ಭಾಷೆ ಅಗತ್ಯ. ಆದರೆ ಈ ಪ್ರಕರಣದಲ್ಲಿ ಬೈಗುಳದ ಭಾಷೆ ವಿಜೃಂಭಿಸುತ್ತಿದೆ. ಜೊತೆಗೆ, ಸಂಸದೀಯ ಪ್ರಜಾಪ್ರಭುತ್ವ ಎತ್ತ ಸಾಗುತ್ತಿದೆ ಎಂಬ ಪ್ರಶ್ನೆಗೆ ರಾಜಕಾರಣಿಗಳಷ್ಟೇ ಅಲ್ಲ ರಾಜಭವನಗಳೂ ಕಾರಣವಾಗುತ್ತಿವೆ.

ರಾಜಭವನಗಳು ಈಗ ಮಾತ್ರವೇ ‘ಪಕ್ಷ’ಪಾತದಿಂದ ವರ್ತಿಸುತ್ತಿವೆಯೆಂದರೆ ತಪ್ಪಾಗುತ್ತದೆ. ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರವಿದ್ದಾಗಲೂ ರಾಜಭವನಗಳ ದುರ್ಬಳಕೆಯಾಗಿದೆ. ಆಗ ರಾಜ್ಯಪಾಲರ ವರದಿಯನ್ನು ಆಧರಿಸಿ, ಸಂವಿಧಾನದ 356ನೇ ವಿಧಿಯನ್ನು ಬಳಸಿ, ವಿರೋಧ ಪಕ್ಷಗಳ ನೇತೃತ್ವದ ಸರ್ಕಾರಗಳನ್ನು ವಜಾ ಮಾಡಿದ ಅನೇಕ ನಿದರ್ಶನಗಳಿವೆ. ಮೊದಲ ಬಾರಿಗೆ 1951ರ ಜೂನ್ 20ರಂದು ಪಂಜಾಬ್ ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತವನ್ನು ಹೇರಲಾಯಿತು. 1959ರ ಜುಲೈ 31ರಂದು ಇದೇ ರೀತಿ ಕೇರಳದ ಎಡಪಕ್ಷಗಳ ನೇತೃತ್ವದ ಸರ್ಕಾರವನ್ನು ವಜಾ ಮಾಡಲಾಯಿತು. ಇಂದಿರಾ ಗಾಂಧಿಯವರ ಆಡಳಿತಾವಧಿಯಲ್ಲಿ 39 ಬಾರಿ ರಾಷ್ಟ್ರಪತಿ ಆಡಳಿತವನ್ನು ಜಾರಿ ಮಾಡಲಾಯಿತು.

ಇಂಥ ಕ್ರಮಗಳ ಕಾರಣದಿಂದ ‘ರಾಜ್ಯಪಾಲರು ಕೇಂದ್ರದ ಕೈಗೊಂಬೆ’ ಎಂಬ (ಕು)ಖ್ಯಾತಿ ಜಾಹೀರಾಯಿತು. ಹಾಗೆಂದು ಇದು ಕಾಂಗ್ರೆಸ್ಸಿಗರಿಗೆ ಮಾತ್ರ ಸೀಮಿತವಾಗಲಿಲ್ಲ. ತುರ್ತು ಪರಿಸ್ಥಿತಿಯ ನಂತರ ಅಧಿಕಾರಕ್ಕೆ ಬಂದ ಜನತಾ ಪಕ್ಷ ನೇತೃತ್ವದ ಸರ್ಕಾರವು ಅಲ್ಪಾವಧಿಯಲ್ಲೇ 9 ರಾಜ್ಯಗಳಲ್ಲಿ ವಿರೋಧ ಪಕ್ಷಗಳ ನೇತೃತ್ವದ ಸರ್ಕಾರಗಳನ್ನು ವಜಾ ಮಾಡಿ ರಾಷ್ಟ್ರಪತಿ ಆಡಳಿತವನ್ನು ಹೇರಿತು. ಇದರಿಂದ ಒಂದಂತೂ ಸ್ಪಷ್ಟ: ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ಸರ್ಕಾರಗಳು ರಾಜ್ಯಪಾಲರನ್ನು ತಮ್ಮ ಕಾರ್ಯಸೂಚಿಗೆ ಅಧೀನವಾಗಿಸಿಕೊಂಡು ವಿರೋಧ ಪಕ್ಷಗಳ ನೇತೃತ್ವದ ಸರ್ಕಾರಗಳಿಗೆ ಕಿರುಕುಳ ನೀಡುತ್ತಾ ಬಂದಿವೆ. ಇದು ಪಕ್ಷಗಳ ಪ್ರವೃತ್ತಿ ಮಾತ್ರವಲ್ಲ. ಆಡಳಿತ ಪಕ್ಷ ಯಾವುದೇ ಆಗಿದ್ದರೂ ಒಟ್ಟಾರೆ ಆಳುವ ವರ್ಗದ ಸ್ವಹಿತಾಸಕ್ತ ಪ್ರವೃತ್ತಿಯೇ ಇಲ್ಲಿ ಪ್ರಧಾನವಾಗಿದೆ.

ಹಿಂದೆಂದಿಗಿಂತ ಹೆಚ್ಚು ಅತಾರ್ಕಿಕವಾಗಿ ರಾಜ್ಯಪಾಲರು ವರ್ತಿಸುತ್ತಿರುವುದಕ್ಕೆ ಬೇರೆ ರಾಜ್ಯಗಳಲ್ಲಿ ಬಹಳಷ್ಟು ನಿದರ್ಶನಗಳನ್ನು ಕಾಣಬಹುದಾಗಿದೆ. ರಾಜ್ಯಪಾಲರು ಮತ್ತು ರಾಜ್ಯ ಸರ್ಕಾರವು ಪರಸ್ಪರ ಎಷ್ಟೆಲ್ಲಾ ರಾಡಿ ಮಾಡಿಕೊಳ್ಳಬಹುದು ಎಂಬುದಕ್ಕೆ ಪಶ್ಚಿಮ ಬಂಗಾಳದ ಕೆಲವು ಪ್ರಕರಣಗಳು ಸಾಕ್ಷಿಯಾಗಿವೆ. ಜಗದೀಪ್ ಧನಕರ್ ಅವರು ರಾಜ್ಯಪಾಲರಾಗಿದ್ದಾಗ ಮುಖ್ಯಮಂತ್ರಿ ಮತ್ತು ರಾಜ್ಯಪಾಲರ ನಡುವೆ ನಡೆದ ‘ಜಗಳಗಳು’ ಈಗಿನ ರಾಜ್ಯಪಾಲ ಆನಂದ ಬೋಸ್ ಅವರ ಅವಧಿಯಲ್ಲೂ ಯಥೋಚಿತವಾಗಿ ಮುಂದುವರಿದಿವೆ.

ತಮಿಳುನಾಡಿನದು ಇನ್ನೊಂದು ಪ್ರಹಸನ! ಅಲ್ಲಿನ ರಾಜ್ಯಪಾಲ ಆರ್.ಎನ್.ರವಿ ಅವರು 2023ರಲ್ಲಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುವಾಗ, ಸಚಿವ ಸಂಪುಟ ಅನುಮೋದಿಸಿದ್ದ ಭಾಷಣದ ಕೆಲವು ಭಾಗಗಳನ್ನು ಓದಲು ನಿರಾಕರಿಸಿದರು. 2024ರಲ್ಲಿ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಓದಲು ನಿರಾಕರಿಸಿದ್ದಷ್ಟೇ ಅಲ್ಲ, ಒಂದು ಹಂತದಲ್ಲಿ ಸಭಾತ್ಯಾಗವನ್ನೂ ಮಾಡಿದರು. ವಿಧಾನ ಮಂಡಲದಲ್ಲಿ ಅಂಗೀಕೃತಗೊಂಡ ಅನೇಕ ಮಸೂದೆಗಳಿಗೆ ದೀರ್ಘಕಾಲ ಸಹಿಯನ್ನೇ ಮಾಡದೆ ಸತಾಯಿಸಿದರು. ಕೇರಳದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರೂ ಅಲ್ಲಿನ ಅನೇಕ ಮಸೂದೆಗಳಿಗೆ ಸಹಿ ಮಾಡಲಿಲ್ಲ. ವಿಶ್ವವಿದ್ಯಾಲಯಗಳ ಕುಲಪತಿಗಳ ವಿಷಯದಲ್ಲೂ ವಿವಾದವುಂಟು ಮಾಡಿಕೊಂಡರು. ಪಂಜಾಬ್ ರಾಜ್ಯಪಾಲರಾಗಿದ್ದ ಬನ್ವರಿಲಾಲ್ ಪುರೋಹಿತ್ ಅವರೂ ಇದೇ ರೀತಿ ವರ್ತಿಸಿದರು. ಸ್ಪೀಕರ್ ಕರೆದಿದ್ದ ಅಧಿವೇಶನವನ್ನು ಅವರು ರದ್ದು ಮಾಡಿದ್ದೂ ವಿವಾದವಾಯಿತು. 2015ರಲ್ಲಿ ಅರುಣಾಚಲ ಪ್ರದೇಶದ ರಾಜ್ಯಪಾಲರು ಕಾಂಗ್ರೆಸ್‌ನಿಂದ ಹೊರಬಂದವರಿಗೆ ಸರ್ಕಾರವನ್ನು ರಚಿಸುವ ಅವಕಾಶ ನೀಡಿದರು. ಇದನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತು.

ತಮಿಳುನಾಡು ಮತ್ತು ಕೇರಳ ಸರ್ಕಾರಗಳು ರಾಜ್ಯಪಾಲರ ನಡೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯ ಕೇಳಿದವು. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ತನ್ನ ತೀರ್ಪಿನಲ್ಲಿ ‘ಸಂಸದೀಯ ಪ್ರಜಾಪ್ರಭುತ್ವದಲ್ಲಿ ಜನರ ಪ್ರತಿನಿಧಿಯಾದ ಸರ್ಕಾರಗಳ ಅಧಿಕಾರಕ್ಕೆ’ ಮಾನ್ಯತೆ ನೀಡಿತು. ಸಂವಿಧಾನವು ನೇರವಾಗಿ ವಿವೇಚನಾಧಿಕಾರ ಕೊಟ್ಟಿರುವ ವಿಷಯಗಳನ್ನು ಹೊರತುಪಡಿಸಿ, ರಾಜ್ಯಪಾಲರು ರಾಜ್ಯ ಸರ್ಕಾರದ ಶಿಫಾರಸುಗಳಂತೆ ನಡೆದುಕೊಳ್ಳಬೇಕೆಂದು ನಿರ್ದೇಶಿಸಿತು. ಆದರೂ ಅನೇಕ ರಾಜ್ಯಪಾಲರ ವಿವೇಚನಾಧಿಕಾರದ ನಡೆಗಳು ಅನುಮಾನಾತೀತವಾಗಿಲ್ಲ. ಕರ್ನಾಟಕದ್ದು ಇತ್ತೀಚಿನ ಉದಾಹರಣೆ.

ಎಲ್ಲಾ ರಾಜ್ಯಪಾಲರು ನ್ಯಾಯಪಾಲರಾಗಬೇಕಾದದ್ದು ಇಂದಿನ ಅಗತ್ಯ. ಇದು ಸರ್ಕಾರಗಳಿಗೂ ಅನ್ವಯಿಸುತ್ತದೆ. ಕೊನೆಗೊಂದು ಮಾತು: ಸಿದ್ದರಾಮಯ್ಯ ಅವರ ವಿರುದ್ಧ ವಿರೋಧ ಪಕ್ಷಗಳು ಮಾಡುತ್ತಿರುವ ಆರೋಪವು ಕಾಂಗ್ರೆಸ್ಸಿನಲ್ಲಿ ‘ಅನಿವಾರ್ಯ’ ಒಗ್ಗಟ್ಟನ್ನು ರೂಪಿಸಿದೆ. ಈ ಒಗ್ಗಟ್ಟು ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ಸಿನಲ್ಲಿ ಮತ್ತಷ್ಟು ಬಲಾಢ್ಯರನ್ನಾಗಿಸಿದೆ.

ಚುರುಮುರಿ

ಭಾಷಾಂತರ ಬಿಸಿ!

• ಗುರು ಪಿ.ಎಸ್.

‘ಪ್ರಾಸಿಕ್ಯೂಷನ್, ರಿಪೋರ್ಟ್ ಅಂತೆಲ್ಲ ಎಷ್ಟು ಹಿಂಸೆ ಕೊಡ್ತಿದಾರಪ್ಪ ಇವರೆಲ್ಲ’ ಕೈ ಹಿಸುಕಿಕೊಳ್ಳುತ್ತಾ ಹೇಳಿದ ಪೊಲಿಟಿಷಿಯನ್ ವಿಜಿ.

‘ಯಾವುದೇ ಸವಾಲಿಗೂ ‘ರೆಡಿ’ ಅನ್ನೋ ನೀವು ಇವತ್ತೇಕೆ ಇಷ್ಟು ಟೆನ್ಷನ್‌ನಲ್ಲಿದೀರಿ ಸರ್?’ ಕೇಳಿದ ಪಿ.ಎ ಮುದ್ದಣ್ಣ.

‘ನನ್ನ ವಿರುದ್ಧದ ವರದಿಯನ್ನು ತರ್ಜುಮೆ ಮಾಡಿಕೊಡಿ ಅಂತ ರಾಜ್ಯಪಾಲರು ಕೇಳಿದ್ದಾರಂತೆ’.

‘ಅಯ್ಯೋ ಹೌದೆ !’ ಕೇಳಿದ ಮುದ್ದಣ್ಣ.

ಇದ್ದಕ್ಕಿದ್ದಂತೆ ಮೇಲೆದ್ದ ವಿಜಿ, ‘ಕೆಪಿಎಸ್‌ಸಿ ಎಕ್ಸಾಮ್ ಕ್ವಶ್ಚನ್ ಪೇಪರ್‌ನ ಟ್ರಾನ್ಸ್‌ಲೇಟ್ ಮಾಡಿದವನನ್ನ ಬೇಗ ಕರೆದುಕೊಂಡು ಬಾ’ ಎಂದ.

‘ಹೋಗಲಿ ಬಿಡಿ ಸರ್, ಈಗ ರಿ ಎಕ್ಸಾಮ್ ಮಾಡೋಕೆ ಸರ್ಕಾರ ಆರ್ಡರ್ ಮಾಡಿದೆಯಲ್ಲ, ಮತ್ಯಾಕೆ ಆ ಟ್ರಾನ್ಸ್‌ಲೇಟರ್ ಜೀವ ತಿಂತೀರಿ?’

‘ಹೇಳಿದಷ್ಟು ಕೇಳು, ತಲೆಹರಟೆ ಮಾಡಬೇಡ’ ಸಿಡುಕಿದ ವಿಜಿ. ಎರಡೇ ತಾಸಿನಲ್ಲಿ ಟ್ರಾನ್ಸ್‌ಲೇಟರ್ ಬಂದು ವಿಜಿ ಮುಂದೆ ನಿಂತ!

‘ಬನ್ನಿ, ಬನ್ನಿ’ ನಗುಮೊಗದಿಂದ ಭಾಷಾಂತರಕಾರನನ್ನು ಸ್ವಾಗತಿಸಿ ಹಾರ ಹಾಕಿದ ವಿಜಿ.

ಬೈಗುಳದ ನಿರೀಕ್ಷೆಯಲ್ಲಿದ್ದ ಟ್ರಾನ್ಸ್‌ಲೇಟರ್ ಅಚ್ಚರಿಯಲ್ಲಿಯೇ, ‘ಏನೋ ತಪ್ಪಾಗಿದೆ, ನನ್ನ ಬಿಟ್ಟುಬಿಡಿ ಸರ್’ ಎಂದು ಬೇಡಿಕೊಂಡ.

‘ನಿಮ್ಮ ಪ್ರತಿಭೆ ಬಗ್ಗೆ ನಿಮಗೆ ಗೊತ್ತಿಲ್ಲ. ಈಗ ನಿಮ್ಮಿಂದ ನನಗೊಂದು ಸಹಾಯ ಆಗಬೇಕು’.

‘ನನ್ನಿಂದನಾ?! ಅದೇನು ಕೇಳಿ ಸರ್’.

‘ಏನಿಲ್ಲ, ನನ್ನ ವಿರುದ್ಧದ ಪ್ರಾಸಿಕ್ಯೂಷನ್‌ಗೆ ನೀಡಿರುವ ವರದಿಯನ್ನು ಟ್ರಾನ್ಸ್‌ಲೇಟ್ ಮಾಡಿಕೊಡುವಂತೆ ರಾಜ್ಯಪಾಲರು ಕೇಳಿದ್ದಾರಂತೆ. ಅದನ್ನು ನೀವೇ ಮಾಡಿಕೊಡಬೇಕು?’

‘ನಾನೇ ಏಕೆ ಸರ್?’

‘ನೀವು ಭಾಷಾಂತರ ಮಾಡಿದ್ದು, ಎಕ್ಸಾಮ್ ಬರೆಯೋ ಅಭ್ಯರ್ಥಿಗಳಿಗೇ ಅರ್ಥ ಆಗಿಲ್ಲ. ಇನ್ನು, ನನ್ನ ಪ್ರಾಸಿಕ್ಯೂಷನ್‌ಗೆ ಸಂಬಂಧಿಸಿದ ಸಾವಿರಕ್ಕೂ ಹೆಚ್ಚು ಪುಟಗಳನ್ನ ನೀವು ಟ್ರಾನ್ಸ್‌ಲೇಟ್ ಮಾಡಿ, ಅದನ್ನು ಗವರ್ನರ್ ಅವರು ಅರ್ಥ ಮಾಡಿಕೊಳ್ಳೋದಕ್ಕೆ ಹತ್ತು ವರ್ಷಗಳೇ ಆಗಬಹುದು. ಅಷ್ಟರಲ್ಲಿ ಎಲ್ಲರಿಗೂ ಈ ಕೇಸ್ ಮರೆತೇ ಹೋಗಿರುತ್ತೆ’ ನಕ್ಕ ವಿಜಿ.

ನಗಬೇಕೋ, ಅಳಬೇಕೋ ತಿಳಿಯದೆ ನಿಂತ ಟ್ರಾನ್ಸ್‌ಲೇಟರ್!

ಚರ್ಚೆ

ರಾಜಕೀಯ ಚಿಂತನೆ ಯಾರಿಗೆ ಬೇಕಾಗಿದೆ?

ಸದನಗಳನ್ನು ಕಾದಾಟ, ಬೈದಾಟದ ಕಣಗಳನ್ನಾಗಿ ಮಾರ್ಪಡಿಸಿರುವ ರಾಜಕಾರಣಿಗಳ ಮಧ್ಯದಿಂದ ರಾಜಕೀಯ ಚಿಂತನೆ ಮೂಡಿಬರಬೇಕೆಂದು ನಿರೀಕ್ಷಿಸಲಾಗದ ಸ್ಥಿತಿ ಇದೆ

• ಆರ್.ಲಕ್ಷ್ಮೀನಾರಾಯಣ

‘ನಮ್ಮ ದೇಶದ ರಾಜಕೀಯ ಚಿಂತನೆಗೆ ಬರಗಾಲ ಏಕೆ ಬಂತು? ನಮ್ಮ ರಾಜಕೀಯ ಚಿಂತಕರು ಎಲ್ಲಿ ಹೋದರು?’ ಎಂದು ಲೇಖಕ ಯೋಗೇಂದ್ರ ಯಾದವ್ ವ್ಯಗ್ರರಾಗಿ, ತುಂಬ ಕಳಕಳಿ ವ್ಯಕ್ತಪಡಿಸುತ್ತ, ತಮ್ಮ ಲೇಖನದಲ್ಲಿ (ಪ್ರ.ವಾ., ಆ. 31) ಅತ್ಯಂತ ಪ್ರಸ್ತುತವಾದ ಪ್ರಶ್ನೆಯನ್ನು ಎತ್ತಿದ್ದಾರೆ. ಎಲ್ಲದಕ್ಕೂ ಅನ್ವಯವಾಗುವ ‘ಬೇಡಿಕೆ ಮತ್ತು ಪೂರೈಕೆ’ ಸಿದ್ಧಾಂತ ಇದಕ್ಕೂ ಬಹುಶಃ ಅನ್ವಯಿಸುತ್ತದೆ.

ಇಂದು ರಾಜಕೀಯ ಚಿಂತನೆ ಯಾರಿಗೆ ಬೇಕಾಗಿದೆ? ಅವರು ಹೇಳಿದಂತೆ, ಸ್ವಾತಂತ್ರ್ಯ ಬಂದ ಮೊದಲ ಕಾಲು ಶತಮಾನದಲ್ಲಿ ಎಂ.ಎನ್.ರಾಯ್, ಬಿ.ಆರ್. ಅಂಬೇಡ್ಕರ್, ಲೋಹಿಯಾ, ಜೆ.ಪಿ., ರಾಜಾಜಿ, ಕೃಪಲಾನಿ ಅವರಂತಹ ಪ್ರಖರ ರಾಜಕೀಯ ಚಿಂತಕರ ಒಂದು ಗ್ಯಾಲಕ್ಸಿಯೇ ಇತ್ತು. ಆಗಲೂ ಚುನಾವಣಾ ರಾಜಕಾರಣ ಮತ್ತು ತನ್ಮೂಲಕ ರಾಜಕೀಯ ಅಧಿಕಾರ ಗ್ರಹಣ ಮಾಡುವುದು ಇದ್ದೇ ಇತ್ತು. ಆದರೆ ಅದಕ್ಕೆ ಪೂರಕವಾಗುವಂತೆ ಉತ್ತಮ ರಾಜಕೀಯ ಚಿಂತನೆ ತಮ್ಮನ್ನು ರಾಜಕೀಯವಾಗಿ ವಿರೋಧಿಸುವವರಿಂದ ಬಂದರೂ ಅದನ್ನು ಪುರಸ್ಕರಿಸುತ್ತಿದ್ದ ನೆಹರೂ ಅವರಂಥ ಉದಾರವಾದಿ ಪ್ರಜಾಪ್ರಭುತ್ವದ ಪ್ರತಿಪಾದಕರಿದ್ದರು. ಅವರಿಗೆ ಅವರದ್ದೇ ಆದ ಮಿತಿಗಳು ಇದ್ದರೂ ದೇಶದ ಹಿತವೇ ಅವರಿಗೆ ಮುಖ್ಯವಾಗಿದ್ದರಿಂದ ಉಳಿದವನ್ನು ಕಡೆಗಣಿಸುತ್ತಿದ್ದರು.

ಜಗತ್ತಿನ ಇತಿಹಾಸ ಮತ್ತು ಸರ್ವಾಧಿಕಾರಿಗಳ ಕಥೆಯನ್ನು ಬಲ್ಲ ಅವರಿಗೆ ತಮ್ಮ ದೀರ್ಘಕಾಲದ ಅಪಾರ ಅಧಿಕಾರದ ಬಗ್ಗೆ ಶಂಕೆ ಬಂದು, ತಮ್ಮ ಬಗ್ಗೆ ತಾವೇ ಗುಪ್ತನಾಮದಿಂದ ಪತ್ರಿಕೆಯೊಂದರಲ್ಲಿ ‘ಈತ ಸರ್ವಾಧಿಕಾರಿಯಾಗಿ ಬಿಡಬಹುದು’ ಎಂದು ಬರೆದುಕೊಳ್ಳುವಂಥ ವ್ಯಕ್ತಿ ಅವರಾಗಿದ್ದರು (ನೋಡಿ: ‘ಲೋಕದೇವ ನೆಹರೂ’. ಲೇಖಕ: ರಾಮಧಾರೀ ಸಿಂಹ ದಿನಕರ್) ಅಷ್ಟರ ಮಟ್ಟಿಗಿನ ಆತ್ಮಾವಲೋಕನ ಅವರಲ್ಲಿ ಇತ್ತು. ಆದರೆ ಆಮೇಲೆ ಆದದ್ದೇನು? ಅವರ ಪ್ರಿಯಪುತ್ರಿ ಅಧಿಕಾರ ಹಿಡಿದ ಮೇಲೆ ಅಪ್ಪ ಆಗಲು ಹೆದರಿದ್ದನ್ನು, ಆಗದೇ ಇದ್ದದ್ದನ್ನು ತಾನು ಆಗಿ ತೋರಿಸುತ್ತೇನೆ ಎನ್ನುವ ರೀತಿ ನಡೆದುಕೊಂಡದ್ದು ಈಗ ಇತಿಹಾಸ.

ಅಲ್ಲಿಂದ ಮುಂದಕ್ಕೆ ಚುನಾವಣೆಗಳನ್ನು ಗೆಲ್ಲುವ, ಅದಕ್ಕೆ ಯಾವ ತಳತಂತ್ರಗಳನ್ನು ಬೇಕಾದರೂ ಮಾಡುವ, ಮತದಾರರಿಗೆ ಯಾವ ಬಗೆಯ ಆಮಿಷಗಳನ್ನು ಬೇಕಾದರೂ ಒಡ್ಡುವ ಮತ್ತು ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿದ ನಂತರದಲ್ಲಿ ಸರ್ಕಾರದ ರಾಜಕೀಯ ಹಗರಣಗಳು, ಭ್ರಷ್ಟಾಚಾರ ಇವುಗಳ ಬಗ್ಗೆ ಎಷ್ಟೇ ವಿರೋಧಗಳು ಬಂದರೂ ಅವನ್ನು ಎಲ್ಲ ಬಗೆಯ ಬಲ ಹಾಗೂ ತಂತ್ರಗಳನ್ನು ಬಳಸಿ ಹತ್ತಿಕ್ಕುವ, ಅದಕ್ಕಾಗಿ ತನಗೆ ಅಪಾರ ಜನಬೆಂಬಲ ಇದೆ ಎಂದು ತೋರಿಸಲು ಲಾರಿಗಳಲ್ಲಿ ಜನರನ್ನು ಕರೆತಂದು ರ್‍ಯಾಲಿಗಳನ್ನು ಏರ್ಪಡಿಸುವ, ತನ್ನ ಸುತ್ತ ಭಟ್ಟಂಗಿಗಳ ದೊಡ್ಡ ಪಡೆಯನ್ನೇ ಕಟ್ಟಿಕೊಂಡು ಅಧಿಕಾರವನ್ನು ಶತಾಯಗತಾಯ ಉಳಿಸಿಕೊಳ್ಳುವ ಶಕೆ ಶುರುವಾಯಿತು.

ದೇಶದಾದ್ಯಂತ ಇರುವ ರಾಜಕೀಯ ಅಧಿಕಾರಸ್ಥರೆಲ್ಲರೂ ಅದನ್ನೇ ಮೇಲ್ಪಂಕ್ತಿಯಂತೆ ಅನುಕರಿಸತೊಡಗಿದ ಮೇಲೆ, ರಾಜಕೀಯ ಚಿಂತಕರು, ತಮ್ಮ ಚಿಂತನೆಗಳನ್ನು ಸ್ವೀಕರಿಸಲು ಈಗ ಯಾರೂ ಇಲ್ಲ ಅವುಗಳಿಂದ ಸದ್ಯಕ್ಕಂತೂ ಏನೂ ಪ್ರಯೋಜನವಿಲ್ಲ ಎನ್ನುವ ತೀರ್ಮಾನಕ್ಕೆ ಬಂದರು. ಈ ಕಾರಣದಿಂದ ಬಹುಶಃ ಅದಕ್ಕೆ ಕೊನೆ ಬಂದಂತೆ ತೋರುತ್ತದೆ. ಅಲ್ಲದೆ ಪಕ್ಷವೊಂದರ ನೀತಿ, ಸಿದ್ಧಾಂತಗಳನ್ನು ಒಪ್ಪಿಕೊಂಡು, ಹಲವಾರು ವರ್ಷ ಅದರಲ್ಲಿ ಸಕಲ ಅಧಿಕಾರಗಳನ್ನೂ ಅನುಭವಿಸಿದವರು, ಹಣದ ಹಪಹಪಿಯಿಂದಲೋ ಅಧಿಕಾರದ ಹಪಹಪಿಯಿಂದಲೋ ಅಥವಾ ಟಿಕೆಟ್ ಸಿಗದಿರುವ ಕಾರಣಕ್ಕೋ ಅಂಗಿ ಬದಲಿಸಿದಷ್ಟು ಸುಲಭವಾಗಿ ಪಕ್ಷವನ್ನು ಬದಲಿಸಿ, ಅದಕ್ಕೆ ‘ರಾಜಕೀಯದಲ್ಲಿ ಯಾರೂ ಶಾಶ್ವತ ಶತ್ರುಗಳೂ ಅಲ್ಲ, ಮಿತ್ರರೂ ಅಲ್ಲ’ ಎಂಬ ತಮ್ಮದೇ ಅನುಕೂಲಸಿಂಧು ವಾದವನ್ನು ಮುಂದಿಡುತ್ತಾ ಬರುತ್ತಿರುವಂಥದ್ದು ಈಚಿನ ವರ್ಷಗಳಲ್ಲಿ ಸರ್ವೇ ಸಾಮಾನ್ಯವಾಗಿದೆ. ಈ ವಿದ್ಯಮಾನಗಳನ್ನು ಅವಲೋಕಿಸಿದರೆ, ಯಾವ ರಾಜಕೀಯ ಚಿಂತನೆ ಅಥವಾ ಚಿಂತಕ ಇಂಥವರಲ್ಲಿ ಪರಿವರ್ತನೆ ತರಲು ಸಾಧ್ಯ ಎಂದು ಅನಿಸದೇ ಇರದು. ಹಾಗಾಗಿ, ಕೊರತೆ ಇರುವುದು ಚಿಂತನೆ, ಚಿಂತಕರದ್ದಲ್ಲ, ಅದನ್ನು ಪುರಸ್ಕರಿಸುವವರದು.



ಇಂದು ನೌಕರಶಾಹಿ ಮತ್ತು ರಾಜಕೀಯ ಅಧಿಕಾರಸ್ಥರು ಅಮಿತೋತ್ಸಾಹದಿಂದ ಪರಸ್ಪರ ಕೈಹಿಡಿದು ಭ್ರಷ್ಟಾಚಾರದ ಪರ್ವತದ ತುದಿ ಮುಟ್ಟಲು ಸಿದ್ಧರಾಗಿದ್ದು, ಅದರ ಬಗ್ಗೆ ಯಾರಾದರೂ ಎತ್ತಿ ಹೇಳಿದರೆ ‘ಅಯ್ಯೋ ಅದೊಂದು ಪ್ರಪಂಚದಾದ್ಯಂತ ವ್ಯಾಪಿಸಿರುವ ವಿದ್ಯಮಾನ, ನಾವೇನು ಮಾಡಲು ಸಾಧ್ಯ?’ ಎಂಬ ಸಿದ್ಧ ಉತ್ತರ ಸಿಗುತ್ತದೆ. ಇಂಥ ಮುಗಿಲು ಮುಟ್ಟುವ ಭ್ರಷ್ಟಾಚಾರದಿಂದ ಜನತೆ ಕಂಗೆಟ್ಟುಹೋಗಿರುವುದರ ಪರಿವೆಯಿಲ್ಲದೆ, ಸಂಸತ್ತು ಮತ್ತು ವಿಧಾನಸಭೆಗಳನ್ನು ಕಾದಾಟ ಮತ್ತು ಬೈದಾಟದ ಕಣಗಳನ್ನಾಗಿ ಮಾರ್ಪಡಿಸಿರುವ ರಾಜಕಾರಣಿಗಳ ಮಧ್ಯದಿಂದ ರಾಜಕೀಯ ಚಿಂತನೆ ಮೂಡಿಬರಬೇಕೆಂದು ನಿರೀಕ್ಷಿಸುವುದು ಮೊಲದ ಕೋಡಲ್ಲದೆ ಮತ್ತೇನು? ಅದಕ್ಕೆ ಬೇಕಾದದ್ದು ಜಗತ್ತಿನ ರಾಜಕೀಯ ಚಿಂತಕರ ಚಿಂತನೆಗಳನ್ನು ತಮ್ಮ ತತ್ವರಹಿತ ರಾಜಕಾರಣದ ಮಧ್ಯದಲ್ಲೂ ಅಧ್ಯಯನ ಮಾಡುವಷ್ಟು, ನಾಡಿನ ವಿವೇಕಿಗಳ ಮಾತಿಗೆ ಕಿವಿಗೊಡುವಷ್ಟು ವಿವೇಚನೆ ತೋರುವ, ಬಸವಣ್ಣನವರಷ್ಟು ಅಲ್ಲದಿದ್ದರೂ ಕಿಂಚಿತ್ತಾದರೂ ತಮ್ಮ ಬಗ್ಗೆ ತಾವೇ ಆತ್ಮನಿರೀಕ್ಷಣೆ ಮಾಡಿಕೊಳ್ಳುವಷ್ಟು ವಿವೇಕ, ಔದಾರ್ಯ ತೋರುವ ಅಧಿಕಾರಸ್ಥ ರಾಜಕಾರಣಿಗಳು. ಅಂಥವರಿಗಾಗಿ ಕಾಯೋಣ!

ವಾಚಕರ ವಾಣಿ

ಭಾಷೆಯಿಂದಾಗುವ ಅನುಕೂಲ ಮನದಟ್ಟು ಮಾಡಲಿ

‘ಸಂಸ್ಕೃತ ಕಲಿತವರು ಮಾತ್ರ ಸ್ವರ್ಗಕ್ಕೆ ಹೋಗಬಲ್ಲರು’ ಎಂದು ಉಡುಪಿಯ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ ಇತ್ತೀಚೆಗೆ ಹೇಳಿರುವುದಾಗಿ ವರದಿಯಾಗಿದೆ. 12ನೇ ಶತಮಾನದಲ್ಲೇ ಬಸವಣ್ಣನವರು ಬಹಳ ಸರಳವಾಗಿ ‘ಆಚಾರವೇ ಸ್ವರ್ಗ, ಅನಾಚಾರವೇ ನರಕ’ ಎಂದು ಜನರಲ್ಲಿ ಅರಿವು ಮೂಡಿಸಿದ್ದರು.‘ಸ್ವರ್ಗ, ನರಕವೆಲ್ಲ ಮೇಲಿಲ್ಲ ಕೇಳು ಜನಕ, ಇಲ್ಲೇ ಕಾಣಬೇಕು, ಉಸಿರಿರೋ ಕೊನೇತನಕ’ ಎಂದು ಜನಪದರು ಇನ್ನಷ್ಟು ಸರಳವಾಗಿ ಹಾಡಿದರು. ಆದರೆ, 21ನೇ ಶತಮಾನದ ಈ ಆಧುನಿಕ ಕಾಲಘಟ್ಟದಲ್ಲಿ ಹಲವರು ಭಾಷೆಯ ಹೆಸರಿನಲ್ಲಿ ಸ್ವರ್ಗ, ನರಕವನ್ನು ಸೃಷ್ಟಿಸಿ, ಜನರಲ್ಲಿ ಭಯಭೀತಿ ಮೂಡಿಸಿ ಮೌಢ್ಯವನ್ನು ಬಿತ್ತಲು ಯತ್ನಿಸುತ್ತಿದ್ದಾರೆ ಎನಿಸುತ್ತದೆ.

ಅವರಿಗೆ ಸಂಸ್ಕೃತದ ಬಗ್ಗೆ ಅಷ್ಟೊಂದು ಒಲವಿದ್ದರೆ, ಅದನ್ನು ಕಲಿತರೆ ದೊರಕಬಹುದಾದ ಅನುಕೂಲಗಳನ್ನು ಜನರಿಗೆ ಮನದಟ್ಟು ಮಾಡಿಕೊಡಲಿ. ಅದರಿಂದ ಪ್ರಭಾವಿತರಾಗಿ, ಆ ಭಾಷೆಯ ಬಗ್ಗೆ ಪ್ರೀತಿ ಬೆಳೆಸಿಕೊಂಡವರು ಕಲಿಯುತ್ತಾರೆ, ಇಲ್ಲದಿದ್ದವರು ಬಿಡುತ್ತಾರೆ. ಮಠಾಧೀಶರು ಅಸಂಬದ್ಧ ಎನಿಸುವ ಇಂತಹ ಹೇಳಿಕೆಗಳನ್ನು ನೀಡಬಾರದು. ಸಮಾಜದಲ್ಲಿ ಇನ್ನೂ ತಾಂಡವವಾಡುತ್ತಿರುವ ಅಸ್ಪೃಶ್ಯತೆ, ಜಾತೀಯತೆ, ಮೌಢ್ಯದಂತಹ ಸಾಮಾಜಿಕ ಪಿಡುಗುಗಳನ್ನು ತೊಡೆದುಹಾಕುವುದರತ್ತ ತಮ್ಮ ಚಿತ್ತ ಹರಿಸುವುದು ಒಳ್ಳೆಯದು.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಅನುವಾದಕರನ್ನು ಶಿಕ್ಷೆಗೆ ಗುರಿಪಡಿಸಿ

ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಪ್ರಶ್ನೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವಾಗ ಉಂಟಾದ ತಪ್ಪಿನಿಂದಾಗಿ ಸರ್ಕಾರ ಮರುಪರೀಕ್ಷೆಗೆ ಆದೇಶ ಮಾಡಿರುವುದು ಸರಿಯಷ್ಟೆ. ಕೆಪಿಎಸ್‌ಸಿ ನಡೆಸಿದ ಪರೀಕ್ಷೆಗೆ ₹ 4 ಕೋಟಿಯಿಂದ ₹ 5 ಕೋಟಿಯಷ್ಟು ವೆಚ್ಚವಾಗಿದೆ ಎಂದು ಅಂದಾಜಿಸಲಾಗಿದೆ. ಈ ವೆಚ್ಚವನ್ನು ಭರಿಸುವವರಾರು? ಸಾರ್ವಜನಿಕರ ಹಣವನ್ನಲ್ಲವೇ ಇಂತಹ ಕಾರ್ಯಕ್ಕೆ ಉಪಯೋಗಿಸುವುದು. ಸರ್ಕಾರದ ಬೊಕ್ಕಸಕ್ಕೆ ಹೊರೆಯಾದಾಗ ಜನಸಾಮಾನ್ಯರಿಂದ ತೆರಿಗೆ ರೂಪದಲ್ಲಿ ಸರ್ಕಾರ ಹಣವನ್ನು ಪಡೆಯುತ್ತದೆ. ಈಗ ಇಂತಹ ದುರ್ಗತಿ ತಂದ ಅನುವಾದಕರನ್ನು ತಕ್ಕ ಶಿಕ್ಷೆಗೆ ಗುರಿಪಡಿಸಬೇಕಾಗಿದೆ.

ಬಾಲಕೃಷ್ಣ ಆರ್., ಬೆಂಗಳೂರು

ಮನುಷ್ಯತ್ವವನ್ನೇ ಮುಳುಗಿಸಿದ ಮುಳುಗುತಜ್ಞ

ಉತ್ತರಪ್ರದೇಶದ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ಕಾನ್ಪುರದಲ್ಲಿ ಸ್ನಾನಕ್ಕೆ ತೆರಳಿದಾಗ ಗಂಗಾ ನದಿಯಲ್ಲಿ ಬಿದ್ದು ಸಾವನ್ನಪ್ಪಿದ್ದು ವರದಿಯಾಗಿದೆ (ಪ್ರ.ವಾ., ಸೆ. 2). ಸ್ಥಳದಲ್ಲಿದ್ದ ಮುಳುಗುತಜ್ಞನೊಬ್ಬ ಹತ್ತು ಸಾವಿರ ರೂಪಾಯಿ ನೀಡಿದರೆ ಮಾತ್ರ ನದಿಗಿಳಿಯುವುದಾಗಿ ತಿಳಿಸಿ, ಆನ್‌ಲೈನ್‌ನಲ್ಲಿ ಹಣ ಪಾವತಿಯಾಗುವವರೆಗೆ ಕಾಯುತ್ತಿದ್ದು, ಅಷ್ಟರಲ್ಲಿ ಅಧಿಕಾರಿ ಶವವಾದ ಸಂಗತಿ ತೀವ್ರ ನೋವನ್ನು ಉಂಟುಮಾಡಿತು.

ಎಷ್ಟೋ ಕಡೆ ಜೀವರಕ್ಷಕರು ತಮ್ಮ ಜೀವವನ್ನು ಪಣಕ್ಕಿಟ್ಟು, ಸಾವಿನ ಸುಳಿಯಿಂದ ಪಾರು ಮಾಡುತ್ತಿರುವ ಹೆಮ್ಮೆಯ ಮಧ್ಯೆ ಇಂತಹ ‘ದುಡಿಮೆ’ ಮಾಡುವ ಜನರೂ ಇದ್ದಾರೆ! ನಾಗರಿಕ ಸಮಾಜದಲ್ಲಿನ ಇಂತಹ ಅಪಸವ್ಯಗಳಿಗೆ ಹೇಗೆ ಕೊನೆ ಹಾಡಬೇಕು? ಹಣವೇ ಆದ್ಯತೆಯಾದರೆ ಜೀವಗಳಿಗೆ ಬೆಲೆಯೇ ಇಲ್ಲದಂತಾಗುತ್ತದೆ. ಮುಳುಗುತಜ್ಞ ಒಂದು ಜೀವವನ್ನಷ್ಟೇ ಅಲ್ಲ ಮನುಷ್ಯತ್ವವನ್ನೇ ಮುಳುಗಿಸಿದ್ದಾನೆ.

ಚನ್ನು ಅ. ಹಿರೇಮಠ, ರಾಣೆಬೆನ್ನೂರು

ಪುಸ್ತಕ ಲೋಕದ ರಾಜಕೀಯ...

‘ಬಿಕರಿಗಿರುವುದು ಪುಸ್ತಕ; ಕೇಕ್ ಅಲ್ಲ’ ಎಂಬ ಸೃಷ್ಟಿ ನಾಗೇಶ್ ಅವರ ಲೇಖನ (ಚರ್ಚೆ, ಸೆ. 3) ನಾಡಿನ ಸಾರಸ್ವತ ಲೋಕಕ್ಕೆ ಸಂಬಂಧಿಸಿದಂತೆ ಹಲವು ಗಂಭೀರ ಪ್ರಶ್ನೆಗಳನ್ನು ಎತ್ತಿದೆ. ಪುಸ್ತಕ ಪ್ರಕಟಣೆಯನ್ನು ಒಮ್ಮೆ ‘ಪುಸ್ತಕ ಉದ್ಯಮ’ ಎಂದು ಪರಿಗಣಿಸಿದ ಮೇಲೆ, ಅದು ಒಂದು ವ್ಯವಹಾರ. ಹಾಕಿದ ಬಂಡವಾಳ ವಾಪಸ್ ಬರುತ್ತಿಲ್ಲ ಎಂದ ಮೇಲೆ ಪ್ರಕಾಶಕರು ಯಾವ ಧೈರ್ಯದ ಮೇಲೆ ಬಂಡವಾಳ ಹೂಡಬೇಕು? ಜನ ಪುಸ್ತಕಗಳನ್ನು ಓದುತ್ತಿಲ್ಲ, ಪುಸ್ತಕಗಳು ಮಾರಾಟವಾಗುತ್ತಿಲ್ಲ ಎಂಬಂಥ ವಿಚಾರಗಳನ್ನು ಬದಿಗಿಡೋಣ. ನಾಗೇಶ್ ಅವರೇ ಹೇಳುವ ಹಾಗೆ, 7,000 ಗ್ರಂಥಾಲಯಗಳಿಗೆ ಸರ್ಕಾರ ಪುಸ್ತಕ ಖರೀದಿ ಮಾಡಿದರೆ ಇಡೀ ಚಿತ್ರಣವೇ ಬದಲಾಗಿಬಿಡುತ್ತದೆ. ಆದರೆ ಬರೀ ಮುನ್ನೂರು ಪುಸ್ತಕಗಳನ್ನು ಖರೀದಿ ಮಾಡಬೇಕು ಎಂಬುದು ಯಾವ ಮಾನದಂಡ?

ಮೂರ್ನಾಲ್ಕು ವರ್ಷಗಳಿಂದ ಖರೀದಿಸಿದ ಪುಸ್ತಕಗಳ ಹಣವನ್ನೇ ಸರ್ಕಾರ ಕೊಟ್ಟಿಲ್ಲ ಎಂದರೆ ಪ್ರಕಾಶಕರು ಎಲ್ಲಿಗೆ ಹೋಗಬೇಕು? ಬೆಂಗಳೂರಿನ ರಸ್ತೆಯ ಎಲ್ಲಾ ಗುಂಡಿಗಳನ್ನು ಇನ್ನು 15 ದಿನಗಳಲ್ಲಿ ಸರಿ ಮಾಡಬೇಕು ಎಂದು ಮಂತ್ರಿಗಳು ಫರ್ಮಾನು ಹೊರಡಿಸುತ್ತಿದ್ದಂತೆ, ‘ಮೊದಲು ಹಳೆಯ ಬಾಕಿ ಕೊಡಿ, ನಂತರ ಗುಂಡಿ ಮುಚ್ಚಿಸುವ ಮಾತಾಡಿ’ ಎಂದು ಗುತ್ತಿಗೆದಾರರು ಪಟ್ಟು ಹಿಡಿದಿದ್ದಾರೆ. ಪುಸ್ತಕ ಲೋಕದಲ್ಲಿ ನಡೆಯುತ್ತಿರುವ ರಾಜಕೀಯದ ಬಗ್ಗೆ ಪ್ರಕಾಶಕರ ಸಂಘ ಏನು ಮಾಡುತ್ತಿದೆ? ಗುತ್ತಿಗೆದಾರರ ಸಂಘದಂತೆ ಇವರು ಕೂಡ ಪಟ್ಟು ಹಿಡಿಯಬಹುದಲ್ಲವೇ?

ಪ್ರಕಾಶಕರು ಯಾರು ಎಂಬ ಬಗ್ಗೆ ಒಂದು ನಿಯಮ ರೂಪಿಸಲಿ. ತಮಗೆ ಬೇಕಾದವರ ಒಂದೋ ಎರಡೋ ಪುಸ್ತಕಗಳನ್ನು ಪ್ರಕಟಿಸಿದವರೆಲ್ಲ ಪ್ರಕಾಶಕರು ಎಂದು ಹೇಳಿಕೊಳ್ಳುತ್ತಿದ್ದಾರೆ. ಪಟ್ಟಭದ್ರರು ಎಲ್ಲ ರಂಗದಲ್ಲಿಯೂ ಇರುತ್ತಾರೆ. ಅಂತಹವರ ಬಗ್ಗೆ ಸಂಘ ಕ್ರಮ ತೆಗೆದುಕೊಳ್ಳಬೇಕು.

ಎಚ್.ಎಸ್.ನಾಗಭೂಷಣ, ಶಿವಮೊಗ್ಗ

ತೆರೆಯ ಹಿಂದೆ...

ಸಿ.ಎಂ. ಬದಲಾವಣೆ ಅಸಾಧ್ಯ
ಕೈ ಪಕ್ಷದವರು ವಿರೋಧಿಗಳಿಗೆ
ಹೇಳುತ್ತಾರೆ ‘ಸುಮ್ಮನಿರಿ ತಾವೆಲ್ಲ’
ತೆರೆಯ ಹಿಂದೆ ಹತ್ತು ಜನ
ಹಾಕಿದ್ದಾರೆ ಸಿ.ಎಂ. ಗಾದಿಗೆ ಟವೆಲ್ಲ!

ಮಹಾಂತೇಶ ಮಾಗನೂರ
ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭ್ರಷ್ಟಾಚಾರ ಅವ್ಯಾಹತ

ಸಿವಿಸಿ ವಾರ್ಷಿಕ ವರದಿ

ಭ್ರಷ್ಟಾಚಾರದ ಬಗ್ಗೆ ಶೂನ್ಯ ಸಹನೆಯ ನೀತಿಯನ್ನು ಅನುಸರಿಸುವುದಾಗಿ ಕೇಂದ್ರ ಸರ್ಕಾರ ಘೋಷಿಸಿದೆ. ಆದಾಗ್ಯೂ ಭಾರತದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದೆ ಎಂದು ಹಲವು ವರದಿಗಳು ಹೇಳಿವೆ. ಇತ್ತೀಚೆಗೆ ಪ್ರಕಟವಾಗಿರುವ ಕೇಂದ್ರ ಜಾಗೃತ ಆಯೋಗದ (ಸಿವಿಸಿ) 2023ರ ವಾರ್ಷಿಕ ವರದಿಯೂ ಇದನ್ನೇ ಹೇಳುತ್ತಿದೆ. ಕೇಂದ್ರ ಸರ್ಕಾರದ ಅಧೀನದಲ್ಲಿರುವ ವಿವಿಧ ಇಲಾಖೆ, ಸಂಸ್ಥೆಗಳಲ್ಲಿನ ಭ್ರಷ್ಟಾಚಾರದ ಪ್ರಮಾಣ, ಅವುಗಳ ವಿಚಾರಣೆ, ಶಿಕ್ಷೆಯ ಸ್ವರೂಪದ ಬಗ್ಗೆ ವರದಿ ಬೆಳಕು ಚೆಲ್ಲಿದೆ

ಭ್ರಷ್ಟಾಚಾರದ ದೂರುಗಳು

74,203
2023ರಲ್ಲಿ ಕೇಂದ್ರ ಸರ್ಕಾರಿ ಅಧಿಕಾರಿಗಳು/ನೌಕರರ ವಿರುದ್ಧ ಬಂದಿರುವ ದೂರುಗಳು

66,373
ಇತ್ಯರ್ಥಪಡಿಸಲಾಗಿರುವ ದೂರುಗಳು

7,830
ವಿಲೇವಾರಿಗೆ ಬಾಕಿ ಇರುವ ದೂರುಗಳು

21,958
ದಂಡ ವಿಧಿಸಲು ಅರ್ಹವಾದ ಪ್ರಕರಣಗಳು

17,114
ದಂಡ ವಿಧಿಸಲಾದ ಅಥವಾ ಎಚ್ಚರಿಕೆ ನೀಡಿದ ಪ್ರಕರಣಗಳು

ಪ್ರಜಾವಾಣಿ ವಾರ್ತೆ

ಸಾರ್ವಜನಿಕ ವ್ಯವಸ್ಥೆಯಲ್ಲಿ ಭ್ರಷ್ಟಾಚಾರವನ್ನು ಹೋಗಲಾಡಿಸುವ ಉದ್ದೇಶದೊಂದಿಗೆ ಸ್ಥಾಪನೆಯಾದ ಸಂಸ್ಥೆ ಕೇಂದ್ರ ಜಾಗೃತ ಆಯೋಗ (ಸಿವಿಸಿ). ಇದರ 2023ರ ವಾರ್ಷಿಕ ವರದಿಯು ಕೇಂದ್ರ ಸರ್ಕಾರದ ಅಡಿಯಲ್ಲಿರುವ ವಿವಿಧ ಇಲಾಖೆ/ಸಂಸ್ಥೆಗಳಲ್ಲಿನ ಭ್ರಷ್ಟಾಚಾರದ ವಸ್ತುಸ್ಥಿತಿಯ ಬಗ್ಗೆ ಗಮನಸೆಳೆಯುತ್ತಿದೆ.

ಸರ್ಕಾರಿ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ನಿಗ್ರಹಕ್ಕೆ ಇಲಾಖಾ ಮಟ್ಟದಲ್ಲೇ ಒಂದು ವ್ಯವಸ್ಥೆ ಇದೆ. ಪ್ರತಿ ಇಲಾಖೆ/ಸಂಸ್ಥೆಯಲ್ಲಿಯೂ ಭ್ರಷ್ಟಾಚಾರ ರಹಿತ ಆಡಳಿತದ ಪ್ರಾಥಮಿಕ ಜವಾಬ್ದಾರಿ ಅದರ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಅವರದ್ದಾಗಿರುತ್ತದೆ. ಅವರಿಗೆ ಭ್ರಷ್ಟಾಚಾರ ನಿಗ್ರಹದ ವಿಚಾರದಲ್ಲಿ ಸಲಹೆ ನೀಡಲು ಇಲಾಖೆಗಳಲ್ಲಿ ಮುಖ್ಯ ಜಾಗೃತ ಅಧಿಕಾರಿ (ಸಿವಿಒ) ನೇತೃತ್ವದ ವಿಚಕ್ಷಣಾ ಘಟಕವೊಂದು ಇರುತ್ತದೆ. ಅವರು ಸಿವಿಸಿಯ ವಿಸ್ತರಣಾ ಭಾಗದಂತೆ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ. ಈ ವ್ಯವಸ್ಥೆಯನ್ನೂ ಮೀರಿ ಪ್ರತಿವರ್ಷ ಸಾವಿರಾರು ಪ್ರಕರಣಗಳು ಸಿವಿಸಿಯಲ್ಲಿ ದಾಖಲಾಗುತ್ತಿವೆ. ಆಯಾ ಇಲಾಖೆ/ಸಂಸ್ಥೆಯ ಭ್ರಷ್ಟರ ವಿರುದ್ಧದ ದೂರುಗಳ ಬಗ್ಗೆ ಆಯೋಗವು, ಕೇಂದ್ರ ಜಾಗೃತ ಆಯೋಗ ಕಾಯ್ದೆ–2003ರ ಪ್ರಕಾರ ಕ್ರಮ ಜರುಗಿಸುತ್ತದೆ.

ಕಳೆದ ವರ್ಷ, ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಸಿವಿಸಿ ಮತ್ತು ಸಿವಿಒಗಳು ಸ್ವೀಕರಿಸಿರುವ ದೂರುಗಳ ಸಂಖ್ಯೆ 74,203. ಅವುಗಳ ಪೈಕಿ 66,373 ದೂರುಗಳು ವಿಲೇವಾರಿಯಾಗಿದ್ದರೆ, 7,830 ಪ್ರಕರಣಗಳು ಇನ್ನೂ ಬಾಕಿ ಇವೆ. ಅತಿ ಹೆಚ್ಚು ದೂರುಗಳು ರೈಲ್ವೆ ಇಲಾಖೆಯ ಉದ್ಯೋಗಿಗಳಿಗೆ ಸಂಬಂಧಿಸಿದ್ದಾಗಿವೆ. ರೈಲ್ವೆ ಇಲಾಖೆಯಲ್ಲಿನ ಭ್ರಷ್ಟಾಚಾರದ ಬಗ್ಗೆ 10,447 ದೂರುಗಳು ದಾಖಲಾಗಿವೆ. ನಂತರದ ಸ್ಥಾನದಲ್ಲಿ ದೆಹಲಿಯ ಸ್ಥಳೀಯ ಸಂಸ್ಥೆಗಳು (ದೆಹಲಿ ರಾಷ್ಟ್ರೀಯ ರಾಜಧಾನಿ ಸರ್ಕಾರ–ಜಿಎನ್‌ಸಿಟಿಡಿ ಹೊರತುಪಡಿಸಿ) ಇವೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಭ್ರಷ್ಟಾಚಾರದ ಬಗ್ಗೆ ಆಯೋಗದಲ್ಲಿ 7,004 ದೂರುಗಳು ದಾಖಲಾಗಿವೆ. ಅಲ್ಪಸಂಖ್ಯಾತ ವ್ಯವಹಾರಗಳು, ಆಹಾರ ಸಂಸ್ಕರಣಾ ಕೈಗಾರಿಕೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳಿಗೆ ಸಂಬಂಧಿಸಿದಂತೆ ಯಾವುದೇ ದೂರು ಸಲ್ಲಿಕೆಯಾಗಿಲ್ಲ.

ಆಯೋಗವೊಂದೇ ಕಳೆದ ವರ್ಷ 28,598 ದೂರುಗಳನ್ನು ಸ್ವೀಕರಿಸಿದೆ, ಇವುಗಳಲ್ಲಿ 26,709 ದೂರುಗಳನ್ನು ವಿಲೇವಾರಿ ಮಾಡಿದೆ. ಅದೇ ರೀತಿ 2,661 ಪ್ರಕರಣಗಳನ್ನು ದಾಖಲಿಸಿದೆ. ಈ ಪೈಕಿ, 554 ಪ್ರಕರಣಗಳು 2022ರಲ್ಲಿ ದಾಖಲಾದಂಥವು. 1,955 ಪ್ರಕರಣಗಳಲ್ಲಿ ಸಿವಿಸಿ ತನ್ನ ಸಲಹೆ (ಶಿಕ್ಷೆ, ದಂಡದ ಸ್ವರೂಪದ ವಿವರ ಅಥವಾ ಪ್ರಕರಣ ಮುಕ್ತಾಯದ ಮಾಹಿತಿ. ಸಿವಿಸಿಯು ಪ್ರತಿ ದೂರಿಗೆ ಸಂಬಂಧಿಸಿದಂತೆ ಎರಡು ಹಂತದಲ್ಲಿ ಸಲಹೆ ನೀಡುತ್ತದೆ) ನೀಡಿದೆ. 3,019 ಅಧಿಕಾರಿಗಳಿಗೆ ಸಂಬಂಧಿಸಿದ 1,373 ಪ್ರಕರಣಗಳ ಕುರಿತು ಕ್ರಮ ಜರುಗಿಸುವ ಬಗ್ಗೆ ಮೊದಲ ಹಂತದ ಸಲಹೆ ನೀಡಿದೆ. 253 ಪ್ರಕರಣಗಳಿಗೆ ಸಂಬಂಧಿಸಿದಂತೆ ಎರಡನೇ ಹಂತದ ಸಲಹೆ ನೀಡಿದೆ.

ದೂರುಗಳ ಬಗ್ಗೆ ಸಿವಿಸಿಯು (ಸಿವಿಒ ಮೂಲಕ) ತನಿಖೆ ನಡೆಸಿ ವರದಿ ತಯಾರಿಸುತ್ತದೆ. ತನಿಖೆಯಲ್ಲಿ ಕಂಡುಬಂದ ಅಂಶಗಳ ಆಧಾರದ ಮೇಲೆ ಪ್ರಕರಣವನ್ನು ಮುಕ್ತಾಯ ಮಾಡಬಹುದು. ಅಧಿಕಾರಿ ಭ್ರಷ್ಟಾಚಾರ ಮಾಡಿರುವುದು ದೃಢಪಟ್ಟರೆ, ಇಲಾಖಾ ಕ್ರಮಕ್ಕಾಗಿ ಅಥವಾ ಆಡಳಿತಾತ್ಮಕ ಕ್ರಮಕ್ಕಾಗಿ ಶಿಫಾರಸು ಮಾಡಬಹುದು. ನಿರ್ದಿಷ್ಟ ಶಿಫಾರಸುಗಳನ್ನು ಒಳಗೊಂಡ ತನಿಖಾ ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಲಾಗುತ್ತದೆ.

ಭ್ರಷ್ಟಾಚಾರ ದೂರಿನ ಸಂಬಂಧ ಸಿವಿಸಿಯ ಮೊದಲ ಹಂತದ ಸಲಹೆ ಮತ್ತು ಎರಡನೆಯ ಹಂತದ ಸಲಹೆಗಳ ಆಧಾರದಲ್ಲಿ ಅಧಿಕಾರಿ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಎನ್ನುವುದನ್ನು ಪರಿಶೀಲಿಸುವ ಜವಾಬ್ದಾರಿಯೂ ಸಿವಿಒ ಅವರದ್ದಾಗಿರುತ್ತದೆ. ಇಲಾಖಾ ವಿಚಾರಣೆಗಳ ಬಗ್ಗೆಯೂ ಸಿವಿಒ ಆಯೋಗಕ್ಕೆ ಕಾಲದಿಂದ ಕಾಲಕ್ಕೆ ಮಾಹಿತಿ ನೀಡಬೇಕು. 2023ರಲ್ಲಿ ಒಟ್ಟು 1,496 ಇಲಾಖಾ ವಿಚಾರಣೆಗಳು ನಡೆದಿದ್ದು, ಅವುಗಳ ಪೈಕಿ 733 ವಿಚಾರಣೆಗಳು ಮುಕ್ತಾಯವಾಗಿವೆ; 763 ವಿಚಾರಣೆಗಳು ಬಾಕಿ ಇವೆ ಎಂದು ವರದಿ ತಿಳಿಸಿದೆ.

ಆಧಾರ: ಪಿಟಿಐ, ಸಿವಿಸಿ ವಾರ್ಷಿಕ ವರದಿ–2023

ನಿಯಮ, ಸಲಹೆ ಕಡೆಗಣನೆಗೆ ಅಸಮಾಧಾನ

ಕೇಂದ್ರ ಸರ್ಕಾರದ ಸಚಿವಾಲಯಗಳು, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು, ಪ್ರಾಧಿಕಾರಗಳಲ್ಲಿ ಭ್ರಷ್ಟಾಚಾರ ನಿಯಂತ್ರಣಕ್ಕೆ, ಅವ್ಯವಹಾರಗಳ ಮೇಲೆ ನಿಗಾ ಇಡುವುದಕ್ಕೆ ಸಂಬಂಧಿಸಿದ ನಿಯಮಗಳು ಮತ್ತು ಆಯೋಗ ನೀಡುವ ಸಲಹೆಗಳನ್ನು ಪಾಲಿಸದಿರುವುದರ ಬಗ್ಗೆ ವರದಿಯಲ್ಲಿ ಪ್ರಸ್ತಾಪಿಸಿರುವ ಆಯೋಗವು, ಕೆಲವು ಪ್ರಕರಣಗಳನ್ನು ಉದಾಹರಣೆಗಳ ಸಹಿತ ವಿವರಿಸಿದೆ. ದೂರುಗಳನ್ನು ವಿಲೇವಾರಿ ಮಾಡಲು ವಿಳಂಬ ಮಾಡುತ್ತಿರುವುದು, ಪ್ರಕರಣಗಳ ನಿರ್ವಹಣೆಯಲ್ಲಿ ನಿಯಮ ಪಾಲಿಸದಿರುವುದು, ಅಧಿಕಾರಿಗಳು, ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ವಿಳಂಬ ನೀತಿ ಅನುಸರಿಸುತ್ತಿರುವುದರ ಬಗ್ಗೆ ವರದಿ ಕಳವಳ ವ್ಯಕ್ತಪಡಿಸಿದೆ.

ಆಯೋಗ ಸ್ವೀಕರಿಸಿರುವ ಮತ್ತು ಇತ್ಯರ್ಥ ಪಡಿಸಿರುವ ದೂರುಗಳು



* ಹಿಂದಿನ ವರ್ಷದ ಬಾಕಿ ದೂರುಗಳೂ ಸೇರಿ

ಆಯೋಗ ದಾಖಲಿಸಿರುವ ಮತ್ತು ಇತ್ಯರ್ಥ ಪಡಿಸಿರುವ ಪ್ರಕರಣಗಳು



* ಹಿಂದಿನ ವರ್ಷದ ಬಾಕಿ ಪ್ರಕರಣಗಳೂ ಸೇರಿ

221 ಸಿಬ್ಬಂದಿ ವಿರುದ್ಧ ವಿಚಾರಣೆಗೆ ಅನುಮತಿ ಬಾಕಿ

ಯಾವುದೇ ಅಧಿಕಾರಿ/ನೌಕರರ ವಿರುದ್ಧ ತನಿಖೆ ನಡೆಸಿದ ಸಂಸ್ಥೆಯು, ಆ ಸಿಬ್ಬಂದಿ ವಿರುದ್ಧ ಕ್ರಿಮಿನಲ್ ಪ್ರಕ್ರಿಯೆ ಆರಂಭಿಸಲು ಸಾಕಷ್ಟು ಸಾಕ್ಷ್ಯಗಳು ಲಭ್ಯವಿವೆ ಎಂದು ಅಭಿಪ್ರಾಯಪಟ್ಟಲ್ಲಿ ಸಿವಿಸಿಯು ಸಂಬಂಧಿಸಿದ ಪ್ರಾಧಿಕಾರಕ್ಕೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ಸೂಚಿಸುತ್ತದೆ. ಕಳೆದ ವರ್ಷ 801 ಪ್ರಕರಣಗಳಲ್ಲಿ ಸಿಬ್ಬಂದಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಕೇಳಿತ್ತು. ಈ ಪೈಕಿ 426 ಪ್ರಕರಣಗಳಲ್ಲಿ ಸಂಬಂಧಿಸಿದ ಇಲಾಖೆ/ಪ್ರಾಧಿಕಾರ ಅನುಮತಿ ನೀಡಿವೆ. 154 ಪ್ರಕರಣಗಳಲ್ಲಿ ಅನುಮತಿ ನಿರಾಕರಿಸಿವೆ. 221 ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವುದು ಬಾಕಿ ಇದೆ.

ದೂರು: ಯಾವ ಇಲಾಖೆ ಸಿಬ್ಬಂದಿ ವಿರುದ್ಧ ಹೆಚ್ಚು?

ಇಲಾಖೆ	ದೂರುಗಳು	ಇತ್ಯರ್ಥ
ರೈಲ್ವೆ	10,447	9,881
ದೆಹಲಿಯ ಸ್ಥಳೀಯ ಸಂಸ್ಥೆಗಳು	7,665	7,278
ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು	7,004	6,667
ದೆಹಲಿ ಸರ್ಕಾರ	6,638	6,246
ದೆಹಲಿ ಪೊಲೀಸ್	5,313	3,325
ವಸತಿ ಮತ್ತು ನಗರ ವ್ಯವಹಾರಗಳು	4,476	3,723
ಕಲ್ಲಿದ್ದಲು ಸಚಿವಾಲಯ	4,420	4,200
ಕಾರ್ಮಿಕ ಸಚಿವಾಲಯ	3,217	3,085
ಪೆಟ್ರೋಲಿಯಂ ಸಚಿವಾಲಯ	2,749	2,570
ಗೃಹ ಸಚಿವಾಲಯ	2,309	2,015
ರಕ್ಷಣಾ ಸಚಿವಾಲಯ	1,861	1,808
ಕೇಂದ್ರೀಯ ನೇರ ತೆರಿಗೆ ಮಂಡಳಿ	1,828	1,441
ದೂರ ಸಂಪರ್ಕ ಸಚಿವಾಲಯ	1,457	1,405
ಕೇಂದ್ರೀಯ ಪರೋಕ್ಷ ತೆರಿಗೆ ಮಂಡಳಿ	1,205	1,129
ಉಕ್ಕು ಸಚಿವಾಲಯ	1,122	1,047

879 ಪ್ರಕರಣ ದಾಖಲಿಸಿದ ಸಿಬಿಐ

ಕಳೆದ ವರ್ಷ ಕೇಂದ್ರ ತನಿಖಾ ದಳವು (ಸಿಬಿಐ) ಭ್ರಷ್ಟಾಚಾರಕ್ಕೆ ಸಂಬಂಧಿಸಿದ 768 ಸಾಮಾನ್ಯ (ಆರ್‌ಸಿ–ಸಂಸ್ಥೆಯೇ ನೇರವಾಗಿ ದಾಖಲಿಸುವ) ಮತ್ತು 108 ಪ್ರಾಥಮಿಕ ತನಿಖೆಗಳ ಪ್ರಕರಣ ಸೇರಿದಂತೆ 876 ಪ್ರಕರಣಗಳನ್ನು ದಾಖಲಿಸಿಕೊಂಡಿದೆ.

198 ಮಂದಿ ಸಿಬ್ಬಂದಿ ಲಂಚ ಪಡೆಯುತ್ತಿದ್ದ ಸಂದರ್ಭದಲ್ಲಿ ಕಾರ್ಯಾಚರಣೆ ನಡೆಸಿ, ಸಿಬ್ಬಂದಿಯನ್ನು ತನ್ನ ಬಲೆಗೆ ಕೆಡವಿದೆ. ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವುದಕ್ಕೆ ಸಂಬಂಧಿಸಿದಂತೆ 37 ಪ್ರಕರಣಗಳನ್ನು ದಾಖಲಿಸಿದೆ.

876 ಪ್ರಕರಣಗಳಲ್ಲಿ 91 ಪ್ರಕರಣಗಳನ್ನು ನ್ಯಾಯಾಲಯದ ಸೂಚನೆ ಮೇರೆಗೆ ದಾಖಲಿಸಿಕೊಂಡಿದ್ದರೆ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಮಾಡಿರುವ ಶಿಫಾರಸಿನಂತೆ 84 ಪ್ರಕರಣಗಳನ್ನು ಕೈಗೆತ್ತಿಕೊಂಡಿದೆ.

ಸಿಬಿಐ ತನಿಖೆ ನಡೆಸುತ್ತಿದ್ದ ಪ್ರಕರಣಗಳ ಪೈಕಿ 2023ರಲ್ಲಿ 636 ಪ್ರಕರಣಗಳಲ್ಲಿ ವಿವಿಧ ನ್ಯಾಯಾಲಯಗಳು ಆದೇಶ ನೀಡಿವೆ. ಈ ಪೈಕಿ 411 ಪ್ರಕರಣಗಳಲ್ಲಿ ಅಪರಾಧ ಸಾಬೀತಾಗಿದೆ. 140 ಪ್ರಕರಣಗಳಲ್ಲಿ ಆರೋಪಿಗಳು ಖುಲಾಸೆಗೊಂಡಿದ್ದಾರೆ. 24 ಪ್ರಕರಣಗಳಲ್ಲಿ ಆರೋಪಗಳನ್ನು ಕೈಬಿಡಲಾಗಿದೆ. 61 ಪ್ರಕರಣಗಳನ್ನು ನ್ಯಾಯಾಲಯಗಳು ವಿಲೇವಾರಿ ಮಾಡಿವೆ. ಕಳೆದ ವರ್ಷ, ಅಪರಾಧ ಸಾಬೀತು ಪ್ರಮಾಣ ಶೇ 71.4ರಷ್ಟಿತ್ತು. 2022ರಲ್ಲಿ ಇದು ಶೇ 74.59ರಷ್ಟು ಪ್ರಕರಣಗಳಲ್ಲಿ ಅಪರಾಧ ಸಾಬೀತಾಗಿತ್ತು ಎಂದು ವರದಿ ಹೇಳಿದೆ.

‘ಮುದ್ದು ರಾಕ್ಷಸಿ’ಯಾದ ನಿವೇದಿತಾ ಗೌಡ

ಚಂದನ್ ಶೆಟ್ಟಿ-ನಿವೇದಿತಾ ಗೌಡ ಮೊದಲಬಾರಿಗೆ ಜೊತೆಯಾಗಿ ‘ಕ್ಯಾಂಡಿ ಕ್ರಷ್’ ಚಿತ್ರದಲ್ಲಿ ಅಭಿನಯಿಸಿದ್ದು ಗೊತ್ತೇ ಇದೆ. ಈ ಜೋಡಿ ವೈಯಕ್ತಿಕ ಜೀವನದಲ್ಲಿ ಜೊತೆಯಾಗಿದ್ದಾಗ ಒಪ್ಪಿಕೊಂಡಿದ್ದ ಚಿತ್ರವಿದು. ಇದೀಗ ಚಿತ್ರದ ಶೀರ್ಷಿಕೆ ‘ಮುದ್ದು ರಾಕ್ಷಸಿ’ ಎಂದು ಬದಲಾಗಿದೆ. ಪುನೀತ್ ಶ್ರೀನಿವಾಸ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಸೈಕೋಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಿದು.

‘ಚಿತ್ರದ ಹೆಸರು ಬದಲಾವಣೆಗೂ ಚಂದನ್ ಶೆಟ್ಟಿ–ನಿವೇದಿತಾ ವೈಯಕ್ತಿಕ ಬದುಕಿನ ಘಟನೆಗಳಿಗೂ ಯಾವುದೇ ಸಂಬಂಧವಿಲ್ಲ. ‘ಕ್ಯಾಂಡಿ ಕ್ರಷ್’ ಎಂಬ ಹೆಸರಿನ ಕಂಪನಿಯೊಂದು ಶೀರ್ಷಿಕೆ ಬದಲಿಸುವಂತೆ ನಮಗೆ ನೋಟಿಸ್ ನೀಡಿತ್ತು. ನಾವು ಕಂಪನಿಗೆ ಈ ಬಗ್ಗೆ ಮನವರಿಕೆ ಮಾಡಿಕೊಡಲು ಯತ್ನಿಸಿದೆವು. ಆದರೆ ಒಪ್ಪಲಿಲ್ಲ. ಹೀಗಾಗಿ ಶೀರ್ಷಿಕೆ ಬದಲಿಸಿದ್ದೇವೆ’ ಎಂದು ಸ್ಪಷ್ಟನೆ ನೀಡಿದ್ದಾರೆ ಚಿತ್ರದ ನಿರ್ದೇಶಕ ಪುನೀತ್.

ಶ್ರೀಚೌಡೇಶ್ವರಿ ಸಿನಿ ಕಂಬೈನ್ಸ್ ಮೂಲಕ ಮೋಹನ್ ಕುಮಾರ್ ಚಿತ್ರವನ್ನು ನಿರ್ಮಿಸಿದ್ದಾರೆ. ‘ಚಂದನ್–ನಿವೇದಿತಾ ವಿಚ್ಛೇದನದ ನಂತರವೂ ಲವ್ ದೃಶ್ಯಗಳನ್ನು ಚಿತ್ರೀಕರಿಸಿದ್ದೇವೆ. ಇಬ್ಬರೂ ಈ ವಿಚಾರದಲ್ಲಿ ತುಂಬ ವೃತ್ತಿಪರತೆ ಹೊಂದಿದ್ದಾರೆ. ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ಮಾಡಿದ್ದೇವೆ. ಇನ್ನು 5 ದಿನಗಳ ಚಿತ್ರೀಕರಣ ಮಾತ್ರ ಬಾಕಿಯಿದೆ’ ಎಂದು ನಿರ್ದೇಶಕರು ತಿಳಿಸಿದ್ದಾರೆ. ಎಂ.ಎಸ್.ತ್ಯಾಗರಾಜ್ ಸಂಗೀತ, ಎ.ಕರುಣಾಕರ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಚಂದನ್ ಶೆಟ್ಟಿ, ನಿವೇದಿತಾ ಗೌಡ

‘ಸುಬ್ರಹ್ಮಣ್ಯ’ನ ಪ್ರಪಂಚದ ಪರಿಚಯ



ಅದ್ವೆ

ಬಹುಭಾಷಾ ನಟ ರವಿಶಂಕರ್ ತಮ್ಮ ಪುತ್ರ ಅದ್ವೆ ಅವರನ್ನು ‘ಸುಬ್ರಹ್ಮಣ್ಯ’ ಸಿನಿಮಾ ಮೂಲಕ ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದಾರೆ. ಚಿತ್ರಕ್ಕೆ ರವಿಶಂಕರ್ ಅವರೇ ಆ್ಯಕ್ಷನ್ ಕಟ್ ಹೇಳುತ್ತಿದ್ದು ಸಿನಿಮಾದ ಪೋಸ್ಟರ್ ಅನ್ನು ಚಿತ್ರತಂಡ ಬಿಡುಗಡೆ ಮಾಡಿದೆ.

‘ಸುಬ್ರಹ್ಮಣ್ಯ’ ಸಿನಿಮಾದ ಶೇಕಡ 60 ಭಾಗದ ಚಿತ್ರೀಕರಣ ಪೂರ್ಣಗೊಂಡಿದ್ದು, ಸದ್ಯ ಪೋಸ್ಟ್-ಪ್ರೊಡಕ್ಷನ್ ಕೆಲಸ ಮುಂಬೈನ ಶಾರುಖ್ ಖಾನ್ ಒಡೆತನದ ರೆಡ್ ಚಿಲ್ಲೀಸ್ ಸ್ಟುಡಿಯೊದಲ್ಲಿ ನಡೆಯುತ್ತಿದೆ. ಮುಂಬೈ, ಹೈದರಾಬಾದ್, ಬೆಂಗಳೂರು ಮತ್ತು ಚೆನ್ನೈನ ಹಲವಾರು ಸ್ಟುಡಿಯೊಗಳಲ್ಲಿ ವಿಎಫ್‌ಎಕ್ಸ್ ಮತ್ತು ಸಿಜಿಐ ಕೆಲಸಗಳು ನಡೆಯುತ್ತಿವೆ.



ಚಿತ್ರದ ಪೋಸ್ಟರ್

‘ಸುಬ್ರಹ್ಮಣ್ಯ’ ಸಿನಿಮಾದ ಫಸ್ಟ್ ಲುಕ್ ಪೋಸ್ಟರ್ ಅನ್ನು ಶೀಘ್ರದಲ್ಲೇ ಅನಾವರಣಗೊಳಿಸಲಾಗುವುದು ಎಂದಿದೆ ಚಿತ್ರತಂಡ. ಸೋಷಿಯೋ ಫ್ಯಾಂಟಸಿ ಅಡ್ವೆಂಚರ್ ಜಾನರ್‌ನಲ್ಲಿರುವ ಈ ಸಿನಿಮಾವನ್ನು ಎಸ್.ಜಿ. ಮೂವೀ ಮೇಕರ್ಸ್ ಬ್ಯಾನರ್‌ನಡಿ ತಿರುಮಲ ರೆಡ್ಡಿ ಮತ್ತು ಅನಿಲ್ ಕಡಿಯಾಲ ನಿರ್ಮಾಣ ಮಾಡಿದ್ದಾರೆ. ರವಿ ಬಸ್ರೂರ್ ಈ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ. ವಿಘ್ನೇಶ್ ರಾಜ್ ಛಾಯಾಚಿತ್ರಗ್ರಹಣ, ವಿಜಯ್ ಎಂ.ಕುಮಾರ್ ಸಂಕಲನ ‘ಸುಬ್ರಹ್ಮಣ್ಯ’ ಚಿತ್ರಕ್ಕಿದೆ. ಪ್ಯಾನ್ ಇಂಡಿಯಾ ಮಟ್ಟದಲ್ಲಿ ಈ ಸಿನಿಮಾ ಸಜ್ಜಾಗುತ್ತಿದೆ. 20 ವರ್ಷಗಳ ಹಿಂದೆ ‘ದುರ್ಗಿ’ ಸಿನಿಮಾದಲ್ಲಿ ಮಾಲಾಶ್ರೀ ಅವರಿಗೆ ಮೊದಲ ಬಾರಿಗೆ ಆ್ಯಕ್ಷನ್ ಕಟ್ ಹೇಳಿದ್ದ ರವಿಶಂಕರ್, ಇದೀಗ ಮಗ ಅದ್ವೆಗಾಗಿ ಅವರು ಡೈರೆಕ್ಟರ್ ಕ್ಯಾಪ್ ತೊಟ್ಟಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಹರಿಯಾಣದ ಕಾಂಗ್ರೆಸ್ ಸಂಸದೆ ಕುಮಾರಿ ಸೆಲ್ಜಾ ಅವರ ವಿಡಿಯೊ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೊಳ್ಳಲಾಗುತ್ತಿದೆ. ಹರಿಯಾಣ ರಾಜ್ಯ ಬಿಜೆಪಿ ಘಟಕ ಕೂಡ ವಿಡಿಯೊ ಹಂಚಿಕೊಂಡಿದ್ದು, ಹಿಂದೂಗಳ ದೇವರಾದ ರಾಮನ ಬಗ್ಗೆ ಕಾಂಗ್ರೆಸ್‌ನ ದ್ವೇಷವನ್ನು ಇದು ಪ್ರತಿನಿಧಿಸುತ್ತದೆ ಎಂದು ಪ್ರತಿಪಾದಿಸಲಾಗಿದೆ. ‘ರಾಮ್ ಟಪಕ್ತಾ ರೆಹತಾ ಹೈ’ ಎನ್ನುವ ವಾಕ್ಯವನ್ನು ಹಿಂದೂಗಳ ನಂಬಿಕೆಗೆ ಹಾಗೂ ರಾಮನಿಗೆ ಮಾಡಿದ ಅವಮಾನ ಎಂದು ಬಿಂಬಿಸಲಾಗುತ್ತಿದೆ. ಆದರೆ, ಇದು ಸುಳ್ಳು ಪ್ರತಿಪಾದನೆ.

ಯು ಟ್ಯೂಬ್ ಸಂದರ್ಶನವೊಂದರಲ್ಲಿ ಭಾಗವಹಿಸಿದ್ದ ಕುಮಾರಿ ಸೆಲ್ಜಾ ಅವರು, ಬಿಜೆಪಿಯು ವಿವಿಧ ಯೋಜನೆಗಳ ಶಂಕುಸ್ಥಾಪನೆ ನೆರವೇರಿಸಿದ ಬಗ್ಗೆ ಮಾತನಾಡುತ್ತಾ, ‘ನೀವು ಆ ಯೋಜನೆಗಳು ಎಷ್ಟರ ಮಟ್ಟಿಗೆ ಪೂರ್ಣಗೊಂಡಿವೆ ಎನ್ನುವುದನ್ನು ನೋಡಬೇಕು. ರಾಮಮಂದಿರವನ್ನೂ ಅವರು ಬಿಡಲಿಲ್ಲ. ಅರ್ಧದಲ್ಲಿಯೇ ಉದ್ಘಾಟನೆ ನೆರವೇರಿಸಿದರು. ಮಳೆಗಾಲದಲ್ಲಿ ರಾಮ ತೊಟ್ಟಿಕ್ಕುತ್ತಾನೆ’ ಎಂದು ಹೇಳಿದ್ದರು. ಈ ಬಗ್ಗೆ ಕೀವರ್ಡ್ ಸರ್ಚ್ ಮಾಡಿದಾಗ, ಹರಿಯಾಣದಲ್ಲಿ ‘ರಾಮ’ ಎನ್ನುವ ಪದಕ್ಕೆ ಹಲವು ಅರ್ಥಗಳಿದ್ದು, ಮಳೆ ಎಂಬುದು ಕೂಡ ಒಂದು ಅರ್ಥವಾಗಿದೆ. ಕುಮಾರಿ ಸೆಲ್ಜಾ ಅವರ ಮಾತುಗಳನ್ನು ಸಂದರ್ಭದಿಂದ ಪ್ರತ್ಯೇಕಿಸಿ, ಅವರು ರಾಮನಿಗೆ ಅವಮಾನ ಮಾಡಿದ್ದಾರೆ ಎಂದು ಸುಳ್ಳು ಪ್ರಚಾರ ಮಾಡಲಾಗುತ್ತಿದೆ. ಈ ಬಗ್ಗೆ ‘ಆಲ್ಟ್ ನ್ಯೂಸ್’ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಅನ್ನದ ಮಹತ್ವ

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ 15

12ನೇ ಶತಮಾನದೊಳಗ ಒಬ್ಬ ಶರಣ ಇದ್ದ. ಮರುಳ ಶಂಕರದೇವ ಅಂತ ಅವನ ಹೆಸರು. 12 ವರ್ಷ ಶರಣರ ಮಹಾಮನೆಯಲ್ಲಿ ಶರಣರ ಎಂಜಲು ಎಲೆ ತೆಗೆದು ಅದರಲ್ಲಿ ಅಳಿದುಳಿದ ಅನ್ನವನ್ನು ಸಂಗ್ರಹಿಸಿ ತಿನ್ನುತ್ತಿದ್ದ. ಅಷ್ಟು ವರ್ಷ ಹೀಗೇ ಮಾಡಿದರೂ ಅದು ಯಾರಿಗೂ ಗೊತ್ತಾಗಿರಲಿಲ್ಲ. ಒಂದಿನ ಅಲ್ಲಮಪ್ರಭುಗಳು ಅದನ್ನು ನೋಡಿದರು. ‘ಕಂಡೆನೊಂದ ಆಶ್ಚರ್ಯವ, ಮಾಣಿಕ್ಯ ಕಂಡೆ’ ಎಂದು ಉದ್ಗರಿಸುತ್ತಾರೆ ಅವರು. ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ, ಚಿತ್ತದಲಿ ನಿರಪೇಕ್ಷೆ ಇದು ಮರುಳ ಶಂಕರದೇವ. ಅನ್ನದ ಕಣ, ಸಂತೋಷದ ಕ್ಷಣ.

ಜೀವನದಲ್ಲಿ ಎಂದೂ ಅನ್ನದ ಕಣ ಹಾಳುಮಾಡಬಾರದು ಎಂದು ಕಲಿಸಿದವ ಮರುಳ ಶಂಕರದೇವ. 12 ವರ್ಷ ಹೀಗೇ ಮಾಡಿದ್ದರೂ ಅದನ್ನು ಯಾರಿಗೂ ತಿಳಿಯದಂತೆ ನೋಡಿಕೊಂಡಿದ್ದ. ಆದರೆ, ನಾವು ಗುಡಿಗೆ ಒಂದು ಟ್ಯೂಬ್ ಲೈಟ್ ಕೊಟ್ಟಿರ್ತೀವಿ. ಅದರ ತುಂಬಾ ನಮ್ಮ ಹೆಸರು ಹಾಕಿಕೊಂಡಿರ್ತೀವಿ. ಹೆಸರು ಎಷ್ಟಿರುತ್ತದೆಂದರ ಗುಡ್ಯಾಗ ಬೆಳಕಾ ಬರೋದಿಲ್ಲ ಅಷ್ಟು. ಏನೇನೂ ಇರಲಿಲ್ಲ. ಆದರ ಅವರು ಸಂತೋಷದ ಬದುಕು ಕಟ್ಟಿದರು. ಅವರ ಬದುಕು ಎಷ್ಟು ದೊಡ್ಡದು, ಎಷ್ಟು ವಿಶಾಲ. ನಮ್ಮ ಬದುಕು ಹ್ಯಾಂಗೈತಿ? ಅದೇ 30X40 ಸೈಟು, ಸಾಲ ಮಾಡಿ ಕಟ್ಟಿದ ಮನೆ, ಅದರೊಳಗೊಂದು ಟಿವಿ ಹಾಲ್, ಟಿವಿ ಮ್ಯಾಲೊಂದು ಗಂಡ ಹೆಂಡತಿ ಫೋಟೊ. ಅದಾ ಫೋಟೊನ ಎಲ್ಲರಿಗೂ ವಾಟ್ಸಾಪ್ ಮಾಡಿರ್ತೀವಿ. ಇಷ್ಟ ನಮ್ಮ ಬದುಕು.

ಮನುಷ್ಯ ಹ್ಯಾಂಗ ಸಂತೋಷದಿಂದ ಬದುಕಬೇಕು ಅನ್ನೊದನ್ನ ನಿಸರ್ಗ ಕಲಿಸಿಕೊಡುತ್ತದ. ನಿಸರ್ಗದ ಪ್ರತಿ ಕ್ಷಣದಲ್ಲಿಯೂ ಸಂತೋಷ ಅದ. ನಿಮ್ಮ ಬಳಿ ಒಂದು ಮೋಟಾರು ಸೈಕಲ್ ಇದೆ. ಅದಕ್ಕೆ ಇಂಧನ ಹಾಕಿಸಬೇಕು ಅಂದರ ನೀವೇ ಪೆಟ್ರೋಲ್ ಬಂಕ್‌ಗೆ ಹೋಗಬೇಕು. ಅದೇ ರೀತಿ ನಮ್ಮ ದೇಹನೂ ಒಂದು ವಾಹನ. ಅದಕ್ಕೂ ಇಂಧನ ಬೇಕು. ಆದರೆ ನಿಸರ್ಗ ನಮ್ಮ ಮೂಗಿದ್ದಲ್ಲೇ ಗಾಳಿ ತಂದು ಇಟ್ಟೈತಲ್ಲ. ಅದು ದೊಡ್ಡದು. ನಾವು ಸದಾ ಸಂತೋಷವಾಗಿರಬೇಕು ಅಂತ ನಿಸರ್ಗ ಕಲಿಸುತ್ತಾ ಇದೆ.

ಒಂದು ಬೇಸಿಗೆ ದಿನ ಒಬ್ಬ ದಾರಿಯಲ್ಲಿ ಸಾಗುತ್ತಿದ್ದ. ಒಂದು ಮಾವಿನ ಮರ ಕಾಣಿಸಿತು. ಅದರ ತುಂಬಾ ರಸವತ್ತಾದ ಹಣ್ಣುಗಳಿದ್ದವು. ಇವ ಒಂದು ಕಲ್ಲು ತೆಗೆದು ಒಗೆದ. ಅದು ಎರಡು ಹಣ್ಣು ಕೊಟ್ಟಿತು. ತಿಂದ. ಮತ್ತೊಂದು ಕಲ್ಲು ಒಗೆದ. ಇನ್ನೆರಡು ಹಣ್ಣು ಕೊಟ್ಟಿತು. ಮತ್ತೆ ಒಗೆದ ಮತ್ತೆರಡು ಹಣ್ಣು ಕೊಟ್ಟಿತು. ಇವ ಮಾವಿನ ಗಿಡದ ಬಳಿಗೆ ಹೋಗಿ ‘ಮನುಷ್ಯ ಜಾತಿಯಲ್ಲಿ ಯಾರಾದರೂ ಕೈಯಲ್ಲಿ ಕಲ್ಲು ಹಿಡಿದುಕೊಂಡರೆ ಸಾಕು ಕಣ್ಣು ಕಿತ್ತು ಕೈಗೆ ಕೊಡ್ತಾರೆ, ಆದರೆ ನೀನು ಕಲ್ಲು ಹೊಡೆದರೂ ಹಣ್ಣು ಕೊಡ್ತೀಯಲ್ಲ, ಯಾಕೆ ನಿನ್ನ ಮನಸ್ಸಿಗೆ ನೋವಾಗಿಲ್ವಾ?’ ಎಂದು ಕೇಳಿದ. ಅದಕ್ಕೆ ಆ ಮರ ‘ನನಗೇನೂ ನೋವಾಗಲಿಲ್ಲ. ಯಾಕೆಂದರೆ ಎತ್ತರಕ್ಕೆ ಬೆಳೆದವರಿಗೆ ಕಲ್ಲು ಒಗೆಯೋದು ಮನುಷ್ಯರ ಹಳೆ ಚಾಳಿ. ಆದರ ನನ್ನ ಅಮ್ಮ ನನಗೊಂದು ಮಾತು ಹೇಳಿದ್ದಾಳೆ. ನೀನು ದೊಡ್ಡವನಾದ ಮ್ಯಾಲೆ ಕಲ್ಲು ಒಗೆಯೋರು ಬಹಳ ಮಂದಿ ಇರ್ತಾರೆ. ಕಲ್ಲು ಒಗೆದ-ವರಿಗೆಲ್ಲಾ ಎರಡೆರಡು ಹಣ್ಣು ಕೊಡು ನಿನ್ನ ಬದುಕು ಸಾರ್ಥಕ ಆಗತ್ತೆ ಅಂತ’ ಎಂದು ಹೇಳಿತು.

ಇದು ನಿಸರ್ಗ ಕಲಿಸುವ ಪಾಠ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಸೆಪ್ಟೆಂಬರ್ 4, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಪ್ರತಿಪದ್ ಗಂ. 9-47 ನಕ್ಷತ್ರ: ಉತ್ತರಫಲ್ಗುನಿ ಅಹೋರಾತ್ರ ಯೋಗ: ಸಾಧ್ಯ ಗಂ. 20-03 ಕರಣ: ಬವ ಗಂ. 9-47, ಸಿಂಹ ಮಾಸದ 18 ನೇ ದಿನ, ಮಳೆನಕ್ಷತ್ರ: ಪೂರ್ವಫಲ್ಗುಣಿ 2.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-23 ಸೂರ್ಯಾಸ್ತ : 06-36
ಮುಸ್ಲಿಂ ದಿನಾಂಕ : 30 ಸಫರ್
ದಿನ ವಿಶೇಷ : ಅಖೇರಿ ಚಹಾರ್ ಶುಂಬಾ (ಮುಸ್ಲಿಂ), ಅದೃಷ್ಟ ಸಂಖ್ಯೆ : 9, 3

ಮೇಷ: ಹಣಕಾಸಿನ ವ್ಯಾಮೋಹದಿಂದ ಪಶ್ಚಾತ್ತಾಪಕ್ಕೆ ಕಾರಣವಾಗದಂತೆ ನೋಡಿಕೊಳ್ಳಿ. ಮಗಳಿಗೆ ತಾಯಿಯ ಅಥವಾ ಹತ್ತಿರದ ಸಂಬಂಧಿಕರ ವರ ನಿಶ್ಚಯವಾಗುವುದು. ಅಧಿಕ ಕೊಬ್ಬಿನ ಅಂಶದ ಆಹಾರವನ್ನು ತ್ಯಜಿಸಿ.

ವೃಷಭ: ಆಹಾರದ ಪದ್ಧತಿ ನಿಯಂತ್ರಿಸಿ, ರಕ್ತದೊತ್ತಡ ಸ್ಥಿತಿಯನ್ನು ಸಮತೋಲನಕ್ಕೆ ತರುವ ಪ್ರಯತ್ನ ಮಾಡಬಹುದು . ದೇಹಾಯಾಸ ತೋರಿಬಂದು ತಪ್ಪಾದ ನಿರ್ಧಾರ ತೆಗೆದುಕೊಳ್ಳುವ ಸ್ಥಿತಿ ಎದುರಾಗಬಹುದು.

ಮಿಥುನ: ಇಂದಿನ ಪರಿಸ್ಥಿತಿ ಮನದ ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಮನೆಯಲ್ಲಿ ಪತ್ನಿ, ಮಕ್ಕಳ ಆರೋಗ್ಯದ ಬಗ್ಗೆ ಗಮನ ಹರಿಸಿ. ಆಫೀಸಿನ ಜನರ ಬಗ್ಗೆ ಗಮನವಿರಲಿ.

ಕರ್ಕಾಟಕ: ಆರೋಗ್ಯದಲ್ಲಿ ಏರುಪೇರಾಗುವ ಲಕ್ಷಣ ಇರುವುದು. ಯಾವುದೇ ರೀತಿಯ ಆತಂಕಕ್ಕೆ ಒಳಗಾಗಬೇಡಿ. ಕೆಲಸಕ್ಕೆ ಅನಿರೀಕ್ಷಿತ ಬದಲಾವಣೆಗಳು ಬರಬಹುದು. ನಟನೆ ಮಾಡುವವರಿಗೆ ಉತ್ತಮ ಅವಕಾಶಗಳಿವೆ.

ಸಿಂಹ: ಪ್ರಭಾವಿ ವ್ಯಕ್ತಿಗಳ ಒಡನಾಟ ಹೆಚ್ಚಿನ ಸ್ಥಾನಮಾನವನ್ನು ಜತೆಯಲ್ಲಿ ಆಯಾಸವನ್ನು ತಂದು ಕೊಡಲಿದೆ. ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ. ಅಧಿಕಾರಿಗಳಿಂದ ಪ್ರಶಂಸೆ ಮಾತುಗಳನ್ನು ಕೇಳುವಿರಿ.

ಕನ್ಯಾ: ನವದಂಪತಿ ಪರಸ್ಪರ ಬೇಕು ಬೇಡಗಳನ್ನು ಅರಿತು ಬಹಳ ಎಚ್ಚರಿಕೆ ವಹಿಸಿ ಪ್ರತಿ ಹೆಜ್ಜೆಯನ್ನು ಇಡಿ. ದಂಪತಿಗಳಿಗೆ ಸಂತಾನದ ಶುಭ ಸಮಾಚಾರಗಳಿರುವುದು. ಹೊಸ ಸ್ಥಳದಲ್ಲಿ ಹೊಂದಿಕೊಳ್ಳಲು ಸಮಯ ತೆಗೆದುಕೊಳ್ಳುವಿರಿ.

ತುಲಾ: ಕ್ರೀಡಾಪಟುಗಳು ಕ್ರೀಡೆಯಲ್ಲಿ ಉತ್ತಮ ಪ್ರದರ್ಶನ ನೀಡಿ ಅಪೇಕ್ಷಿತ ಜಯ ಹೊಂದುವಿರಿ. ಮನೆಯವರ ಅಥವಾ ಹಿರಿಯರ ಮಾತಿನಂತೆ ಕೆಲಸ ಕೈಗೊಳ್ಳುವುದು ಉತ್ತಮ. ವಾತದ ಬಾಧೆಯು ಉಪಶಮನವಾಗುವುದು.

ವೃಶ್ಚಿಕ: ಅವಿವಾಹಿತರು ಮನೆಯಲ್ಲಿ ತೋರಿಸುವ ಎಲ್ಲಾ ಸಂಬಂಧಗಳಿಗೆ ನಕಾರ ಸೂಚಿಸುವ ಬದಲು ಅಪೇಕ್ಷಿತ ವ್ಯಕ್ತಿಯನ್ನೇ ಮನೆಯವರ ಮುಂದೆ ಪ್ರಸ್ತಾಪಿಸುವುದು ಒಳ್ಳೆಯದು. ಪತಿ ಪತ್ನಿಯರಲ್ಲಿ ಸಾಮರಸ್ಯ ಇರುವುದು.

ಧನು: ಮೇಲಧಿಕಾರಿಯ ಅಪರೂಪದ ಮೃದು ಧೋರಣೆ ಸಿಬ್ಬಂದಿ ವರ್ಗಕ್ಕೆ ಆಶ್ಚರ್ಯ ಹಾಗೂ ಸಂತೋಷವೆನಿಸುವುದು. ಅತಿಯಾದ ಪರಿಶ್ರಮದ ದುಡಿಮೆಯು ಜನರ ದೃಷ್ಟಿ ದೋಷಕ್ಕೆ ಗುರಿಯಾಗುವುದು.

ಮಕರ: ಇತರರಿಗೆ ಸಹಾಯ ಮಾಡಲೆಂದು ಹೋದ ನಿಮಗೆ ಸಂಕೋಚದ ಸ್ವಭಾವದಿಂದಾಗಿ ಆರ್ಥಿಕವಾಗಿ ನಷ್ಟವಾಗಬಹುದು. ಬಂಧುಗಳಲ್ಲಿ ಗೌಪ್ಯ ವಿಷಯವನ್ನು ತಿಳಿಸದಿರಿ. ಆಹಾರದಲ್ಲಿ ಅದನ್ನು ಸರಿಪಡಿಸಿಕೊಳ್ಳಿ.

ಕುಂಭ: ಮಧ್ಯದಲ್ಲಿ ನಿಂತ ವಿದ್ಯಾಭ್ಯಾಸವನ್ನು ಮುಂದುವರಿಸುವ ಪ್ರಯತ್ನ ಮಾಡಿದರೆ ಸಫಲರಾಗುವಿರಿ. ವ್ಯವಹಾರದಲ್ಲಿ ಅಡ್ಡಿ ಆತಂಕ ಎದುರಾದರೂ ದುರ್ಗಾದೇವಿಯ ಆರಾಧನೆಯಿಂದ ಸಹಜವಾಗಿ ಮುಂದುವರಿಯುವುದು.

ಮೀನ: ಕುಟುಂಬದ ಮಾತುಕತೆಯಲ್ಲಾಗಲಿ ಅಥವಾ ಆಫೀಸಿನ ಸಭೆಯಲ್ಲಾಗಲಿ ಸಂದರ್ಭಕ್ಕೆ ಸರಿಯಾದಂಥ ಮಾತುಗಳಿಂದ ಸಮಸ್ಯೆ ಪರಿಹರಿಸಿಕೊಳ್ಳುವಿರಿ. ಸಾಮಾಜಿಕ ಬದುಕಿನಲ್ಲಿ ಹುರುಪನ್ನು ಕಾಣಲಿದ್ದೀರಿ. ಅನವಶ್ಯಕ ಚಿಂತೆ ಬೇಡ.

ಪದಬಂಧ 5793

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಲೆದೋರುವಿಕೆಯನ್ನು ಹೀಗೆನ್ನಿ (3)
3.ಇಂಪಾದ ಧ್ವನಿ (3)
5.ಜನಪ್ರಿಯನಾದವ ಕೊನೆಗೆ ರಾಗಿ ಹಿಡಿದಿದ್ದಾನಲ್ಲಾ? (5)
6.ಗಡಿಬಿಡಿಯಿಂದ ಪ್ರವೇಶಿಸಿರುವ ಎಲ್ಲೆ! (2)
8.ಅತ್ತೆಯ ಗಂಡನಿವನು (2)
9.ಹಾವುಗೆ ಬಳಿಯಿರುವ ಉರಗ (2)
10.ಕನಸು ಕಾಣುತ್ತಲೇ ತೋರಿದ ಬಲ! (2)
14.ಇದು ಅಂತರಂಗಸ್ಪರ್ಶಿಯಾದುದು (5)
15.ಅಡುಗೆ ಮಾಡುವ ಪಾತ್ರೆ (3)
16.ನಡುವೆ ಜೀ ಎನ್ನುತ್ತಿರುವ ಮಂತ್ರಿ (3)

ಮೇಲಿಂದ ಕೆಳಕ್ಕೆ
1.ಕೊನೆಗೆ ಯೋಗವಿದ್ದರಷ್ಟೇ ಇದು ಪ್ರಯೋಜನ! (4)
2.ಜವಾನನು ಹೊತ್ತಿರುವ ಒಜ್ಜೆ (3)
3.ತಂಗಿ ವ್ಯಕ್ತಪಡಿಸಿದ ಅಭಿಪ್ರಾಯ (3)
4.ರಥದಲ್ಲಿ ದೇವರ ವಿಗ್ರಹವನ್ನು ಕೂರಿಸಿ ಮಾಡುವ ಮೆರವಣಿಗೆ (4)
7.ಕಾವು ಇರುವ ಬಾಹ್ಯ ಸೌಂದರ್ಯ (3)
8.ಅಳೆಯುವ ಸಾಧನ (3)
9.ಹೊಳೆ ದಾಟುವ ಸ್ಥಳ (4)
11.ಕೋಮಲವಾದ ಶರೀರವುಳ್ಳವನು (4)
12.ಈ ಹೆಣ್ಣು ದುಂಬಿ ಇನ್ನೂ ಮರಿ! (3)
13.ಕವರಿಸುತ್ತಿರುವವ ಪೆದ್ದ! (3)



5792ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತುರಗ 3.ವ್ಯಾಸ 5.ಹತ್ತಿ
6.ಮಾದರಿ 7.ಹಲ
8.ವಿಜಯನಗರ 10.ಉತ್ತರಕನ್ನಡ
14.ಕಾಡು 15.ತವಕ
16.ಲಡಿ 17.ರವೆ
18.ಧಾರಣೆ

ಮೇಲಿಂದ ಕೆಳಕ್ಕೆ:
1.ತುಡುಗಣಿ 2.ಗಯೋನಿವಿ
4.ಸಮಾಧಾನ 5.ಹರಿಹರ 9.ಯಮಕ
10.ಉಡುತಡಿ 11.ರತ್ನಾಕರ
12.ಡವಾರಧಾ 13.ತುರಿಮಣೆ

ಸುಡೊಕು 6178

	6				7		1	4
8		7	6		4			
	2			8			5	
	4			1		9		
		1	8		5		7	
7	5			9		3	4	
	8			7		4		3
	3		4		8			
9		4			2		6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6177 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಷೇರುಪೇಟೆ ವಹಿವಾಟು

▼ 4



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,278
ಇಂದಿನ ಅಂತ್ಯ	25,279
▲	1
ದಿನದ ಗರಿಷ್ಠ	25,321

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹230
ಆರ್‌ಎಸ್‌ಎಸ್-5	₹224
ಗುಡ್ ಲಾಟ್	₹210

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹510
12 ಕ್ಕೆ	₹70
ಮೈಸೂರು	
100ಕ್ಕೆ	₹512

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹337-550
ದ್ವಿತಳಿ (ಬಿ.ವಿ)	₹236-711

ವಿದೇಶ ಪ್ರವಾಸ ಶೇ 32ರಷ್ಟು ಏರಿಕೆ

ನವದೆಹಲಿ (ಪಿಟಿಐ): ಒಂದು ವರ್ಷದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ಬಾರಿ ವಿದೇಶ ಪ್ರವಾಸ ಮಾಡುವ ಭಾರತೀಯರ ಪ್ರಮಾಣ ಶೇ 32ರಷ್ಟು ಏರಿಕೆಯಾಗಿದೆ ಎಂದು 'ಮೇಕ್‌ಮೈಟ್ರಿಪ್' ವರದಿ ಮಂಗಳವಾರ ತಿಳಿಸಿದೆ.

ವರದಿಯ ಪ್ರಕಾರ, ಮಹಾರಾಷ್ಟ್ರ, ಕರ್ನಾಟಕ ಮತ್ತು ದೆಹಲಿಯು ಅಂತರರಾಷ್ಟ್ರೀಯ ಪ್ರಯಾಣದ ಹುಡುಕಾಟಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿವೆ. ವರದಿಯು 2023 ಜೂನ್ ಮತ್ತು 2024ರ ಮೇ ನಡುವಿನ ಅವಧಿಯನ್ನು ಒಳಗೊಂಡಿದೆ.

ಯುಎಇ, ಥಾಯ್ಲೆಂಡ್ ಮತ್ತು ಅಮೆರಿಕದಂತಹ ತಾಣಗಳು, ಭಾರತೀಯ ಪ್ರಯಾಣಿಕರು ಇಷ್ಟಪಡುವ ಸ್ಥಳಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿವೆ. ಕಜಕಸ್ತಾನ, ಅಜರ್‌ಬೈಜಾನ್, ಭೂತಾನ್ ಉದಯೋನ್ಮುಖ ಸ್ಥಳಗಳ ಪಟ್ಟಿಯಲ್ಲಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ನುಡಿನಮನ
ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

2ನೇ ವರ್ಷದ ಚಿರಸ್ಮರಣೆ

ಸಿವಿ ರಾಮಣ್ಣ
ಪ್ರೊಪ್ರೆಟರ್ ಟಿ.ಟಿ. ಶ್ರೀನಿವಾಸ ಎಲೆಕ್ಟ್ರಿಕಲ್
ಗುಪ್ತಾ ಲೇಔಟ್, ಲಕ್ಕಸಂದ್ರ,
ಮರಣ: 04.09.2022
ದುಃಖತಪ್ತರು :
ಹೆಂಡತಿ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮತ್ತು ಮೊಮ್ಮಕ್ಕಳು

ರಫ್ತು ಪ್ರಮಾಣ ಏರಿಕೆಯಿಂದ ಅಂದಾಜು ಪರಿಷ್ಕರಿಸಿದ ವಿಶ್ವಬ್ಯಾಂಕ್

‘ಜಿಡಿಪಿ ಶೇ 7ರಷ್ಟು ಪ್ರಗತಿ’

ನವದೆಹಲಿ (ಪಿಟಿಐ): ಭಾರತದ ಆರ್ಥಿಕತೆಯು 2024-25ರ ಹಣಕಾಸು ವರ್ಷದಲ್ಲಿ ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ವಿಶ್ವಬ್ಯಾಂಕ್ ಅಂದಾಜಿಸಿದೆ.

ಈ ಮೊದಲು ಜಿಡಿಪಿಯು ಶೇ 6.6ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಲಾಗಿತ್ತು. ಮಂಗಳವಾರ ಬಿಡುಗಡೆಗೊಳಿಸಿರುವ ವರದಿಯಲ್ಲಿ ಇದನ್ನು ಪರಿಷ್ಕರಿಸಲಾಗಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಮತ್ತು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಬೆಳವಣಿಗೆ ಶೇ 7ರಷ್ಟಾಗಲಿದೆ ಎಂದು ಈಗಾಗಲೇ ಅಂದಾಜಿಸಿವೆ. ಆರ್ಥಿಕ ಸಮೀಕ್ಷೆ ಪ್ರಕಾರ ಶೇ 6.5ರಿಂದ ಶೇ 7 ಬೆಳವಣಿಗೆ ಇರಲಿದೆ. ಆರ್‌ಬಿಐ ಅಂದಾಜು ಪ್ರಕಾರ ಪ್ರಗತಿಯು ಶೇ 7.2ರಷ್ಟು ಇರಲಿದೆ.

ಉತ್ತಮ ಮುಂಗಾರು, ಸರಕು ಮತ್ತು ಸೇವೆಗಳ ಮೇಲೆ ಗ್ರಾಹಕರು ಖರ್ಚು ಮಾಡುವ ಹಣದ ಪ್ರಮಾಣ ಹೆಚ್ಚಳ ಮತ್ತು ರಫ್ತು ಪ್ರಮಾಣ ಏರಿಕೆಯು ಜಿಡಿಪಿ ಪ್ರಗತಿಯ ಅಂದಾಜು ಹೆಚ್ಚಳಕ್ಕೆ ಕಾರಣ ಎಂದು ವಿಶ್ವಬ್ಯಾಂಕ್‌ನ ಹಿರಿಯ ಅರ್ಥಶಾಸ್ತ್ರಜ್ಞ ರಾನ್ ಲಿ ಹೇಳಿದ್ದಾರೆ.

ಮುಖ್ಯಾಂಶಗಳು

- ಜಿಡಿಪಿಯು ಶೇ 6.6 ಪ್ರಗತಿ ಕಾಣಲಿದೆ ಎಂದು ಅಂದಾಜಿಸಿದ್ದ ವಿಶ್ವಬ್ಯಾಂಕ್
- ರಫ್ತು ಪ್ರಮಾಣ ಹೆಚ್ಚಳಕ್ಕೆ ವಸ್ತುಗಳ ರಫ್ತಿನಲ್ಲಿ ವೈವಿಧ್ಯ ಅಗತ್ಯ
- ಆರ್‌ಬಿಐನ ಅಂದಾಜಿಗಿಂತ ಕಡಿಮೆ ಇರುವ ವಿಶ್ವಬ್ಯಾಂಕ್‌ನ ಅಂದಾಜು

ಬಾಹ್ಯ ಸವಾಲುಗಳ ಪರಿಸ್ಥಿತಿ ನಡುವೆಯೂ, ಭಾರತದ ಮಧ್ಯಮ ಅವಧಿ ಮುನ್ನೋಟ ಸಕಾರಾತ್ಮಕವಾಗಿ ಉಳಿದಿದೆ. 2025-26 ಮತ್ತು 2026-27ರಲ್ಲೂ ಜಿಡಿಪಿ ಪ್ರಗತಿಯು ಸದೃಢವಾಗಿ ಉಳಿಯುವ ನಿರೀಕ್ಷೆ ಇದೆ ಎಂದು ರಾನ್ ಹೇಳಿದ್ದಾರೆ.

> **ಭಾರತವು ಹೆಚ್ಚು ವ್ಯಾಪಾರ ಸಂಬಂಧಿತ ಉದ್ಯೋಗಗಳನ್ನು ಸೃಷ್ಟಿಸುವ ಅಗತ್ಯವಿದೆ. ಇದು ನಾವೀನ್ಯ ಮತ್ತು ಉತ್ಪಾದನಾ ಬೆಳವಣಿಗೆಯ ಅವಕಾಶವನ್ನು ಹೆಚ್ಚಿಸಲಿದೆ**
> **ರಾನ್ ಲಿ**, ವಿಶ್ವಬ್ಯಾಂಕ್‌ನ ಹಿರಿಯ ಅರ್ಥಶಾಸ್ತ್ರಜ್ಞ

2023-24ರಲ್ಲಿ ದೇಶದ ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ) ಮತ್ತು ಸಾಲದ ಅನುಪಾತವು ಶೇ 83.9ರಷ್ಟಿತ್ತು. ಇದು 2026-27ರ ಹಣಕಾಸು ವರ್ಷದ ವೇಳೆಗೆ ಶೇ 82ಕ್ಕೆ ಇಳಿಯಲಿದೆ. ಚಾಲ್ತಿ ಖಾತೆ ಕೊರತೆ ಜಿಡಿಪಿಯ ಅಂದಾಜು ಶೇ 1ರಿಂದ ಶೇ 1.6ರಷ್ಟು ಆಗಬಹುದು ಎಂದು ಅಂದಾಜಿಸಿದೆ.

‘ಭಾರತದ ದೃಢವಾದ ಬೆಳವಣಿಗೆಯ ನಿರೀಕ್ಷೆ, ಇಳಿಮುಖವಾಗಿರುವ ಹಣದುಬ್ಬರ ದರವು ತೀವ್ರ ಬಡತನವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ’ ಎಂದು ವಿಶ್ವಬ್ಯಾಂಕ್‌ನ ಭಾರತದ ನಿರ್ದೇಶಕ ಆಗಸ್ಟ್ ಟ್ಯಾನೋ ಕೌಮೆ ಹೇಳಿದ್ದಾರೆ.

ಭಾರತವು ತನ್ನ ಜಾಗತಿಕ ವ್ಯಾಪಾರ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವ ಮೂಲಕ ತನ್ನ ಬೆಳವಣಿಗೆಯ ದರವನ್ನು ಮತ್ತಷ್ಟು ಹೆಚ್ಚಿಸಬಹುದು. ಐ.ಟಿ, ವ್ಯಾಪಾರ ಸೇವೆಗಳು, ಫಾರ್ಮಾ, ಜವಳಿ, ಸಿದ್ಧಉಡುಪು, ಪಾದರಕ್ಷೆ, ಎಲೆಕ್ಟ್ರಾನಿಕ್ಸ್ ಮತ್ತು ಗ್ರೀನ್ ಟೆಕ್ನಾಲಜಿ ಉತ್ಪನ್ನಗಳ ರಫ್ತಿನೊಂದಿಗೆ ಭಾರತವು ತನ್ನ ರಫ್ತನ್ನು ವೈವಿಧ್ಯಮಯಗೊಳಿಸಬಹುದು ಎಂದು ಹೇಳಿದ್ದಾರೆ.

ಕೃಷಿ ವಲಯ ಚೇತರಿಕೆಯಿಂದ ಗ್ರಾಮೀಣ ಪ್ರದೇಶದ ಜನರ ಖರ್ಚಿನ ಪ್ರಮಾಣ ಏರಿಕೆಯಾಗಲಿದೆ. 2030ರ ವೇಳೆಗೆ ದೇಶದ ಸರಕಿನ ರಫ್ತು ₹83 ಲಕ್ಷ ಕೋಟಿ (1 ಟ್ರಿಲಿಯನ್ ಡಾಲರ್) ಮಾಡುವ ಗುರಿಯನ್ನು ಸಾಧಿಸಲು ರಫ್ತಿನಲ್ಲಿ ವೈವಿಧ್ಯ ಅಗತ್ಯ. ವ್ಯಾಪಾರದ ವೆಚ್ಚ ಮತ್ತು ವ್ಯಾಪಾರ ಅಡೆತಡೆಗಳನ್ನು ಕಡಿಮೆ ಮಾಡುವ ಮೂಲಕ ಗುರಿಯನ್ನು ತಲುಪಬಹುದು ಎಂದಿದ್ದಾರೆ.

ಎಫ್‌ಡಿಐ ಒಳಹರಿವು: ಶೇ 47ರಷ್ಟು ಜಿಗಿತ

ನವದೆಹಲಿ (ಪಿಟಿಐ): 2024–25ರ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಭಾರತಕ್ಕೆ ವಿದೇಶಿ ನೇರ ಬಂಡವಾಳದ (ಎಫ್‌ಡಿಐ) ಒಳಹರಿವು ಶೇ 47.8ರಷ್ಟು ಏರಿಕೆ ಆಗಿದೆ. ಈ ಅವಧಿಯಲ್ಲಿ ಆಗಿರುವ ಎಫ್‌ಡಿಐ ಮೊತ್ತ ₹1.35 ಲಕ್ಷ ಕೋಟಿ (16.17 ಬಿಲಿಯನ್ ಡಾಲರ್) ಆಗಿದೆ.

2023–24ರ ಹಣಕಾಸು ವರ್ಷದ ಇದೇ ಅವಧಿಯ ಎಫ್‌ಡಿಐ ₹91,866 ಕೋಟಿ (10.94 ಬಿಲಿಯನ್ ಡಾಲರ್) ಆಗಿತ್ತು ಎಂದು ಸರ್ಕಾರದ ಅಂಕಿ–ಅಂಶಗಳು ಮಂಗಳವಾರ ತಿಳಿಸಿವೆ.

ಸೇವೆಗಳು, ಕಂಪ್ಯೂಟರ್ ಯಂತ್ರಾಂಶ ಹಾಗೂ ತಂತ್ರಾಂಶ, ದೂರಸಂಪರ್ಕ, ಆಟೊಮೊಬೈಲ್ ಮತ್ತು ಫಾರ್ಮಾ ವಲಯಗಳಲ್ಲಿ ಹೂಡಿಕೆ ಹೆಚ್ಚಳ ಆಗಿರುವುದೇ ಏರಿಕೆಗೆ ಕಾರಣ ಎಂದು ತಿಳಿಸಿದೆ.



ಮಾರಿಷಸ್, ಸಿಂಗಪುರ, ಅಮೆರಿಕ, ನೆದರ್ಲೆಂಡ್ಸ್, ಯುಎಇಯಿಂದ ಎಫ್‌ಡಿಐ ಹೆಚ್ಚಿದೆ. ಜಪಾನ್, ಬ್ರಿಟನ್ ಮತ್ತು ಜರ್ಮನಿಯಿಂದ ಒಳಹರಿವು ಕಡಿಮೆಯಾಗಿದೆ.

ಎಫ್‌ಡಿಐ ಆಕರ್ಷಿಸುವುದರಲ್ಲಿ ಮಹಾರಾಷ್ಟ್ರವು ಮೊದಲ ಸ್ಥಾನದಲ್ಲಿದೆ. ಮಹಾರಾಷ್ಟ್ರವು ₹71,216 ಕೋಟಿ (8.48 ಬಿಲಿಯನ್ ಡಾಲರ್) ಎಫ್‌ಡಿಐ ಪಡೆದುಕೊಂಡಿದೆ.

ನಂತರದ ಸ್ಥಾನದಲ್ಲಿ ಕರ್ನಾಟಕ ₹19,148 ಕೋಟಿ (2.28 ಬಿಲಿಯನ್ ಡಾಲರ್), ತೆಲಂಗಾಣ ₹9,070 ಕೋಟಿ (1.08 ಬಿಲಿಯನ್ ಡಾಲರ್) ಮತ್ತು ಗುಜರಾತ್ ₹8,565 ಕೋಟಿ (1.02 ಬಿಲಿಯನ್ ಡಾಲರ್) ಸ್ವೀಕರಿಸಿದೆ ಎಂದು ಅಂಕಿ–ಅಂಶಗಳು ತಿಳಿಸಿವೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹11000-11200
ದಾವಣಗೆರೆ	₹7600-7600
ಮಧುಗಿರಿ	₹8000-9000
ತಿಪಟೂರು	₹11000-11400

ವಿನಿಮಯ ದರ

$ ಡಾಲರ್	83.98
£ ಪೌಂಡ್	110.10
€ ಯುರೊ	92.68
¥ ಯೆನ್ (100ಕ್ಕೆ)	57

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಶಂಕರ್ ಜಿ., ಗದಗ

- **ಪ್ರಶ್ನೆ:** ನನ್ನ ವಯಸ್ಸು 78 ವರ್ಷ. ನಾನು ಪ್ರತಿ ವರ್ಷ ಐಟಿಆರ್ ಸಲ್ಲಿಸುತ್ತಿದ್ದು ಪ್ರತಿ ತಿಂಗಳೂ ಪಿಂಚಣಿ ಪಡೆಯುತ್ತಿದ್ದೇನೆ. ಐಟಿಆರ್ ವರ್ಷ 2024-25ರ ಮಾಹಿತಿಯಂತೆ ನನ್ನ ಆದಾಯ ಈ ರೀತಿ ಇದೆ. ನನ್ನ ಪಿಂಚಣಿ ಆದಾಯದ ಮೊತ್ತ ವರ್ಷಕ್ಕೆ ₹4.86 ಲಕ್ಷ. ಈ ಮೊತ್ತ ಸ್ಟ್ಯಾಂಡರ್ಡ್ ಡಿಡಕ್ಷನ್ ಕಳೆದು ಇರುವ ಮೊತ್ತವಾಗಿದೆ. ಬ್ಯಾಂಕ್ ಠೇವಣಿಯಿಂದ ವರ್ಷಕ್ಕೆ ₹5.40 ಲಕ್ಷ ಬರುತ್ತಿದೆ. ಉಳಿತಾಯ ಖಾತೆಗೆ ಸುಮಾರು ₹16 ಸಾವಿರದಷ್ಟು ಜಮಾ ಆಗಲಿದೆ. ಇದರಂತೆ ತೆರಿಗೆ ಲೆಕ್ಕ ಹಾಕಿದರೆ ₹66,446 ಹಾಗೂ ಸೆಸ್ ಮೊತ್ತ ₹2,658 ಬರುತ್ತಿದೆ. ಹೊಸ ತೆರಿಗೆ ಪದ್ಧತಿಯ ಪ್ರಕಾರ ₹7.50 ಲಕ್ಷ ಆದಾಯದವರೆಗೆ ತೆರಿಗೆ ಇಲ್ಲ ಎಂದು ಕೇಳಿದ್ದೇನೆ. ಮೇಲಿನ ಮಾಹಿತಿಯಂತೆ ನಾನು ಲೆಕ್ಕ ಹಾಕಿದ ತೆರಿಗೆ ಆಕರಣೆ ಸರಿಯಾಗಿದೆಯೇ?

ಉತ್ತರ: ನೀವು ಈಗಾಗಲೇ ಆರ್ಥಿಕ ವರ್ಷ 2023-24ರ ಆದಾಯಕ್ಕೆ ಸಂಬಂಧಿಸಿ ಐಟಿಆರ್ ಸಲ್ಲಿಸದೆ ಇದ್ದರೆ ಈ ಕೂಡಲೇ ಸಲ್ಲಿಸಿ. ನೀವು ನೀಡಿರುವ ಮಾಹಿತಿಯಂತೆ, ಆರ್ಥಿಕ ವರ್ಷ 2023-24ಕ್ಕೆ ಸಂಬಂಧಿಸಿ ತೆರಿಗೆ ಎಷ್ಟೆಂಬುದು ನಿಮ್ಮ ಪ್ರಶ್ನೆಯಾಗಿರುವುದರಿಂದ ಆ ಬಗ್ಗೆ ಗಮನ ನೀಡಿ. ತಡವಾಗಿ ರಿಟರ್ನ್ಸ್ ಸಲ್ಲಿಸಲು ಇದೇ ಡಿಸೆಂಬರ್ 31ರ ತನಕ ಅವಕಾಶವಿದೆ. ಆದರೆ ದಂಡ ಕಟ್ಟಿ ಸಲ್ಲಿಸಬಹುದಾಗಿದೆ.

ಇನ್ನು ನಿಮ್ಮ ಮೂಲ ಪ್ರಶ್ನೆಗೆ ಸಂಬಂಧಿಸಿ ಹೇಳುವುದಾದರೆ, ನೀವು ಹೊಸ ಪದ್ಧತಿ ಅನುಸರಿಸಿ ತೆರಿಗೆ ಲೆಕ್ಕ ಹಾಕಿರುವುದು ಸರಿಯಿದೆ. ಆದರೆ ₹7.50 ಲಕ್ಷದವರೆಗೆ ತೆರಿಗೆ ಇಲ್ಲ ಎಂಬುದನ್ನು ನೀವು ಉಲ್ಲೇಖಿಸಿದ್ದೀರಿ. ಒಟ್ಟಾರೆ ತೆರಿಗೆ ಆದಾಯ ಈ ಮೊತ್ತದೊಳಗಿದ್ದಾಗ ಮಾತ್ರ ಇದು ಸಾಧ್ಯ. ಈ ಮಿತಿ ದಾಟಿದಂತೆ, ಸಹಜವಾಗಿ ಸೆಕ್ಷನ್ 87ಎ ಇದರಡಿ ಲಭ್ಯವಿರುವ ವಿನಾಯಿತಿ ಸಿಗುವುದಿಲ್ಲ ಎಂಬುದು ತಿಳಿದಿರಲಿ. ನಿಮ್ಮ ವಿಚಾರದಲ್ಲೂ, ನೀವು ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡಿದರೆ, ಆದಾಯ ₹7.50 ಲಕ್ಷ ದಾಟುವುದರಿಂದ ಸ್ಲ್ಯಾಬ್ ದರದಂತೆ ತೆರಿಗೆ ನಿರ್ಣಯ ಆಗುತ್ತದೆ.

ಇನ್ನು ಆರ್ಥಿಕ ವರ್ಷ 2024-25ರ ಬಜೆಟ್ ಬದಲಾವಣೆಯನ್ನು ಪರಿಗಣಿಸಿ ಮುಂದಿನ ವರ್ಷಕ್ಕೆ ತೆರಿಗೆ ಅಂದಾಜಿಸಿ ಹೇಳುವುದಾದರೆ, ಅದೇ ಆದಾಯ ಪ್ರಸ್ತುತ ಸಾಲಿನಲ್ಲಿಯೂ ಮುಂದುವರಿದರೆ, ನಿಮ್ಮ ತೆರಿಗೆ ಸುಮಾರು ₹52 ಸಾವಿರ ಆಗಿರಲಿದೆ.

ನಾರಾಯಣ್ ಎಂ., ಮೈಸೂರು

- **ಪ್ರಶ್ನೆ:** ನಾನು ಹಾಗೂ ನನ್ನ ತಮ್ಮನ ಹೆಸರಲ್ಲಿ ಮೈಸೂರಿನ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಒಂದು ನಿವೇಶನ ಇದೆ. ಇದರ ವ್ಯಾಪ್ತಿ ಸುಮಾರು 6,500 ಚದರ ಅಡಿ. ಇದನ್ನು 1987ರಲ್ಲಿ ನಮ್ಮಿಬ್ಬರ ಹೆಸರಲ್ಲಿ ಪಾಲುದಾರಿಕೆಯಲ್ಲಿ ದಾಖಲಿಸಲಾಗಿತ್ತು. ಈಗ ಅದಕ್ಕೆ ಸರಿಯಾದ ಮೌಲ್ಯ ಇಲ್ಲ. ಆದರೆ ಇದರ ಸಮೀಪದ ಭೂಮಿಗೆ ಈ ಭೂಮಿಗಿಂತ ಅಧಿಕ ಮೌಲ್ಯವಿದ್ದು, ನಮಗಿಬ್ಬರಿಗೂ ವಯಸ್ಸಾದ ಕಾರಣ ಇನ್ನೂ ಮೌಲ್ಯ ಹೆಚ್ಚಾಗುವ ತನಕ ಕಾಯುವ ಹಂತದಲ್ಲಿ ನಾವಿಲ್ಲ. ಹೀಗಾಗಿ ಈ ಭೂಮಿಯನ್ನು ನನ್ನ ಮಗಳು ಹಾಗೂ ಅವಳ ಇಬ್ಬರು ಹೆಣ್ಣು ಮಕ್ಕಳಿಗೆ ಡೀಡ್ ಮೂಲಕ ವರ್ಗಾಯಿಸಬೇಕೆಂದಿದ್ದೇವೆ. ಇದರಲ್ಲಿ ನಾನು ಹಾಗೂ ನನ್ನ ತಮ್ಮ ಹಾಗೂ ಮಗಳು ಅವಳ ಇಬ್ಬರು ಹೆಣ್ಣು ಮಕ್ಕಳು ಹೀಗೆ ಒಟ್ಟಾಗಿ ಐವರು ಸೇರಿ ಈ ನಿವೇಶನ ಹಂಚಲಿದ್ದೇವೆ. ಕ್ಯಾಪಿಟಲ್ ಗೇನ್ಸ್‌ಗೆ ಸಂಬಂಧಿಸಿ ಯಾವ ರೀತಿ ಈ ಭೂಮಿಯನ್ನು ವರ್ಗಾಯಿಸಬೇಕು. ತೆರಿಗೆ ವಿಚಾರವಾಗಿ ನಾವು ಯಾವ ರೀತಿ ಈ ಹಂಚಿಕೆ ಮಾಡಿಕೊಳ್ಳಬೇಕು.

ಉತ್ತರ: ನೀವು ಹಾಗೂ ನಿಮ್ಮ ತಮ್ಮನ ಜಂಟಿ ಹೆಸರಲ್ಲಿ ಭೂಮಿ ಇದೆ ಎಂಬುದಾಗಿ ನೀವು ಹೇಳಿರುತ್ತೀರಿ. ಈ ಆಸ್ತಿಯನ್ನು ನಿಮ್ಮ ಮಗಳು ಹಾಗೂ ಅವರ ಇಬ್ಬರು ಮಕ್ಕಳಿಗೆ ಡೀಡ್ ಮೂಲಕ ವರ್ಗಾಯಿಸುವ ಉದ್ದೇಶ ಹೊಂದಿದ್ದೀರಿ. ಮೊದಲ ಹಂತದಲ್ಲಿ ನೀವು ಹಾಗೂ ನಿಮ್ಮ ತಮ್ಮನ ಪಾಲನ್ನು ಗೊತ್ತು ಮಾಡಿಕೊಳ್ಳಿ.

ಆದಾಯ ತೆರಿಗೆಯ ಸೆಕ್ಷನ್ 56(2)(x) ಇದರ ಅಡಿ, ಯಾವುದೇ ಆಸ್ತಿಯನ್ನು ಉಚಿತವಾಗಿ ವರ್ಗಾಯಿಸಿದಾಗ ಅಥವಾ ಅದರ ಮಾರುಕಟ್ಟೆ ಸಮಂಜಸ ದರಕ್ಕಿಂತ ಕಡಿಮೆ ಮೌಲ್ಯಕ್ಕೆ ವರ್ಗಾಯಿಸಿದಾಗ ವ್ಯತ್ಯಾಸದ ಮೊತ್ತ ಅಂತಹ ಆಸ್ತಿ ಪಡೆದವರ ಹೆಸರಲ್ಲಿ ತೆರಿಗೆಗೊಳಪಡುತ್ತದೆ. ಆದರೆ, ಈ ಸಾಮಾನ್ಯ ನಿಯಮಕ್ಕೆ ಸಮೀಪದ ಬಂಧುಗಳ ಹೆಸರಲ್ಲಿ ವರ್ಗಾವಣೆಯಾಗುವ ಆಸ್ತಿಗಳಿಗೆ ವಿನಾಯಿತಿ ಇದೆ. ಹೀಗಾಗಿ ನೀವು ನಿಮ್ಮ ಭೂಮಿಯ ಪಾಲನ್ನು ನಿಮ್ಮ ಮಗಳು ಹಾಗೂ ನಿಮ್ಮ ಮೊಮ್ಮಕ್ಕಳ ಹೆಸರಲ್ಲಿ ವರ್ಗಾಯಿಸುವಾಗ ಅವರು ಯಾವುದೇ ತೆರಿಗೆ ಕಟ್ಟುವ ಅಗತ್ಯ ಇಲ್ಲ. ಆದರೆ ನಿಮ್ಮ ತಮ್ಮ ಒಂದು ವೇಳೆ ಅವರ ಹೆಸರಲ್ಲಿರುವ ಆಸ್ತಿಯನ್ನು ನಿಮ್ಮ ಮಗಳಿಗೆ/ಮೊಮ್ಮಕ್ಕಳಿಗೆ ವರ್ಗಾಯಿಸಿದರೆ ಈ ವಿನಾಯಿತಿ ಸಿಗುವುದಿಲ್ಲ ಎಂಬುದನ್ನು ಗಮನಿಸಿ. ಇದಲ್ಲದೆ, ಸೆಕ್ಷನ್ 47(iii) ರ ಪ್ರಕಾರ ಉಯಿಲಿನ ರೂಪದಲ್ಲಿ ಆಸ್ತಿ ವರ್ಗಾವಣೆ ಮಾಡಿದಾಗಲೂ ಆ ಸಂದರ್ಭದಲ್ಲಿ ತೆರಿಗೆಗೊಳಪಡಿಸಲಾಗುವುದಿಲ್ಲ. ಈ ವಿಚಾರಕ್ಕೆ ಸಂಬಂಧಿಸಿ ಯಾವ ರೀತಿ ವರ್ಗಾವಣೆ ದಾಖಲೆಗಳನ್ನು ಹೊಂದಬೇಕು ಎಂಬುವುದರ ಬಗ್ಗೆ ವಕೀಲರ ನೆರವು ಪಡೆದುಕೊಳ್ಳಿ.

ಮುಂದೆ ಯಾವುದೇ ಸಂದರ್ಭದಲ್ಲಿ ಈ ನಿವೇಶನ ಮಾರಾಟ ಮಾಡುವಾಗ ಮಾತ್ರ ಕ್ಯಾಪಿಟಲ್ ಗೇನ್ಸ್ (ಬಂಡವಾಳ ಗಳಿಕೆ) ಲೆಕ್ಕ ಹಾಕಿ ತೆರಿಗೆ ಕಟ್ಟಬೇಕಾಗುತ್ತದೆ. ಅವರಿಗೆ ನೀವು ಮೂಲದಲ್ಲಿ ಖರೀದಿಸಿದ ದಿನಾಂಕವೇ ಖರೀದಿ ಮೌಲ್ಯವಾಗಿರುತ್ತದೆ ಹಾಗೂ ಅಸಲು ಮೌಲ್ಯವಾಗಿ 2001ರ ಏಪ್ರಿಲ್ 1ರ ಮಾರುಕಟ್ಟೆ ಸಮಂಜಸ ದರ ಪರಿಗಣಿಸಿ ತೆರಿಗೆ ನಿರ್ಣಯಿಸಬಹುದು. ಇತ್ತೀಚಿನ ಬಜೆಟ್‌ನಲ್ಲಿ ಬದಲಾದ ತೆರಿಗೆ ನಿಯಮದ ಪ್ರಕಾರ ಇಂಡೆಕ್ಸೇಷನ್ ಸಹಿತ ಶೇ 20ರ ತೆರಿಗೆ ದರ ಅಥವಾ ಇಂಡೆಕ್ಸೇಷನ್ ರಹಿತ ಶೇ 12.50ರ ತೆರಿಗೆ ದರ ಅನ್ವಯಿಸಿ ಯಾವುದು ತೆರಿಗೆ ದೃಷ್ಟಿಯಲ್ಲಿ ಲಾಭದಾಯಕವೋ ಆ ದರ ಮುಂದೆ ಮಾರಾಟ ಮಾಡುವಾಗ ಆಯ್ಕೆ ಮಾಡುವ ಅವಕಾಶವಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000 - 17,000. 8951315839 , 9141634619

WANTED: ಬೆಂಗಳೂರಿನ ಜಯನಗರದಲ್ಲಿ ಸೌತ್ ಎಂಡ್ ಸರ್ಕಲ್ ನಲ್ಲಿ Watchman (Gents) ಮತ್ತು ಆಫೀಸ್ ಕೆಲಸಕ್ಕೆ (ಪತ್ನಿ) 30-35ವರ್ಷ ಒಳಗಿರುವವರು, ಉಚಿತ ವಸತಿ ಸಂಬಳ ಇಬ್ಬರಿಗೂ ಸೇರಿ 20,000/- ಸಂಪರ್ಕಿಸಿ -9900839393 / 9844889394

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555 6364468422

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ವಾರ್ಡ್ ಬಾಯ್ ಮತ್ತು ಆಯಾ (ಮಹಿಳೆ) ತಕ್ಷಣ ಬೇಕಾಗಿದ್ದಾರೆ, ಉಚಿತ ಊಟ, ವಸತಿ ಸೌಲಭ್ಯವಿದೆ. ಬೆಂಗಳೂರಿನ ಸುಸಜ್ಜಿತ ವೃದ್ಧಾಶ್ರಮಕ್ಕೆ. ದೂರವಾಣಿ: 7619583088

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 9008835841, 9900859248

ಸಾರ್ವಜನಿಕ ಪ್ರಕಟಣೆ

ಪ್ರಕಟಣೆ
ದಿ ಅರ್ಬನ್ ಪ್ರಾಪರ್ಟೀಸ್ (The URBAN PROPERTIES)
ವಿಳಾಸ: ಬಗ್ಗನದೊಡ್ಡಿ, ಇಂಡ್ಲವಾಡಿ ಅಂಚೆ, ಹಾರೋಹಳ್ಳಿ ರಸ್ತೆ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು–562106.
ಮೇಲ್ಕಂಡ ಸಂಸ್ಥೆಯ ಹೆಸರಿನಲ್ಲಿ, ಈ ವಿಳಾಸವನ್ನು ಹೊರತುಪಡಿಸಿ, ಈ ಸಂಸ್ಥೆಯ ಹೆಸರಿನಲ್ಲಿ ಯಾವುದೇ ವ್ಯಕ್ತಿಗಳು ವ್ಯವಹರಿಸಿದ್ದಲ್ಲಿ ಇದಕ್ಕೆ ಕಂಪನಿಯು ಜವಾಬ್ದಾರಿಯಲ್ಲ.

ಪ್ರವಾಸ

Travel

04.11.24 ರಿಂದ ಖಜುರಾಹೊ,ಚಿತ್ರಕೂಟ್, ಪ್ರಯಾಗರಾಜ್, ಅಯೋಧ್ಯ,ಲುಂಬಿನಿ ಮುಕ್ತಿನಾಥ್, ಮನೋಕಾಮನ ಕಟ್ಮಂಡು, ಜನಕಪುರ, ದೇವಘಡ್, ಗಯಾ ವಾರಣಾಸಿ. 8105522123, 9480253807

ಶ್ರೀರಾಜರಾಜೇಶ್ವರಿ ಟೂರ್ಸ್ ಅಂಡ್ ಯಾತ್ರಾ, ಗಿರೀಶ್ ನೆಲಮಂಗಲ, 9743895346, 21.02.2025, 7 ದಿನಗಳು. ವಿಮಾನದಲ್ಲಿ ಅಯೋಧ್ಯ ಕಾಶಿ ನೇಪಾಳ 36500/-.

04.11.2024 05.12.2024 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2024 18.11.2024 05.12.2024 12.12.2024 ದುಬೈ,ಅಬುದಾಬಿ 5 ದಿನಗಳು. 14.10.2024 21.11.2024 02.12.2024 ನೇಪಾಳ,ಅಯೋಧ್ಯ 9 ದಿನಗಳು. 22.10.2024 23.11.2024 ಭೂತಾನ್ 8 ದಿನಗಳು. 17.10.2024 24.11.2024 14.12.2024 ಶ್ರೀಲಂಕಾ 6 ದಿನಗಳು. 24.10.2024 30.11.2024 ಅಸ್ಸಾಂ ಮೇಘಾಲಯ 9 ದಿನಗಳು. 22.10.2024 26.11.2024 10.12.2024 ಗುಜರಾತ್/ ಉಜ್ಜಯಿನಿ 8/11 ದಿನಗಳು. 14.10.2024 24.11.2024 07.12.2024 ರಾಜಸ್ಥಾನ್ 10 ದಿನಗಳು. 14.10.2024 18.11.2024 ಮಧ್ಯಪ್ರದೇಶ 10 ದಿನಗಳು. 08.11.2024 04.12.2024 ಕಾಶಿ,ಗಯಾ ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವೆಲ್ಸ್ ಬೆಂಗಳೂರು-03. 9448402248 7022547922

ಗೌರಿ ಗಣೇಶ ಹಬ್ಬದ ವಿಶೇಷ ರಿಯಾಯಿತಿ 13 ದಿನಗಳ ಯುರೋಪ್ 6 ದಿನಗಳ ಬಾಲಿ. 11 ದಿನಗಳ ವಿಯೆಟ್ನಾಂ ಕಾಂಬೋಡಿಯಾ 7/11 ದಿನಗಳ ಸಿಂಗಪುರ್, ಮಲೇಶಿಯ ಥೈಲ್ಯಾಂಡ್. 6 ದಿನಗಳ ದುಬೈ ಓಮನ್ ಅಬುಧಾಬಿ ಶಾರ್ಜಾ. ಭಟ್ ಟ್ರಾವೆಲ್ಸ್ 9844037295 9844166555

19.10.2024 7ದಿನ ಭೂತಾನ್ ಪ್ರವಾಸ,21.11.2024 6ದಿನ ದುಬೈ ಅಭುದಾಭಿ ಪ್ರವಾಸ. ಆರ್.ಜಿ.ಟಿ ಟ್ರಾವೆಲ್ ವರ್ಲ್ಡ್, ಕುಮಾರಸ್ವಾಮಿ ಲೇಔಟ್. 8197932994, 8861545809

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD Classifieds More value, more impact
PUBLIC NOTICE
ಪ್ರಜಾವಾಣಿ
BOOK YOUR PUBLIC NOTICE
ADS IN DH ALL + PRAJAVANI
BENGALURU CITY, ON ALL DAYS
@ 550/-* PER SQCM
www.dhclassifieds.com
BOOK NOW
For more details contact:
+91 9886213331 | +91 9731810277
+91 9901641752 | 9845114560
*Conditions apply

‘ರಾಜ್ಯದಲ್ಲಿ ₹21 ಸಾವಿರ ಕೋಟಿ ಸಕ್ಕರೆ ವಹಿವಾಟು’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ದೇಶದಲ್ಲಿ ಈ ವರ್ಷ ₹1 ಲಕ್ಷ ಕೋಟಿಗೂ ಹೆಚ್ಚು ಸಕ್ಕರೆ ವಹಿವಾಟು ನಡೆದಿದೆ. ಇದರಲ್ಲಿ ಸಿಂಹಪಾಲು ಕರ್ನಾಟಕದ್ದಾಗಿದ್ದು ₹21 ಸಾವಿರ ಕೋಟಿ ವಹಿವಾಟು ಆಗಿದೆ’ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು.

‘ಸಹಕಾರ ಹಾಗೂ ಖಾಸಗಿ ವಲಯ ಸೇರಿ ರಾಜ್ಯದಲ್ಲಿ 76 ಸಕ್ಕರೆ ಕಾರ್ಖಾನೆಗಳಿವೆ. ಕಬ್ಬು ಕಳಿಸಿದ ರೈತರಿಗೆ ಒಂದೇ ವರ್ಷದಲ್ಲಿ ₹20 ಸಾವಿರ ಕೋಟಿಗೂ ಅಧಿಕ ಬಿಲ್ ನೀಡಲಾಗಿದೆ. ಶೇ 99ರಷ್ಟು ಬಿಲ್ ಪಾವತಿಯಾಗಿದ್ದು, ಕೆಲವರದ್ದು ಮಾತ್ರ ತಾಂತ್ರಿಕ ಕಾರಣದಿಂದಾಗಿ ಬಾಕಿ ಉಳಿದಿದೆ’ ಎಂದು ಅವರು

ಶಿವಾನಂದ ಪಾಟೀಲ

ಮಂಗಳವಾರ ಮಾಧ್ಯಮ ಗೋಷ್ಠಿಯಲ್ಲಿ ತಿಳಿಸಿದರು.

‘ಬೆಳಗಾವಿಯಲ್ಲಿರುವ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆಗೆ ಪ್ರತಿ ಕಾರ್ಖಾನೆಯೂ ಪ್ರತಿ ಟನ್ ಸಕ್ಕರೆಗೆ ₹1 ಪಾವತಿಸುತ್ತದೆ. ಹೀಗೆ ಪಾವತಿಯಾದ ಮೊತ್ತವೇ ₹8 ಕೋಟಿ ಆಗಿದೆ’ ಎಂದರು.

‘ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಕೋರಿ ಕೂಡಲಸಂಗಮದ ಸ್ವಾಮೀಜಿಯವರು ಹಲವು ಬಾರಿ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿದ್ದಾರೆ. ಸಮಯ ಬಂದಾಗ ಮುಖ್ಯಮಂತ್ರಿ ನಿರ್ಧರಿಸುವರು’ ಎಂದರು.

25 ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ

ನವದೆಹಲಿ (ಪಿಟಿಐ): ನೆಕ್ಸ್ಟ್‌ವೇವ್ ಡಿಸ್‌ರಪ್ಟಿವ್ ಟೆಕ್ನಾಲಜೀಸ್ ಮತ್ತು ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮವು (ಎನ್‌ಎಸ್‌ಡಿಸಿ) 25 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಮುಂದಿನ ಪೀಳಿಗೆಯ ತಂತ್ರಜ್ಞಾನದ ತರಬೇತಿ ನೀಡುವ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಿದೆ.

ಸ್ಕಿಲ್‌ಅಪ್ ಇಂಡಿಯಾ–4 ಎಂಬ ಈ ಅಭಿಯಾನದಲ್ಲಿ 30 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುವುದು. ಅವರ ಪೈಕಿ 5 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ 1,000ಕ್ಕೂ ಹೆಚ್ಚು ಕಂಪನಿಗಳ ಜೊತೆಗೆ ಉದ್ಯೋಗಕ್ಕಾಗಿ ಸಂಪರ್ಕ ಕಲ್ಪಿಸಿಕೊಡಲಾಗುವುದು.

‘ಈ ತರಬೇತಿಯಡಿ ಮುಂದಿನ ಒಂದು ವರ್ಷದಲ್ಲಿ ದೇಶದ 3,000 ಪದವಿ ಮತ್ತು ಎಂಜಿನಿಯರಿಂಗ್ ಕಾಲೇಜುಗಳ 30 ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಿದ್ದೇವೆ. ಕಾರ್ಯಾಗಾರಗಳು, ಹ್ಯಾಕಥಾನ್ ನಂತಹ ಹಲವಾರು ಚಟುವಟಿಕೆಗಳನ್ನು ಆಯೋಜಿಸಲಿದ್ದೇವೆ. ಮಷೀನ್ ಲರ್ನಿಂಗ್, ಡೇಟಾ ಸೈನ್ಸ್, ಜನರೇಟಿವ್ ಕೃತಕ ಬುದ್ಧಿಮತ್ತೆ ಸೇರಿದಂತೆ ತಂತ್ರಜ್ಞಾನದ ಉದಯೋನ್ಮುಖ ಕ್ಷೇತ್ರಗಳಲ್ಲಿ ತರಬೇತಿ ನೀಡಲಿದ್ದೇವೆ’ ಎಂದು ನೆಕ್ಸ್ಟ್‌ವೇವ್ ಡಿಸ್‌ರಪ್ಟಿವ್ ಟೆಕ್ನಾಲಜೀಸ್‌ನ ಸಿಇಒ ರಾಹುಲ್ ಅಟ್ಟುಲೂರಿ ಹೇಳಿದ್ದಾರೆ.

ಎನ್‌ಎಸ್‌ಡಿಸಿಯ ಸಿಇಒ ವೇದ್ ಮಣಿ ತಿವಾರಿ ಮಾತನಾಡಿ, ‘ಪ್ರಧಾನ ಮಂತ್ರಿಯವರ ‘ವಿಕಸಿತ ಭಾರತ’ದ ದೃಷ್ಟಿಯನ್ನು ಸಾಕಾರಗೊಳಿಸಲು ಇದು ಮಹತ್ವದ ಹೆಜ್ಜೆಯಾಗಿದೆ. ಸ್ಕಿಲ್‌ಅಪ್ ಇಂಡಿಯಾ ಅಭಿಯಾನದ ಅಡಿ, ಸ್ಕಿಲ್ ಇಂಡಿಯಾ ಮಿಷನ್ ಅನ್ನು ಮುನ್ನಡೆಸುತ್ತಿದ್ದೇವೆ. ಜೊತೆಗೆ ಭಾರತವನ್ನು ವಿಶ್ವದ ಕೌಶಲ ಬಂಡವಾಳ ಮತ್ತು ನಾವೀನ್ಯ ಕೇಂದ್ರವಾಗಿರಿಸಲಿದ್ದೇವೆ’ ಎಂದು ಹೇಳಿದರು.

ಕಾಂಗೊ ಜೈಲಿನಿಂದ ಪರಾರಿಗೆ ಯತ್ನ: 129 ಕೈದಿಗಳ ಸಾವು

ಕಿನ್ಶಾಸಾ (ಕಾಂಗೊ) (ಎಪಿ): ಕಾಂಗೊ ರಾಜಧಾನಿಯ ಕೇಂದ್ರ ಕಾರಾಗೃಹದಿಂದ ಕೈದಿಗಳು ಪರಾರಿಯಾಗಲು ಯತ್ನಿಸಿದ ವೇಳೆ ಉಂಟಾದ ಕಾಲ್ತುಳಿತ ಮತ್ತು ಗುಂಡೇಟಿನಿಂದ 129 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಸೋಮವಾರ ನಸುಕಿನಲ್ಲಿ ಕಿನ್ಶಾಸಾದ ಮಕಾಲಾ ಸೆಂಟ್ರಲ್ ಜೈಲಿನಿಂದ ಕೈದಿಗಳು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ 24 ಕೈದಿಗಳನ್ನು ಗುಂಡೇಟಿನಿಂದ ಕೊಲ್ಲಲಾಗಿದೆ. ಉಳಿದವರು ಕಾಲ್ತುಳಿತದಿಂದ ಸತ್ತಿರುವುದು ಪ್ರಾಥಮಿಕ ಮಾಹಿತಿಯಿಂದ ತಿಳಿದುಬಂದಿದೆ ಎಂದು ಕಾಂಗೊದ ಗೃಹ ಸಚಿವ ಜಾಕ್ವೆಮಿನ್ ಶಬಾನಿ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಈ ಘಟನೆಯಲ್ಲಿ ಗಾಯಗೊಂಡಿರುವ 59 ಮಂದಿಗೆ ಸರ್ಕಾರದಿಂದ ಚಿಕಿತ್ಸೆ ಕೊಡಿಸಲಾಗಿದೆ. ಗಾಯಗೊಂಡ ಮಹಿಳಾ ಕೈದಿಗಳಲ್ಲಿ ಹೆಚ್ಚಿನವರು ಅತ್ಯಾಚಾರಕ್ಕೆ ಒಳಗಾಗಿದ್ದಾರೆ. ಬಂದೀಖಾನೆಯ ಒಂದು ಭಾಗ ಕೈದಿಗಳು ನಡೆಸಿದ ದಾಳಿಯ ವೇಳೆ ಬೆಂಕಿಗೆ ಆಹುತಿಯಾಗಿದೆ. ಸದ್ಯ ಬಂದೀಖಾನೆಯ ಸೌಲಭ್ಯಗಳನ್ನು ಮೊದಲಿನ ಸ್ಥಿತಿಗೆ ತರಲಾಗಿದೆ ಎಂದು ಸಚಿವರು ಹೇಳಿದ್ದಾರೆ.

1,500 ಕೈದಿಗಳ ಸಾಮರ್ಥ್ಯದ ಈ ಕಾರಾಗೃಹದಲ್ಲಿ 12,000 ಕೈದಿಗಳನ್ನು ಇಡಲಾಗಿದೆ. ಇದರಲ್ಲಿ ಬಹುತೇಕರು ವಿಚಾರಣಾಧೀನ ಕೈದಿಗಳು ಎಂದು ಆಮ್ನೆಸ್ಟಿ ಇಂಟರ್‌ನ್ಯಾಷನಲ್‌ನ ಇತ್ತೀಚಿನ ವರದಿ ಹೇಳಿದೆ. 2017ರಲ್ಲಿ ಧಾರ್ಮಿಕ ಪಂಥದವರು ದಾಳಿ ನಡೆಸಿ ಹತ್ತಾರು ಕೈದಿಗಳನ್ನು ಜೈಲಿನಿಂದ ತಪ್ಪಿಸಿಕೊಳ್ಳುವಂತೆ ಮಾಡಿದ ಘಟನೆಯು ಸೇರಿದಂತೆ, ಹಲವು ಬಾರಿ ನಡೆದ ಪರಾರಿ ಯತ್ನದ ಘಟನೆಗಳಿಗೆ



> **ಈ ದಾಳಿಯು ಪೂರ್ವಯೋಜಿತ ವಿಧ್ವಂಸಕ ಕೃತ್ಯ. ಈ ವಿಧ್ವಂಸಕ ಕೃತ್ಯಗಳನ್ನು ಪ್ರಚೋದಿಸಿದವರಿಗೆ ಕಠಿಣ ಶಿಕ್ಷೆ ಕಾದಿದೆ**
> **ಕಾನ್‌ಸ್ಟೆಂಟ್ ಮುತಂಬಾ,** ನ್ಯಾಯ ಸಚಿವ, ಕಾಂಗೊ

ಮುಖ್ಯಾಂಶಗಳು

- ಪರಾರಿ ವೇಳೆ ಕಾಲ್ತುಳಿತ, ಗುಂಡೇಟಿನಿಂದ ಸಾವು
- ಗಾಯಗೊಂಡಿರುವ 59 ಮಂದಿಗೆ ಚಿಕಿತ್ಸೆ
- 1,500 ಕೈದಿಗಳ ಸಾಮರ್ಥ್ಯದ ಕಾರಾಗೃಹದಲ್ಲಿ 12,000 ಕೈದಿಗಳ ವಾಸ

ಹೋಲಿಸಿದರೆ ಇಷ್ಟೊಂದು ದೊಡ್ಡ ಘಟನೆ ನಡೆದಿರುವುದು ಇದೇ ಮೊದಲು ಎನ್ನಲಾಗಿದೆ.

ಭಾನುವಾರ ಮಧ್ಯರಾತ್ರಿಯಿಂದ ಸೋಮವಾರ ನಸುಕಿನವರೆಗೆ ಜೈಲಿನೊಳಗೆ ಗುಂಡಿನ ದಾಳಿ ನಡೆಯಿತು ಎಂದು ನಿವಾಸಿಗಳು ತಿಳಿಸಿದ್ದಾರೆ. ಈ ಘಟನೆಯಲ್ಲಿ ಇಬ್ಬರು ಮಾತ್ರ ಸತ್ತಿದ್ದಾರೆ ಎಂದು ಸರ್ಕಾರಿ ಹಿರಿಯ ಅಧಿಕಾರಿಯೊಬ್ಬರು ಈ ಹಿಂದೆ ಹೇಳಿಕೆ ನೀಡಿದ್ದರು. ಈ ಮಾಹಿತಿ ಬಗ್ಗೆ ಮಾನವ ಹಕ್ಕುಗಳ ಹೋರಾಟಗಾರರು ಆಕ್ಷೇಪ ವ್ಯಕ್ತಪಡಿಸಿದ್ದರು.

ಬೆಂಗಳೂರಿನಿಂದ 33 ನಗರಗಳಿಗೆ ಫ್ಲಿಕ್ಸ್‌ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗೆಟಕುವ ದರದ ಮತ್ತು ಆರಾಮದಾಯಕ ಬಸ್ ಸೇವೆಗೆ ಹೆಸರುವಾಸಿಯಾದ ಜರ್ಮನಿಯ ಫ್ಲಿಕ್ಸ್‌ಬಸ್, ಬೆಂಗಳೂರಿನಿಂದ ದಕ್ಷಿಣ ಭಾರತದ 33 ಪ್ರಮುಖ ನಗರಗಳಿಗೆ ಬಸ್ ಸೇವೆ ಆರಂಭಿಸಿದೆ.

ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ನಗರದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಫ್ಲಿಕ್ಸ್‌ಬಸ್ ಸೇವೆಗೆ ಚಾಲನೆ ನೀಡಿದರು.

ಸೆಪ್ಟೆಂಬರ್ 11ರಿಂದ ಕಂಪನಿಯ ಬಸ್‌ಗಳು ಕಾರ್ಯಾಚರಣೆ ಆರಂಭಿಸಲಿದ್ದು, ಮಂಗಳವಾರದಿಂದಲೇ ಮುಂಗಡ ಕಾಯ್ದಿರಿಸುವಿಕೆ ಆರಂಭವಾಗಿದೆ. ಆರಂಭಿಕ ರಿಯಾಯಿತಿ ಎಂದು ಸೆಪ್ಟೆಂಬರ್ 15ರವರೆಗಿನ ಎಲ್ಲ ಮುಂಗಡ ಕಾಯ್ದಿರಿಸುವಿಕೆಗೆ ₹99 ಶುಲ್ಕ ಮತ್ತು ₹5 ಸೇವಾತೆರಿಗೆ ವಿಧಿಸಲಿದೆ.

ಬೆಂಗಳೂರಿನಿಂದ ಚೆನ್ನೈ, ಹೈದರಾಬಾದ್, ಕೊಯಮತ್ತೂರು, ವಿಜಯವಾಡ ಸೇರಿ 33 ನಗರಗಳು ಮತ್ತು ಈ ಮಾರ್ಗಗಳಲ್ಲಿ ಬರುವ ಎಲ್ಲಾ ನಗರ–ಪಟ್ಟಣಗಳಿಗೆ ಸೇವೆ ಇರಲಿದೆ.

ಸಚಿವ ಎಂ.ಬಿ.ಪಾಟೀಲ ಅವರು ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಫ್ಲಿಕ್ಸ್‌ಬಸ್ ಸೇವೆಗೆ ಚಾಲನೆ ನೀಡಿದರು. ಜರ್ಮನಿಯ ಡೆಪ್ಯುಟಿ ಕಾನ್ಸುಲ್ ಜನರಲ್ ಅನೆಟ್ ಬೆಸಿಯರ್, ಕಂಪನಿಯ ಸಹಸ್ಥಾಪಕ ಡೇನಿಯಲ್ ಕ್ರೌಸ್, ಫ್ಲಿಕ್ಸ್‌ಬಸ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಸೂರ್ಯ ಖುರಾನ ಇದ್ದರು

ವಿಶ್ವದಾದ್ಯಂತ 43 ದೇಶಗಳಲ್ಲಿ ಸೇವೆ ಒದಗಿಸುತ್ತಿರುವ ಈ ಕಂಪನಿ, ಇದೇ ಫೆಬ್ರುವರಿಯಲ್ಲಿ ಉತ್ತರ ಭಾರತದಲ್ಲಿ ಸೇವೆ ಆರಂಭಿಸಿತ್ತು. ಈಗ ದಕ್ಷಿಣ ಭಾರತದಲ್ಲಿ ಸೇವೆ ಆರಂಭಿಸಿದೆ. ಕಂಪನಿಯು ತನ್ನ ಬಸ್‌ಗಳು ಮತ್ತು ಇತರ ಖಾಸಗಿ ಬಸ್ ಸೇವಾ ಕಂಪನಿಗಳ ಸಹಯೋಗದಲ್ಲಿ ಸೇವೆ ಒದಗಿಸಲಿದೆ.

> **ಬಸ್ ಸಂಚಾರದಲ್ಲಿ ಭಾರತವು ಜಗತ್ತಿನ ಎರಡನೇ ದೊಡ್ಡ ಮಾರುಕಟ್ಟೆ. ಫ್ಲಿಕ್ಸ್‌ಬಸ್ ಕಂಪನಿಯು ಪರಿಸರ ಸ್ನೇಹಿ ಇಂಧನಗಳ ಬಳಕೆಗೆ ಒತ್ತು ನೀಡಬೇಕು**
> **ಎಂ.ಬಿ.ಪಾಟೀಲ,** ಕೈಗಾರಿಕಾ ಸಚಿವ

ಬಾಂಗ್ಲಾ: ಮಾಜಿ ಪ್ರಧಾನಿ ಖಲೀದಾ ಜಿಯಾ ಖುಲಾಸೆ

ಢಾಕಾ(ಪಿಟಿಐ): ಬಾಂಗ್ಲಾದೇಶದ ಮಾಜಿ ಪ್ರಧಾನಿ ಖಲೀದಾ ಜಿಯಾ ಅವರನ್ನು ಐದು ಪ್ರತ್ಯೇಕ ಪ್ರಕರಣಗಳಲ್ಲಿ ಮಂಗಳವಾರ ಖುಲಾಸೆಗೊಳಿಸಲಾಗಿದೆ.

ಖಲೀದಾ ಜಿಯಾ

‘ನಕಲಿ ಜನ್ಮದಿನ’ ಆಚರಣೆ ಮತ್ತು ಯುದ್ಧಾಪರಾಧಿಗಳನ್ನು ಬೆಂಬಲಿಸಿದ ಪ್ರಕರಣಗಳೂ ಇದರಲ್ಲಿ ಸೇರಿವೆ ಎಂದು ಮಾಧ್ಯಮ ವರದಿ ತಿಳಿಸಿದೆ.

ಢಾಕಾದ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ನಾಲ್ಕು ಪ್ರಕರಣಗಳಲ್ಲಿ ಖುಲಾಸೆಗೊಳಿಸಿದ್ದರೆ, ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಒಂದು ಪ್ರಕರಣದಲ್ಲಿ ಖುಲಾಸೆಗೊಳಿಸಿದೆ ಎಂದು ದಿ ಢಾಕಾ ಟ್ರಿಬ್ಯೂನ್ ವರದಿ ಮಾಡಿದೆ.

ಅರ್ಜಿದಾರರು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಮುಖ್ಯಸ್ಥೆಯಾದ 79 ವರ್ಷದ ಜಿಯಾ ಅವರು ಖುಲಾಸೆಗೊಂಡಿದ್ದಾರೆ. 2016ರ ಆಗಸ್ಟ್‌ನಲ್ಲಿ ಪತ್ರಕರ್ತರೊಬ್ಬರು ಜಿಯಾ ‘ನಕಲಿ ಜನ್ಮ ದಿನ‘ ಆಚರಿಸಿಕೊಂಡಿದ್ದಾರೆ ಎಂದು ದೂರು ದಾಖಲಿಸಿದ್ದರೆ, 2016ರ ನವೆಂಬರ್‌ನಲ್ಲಿ ಬಾಂಗ್ಲಾದೇಶ ಜನನೇತ್ರಿ ಪರಿಷತ್‌ನ ಅಧ್ಯಕ್ಷ ಎ.ಬಿ.ಸಿದ್ದಿಕಿ ಅವರು ಜಿಯಾ ಅವರು ’ಯುದ್ಧಾಪರಾಧಿಗಳನ್ನು ಬೆಂಬಲಿಸಿದ್ದಾರೆ‘ ಎಂದು ಪ್ರಕರಣ ದಾಖಲಿಸಿದ್ದರು. ಜಿಯಾ ಅವರು 1991ರ ಮಾರ್ಚ್‌ನಿಂದ 1996ರ ಮಾರ್ಚ್‌ವರೆಗೆ ಬಾಂಗ್ಲಾದೇಶದ ಪ್ರಧಾನಿಯಾಗಿದ್ದರು.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40500
ಹಳತು	40500-47500
ಚಿತ್ರದುರ್ಗ	
ಅಪಿ	46819-47229
ಬೆಟ್ಟೆ	33149-33589
ಕೆಂಪುಗೋಟು	27109-27510
ರಾಶಿ	33149-33589
ಸಾಗರ	
ಬಿಳಿಗೋಟು	24599-24599
ಚಾಲಿ	27299-31829
ಕೋಕ	14099-21199
ಕೆಂಪುಗೋಟು	25299-27089
ರಾಶಿ	33155-46789
ಸಿಪ್ಪೆಗೋಟು	15899-16199
ಶಿವಮೊಗ್ಗ	
ರಾಶಿ	26009-48019
ಸರಕು	50100-86220
ಬೆಟ್ಟೆ	44069-55009
ಗೊರಬಲು	18109-32109
ಸಿದ್ದಾಪುರ	
ಬಿಳಿಗೋಟು	24299-28100
ಚಾಲಿ	31099-34600
ಕೋಕ	20689-25899
ಕೆಂಪುಗೋಟು	20699-20699
ರಾಶಿ	40099-45099
ತಟ್ಟಿಬೆಟ್ಟೆ	23689-27599
ಶಿರಸಿ	
ಬೆಟ್ಟೆ	25150-40001
ಬಿಳಿಗೋಟು	22080-30916
ಚಾಲಿ	32208-36311
ಕೆಂಪುಗೋಟು	12900-16500
ರಾಶಿ	38608-45909
ಯಲ್ಲಾಪುರ	
ಅಪಿ	55935-32279
ಬಿಳಿಗೋಟು	16612-29400
ಚಾಲಿ	30299-36099
ಕೋಕ	4099-17099
ಕೆಂಪುಗೋಟು	16899-23699
ರಾಶಿ	40010-55455
ತಟ್ಟಿಬೆಟ್ಟೆ	26020-38179

ಉಕ್ರೇನ್ ಮೇಲೆ ರಷ್ಯಾ ಕ್ಷಿಪಣಿ ದಾಳಿ: 41 ಸಾವು

ಕೀವ್ (ಎಪಿ): ಉಕ್ರೇನ್‌ನ ಪೋಲ್ಟವಾ ನಗರದಲ್ಲಿ ಶೈಕ್ಷಣಿಕ ಸಂಸ್ಥೆ ಮತ್ತು ಹತ್ತಿರದ ಆಸ್ಪತ್ರೆಯ ಮೇಲೆ ರಷ್ಯಾ ಎರಡು ಗುರಿ ನಿರ್ದೇಶಿತ (ಬ್ಯಾಲೆಸ್ಟಿಕ್) ಕ್ಷಿಪಣಿಗಳಿಂದ ದಾಳಿ ನಡೆಸಿದೆ. ಇದರಿಂದ 41 ಜನರು ಮೃತಪಟ್ಟಿದ್ದು 180 ಮಂದಿ ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮಂಗಳವಾರ ಹೇಳಿದ್ದಾರೆ.

2022ರ ಫೆಬ್ರುವರಿ 24ರಿಂದ ನಡೆಯುತ್ತಿರುವ ಯುದ್ಧದಲ್ಲಿ ರಷ್ಯಾ ಉಕ್ರೇನ್ ಮೇಲೆ ನಡೆಸಿರುವ ದಾಳಿಗಳಲ್ಲಿ ಇದು ಕೂಡ ಅತ್ಯಂತ ಭೀಕರ ದಾಳಿ ಎನಿಸಿದೆ.

‘ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಷನ್ಸ್‌ನ ಕಟ್ಟಡವೊಂದು ಭಾಗಶಃ ನಾಶವಾಗಿದೆ. ಜನರು ಅವಶೇಷಗಳಡಿ ಸಿಲುಕಿದ್ದರು. ಇದರಲ್ಲಿ ಹಲವು ಮಂದಿಯನ್ನು ರಕ್ಷಣಾ ತಂಡಗಳು ರಕ್ಷಿಸಿವೆ’ ಎಂದು ಝೆಲೆನ್‌ಸ್ಕಿ ಟೆಲಿಗ್ರಾಂ ಚಾನೆಲ್‌ನಲ್ಲಿ ಪೋಸ್ಟ್ ಮಾಡಿರುವ ವಿಡಿಯೊದಲ್ಲಿ ತಿಳಿಸಿದ್ದಾರೆ.

ವೈಮಾನಿಕ ದಾಳಿಯ ಎಚ್ಚರಿಕೆ ನೀಡಿದ ಸ್ವಲ್ಪ ಸಮಯದಲ್ಲೇ ಕ್ಷಿಪಣಿಗಳು ಅಪ್ಪಳಿಸಿದವು. ಆಗ ಜನರು ಬಾಂಬ್ ಶೆಲ್ಟರ್‌ಗಳಿಗೆ ಹೋಗುತ್ತಿದ್ದರು. ಇದೊಂದು ಅನಾಗರಿಕ ದಾಳಿ ಎಂದು ಉಕ್ರೇನ್ ರಕ್ಷಣಾ ಸಚಿವಾಲಯ ಹೇಳಿದೆ.

ಕಟ್ಟಡಗಳ ಅವಶೇಷಗಳಡಿ ಸಿಲುಕಿದ್ದ 11 ಮಂದಿ ಸೇರಿ 25 ಜನರನ್ನು ರಕ್ಷಣಾ ಸಿಬ್ಬಂದಿ ಮತ್ತು ವೈದ್ಯಕೀಯ ತಂಡದವರು ರಕ್ಷಿಸಿದ್ದಾರೆ ಎಂದು ಅದು ಹೇಳಿಕೆಯಲ್ಲಿ ತಿಳಿಸಿದೆ.

ಅಮೆರಿಕ ಓಪನ್ ಟೆನಿಸ್: ಮಹಿಳೆಯರ ಸಿಂಗಲ್ಸ್‌ನಲ್ಲಿ ನವಾರೊ ಸೆಮಿಗೆ

ಎಂಟರ ಘಟ್ಟಕ್ಕೆ ಸಿನ್ನರ್ ಲಗ್ಗೆ

ನ್ಯೂಯಾರ್ಕ್ (ಎಪಿ): ವಿಶ್ವದ ಅಗ್ರಮಾನ್ಯ ಆಟಗಾರ ಯಾನಿಕ್ ಸಿನ್ನರ್ ಅವರು ನೇರ ಸೆಟ್‌ಗಳಿಂದ ಆತಿಥೇಯ ಆಟಗಾರ ಟಾಮಿ ಪಾಲ್ ಅವರನ್ನು ಸೋಲಿಸಿ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟರು.

ಇಟಲಿಯ ಆಟಗಾರ ಸೋಮವಾರ ಆರ್ಥರ್ ಆ್ಯಷ್ ಸ್ಟೇಡಿಯಂನಲ್ಲಿ ಮೊದಲ ಎರಡು ಸೆಟ್‌ಗಳನ್ನು ಟೈಬ್ರೇಕರ್‌ನಲ್ಲಿ ಪಡೆದ ನಂತರ ವೇಗವೃದ್ಧಿಸಿ 7-6 (7-3), 7-6 (7-5), 6-1 ರಿಂದ 14ನೇ ಕ್ರಮಾಂಕದ ಟಾಮಿ ಪಾಲ್ ಅವರನ್ನು ಹಿಮ್ಮೆಟ್ಟಿಸಿದರು. ಅವರು ಎಂಟರ ಘಟ್ಟದ ಪಂದ್ಯದಲ್ಲಿ 2021ರ ಚಾಂಪಿಯನ್ ಡೇನಿಲ್ ಮೆಡ್ವೆಡೇವ್ ಅವರನ್ನು ಎದುರಿಸಲಿದ್ದಾರೆ.

ಮೆಡ್ವೆಡೇವ್ ಅವರು ಪುರುಷರ ವಿಭಾಗದಲ್ಲಿ ಕಣದಲ್ಲಿ ಉಳಿದಿರುವ ಏಕೈಕ ಹಿಂದಿನ ಚಾಂಪಿಯನ್ ಎನಿಸಿದ್ದಾರೆ.

ಸಿನ್ನರ್ ವಿರುದ್ಧದ ಪಂದ್ಯದಲ್ಲಿ ನಿರೀಕ್ಷೆಯಂತೆ ದೊಡ್ಡ ಸಂಖ್ಯೆಯ ಪ್ರೇಕ್ಷಕರು ಟಾಮಿ ಅವರನ್ನು ಬೆಂಬಲಿಸಿದರು. 'ಲೆಟ್ಸ್ ಗೊ, ಟಾಮಿ! ಲೆಟ್ಸ್ ಗೋ' ಎಂಬ ಕೂಗುತ್ತಿದ್ದರು. ಸಿನ್ನರ್ ಮಾಡುತ್ತಿದ್ದ ತಪ್ಪುಗಳಿಗೆ ಚಪ್ಪಾಳೆ ತಟ್ಟುತ್ತಿದ್ದರು.

23 ವರ್ಷ ವಯಸ್ಸಿನ ಸಿನ್ನರ್, ಜನವರಿಯಲ್ಲಿ ತಮ್ಮ ಮೊದಲ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆಲ್ಲುವ ಹಾದಿಯಲ್ಲಿ ಮೆಡ್ವೆಡೇವ್ ಅವರನ್ನು ಸೋಲಿಸಿದ್ದರು. ಆಗ ಅವರು ಎರಡು ಸೆಟ್‌ಗಳ ಹಿನ್ನಡೆಯಿಂದ ಚೇತರಿಸಿಕೊಂಡಿದ್ದರು. ಜುಲೈನಲ್ಲಿ ಇಲ್ಲಿ ನಡೆದಿದ್ದ ವಿಂಬಲ್ಡನ್‌ನಲ್ಲಿ ಮತ್ತೆ ಮುಖಾಮುಖಿಯಾದಾಗ ಮೆಡ್ವೆಡೇವ್ ಜಯಶಾಲಿಯಾಗಿದ್ದರು.

ಐದನೇ ಶ್ರೇಯಾಂಕದ ಮೆಡ್ವೆಡೇವ್, ಸೋಮವಾರ ನಡೆದ ನಾಲ್ಕನೇ ಸುತ್ತಿನ ಪಂದ್ಯದಲ್ಲಿ 6-0, 6-1, 6-3 ರಿಂದ ನೂನೊ ಬೋರ್ಗೆಸ್ ಅವರನ್ನು ಮಣಿಸಿದ್ದರು. ಬೆಂಕಿಯ ಅಲಾರಂ ಮೊಳಗಿದ ಹಿನ್ನೆಲೆಯಲ್ಲಿ ಲೈನ್ ತೀರ್ಪು ಎಲೆಕ್ಟ್ರಾನಿಕ್ ವ್ಯವಸ್ಥೆಯನ್ನು ಸ್ಥಗಿತಗೊಳಿಸಿದ್ದರಿಂದ ಪಂದ್ಯಕ್ಕೆ ಕೆಲಕಾಲ ಅಡಚಣೆಯಾಯಿತು.

ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ 10ನೇ ಕ್ರಮಾಂಕದ ಅಲೆಕ್ಸ್ ಡಿ ಮಿನೊರ್, 25ನೇ ಕ್ರಮಾಂಕದ ಜಾಕ್ ಡ್ರೇಪರ್ ಅವರನ್ನು ಎದುರಿಸಲಿದ್ದಾರೆ.

ಸೆಮಿಗೆ ನವಾರೊ: ಆತಿಥೇಯ ದೇಶದ ಎಮ್ಮಾ ನವಾರೊ ಮಹಿಳಾ ಸಿಂಗಲ್ಸ್‌ನಲ್ಲಿ ಸೆಮಿಫೈನಲ್‌ಗೆ ಮುನ್ನಡೆದರು.

13ನೇ ಶ್ರೇಯಾಂಕದ ನವಾರೊ ಅವರು ಮಂಗಳವಾರ ಕ್ವಾರ್ಟರ್ ಫೈನಲ್‌ನಲ್ಲಿ 6-2, 7-5ರಿಂದ 26ನೇ ಶ್ರೇಯಾಂಕದ ಪೌಲಾ ಬಡೋಸಾ (ಸ್ಪೇನ್) ಅವರನ್ನು ಸೋಲಿಸಿದರು.

ಗೆದ್ದ ಸಂಭ್ರಮದಲ್ಲಿ ಯಾನಿಕ್ ಸಿನ್ನರ್ –ಎಎಫ್‌ಪಿ ಚಿತ್ರ

ಮಿಶ್ರ ಡಬಲ್ಸ್: ಸೆಮಿಗೆ ಬೋಪಣ್ಣ– ಅಲ್ಡಿಲಾ

ರೋಹನ್ ಬೋಪಣ್ಣ

ನ್ಯೂಯಾರ್ಕ್ (ಪಿಟಿಐ): ಭಾರತದ ಹಿರಿಯ ಟೆನಿಸಿಗ ರೋಹನ್ ಬೋಪಣ್ಣ ಮತ್ತು ಅವರ ಜೊತೆಗಾತಿ ಇಂಡೊನೇಷ್ಯಾದ ಅಲ್ಡಿಲಾ ಸುಟ್ಜಿಯಾದಿ ಅವರು ತೀವ್ರ ಹೋರಾಟದ ಪಂದ್ಯದಲ್ಲಿ ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್- ಝೆಕ್ ರಿಪಬ್ಲಿಕ್‌ನ ಬಾರ್ಬೋರಾ ಕ್ರಾಚಿಕೋವಾ ಅವರನ್ನು ಸೋಲಿಸಿ ಮಿಶ್ರ ಡಬಲ್ ಸೆಮಿಫೈನಲ್‌ಗೆ ತಲುಪಿದರು.

ಸೋಮವಾರ ರಾತ್ರಿ ಸುಮಾರು ಒಂದುವರೆ ಗಂಟೆ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಎಂಟನೇ ಶ್ರೇಯಾಂಕದ ಭಾರತ- ಇಂಡೊನೇಷ್ಯಾ ಜೋಡಿ 7-6, (7-4), 2-6, 10-7 ರಿಂದ ನಾಲ್ಕನೇ ಶ್ರೇಯಾಂಕದ ಎಬ್ಡೆನ್- ಕ್ರಾಚಿಕೋವಾ ಜೋಡಿಯನ್ನು ಸೋಲಿಸಿತು. ಬೋಪಣ್ಣ-ಸುಟ್ಜಿಯಾದಿ ಜೋಡಿ ಸೆಮಿಫೈನಲ್‌ನಲ್ಲಿ ಅಮೆರಿಕದ ಡೊನಾಲ್ಡ್ ಯಂಗ್- ಟೇಲರ್ ಟೌನ್ಸೆಂಡ್ ಅವರನ್ನು ಎದುರಿಸಲಿದೆ.

ಚಾಂಪಿಯನ್ನರಿಗೆ ಆಘಾತ

ನ್ಯೂಯಾರ್ಕ್ (ಎಪಿ): ಮೂರು ವರ್ಷಗಳಿಂದ ಅಮೆರಿಕ ಓಪನ್‌ನಲ್ಲಿ ಪುರುಷರ ಡಬಲ್ಸ್ ಪ್ರಶಸ್ತಿ ವಿಜೇತರಾಗಿರುವ ರಾಜೀವ್ ರಾಮ್ (ಅಮೆರಿಕ) ಮತ್ತು ಜೋ ಸ್ಯಾಲಿಸ್ಬರಿ (ಬ್ರಿಟನ್) ಜೋಡಿ ಮೂರನೇ ಸುತ್ತಿನಲ್ಲೇ ಹೊರಬಿದ್ದಿದೆ.

ಇವರಿಬ್ಬರು 13ನೇ ಶ್ರೇಯಾಂಕದ ಆತಿಥೇಯ (ಅಮೆರಿಕ) ಆಟಗಾರರಾದ ನಥಾನಿಯಲ್ ಲ್ಯಾಮನ್ಸ್- ಜ್ಯಾಕ್ಸನ್ ವಿತ್ರೊ ಅವರೆದುರು 6-7 (3-7), 3-6ರಲ್ಲಿ ಸೋತರು.

ರಾಮ್- ಸ್ಯಾಲಿಸ್ಬರಿ ಜೋಡಿ ಫ್ಲಶಿಂಗ್ ಮಿಡೋಸ್‌ನಲ್ಲಿ ಸೋಮವಾರದ ಪಂದ್ಯ ಸೋಲುವ ಮೊದಲು ಸತತ 20 ಪಂದ್ಯಗಳನ್ನು ಗೆದ್ದುಕೊಂಡಿತ್ತು. ಈ ವರ್ಷ ಇವರಿಬ್ಬರು ಮೂರನೇ ಶ್ರೇಯಾಂಕ ಪಡೆದಿದ್ದರು.

ಹೋದ ವರ್ಷ ಇವರಿಬ್ಬರು 1914ರ ನಂತರ ಸತತ ಮೂರು ವರ್ಷ ಡಬಲ್ಸ್ ಪ್ರಶಸ್ತಿ ಗೆದ್ದ ಮೊದಲ ಜೋಡಿಯೆನಿಸಿದ್ದರು. 1912–14ರ ಅವಧಿಯಲ್ಲಿ ಅಮೆರಿಕದ ಟಾಮ್ ಬಂಡಿ- ಮೌರಿಸ್ ಮೆಕ್‌ಲೋಗ್ಲಿನ್ ಸತತ ಮೂರು ಸಲ ಡಬಲ್ಸ್ ಚಾಂಪಿಯನ್ ಆಗಿದ್ದರು.

ಇಂಗ್ಲೆಂಡ್ ತಂಡಕ್ಕೆ ಮೆಕ್ಕಲಂ ಕೋಚ್

ಲಂಡನ್ (ಎಎಫ್‌ಪಿ): ಇಂಗ್ಲೆಂಡ್ ಟೆಸ್ಟ್ ಕ್ರಿಕೆಟ್ ತಂಡದ ಕೋಚ್ ಬ್ರೆಂಡನ್ ಮೆಕ್ಕಲಂ ಅವರು ನಿಗದಿತ ಓವರ್‌ಗಳ ತಂಡದ ಕೋಚ್ ಜವಾಬ್ದಾರಿಯನ್ನೂ ವಹಿಸಿಕೊಳ್ಳಲಿದ್ದಾರೆ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಬೋರ್ಡ್ (ಇಸಿಬಿ) ಮಂಗಳವಾರ ಪ್ರಕಟಿಸಿದೆ.

ಜನವರಿ 2025 ರಿಂದ ಮೆಕ್ಕಲಂ ಮೂರೂ ಮಾದರಿಯ ತಂಡಗಳ ಉಸ್ತುವಾರಿ ವಹಿಸಿಕೊಳ್ಳಲಿದ್ದಾರೆ.

ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿ ಅ. 18ರಂದು ಆರಂಭ

ಮುಂಬೈ (ಪಿಟಿಐ): ಪ್ರೊ ಕಬಡ್ಡಿ ಲೀಗ್‌ನ 11ನೇ ಆವೃತ್ತಿ ಅಕ್ಟೋಬರ್ 18 ರಂದು ಆರಂಭವಾಗಲಿದೆ ಎಂದು ಟೂರ್ನಿಯ ಆಯೋಜಕರು ಮಂಗಳವಾರ ತಿಳಿಸಿದ್ದಾರೆ.

ಈ ಬಾರಿ ಟೂರ್ನಿಯು ಮೂರು ನಗರಗಳಲ್ಲಿ ನಡೆಯಲಿದೆ. ಹೈದರಾಬಾದ್‌ನಲ್ಲಿ ಮೊದಲ ಹಂತ ನಡೆಯಲಿದೆ. ನವೆಂಬರ್ 10 ರಿಂದ ನೊಯಿಡಾದಲ್ಲಿ ಹಾಗೂ ಅಂತಿಮವಾಗಿ ಪುಣೆಯಲ್ಲಿ ಡಿಸೆಂಬರ್ 3ರಿಂದ ನಡೆಯಲಿದೆ. ಟೂರ್ನಿಯ ಪೂರ್ಣ ವೇಳಾಪಟ್ಟಿಯನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು.

'ಪಿಕೆಎಲ್ 11ನೇ ಆವೃತ್ತಿಯ ಆರಂಭದ ದಿನ ಮತ್ತು ಪಂದ್ಯದ ಸ್ಥಳಗಳನ್ನು ಘೋಷಿಸಲು ನಮಗೆ ಸಂತಸವಾಗುತ್ತಿದೆ. ಮೊದಲ 10 ಆವೃತ್ತಿಗಳು ಯಶಸ್ವಿಯಾದ ನಂತರ, ಲೀಗ್‌ನ ಉನ್ನತಿಯಲ್ಲಿ 11ನೇ ಆವೃತ್ತಿ ಮೈಲಿಗಲ್ಲಾಗಲಿದೆ' ಎಂದು ಪಿಕೆಎಲ್ ಲೀಗ್ ಕಮಿಷನರ್ ಅನುಪಮ್ ಗೋಸ್ವಾಮಿ ಹೇಳಿದರು.

'ಪಿಕೆಲ್‌ನಿಂದ ಭಾರತದಲ್ಲಿ ಮತ್ತು ಜಗತ್ತಿನ ಇತರೆಡೆ ಕಬಡ್ಡಿಯ ಬೆಳವಣಿಗೆಯಾಗಲಿದೆ' ಎಂದು ಅವರು ಹೇಳಿದರು.

ಹತ್ತನೇ ಆವೃತ್ತಿಯಲ್ಲಿ ಪುಣೇರಿ ಪಲ್ಟನ್ ಮೊದಲ ಬಾರಿ ಚಾಂಪಿಯನ್ ಆಗಿತ್ತು. ಕಳೆದ ತಿಂಗಳು ಪಿಕೆಎಲ್ ಹರಾಜು ನಡೆದಿದ್ದು, ಎಂಟು ಆಟಗಾರರು ಒಂದು ಕೋಟಿಗೂ ಹೆಚ್ಚು ಮೊತ್ತಕ್ಕೆ ವಿವಿಧ ತಂಡಗಳ ಪಾಲಾಗಿದ್ದರು.

ಕೆಎಸ್‌ಸಿಎ ಇಲೆವನ್: ಪಾಂಡೆ ನಾಯಕ

ದೇಶಿ ಕ್ರಿಕೆಟ್: ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶಿ ಕ್ರಿಕೆಟ್‌ನ ಪ್ರಮುಖ ತಂಡಗಳು ಪೈಪೋಟಿ ನಡೆಸಲಿರುವ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿ ಬುಧವಾರ ಆರಂಭವಾಗಲಿದೆ.

ಆತಿಥೇಯ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ನಾಲ್ಕು ತಂಡಗಳನ್ನು ಕಣಕ್ಕಿಳಿಸುತ್ತಿದೆ. ಅದರಲ್ಲಿ ಕರ್ನಾಟಕ ಇಲೆವನ್ ತಂಡಕ್ಕೆ ಅನುಭವಿ ಬ್ಯಾಟರ್ ಮನೀಷ್ ಪಾಂಡೆ ಅವರಿಗೆ ನಾಯಕತ್ವ ನೀಡಲಾಗಿದೆ. ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್ ತಂಡಕ್ಕೆ ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರನ್ನು ನಾಯಕರನ್ನಾಗಿ ಮಾಡಲಾಗಿದೆ.

ಒಟ್ಟು 16 ತಂಡಗಳು ಕಣದಲ್ಲಿವೆ. ನಾಲ್ಕು ಗುಂಪುಗಳಲ್ಲಿ ತಂಡಗಳನ್ನು ವಿಂಗಡಿಸಲಾಗಿದೆ. ರೌಂಡ್ ರಾಬಿನ್ ಮಾದರಿಯಲ್ಲಿ ಟೂರ್ನಿಯು ನಡೆಯಲಿದೆ. ದೀರ್ಘ ಮಾದರಿ ಪಂದ್ಯಗಳು (ನಾಲ್ಕು ದಿನ) ನಡೆಯಲಿವೆ. ಫೈನಲ್ ಪಂದ್ಯವು ಸೆ 24 ರಿಂದ 27ರವರೆಗೆ ಆಯೋಜನೆಯಾಗಿದೆ. ಪಂದ್ಯಗಳು ಬೆಳಿಗ್ಗೆ 9.30ಕ್ಕೆ ಆರಂಭವಾಗಲಿವೆ.

ಕರ್ನಾಟಕ ತಂಡಗಳು: ಕೆಎಸ್‌ಸಿಎ ಇಲೆವನ್: ಮನೀಷ್ ಪಾಂಡೆ (ನಾಯಕ), ಜೆ. ನಿಕಿನ್ ಜೋಸ್, ಎಲ್. ಆರ್. ಚೇತನ್, ಕೆ.ವಿ. ಅನೀಶ್, ಆರ್. ಸ್ಮರಣ್, ಅಕ್ಷನ್ ಎಸ್ ರಾವ್, ಶರತ್ ಶ್ರೀನಿವಾಸ್ (ವಿಕೆಟ್‌ಕೀಪರ್), ಹಾರ್ದಿಕ್ ರಾಜ್, ವಿದ್ಯಾಧರ್ ಪಾಟೀಲ, ವಿ. ಕೌಶಿಕ್, ಆದಿತ್ಯ ನಾಯರ್, ಮೊಹಸೀನ್ ಖಾನ್, ಸಂತೋಕ್ ಸಿಂಗ್, ರೋಹಿತ್ ಕುಮಾರ್ ಎಸಿ,, ಸಂಜಯ್ ಅಶ್ವಿನ್ (ವಿಕೆಟ್‌ಕೀಪರ್). ಕೋಚ್: ಯರೇಗೌಡ

ಕೆಎಸ್‌ಸಿಎ ಅಧ್ಯಕ್ಷರ ಇಲೆವನ್: ಅನೀಶ್ವರ್ ಗೌತಮ್ (ನಾಯಕ), ಮೆಕ್ನಿಲ್ ಎಚ್. ನರೋನಾ, ಎಸ್.ಎಚ್. ನರೋನಾ, ಅಭಿನವ್ ಮನೋಹರ್, ಸುಜಯ್ ಎಸ್. ಸತೇರಿ (ವಿಕೆಟ್‌ಕೀಪರ್), ಮನೋಜ್ ಭಾಂಡಗೆ, ವರುಣ್ ರಾವ್ ಟಿ.ಎನ್., ಪಾರಸ್ ಗುರುಭಕ್ಷ್ ಆರ್ಯ, ಮೋನಿಷ್ ರೆಡ್ಡಿ, ರಾಜವೀರ್ ವಾದ್ವಾ, ಎಲ್. ಮನ್ವಂತ್ ಕುಮಾರ್, ಬಿ.ಎನ್. ಯಶ್ವಂತ್, ಬಿ.ಯು. ಶಿವಕುಮಾರ್, ಅಭಿಷೇಕ್ ಪ್ರಭಾಕರ್. ಕೋಚ್: ಸೋಮಶೇಖರ್ ಶಿರಗುಪ್ಪಿ.

ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: ಶ್ರೇಯಸ್ ಗೋಪಾಲ್ (ನಾಯಕ), ರೋಹನ್ ಎ ಪಾಟೀಲ, ವಿಶಾಲ್ ಓನತ್, ಕಿಶನ್ ಬೆದರೆ, ಅರ್ಸಲನ್ ಕೃಷ್ಣ (ವಿಕೆಟ್‌ಕೀಪರ್), ಯಶೋವರ್ಧನ್ ಪರಂತ್ ಎಪಿ. ಅಭಿಲಾಷ್ ಶೆಟ್ಟಿ, ಶಿಖರ್ ಶೆಟ್ಟಿ, ಅಧೋಕ್ಷ ಹೆಗಡೆ, ಎಲ್.ಆರ್. ಕುಮಾರ್, ಇ.ಜೆ. ಜಸ್ವರ್, ಆದಿತ್ಯ ಗೋಯಲ್, ನಿಶ್ಚಿತಾ ಎನ್. ರಾವ್, ಕೆ.ಎಲ್. ಶ್ರೀಜಿತ್, ಲವನೀತ್ ಸಿಸೋಡಿಯಾ (ಇಬ್ಬರೂ ವಿಕೆಟ್‌ಕೀಪರ್). ಕೋಚ್: ಮನ್ಸೂರ್ ಅಲಿ ಖಾನ್.

ಕೆಎಸ್‌ಸಿಎ ಕೋಲ್ಟ್ಸ್: ಶುಭಾಂಗ್ ಹೆಗ್ಡೆ (ನಾಯಕ), ಆರ್.ವಿ. ರೋಹಿತ್, ಹರ್ಷಿಲ್ ಧರ್ಮಾನಿ, ಸಮಿತ್ ದ್ರಾವಿಡ್, ಕೆ.ಪಿ. ಕಾರ್ತಿಕೇಯ, ಧೀರಜ್ ಗೌಡ, ಧ್ರುವ ಪ್ರಭಾಕರ್, ಸಮರ್ಥ್ ನಾಗರಾಜ್, ಧನುಷ್ ಗೌಡ, ನಿಶ್ಚಿತ್ ಪೈ, ಯುವರಾಜ್ ಅರೋರಾ, ಕೃಷಿವ್ ಬಜಾಜ್ (ಇಬ್ಬರೂ ವಿಕೆಟ್‌ಕೀಪರ್), ಎಂ.ಬಿ. ಶಿವಂ, ಮಾಧವ್ ಧಾರವಾಡಕರ್, ಎಸ್. ಇಶಾನ್. ಕೋಚ್: ಕುನಾಲ್ ಕಪೂರ್.

ಮನೀಷ್ ಪಾಂಡೆ

ತಂಡಗಳ ವಿಂಗಡಣೆ

ಎ ಝೋನ್: ಕೆಎಸ್‌ಸಿಎ ಇಲೆವನ್, ಗೋವಾ, ಮಧ್ಯಪ್ರದೇಶ, ಛತ್ತೀಸಗಢ

ಬಿ ಝೋನ್: ಕೆಎಸ್‌ಸಿಎ ಅಧ್ಯಕ್ಷರ ಇಲೆವನ್, ತಮಿಳುನಾಡು. ವಿದರ್ಭ, ಮಹಾರಾಷ್ಟ್ರ.

ಸಿ ಝೋನ್: ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್, ಮುಂಬೈ, ಆಂಧ್ರ. ಗುಜರಾತ್

ಡಿ ಝೋನ್: ಕೆಎಸ್‌ಸಿಎ ಕೋಲ್ಟ್ಸ್, ಬರೋಡಾ, ಡಾ. ಡಿವೈ ಪಾಟೀಲ ಸಿಎ, ಒಡಿಶಾ.

ಪಂದ್ಯ ನಡೆಯುವ ಸ್ಥಳಗಳು

- ಐಎಎಫ್, ಆರ್‌ಎಸ್‌ಐ, ಕಿಣಿ ಸ್ಪೋರ್ಟ್ಸ್ ಅರೇನಾ (ಬೆಂಗಳೂರು)
- ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣ,
- ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣ
- ಎಸ್‌ಜೆಸಿಎ ಮೈಸೂರು

27ರಿಂದ ಅಂಧರ ವಿಶ್ವ ಜೂನಿಯರ್, ಮಹಿಳಾ ಚೆಸ್

ಬೆಂಗಳೂರು: ಅಖಿಲ ಭಾರತ ಅಂಧರ ಚೆಸ್ ಫೆಡರೇಷನ್ ಹಮ್ಮಿಕೊಳ್ಳಲಿರುವ 13ನೇ ಐಬಿಸಿಎ ವಿಶ್ವ ಜೂನಿಯರ್ ಮತ್ತು ಮಹಿಳೆಯರ ಚೆಸ್ ಚಾಂಪಿಯನ್‌ಷಿಪ್‌ಗೆ ಬೆಂಗಳೂರು ಆತಿಥ್ಯ ವಹಿಸಲಿದೆ. ನಗರದ ಚಾನ್ಸರಿ ಪೆವಿಲಿಯನ್‌ನಲ್ಲಿ ಇದೇ ತಿಂಗಳ 27 ರಿಂದ ಅ.7ರವರೆಗೆ ಟೂರ್ನಿ ನಡೆಯಲಿದೆ.

ಈ ಚಾಂಪಿಯನ್‌ಷಿಪ್ ಎರಡು ವರ್ಷಗಳಿಗೊಮ್ಮೆ ನಡೆಯುತ್ತದೆ. ಭಾರತವು ಈ ಕೂಟ ನಡೆಸುತ್ತಿರುವ ಏಷ್ಯಾದ ಮೊದಲ ದೇಶವೆನಿಸಿದೆ. ಅಮೆರಿಕ, ಸ್ವೀಡನ್, ಪೋಲೆಂಡ್, ಉಕ್ರೇನ್ ಸೇರಿ 20ಕ್ಕೂ ಹೆಚ್ಚಿನ ದೇಶಗಳ ಸ್ಪರ್ಧಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಜೂನ್‌ನಲ್ಲಿ ಡಬ್ಲ್ಯುಟಿಸಿ ಫೈನಲ್

ದುಬೈ (ಪಿಟಿಐ): ಮೂರನೇ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ಪಂದ್ಯವನ್ನು ಮುಂದಿನ ವರ್ಷ ಜೂನ್ 11ರಿಂದ 15ರ ವರೆಗೆ ಲಂಡನ್‌ನ ಲಾರ್ಡ್ಸ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗುವುದು ಎಂದು ಅಂತರ ರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಮಂಗಳವಾರ ಪ್ರಕಟಿಸಿದೆ.

ಜೂನ್ 16ರಂದು ಮೀಸಲು ದಿನ ಎಂದೂ ತಿಳಿಸಿದೆ.

ಸೌತಾಂಪ್ಟನ್ (2021) ಮತ್ತು ಓವಲ್ (2023) ಹಿಂದಿನ ಎರಡು ಫೈನಲ್ ಪಂದ್ಯಗಳ ಆತಿಥ್ಯ ವಹಿಸಿದ್ದವು. ಮೊದಲ ಬಾರಿಗೆ ಲಾರ್ಡ್ಸ್ ಡಬ್ಲ್ಯುಟಿಸಿ ಫೈನಲ್ ಪಂದ್ಯಕ್ಕೆ ವೇದಿಕೆಯಾಗಿದೆ.

ಎರಡೂ ಫೈನಲ್‌ಗಳಲ್ಲಿ ಕಾಣಿಸಿಕೊಂಡಿದ್ದ ಭಾರತ, ಉದ್ಘಾಟನಾ ಪಂದ್ಯದಲ್ಲಿ ನ್ಯೂಜಿಲೆಂಡ್‌ಗೆ ಸೋತಿತ್ತು. ಕಳೆದ ವರ್ಷ ಆಸ್ಟ್ರೇಲಿಯಾಗೆ ಮಣಿದಿತ್ತು.

ಪ್ರಸ್ತುತ, ರೋಹಿತ್ ಶರ್ಮಾ ನೇತೃತ್ವದ ಭಾರತವು ಪಾಯಿಂಟ್ ಪಟ್ಟಿಯಲ್ಲಿ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾಕ್ಕಿಂತ ಮುಂದೆ ಇದೆ. ಡಬ್ಲ್ಯುಟಿಸಿ ಫೈನಲ್ ರೇಸ್‌ನಲ್ಲಿರುವ ಭಾರತ ಈ ವರ್ಷದ ಕೊನೆಯಲ್ಲಿ ಆಸೀಸ್ ವಿರುದ್ಧ ಐದು ಪಂದ್ಯಗಳ ಸರಣಿಯನ್ನು ಆಡಲಿದೆ.

ಭಾರತ–ಮಾರಿಷಸ್ ಪಂದ್ಯ ಡ್ರಾ

ಹೈದರಾಬಾದ್ (ಪಿಟಿಐ): ಭಾರತ ಫುಟ್‌ಬಾಲ್ ತಂಡವು ಮಂಗಳವಾರ ಇಂಟರ್ ಕಾಂಟಿನೆಂಟಲ್ ಕಪ್ ಟೂರ್ನಿಯ ಆರಂಭಿಕ ಪಂದ್ಯದಲ್ಲಿ ಕೆಳ ಕ್ರಮಾಂಕದ ಮಾರಿಷಸ್ ವಿರುದ್ಧ ಗೋಲುರಹಿತವಾಗಿ 'ಡ್ರಾ' ಸಾಧಿಸಿತು.

ಸ್ಪೇನ್‌ನ ಮನೊಲೊ ಮಾರ್ಕ್ವೆಝ್ ಅವರು ಭಾರತ ಫುಟ್‌ಬಾಲ್ ತಂಡಕ್ಕೆ ಮುಖ್ಯ ಕೋಚ್ ಆಗಿ ನೇಮಕವಾದ ಬಳಿಕ ಇದು ಮೊದಲ ಟೂರ್ನಿಯಾಗಿದೆ.

ಇದೇ 9ರಂದು ಭಾರತವು ತನ್ನ ಎರಡನೇ ಪಂದ್ಯದಲ್ಲಿ ಸಿರಿಯಾ ತಂಡದೊಂದಿಗೆ ಮುಖಾಮುಖಿಯಾಗಲಿದೆ.

ಬಿಸಿಸಿಐ ಆಯ್ಕೆ ಸಮಿತಿಗೆ ರಾತ್ರಾ



ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ವಿಕೆಟ್ ಕೀಪರ್ ಅಜಯ್ ರಾತ್ರಾ ಅವರು ಪುರುಷರ ಕ್ರಿಕೆಟ್ ತಂಡದ ಆಯ್ಕೆ ಸಮಿತಿ ಸದಸ್ಯರಾಗಿ ನೇಮಕಗೊಂಡಿದ್ದಾರೆ.

ಐವರು ಸದಸ್ಯರ ಸಮಿತಿಯಲ್ಲಿ ಸಲೀಲ್ ಅಂಕೋಲಾ ಅವರ ಬದಲಿಗೆ ರಾತ್ರಾ ಅವರನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ನೇಮಿಸಿದೆ.

ಅಜಿತ್ ಅಗರ್‌ಕರ್ ನೇತೃತ್ವದ ಸಮಿತಿಯಲ್ಲಿ ರಾತ್ರಾ ಅವರು ಉತ್ತರ ವಲಯದ ಪ್ರತಿನಿಧಿಯಾಗಿದ್ದಾರೆ. ಕಳೆದ ವರ್ಷ ಅಗರ್‌ಕರ್ ಅವರನ್ನು ಮುಖ್ಯ ಆಯ್ಕೆಗಾರರಾಗಿ ನೇಮಿಸಿದ ನಂತರ ಆಯ್ಕೆ ಸಮಿತಿಯು ಪಶ್ಚಿಮ ವಲಯದಿಂದ ಅಂಕೋಲಾ ಸೇರಿದಂತೆ ಇಬ್ಬರು ಆಯ್ಕೆಗಾರರನ್ನು ಹೊಂದಿತ್ತು.

ವಿಜಯವಾಡ: ನೀಗದ ಜನರ ಸಂಕಷ್ಟ • ರಕ್ಷಣಾ ಕಾರ್ಯಾಚರಣೆ ಚುರುಕು

ಆಹಾರ ಪೂರೈಕೆ: ಡ್ರೋನ್ ನಿಯೋಜನೆ

ಪ್ರಜಾವಾಣಿ ವಾರ್ತೆ/ಪಿಟಿಐ

ಅಮರಾವತಿ/ಹೈದರಾಬಾದ್: ಭಾರಿ ಮಳೆಯಿಂದಾಗಿ ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ಜನರು ಸಾಕಷ್ಟು ತೊಂದರೆಗೆ ಒಳಗಾಗಿದ್ದು, ಪರಿಹಾರ ಕಾರ್ಯಾಚರಣೆ ಮಂಗಳವಾರವೂ ಮುಂದುವರಿಯಿತು.

ಅದರಲ್ಲೂ, ಆಂಧ್ರಪ್ರದೇಶದ ವಿಜಯವಾಡ ನಗರ ಹೆಚ್ಚು ಬಾಧಿತವಾಗಿದ್ದು, ಬಹುತೇಕ ನಗರ ಜಲಾವೃತವಾಗಿದ್ದು ಜನರು ಪರಿತಪಿಸುವಂತಾಗಿದೆ. ವಿದ್ಯುತ್ ಪೂರೈಕೆ ಸ್ಥಗಿತಗೊಂಡಿದ್ದರೆ, ಜನರಿಗೆ ಆಹಾರ, ನೀರು ಹಾಗೂ ಔಷಧಿಗಳನ್ನು ಪೂರೈಸುವುದಕ್ಕಾಗಿ ಹೆಲಿಕಾಪ್ಟರ್ ಮತ್ತು ಡ್ರೋನ್‌ಗಳನ್ನು ನಿಯೋಜನೆ ಮಾಡಲಾಗಿದೆ.

ಬಿಸ್ಕತ್ತು, ಹಣ್ಣುಗಳು ಮತ್ತು ಹಾಲು ಸೇರಿದಂತೆ ಆಹಾರ ಪದಾರ್ಥಗಳಿದ್ದ ಪೊಟ್ಟಣಗಳು, ನೀರಿನ ಬಾಟಲಿಗಳು, ಔಷಧಗಳನ್ನು ಜನರಿಗೆ ತಲುಪುವಂತೆ ಕೆಳಗೆ ಹಾಕಲು 6 ಹೆಲಿಕಾಪ್ಟರ್‌ಗಳು ಹಾಗೂ ಡ್ರೋನ್‌ಗಳನ್ನು ನಿಯೋಜಿಸಲಾಗಿದೆ ಎಂದು ಎನ್‌ಡಿಆರ್‌ಎಫ್ ಪ್ರಕಟಣೆ ತಿಳಿಸಿದೆ.

'ಸಂಕಷ್ಟದಲ್ಲಿರುವ ನಗರದ ಜನತೆಗೆ ಪರಿಹಾರ ಸಾಮಗ್ರಿಗಳನ್ನು ವಿತರಿಸುವ ಕಾರ್ಯದಲ್ಲಿ, ಸಚಿವರು, ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ನಿರತರಾಗಿದ್ದಾರೆ' ಎಂದು ಆಂಧ್ರಪ್ರದೇಶ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಪಿಎಸ್‌ಡಿಎಂಎ) ಪ್ರಕಟಣೆ ತಿಳಿಸಿದೆ.

ಪ್ರವಾಹ ಬಾಧಿತ ಪ್ರದೇಶಗಳಿಗೆ ಸಚಿವರು, ಪ್ರಮುಖ ರಾಜಕಾರಣಿಗಳು ಹಾಗೂ ಗಣ್ಯರು ಭೇಟಿ ನೀಡುತ್ತಿರುವುದು ಸಹ ಪರಿಹಾರ ಕಾರ್ಯಕ್ಕೆ ಅಡ್ಡಿಯನ್ನುಂಟು ಮಾಡಿದೆ. ಗಣ್ಯ ವ್ಯಕ್ತಿಗಳ ಭೇಟಿ ವೇಳೆ ಶಿಷ್ಟಾಚಾರ ಪಾಲನೆಗಾಗಿ ಪೊಲೀಸರು ಹರಸಾಹಸ ಪಡುತ್ತಿದ್ದಾರೆ.

ದೂರು: 'ಪ್ರವಾಹ ಪರಿಸ್ಥಿತಿ ಉಂಟಾಗಿ ಎರಡು ದಿನಗಳಿಂದ ತೊಂದರೆ ಅನುಭವಿಸುತ್ತಿದ್ದೇವೆ. ಸರ್ಕಾರದಿಂದ ಯಾವ ನೆರವೂ ನಮಗೆ ತಲುಪಿಲ್ಲ. ನಮ್ಮನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲು ದೋಣಿಗಳನ್ನು ನಿಯೋಜನೆ ಮಾಡಲಾಗಿದೆ. ಆದರೆ, ನಾವಿಕರು ಹಣ ಕೇಳುತ್ತಿದ್ದಾರೆ. ಒಟ್ಟಾರೆ, ಪರಿಹಾರ ಕಾರ್ಯ ವಿಷಯದಲ್ಲಿ ಆಡಳಿತ ಸಂಪೂರ್ಣ ವಿಫಲವಾಗಿದೆ' ಎಂದು ವಿಜಯವಾಡ ನಿವಾಸಿಯೊಬ್ಬರು ದೂರಿದ್ದಾರೆ.

ಹರಿದು ಬರುತ್ತಿರುವ ದೇಣಿಗೆ: ತೆಲುಗು ನಟರು ಹಾಗೂ ಇತರರು ಪರಿಹಾರ ನಿಧಿಗೆ ದೇಣಿಗೆ ನೀಡುತ್ತಿದ್ದಾರೆ. ಜನಪ್ರಿಯ ನಟ ಜೂನಿಯರ್ ಎನ್‌ಟಿಆರ್ ಅವರು ಆಂಧ್ರಪ್ರದೇಶ ಮತ್ತು ತೆಲಂಗಾಣ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ತಲಾ ₹50 ಲಕ್ಷ ದೇಣಿಗೆ ನೀಡಿದ್ದಾರೆ.

ತೆಲಂಗಾಣ ರಾಜ್ಯ ನೌಕರ ಸಂಘವು ತನ್ನ ಸದಸ್ಯರ ಒಂದು ದಿನದ ವೇತನವನ್ನು ದೇಣಿಗೆಯಾಗಿ ನೀಡುವುದಾಗಿ ಘೋಷಿಸಿದೆ. ಈ ಮೊತ್ತ ಅಂದಾಜು ₹100 ಕೋಟಿ ಆಗಲಿದೆ.

ತೆಲುಗು ನಿರ್ದೇಶಕ ತ್ರಿವಿಕ್ರಮ ಶ್ರೀನಿವಾಸ್, ನಿರ್ಮಾಪಕರಾದ ನಾಗ ವಂಶಿ ಹಾಗೂ ಎಸ್.ರಾಧಾಕೃಷ್ಣ ಅವರು ಜಂಟಿಯಾಗಿ ₹50 ಲಕ್ಷ ನೀಡುವುದಾಗಿ ಘೋಷಿಸಿದ್ದಾರೆ. 'ಕಲ್ಕಿ' ಚಿತ್ರದ ನಿರ್ಮಾಣ ಸಂಸ್ಥೆಯಾದ ವೈಜಯಂತಿ ಮೂವೀಸ್ ಆಂಧ್ರಪ್ರದೇಶಕ್ಕೆ ₹25 ಲಕ್ಷ ದೇಣಿಗೆ ಘೋಷಿಸಿದೆ.

ಆಂಧ್ರಪ್ರದೇಶದ ವಿಜಯವಾಡ ನಗರದ ಪ್ರವಾಹ ಪೀಡಿತ ಪ್ರದೇಶಗಳ ಜನರು ಆಹಾರ ಪೊಟ್ಟಣ ಮತ್ತು ಇತರ ಪರಿಹಾರ ಸಾಮಗ್ರಿಗಳಿಗಾಗಿ ಮಂಗಳವಾರ ಮುಗಿಬಿದ್ದರು –ಎಎಫ್‌ಪಿ ಚಿತ್ರ

ಸತ್ತವರ ಸಂಖ್ಯೆ 37ಕ್ಕೆ

ವಿಜಯವಾಡದಲ್ಲಿ ಐವರು ಮೃತಪಟ್ಟಿದ್ದಾಗಿ ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ. ಇದರೊಂದಿಗೆ, ಪ್ರವಾಹ ಸಂಬಂಧಿತ ಅವಘಡಗಳಿಂದ ಆಂಧ್ರಪ್ರದೇಶದಲ್ಲಿ ಮೃತಪಟ್ಟವರ ಸಂಖ್ಯೆ 20ಕ್ಕೆ ಏರಿದಂತಾಗಿದೆ.

ತೆಲಂಗಾಣದಲ್ಲಿ ಮಂಗಳವಾರ ಮತ್ತೊಂದು ಸಾವು ಸಂಭವಿಸಿದ್ದು, ಸತ್ತವರ ಸಂಖ್ಯೆ 17ಕ್ಕೆ ಏರಿದೆ.

ಇದರೊಂದಿಗೆ, ಎರಡೂ ರಾಜ್ಯಗಳಲ್ಲಿ ಮಳೆ ಹಾಗೂ ಪ್ರವಾಹ ಸಂಬಂಧಿತ ಅವಘಡಗಳಿಂದಾಗಿ ಮೃತಪಟ್ಟವರ ಸಂಖ್ಯೆ ಒಟ್ಟು 37ಕ್ಕೆ ಏರಿದಂತಾಗಿದೆ.

'ಬುಲ್ಡೋಜರ್' ಕಾರ್ಯಾಚರಣೆ: 9 ಮಂದಿ ರಕ್ಷಣೆ!

ಹೈದರಾಬಾದ್: ಸೇತುವೆಯೊಂದರಲ್ಲಿ ಪ್ರವಾಹದ ನೀರಿನಲ್ಲಿ ಸಿಲುಕಿದ್ದವರನ್ನು ರಕ್ಷಿಸಲು ಹರಿಯಾಣದ ಸುಭಾನ್ ಖಾನ್ ಬುಲ್ಡೋಜರ್ ಬಳಸಿ, ರಕ್ಷಿಸುವ ಮೂಲಕ ಸಾಹಸ ಮೆರೆದಿದ್ದಾರೆ.

ತೆಲಂಗಾಣದ ಖಮ್ಮಮ್ ಜಿಲ್ಲೆಯಲ್ಲಿ ಮುನ್ನೇರು ನದಿಗೆ ಪ್ರಕಾಶನಗರ ಬಳಿ ನಿರ್ಮಿಸಿರುವ ಸೇತುವೆ ಭಾರಿ ಮಳೆಯಿಂದ ಮುಳುಗಿದೆ. ಈ ಸೇತುವೆಯಲ್ಲಿ ಸಿಲುಕಿದ್ದ 9 ಜನರ ರಕ್ಷಣೆಗಾಗಿ ಮುಂದಾದ ಸುಭಾನ್ ಖಾನ್, ಅದಕ್ಕಾಗಿ ಬಳಸಿದ್ದು ಬುಲ್ಡೋಜರ್!

ತಾವು ಸೇತುವೆಯಲ್ಲಿ ಸಿಲುಕಿದ್ದರ ಕುರಿತು ವಿಡಿಯೊ ಮಾಡಿದ್ದ 9 ಮಂದಿ, ತಮ್ಮನ್ನು ರಕ್ಷಿಸುವಂತೆ ರಾಜ್ಯ ಸರ್ಕಾರವನ್ನು ವಿಡಿಯೊ ಮೂಲಕ ಕೋರಿದ್ದರು. ಇದಕ್ಕೆ ಸ್ಪಂದಿಸಿದ್ದ ಸರ್ಕಾರ, ಹೆಲಿಕಾಪ್ಟರ್ ಕಳುಹಿಸಿತ್ತು. ಆದರೆ, ಪ್ರತಿಕೂಲ ಹವಾಮಾನದಿಂದಾಗಿ ಹೆಲಿಕಾಪ್ಟರ್ ಈ ಜನರಿದ್ದ ಸ್ಥಳವನ್ನು ತಲುಪಲಿಲ್ಲ.

ಆಗ, ತಾನೇ ಹೋಗಿ ಅವರನ್ನು ರಕ್ಷಿಸುವುದಾಗಿ ಸುಭಾನ್ ಖಾನ್ ಬುಲ್ಡೋಜರ್ ಅನ್ನು ಸೇತುವೆಯತ್ತ ಚಲಾಯಿಸಿಕೊಂಡು ಹೋಗಿದ್ದಾರೆ.

ಕೆಲ ಹೊತ್ತಿನ ನಂತರ 9 ಜನರನ್ನು ಕರೆದುಕೊಂಡು ಮರಳಿದಾಗ, ಜನರ ಸಂತಸಕ್ಕೆ ಪಾರವೇ ಇರಲಿಲ್ಲ. ಅವರ ಈ ಕಾರ್ಯಕ್ಕೆ ಸಾಮಾಜಿಕ ಜಾಲತಾಣದಲ್ಲಿಯೂ ಭಾರಿ ಮೆಚ್ಚುಗೆ ವ್ಯಕ್ತವಾಗಿದೆ.

ಬ್ರೂನೈನಲ್ಲಿರುವ ಭಾರತೀಯ ಸಮುದಾಯದ ಸದಸ್ಯರು ಪ್ರಧಾನಿ ಮೋದಿ ಅವರನ್ನು ಬರಮಾಡಿಕೊಂಡರು –ಪಿಟಿಐ ಚಿತ್ರ

'ಭಾರತ- ಬ್ರೂನೈ ಬಾಂಧವ್ಯ ವೃದ್ಧಿ'

ದ್ವಿಪಕ್ಷೀಯ ಮಾತುಕತೆಗೆ ಬ್ರೂನೈಗೆ ಬಂದಿಳಿದ ಪ್ರಧಾನಿ

ಬಂದಾರ್ ಸೆರಿ ಬೆಗಾವನ್ (ಪಿಟಿಐ): ರಕ್ಷಣೆ, ವ್ಯಾಪಾರ ಮತ್ತು ಹೂಡಿಕೆ, ಇಂಧನ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಬ್ರೂನೈ ಜತೆ ದ್ವಿಪಕ್ಷೀಯ ಸಂಬಂಧ ಬಲಪಡಿಸುವುದನ್ನು ಎದುರು ನೋಡುತ್ತಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ಉಭಯ ದೇಶಗಳ ನಡುವಣ ಬಾಂಧವ್ಯವನ್ನು ಬಲಪಡಿಸುವ ನಿಟ್ಟಿನಲ್ಲಿ ಮಾತುಕತೆಗಾಗಿ ಮೋದಿ ಅವರು ಮಂಗಳವಾರ ಬ್ರೂನೈಗೆ ಬಂದಿಳಿದರು.

ಭಾರತದ ಪ್ರಧಾನಿಯೊಬ್ಬರು ದ್ವಿಪಕ್ಷೀಯ ಮಾತುಕತೆಗಾಗಿ ಬ್ರೂನೈಗೆ ಭೇಟಿ ನೀಡಿದ್ದು ಇದೇ ಮೊದಲು. ಬ್ರೂನೈ ರಾಜಕುಮಾರ ಅಲ್ ಮುಹ್ತದೀ ಬಿಲಾ ಅವರು ಇಲ್ಲಿನ ವಿಮಾನ ನಿಲ್ದಾಣದಲ್ಲಿ ಪ್ರಧಾನಿ ಅವರನ್ನು ಬರಮಾಡಿಕೊಂಡರು.

ವಿಮಾನ ನಿಲ್ದಾಣದಿಂದ ತಾವು ವಾಸ್ತವ್ಯ ಹೂಡಲಿರುವ ಹೋಟೆಲ್‌ಗೆ ತೆರಳಿದ ಪ್ರಧಾನಿ ಅವರನ್ನು ಭಾರತೀಯ ಸಮುದಾಯದ ಸದಸ್ಯರು ಸ್ವಾಗತಿಸಿದರು. ಭಾರತೀಯ ಸಮುದಾಯದ ಸದಸ್ಯರೊಂದಿಗೆ ಮಾತುಕತೆ ನಡೆಸಿದರು. ಬಳಿಕ ಇಲ್ಲಿನ ಐತಿಹಾಸಿಕ ಒಮರ್ ಅಲಿ ಸೈಫುದ್ದೀನ್ ಮಸೀದಿಗೆ ಭೇಟಿ ನೀಡಿದರು.

ಮೋದಿ ಅವರು ಬ್ರೂನೈ ದೊರೆ ಮತ್ತು ಪ್ರಧಾನಿ ಹಸನಲ್ ಬೋಲ್ಕಿಯಾ ಹಾಗೂ ರಾಜಕುಟುಂಬದ ಇತರ ಸದಸ್ಯರ ಜತೆ ಮಾತುಕತೆ ನಡೆಸಲಿದ್ದಾರೆ.

'ಬ್ರೂನೈಗೆ ಭಾರತದ ಪ್ರಧಾನಿಯ ಮೊದಲ ದ್ವಿಪಕ್ಷೀಯ ಭೇಟಿ ಇದಾಗಿದೆ. ಉಭಯ ದೇಶಗಳ ನಡುವಣ ರಾಜತಾಂತ್ರಿಕ ಸಂಬಂಧ ಸ್ಥಾಪನೆಯ 40ನೇ ವರ್ಷಾಚರಣೆಯ ಸಮಯದಲ್ಲೇ ಈ ಭೇಟಿ ನಡೆದಿದೆ' ಎಂದು ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್ 'ಎಕ್ಸ್'ನಲ್ಲಿ ಹೇಳಿದ್ದಾರೆ.

ಈ ಭೇಟಿಯು ರಕ್ಷಣಾ ಸಹಕಾರ, ವ್ಯಾಪಾರ ಮತ್ತು ಹೂಡಿಕೆ, ಇಂಧನ, ಬಾಹ್ಯಾಕಾಶ ತಂತ್ರಜ್ಞಾನ ಮತ್ತು ಆರೋಗ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಭಾರತ–ಬ್ರೂನೈ ನಡುವಣ ಸಂಬಂಧವನ್ನು ಮತ್ತಷ್ಟು ಬಲಪಡಿಸಲಿದೆ. ಸಹಕಾರವನ್ನು ಹೊಸ ಕ್ಷೇತ್ರಗಳಿಗೆ ವಿಸ್ತರಿಸುವ ಸಾಧ್ಯತೆಯ ಬಗ್ಗೆಯೂ ಚರ್ಚೆ ನಡೆಯಲಿದೆ ಎಂದು ವಿದೇಶಾಂಗ ಸಚಿವಾಲಯದ ಪ್ರಕಟಣೆ ಹೇಳಿದೆ.

ಪ್ರಧಾನಿ ಅವರು ಬ್ರೂನೈನಿಂದ ಬುಧವಾರ ಸಿಂಗಪುರಕ್ಕೆ ಪ್ರಯಾಣ ಬೆಳೆಸಲಿದ್ದಾರೆ.

ಹೈಕಮಿಷನ್ ಕಚೇರಿ ಉದ್ಘಾಟನೆ

ಬ್ರೂನೈನಲ್ಲಿರುವ ಭಾರತೀಯ ಹೈಕಮಿಷನ್‌ನ ನೂತನ ಕಚೇರಿಯನ್ನು ಪ್ರಧಾನಿ ಮೋದಿ ಅವರು ಮಂಗಳವಾರ ಉದ್ಘಾಟಿಸಿದರು.

'ಪ್ರಧಾನಿ ಅವರು ದೀಪ ಬೆಳಗಿಸಿ ಹಾಗೂ ಫಲಕ ಅನಾವರಣಗೊಳಿಸುವ ಮೂಲಕ ನೂತನ ಕಚೇರಿ ಉದ್ಘಾಟಿಸಿದರು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ 'ಎಕ್ಸ್'ನಲ್ಲಿ ತಿಳಿಸಿದೆ.

ಹೆದ್ದಾರಿ ಅತಿಕ್ರಮಣ: ತಂಡ ರಚಿಸಲು ಸುಪ್ರೀಂ ಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹೆದ್ದಾರಿಗಳ ಅತಿಕ್ರಮಣದ ಬಗ್ಗೆ ಕಾಲಕಾಲಕ್ಕೆ ಪರಿಶೀಲನೆ ನಡೆಸಲು ತಂಡ ರಚಿಸುವಂತೆ, ಅತಿಕ್ರಮಣದ ಬಗ್ಗೆ ದೂರು ನೀಡಲು ಸಾರ್ವಜನಿಕರಿಗೆ ಸಾಧ್ಯವಾಗುವಂತೆ ಪೋರ್ಟಲ್ ಅಭಿವೃದ್ಧಿಪಡಿಸುವಂತೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಅರ್ಜಿಯೊಂದರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಅಗಸ್ಟೀನ್ ಜಾರ್ಜ್ ಮಸೀಹ್ ಅವರು, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅತಿಕ್ರಮಣ ನಡೆದಿದೆಯೇ ಎಂಬುದನ್ನು ಕಾಲಕಾಲಕ್ಕೆ ಪರಿಶೀಲಿಸಲು ಸೂಕ್ತವಾದ ತಂಡಗಳನ್ನು ರಚಿಸುವಂತೆ ಸಚಿವಾಲಯಕ್ಕೆ ಸೂಚನೆ ನೀಡಿದೆ.

'ಪ್ರತಿ ಹೆದ್ದಾರಿಯ ನಿರ್ದಿಷ್ಟ ಪ್ರದೇಶಕ್ಕೆ ಒಂದು ತಂಡವನ್ನು ಹೊಣೆ ಮಾಡಬೇಕು' ಎಂದು ಪೀಠವು ಈಚೆಗೆ ನೀಡಿದ ಆದೇಶದಲ್ಲಿ ಹೇಳಿದೆ. ಈ ನಿರ್ದೇಶನವನ್ನು ಅನುಷ್ಠಾನಕ್ಕೆ ತರಲು ಪೀಠವು ಕೇಂದ್ರ ಸರ್ಕಾರಕ್ಕೆ ಸೆಪ್ಟೆಂಬರ್ 30ರವರೆಗೆ ಗಡುವು ನೀಡಿದೆ.

ಪರಿಶೀಲನಾ ತಂಡಗಳು ಅತಿಕ್ರಮಣವನ್ನು ಗುರುತಿಸಿದ ನಂತರದಲ್ಲಿ, ಅದರ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ತಕ್ಷಣವೇ ವರದಿ ಮಾಡುವ ವ್ಯವಸ್ಥೆ ಆಗಬೇಕು. ಪ್ರಾಧಿಕಾರವು ಆ ಅತಿಕ್ರಮಣವನ್ನು ತೆರವು ಮಾಡಬೇಕು ಎಂದು ಪೀಠ ಹೇಳಿದೆ.

ಅತ್ಯಾಚಾರಿಗೆ ಗಲ್ಲು: ಮಸೂದೆಗೆ ಅಸ್ತು

ಒಂದನೇ ಪುಟದಿಂದ...

ಮಂಡನೆ–ಗದ್ದಲ: ತಿದ್ದುಪಡಿ ಮಸೂದೆಯು ಮಂಡನೆಯಾಗುತ್ತಿದ್ದಂತೆಯೇ ಬಿಜೆಪಿ ಶಾಸಕರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಗದ್ದಲ ಎಬ್ಬಿಸಿದರು.

ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಆಕೆಯ ಕೊಲೆಗೆ ನೈತಿಕ ಹೊಣೆಹೊತ್ತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಮಮತಾ ಬ್ಯಾನರ್ಜಿ, 'ಮಸೂದೆ ಅಂಗೀಕಾರವಾಗುವುದನ್ನು ತಡೆಯಲು ಕಲಾಪಕ್ಕೆ ಅಡ್ಡಿಪಡಿಸಿದ್ದಕ್ಕಾಗಿ ಸುವೇಂದು ಅಧಿಕಾರಿ ರಾಜೀನಾಮೆ ನೀಡಬೇಕು' ಎಂದು ಗುಡುಗಿದರು.

> **ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಮತ್ತು ಆಕೆಯ ಕೊಲೆ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಗಲ್ಲು ಶಿಕ್ಷೆ ಸಿಗುವಂತೆ ಮಾಡಿ ಸಿಬಿಐ ನ್ಯಾಯ ದೊರಕಿಸಿ ಕೊಡಬೇಕು**
>
> **ಮಮತಾ ಬ್ಯಾನರ್ಜಿ,** ಪಶ್ಚಿಮ ಬಂಗಾಳ ಮುಖ್ಯಮಂತ್ರಿ

'ಅಪರಾಧಿಗಳಿಗೆ ಕಠಿಣ ಶಿಕ್ಷೆ ಮತ್ತು ಸಂತ್ರಸ್ತರಿಗೆ ತ್ವರಿತವಾಗಿ ನ್ಯಾಯ ಸಿಗುವಂತಾಗಲು ಸದ್ಯ ಜಾರಿಯಲ್ಲಿರುವ ಕಾಯ್ದೆಗಳಿಗೆ ತಿದ್ದುಪಡಿ ತರುವಂತೆ ಕೇಂದ್ರಕ್ಕೆ ಒತ್ತಾಯಿಸಿದ್ದೆವು. ಕೇಂದ್ರದಿಂದ ಸ್ಪಂದನ ದೊರೆಯದ ಕಾರಣ ನಾವೇ ಮೊದಲು ಈ ದಿಸೆಯಲ್ಲಿ ಹೆಜ್ಜೆ ಇಟ್ಟಿದ್ದೇವೆ' ಎಂದು ಮಮತಾ ಬ್ಯಾನರ್ಜಿ ಹೇಳಿದರು. ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಾವು ಈ ಸಂಬಂಧ ಬರೆದಿದ್ದ ಎರಡು ಪತ್ರಗಳನ್ನು ಸದನದಲ್ಲಿ ಪ್ರದರ್ಶಿಸಿದರು.

'ಮಹಿಳೆಯರ ರಕ್ಷಣೆಗೆ ಸಂಬಂಧಿಸಿ ಕಠಿಣ ಕಾನೂನುಗಳನ್ನು ಜಾರಿಗೊಳಿಸುವಲ್ಲಿ ವಿಫಲರಾಗಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ಆಡಳಿತವಿರುವ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕು' ಎಂದೂ ಆಗ್ರಹಿಸಿದರು.

'ಟಿಎಂಸಿ ಸರ್ಕಾರ ತನ್ನ ಆಡಳಿತದ ಅವಧಿಯಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ಲೈಂಗಿಕ ಕಿರುಕುಳದಂತಹ ಅಪರಾಧಗಳನ್ನು ತಡೆಗಟ್ಟುವಲ್ಲಿ ವಿಫಲವಾಗಿದೆ' ಎಂದು ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಟೀಕಿಸಿದರು. ಆದರೆ, ಈ ಮಸೂದೆಗೆ ಬೆಂಬಲ ನೀಡುವುದಾಗಿ ಅವರು ಹೇಳಿದರು.

ಕೇಂದ್ರದ ಆರೋಪ; ಸುಪ್ರೀಂ ಕೋರ್ಟ್‌ಗೆ ದೂರು

'ಬಂಗಾಳ ಸರ್ಕಾರದ ಅಸಹಕಾರ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋಲ್ಕತ್ತದ ಆರ್.ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ಭದ್ರತೆ ಒದಗಿಸಲು ನಿಯೋಜಿಸಿರುವ ಸಿಐಎಸ್‌ಎಫ್ ಸಿಬ್ಬಂದಿಯ ಕರ್ತವ್ಯ ನಿರ್ವಹಣೆಗೆ ಅಗತ್ಯ ಸೌಲಭ್ಯಗಳನ್ನು ಪಶ್ಚಿಮ ಬಂಗಾಳ ಸರ್ಕಾರ ಒದಗಿಸಿಲ್ಲ ಎಂದು ಆರೋಪಿಸಿರುವ ಕೇಂದ್ರ ಸರ್ಕಾರ, ಸುಪ್ರೀಂ ಕೋರ್ಟ್‌ಗೆ ಮಂಗಳವಾರ ದೂರು ನೀಡಿದೆ.

ಸಿಐಎಸ್‌ಎಫ್‌ಗೆ ಸಂಪೂರ್ಣ ಸಹಕಾರ ನೀಡಬೇಕೆಂದು ಪಶ್ಚಿಮ ಬಂಗಾಳ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಗೃಹ ಸಚಿವಾಲಯವು ಕೋರಿದೆ. ಮಾತ್ರವಲ್ಲ, ಬಂಗಾಳ ಸರ್ಕಾರದ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮ ಕೈಗೊಳ್ಳಬೇಕು ಎಂದೂ ಅರ್ಜಿಯಲ್ಲಿ ಮನವಿ ಮಾಡಿದೆ.

'ರಾಜ್ಯ ಸರ್ಕಾರವು ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನಗಳನ್ನು ಸ್ವಇಚ್ಛೆಯಿಂದ ಮಾಡುತ್ತಿಲ್ಲ. ತನ್ನದೇ ನಿವಾಸಿಗಳಿಗೆ ಅನ್ಯಾಯ ಮಾಡುತ್ತಿದೆ' ಎಂದು ಆರೋಪಿಸಿದೆ.

'ಈಗಿರುವ ಉದ್ವಿಗ್ನ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರದಿಂದ ಇಂತಹ ಅಸಹಕಾರ ನಿರೀಕ್ಷಿಸಿರಲಿಲ್ಲ' ಎಂದು ಹೇಳಿದೆ.

'184 ಸಿಬ್ಬಂದಿಗೆ ಎರಡು ಬಸ್'

'54 ಮಹಿಳೆಯರೂ ಸೇರಿದಂತೆ ಸಿಐಎಸ್‌ಎಫ್‌ನ ಒಟ್ಟು 184 ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ಆದರೆ ಅವರ ಪ್ರಯಾಣಕ್ಕೆ ಕೋಲ್ಕತ್ತ ಪೊಲೀಸರು ಎರಡು ಬಸ್‌ಗಳು, ತಲಾ ಒಂದು ಎಲ್‌ಎಂವಿ ಮತ್ತು ಪಿಕ್‌ಅಪ್ ಮಾತ್ರ ಒದಗಿಸಿದ್ದಾರೆ. ಸಿಐಎಸ್‌ಎಫ್‌ನವರು ಬೇಡಿಕೆಯಿಟ್ಟಷ್ಟು ವಾಹನಗಳನ್ನು ನೀಡಿಲ್ಲ' ಎಂದು ಕೇಂದ್ರ ಸರ್ಕಾರ ಅರ್ಜಿಯಲ್ಲಿ ಹೇಳಿದೆ.

ಪ್ರಜಾವಾಣಿ
ಸ್ಪರ್ಧಾವಾಣಿ
MASTERMIND
ಆಗಸ್ಟ್ ಸಂಚಿಕೆ ಈಗ ಮಾರುಕಟ್ಟೆಯಲ್ಲಿ ಲಭ್ಯವಿದೆ
ಚಂದಾದಾರಿಕೆ ಕೇವಲ ₹360 ರಿಂದ ಪ್ರಾರಂಭ
ಹೆಚ್ಚಿನ ಮಾಹಿತಿಗಾಗಿ, WhatsApp/ಕರೆ ಮಾಡಿ: 9606966128
ಸ್ಕ್ಯಾನ್ ಮಾಡಿ ಚಂದಾದಾರರಾಗಿ

ಪ್ಯಾರಾಲಿಂಪಿಕ್ಸ್ ಜಾವೆಲಿನ್ ಥ್ರೋ ಚಾಂಪಿಯನ್ ಸುಮಿತ್ ಅಂಟಿಲ್ ಮನದ ಮಾತು

‘ಚೋಪ್ರಾ ಸಲಹೆಗೆ ಒಲಿದ ಚಿನ್ನ’

ಪ್ಯಾರಿಸ್ (ಪಿಟಿಐ): ಸತತ ಎರಡನೇ ಪ್ಯಾರಾಲಿಂಪಿಕ್ ಕೂಟದಲ್ಲಿ ಚಿನ್ನದ ಪದಕ ಗಳಿಸಿದ ಜಾವೆಲಿನ್ ಥ್ರೋ ಅಥ್ಲೀಟ್ ಸುಮಿತ್ ಅಂಟಿಲ್ ಅವರ ಜಯದ ಗುಟ್ಟು ಏನು ಗೊತ್ತೆ?

ಸತತ ಎರಡು ಒಲಿಂಪಿಕ್ ಕೂಟದಲ್ಲಿ ಪದಕ ಜಯದ ಸಾಧನೆ ಮಾಡಿರುವ ನೀರಜ್ ಚೋಪ್ರಾ ಅವರು, ‘ಯಾವುದೇ ರೀತಿಯ ಹೊಸ ತಂತ್ರ ಪ್ರಯತ್ನಿಸಬೇಡ. ಪ್ಯಾರಿಸ್‌ನಲ್ಲಿ ಉತ್ತಮ ವಾತಾವರಣ ಇದೆ. ಅದೊಂದು ಒಳ್ಳೆಯ ಅನುಭವ ಆಗಲಿದೆ’ ಎಂದು ಕಳಿಸಿದ್ದ ಸಂದೇಶ ಅಂಟಿಲ್ ಆತ್ಮವಿಶ್ವಾಸ ಹೆಚ್ಚಿಸಿತ್ತು.

‘ಪ್ಯಾರಿಸ್ ಒಲಿಂಪಿಕ್ಸ್ ನಂತರ ನೀರಜ್ ಅವರನ್ನು ಭೇಟಿಯಾಗಲು ಸಾಧ್ಯವಾಗಿರಲಿಲ್ಲ. ಆದರೆ ಅವರು ನನ್ನ ಪರಿಚಯದ ವ್ಯಕ್ತಿಯ ಮೂಲಕ (ಮ್ಯಾನೇಜರ್) ಸಂದೇಶ ಕಳಿಸಿದ್ದರು. ಅದನ್ನು ಅಚ್ಚುಕಟ್ಟಾಗಿ ಪಾಲಿಸಿರುವೆ’ ಎಂದು ಸುಮಿತ್ ಹೇಳಿದ್ದಾರೆ.

ಅವರು ಸೋಮವಾರ ತಡರಾತ್ರಿ ನಡೆದ ಎಫ್ 64 ವಿಭಾಗದ ಜಾವೆಲಿನ್ ಥ್ರೋನಲ್ಲಿ 70.59 ಮೀಟರ್ಸ್ ದೂರ ಥ್ರೋ ಸಾಧನೆ ಮಾಡಿದರು. ದಾಖಲೆಯೊಂದಿಗೆ ಚಿನ್ನ ಗೆದ್ದರು. ಅವರು ಹೋದ ಸಲದ ಒಲಿಂಪಿಕ್ಸ್‌ನಲ್ಲಿಯೂ ಚಿನ್ನ ಜಯಿಸಿದ್ದರು.

ಹರಿಯಾಣದ ಸೋನಿಪತ್‌ನವರಾದ ಸುಮಿತ್ ಅವರಿಗೆ ಈಗ 26 ವರ್ಷ. 2015ರಲ್ಲಿ ಸಂಭವಿಸಿದ್ದ ಮೋಟಾರ್ ಬೈಕ್ ಅಪಘಾತದಲ್ಲಿ ಎಡ ಮಂಡಿಯ ಕೆಳಗಿನ ಕಾಲು ಕಳೆದುಕೊಂಡರು. ಕೃತಕ ಕಾಲು ಅಳವಡಿಸಿಕೊಂಡಿರುವ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿಯೂ ಚಿನ್ನದ ಪದಕ ಜಯಿಸಿದ್ದರು.

ಚಿನ್ನದ ಪದಕದೊಂದಿಗೆ ಭಾರತದ ಸುಮಿತ್ ಅಂಟಿಲ್ –ಎಕ್ಸ್ ಚಿತ್ರ

ಇದರೊಂದಿಗೆ ಅವರು ಈ ಸಾಧನೆ ಮಾಡಿದ ಭಾರತದ ಮೊದಲ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

‘ಅಗ್ರಸ್ಥಾನಕ್ಕೇರುವುದು ಸುಲಭ. ಆದರೆ, ಆ ಸ್ಥಾನವನ್ನು ಉಳಿಸಿಕೊಳ್ಳುವುದು ಕಡುಕಷ್ಟ. ಆದರೂ ನಾನು ಛಲ ಬಿಟ್ಟಿಲ್ಲ. ಮುಂಬರುವ ದೊಡ್ಡ ಕೂಟಗಳಲ್ಲಿ ಪದಕ ಬೇಟೆ ಮುಂದುವರಿಸುವೆ. ಮುಂದಿನ ವರ್ಷ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ನಡೆಯಲಿದೆ. 2028ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿರುವ ಪ್ಯಾರಾಲಿಂಪಿಕ್ಸ್‌ನಲ್ಲಿಯೂ ಚಿನ್ನ ಗೆದ್ದು ಹ್ಯಾಟ್ರಿಕ್ ಮಾಡುವ ಆಸೆ ಇದೆ’ ಎಂದು ಸುಮಿತ್ ಹೇಳಿದ್ದಾರೆ.

ಸಿಹಿ ತ್ಯಜಿಸಿದ್ದ ಅಂಟಿಲ್: ಸುಮಾರು ಒಂದು ವರ್ಷ ಬೆನ್ನಿನ ಗಾಯದಿಂದ ಬಳಲಿದ್ದರೂ ಸುಮಿತ್ ಅಂಟಿಲ್ ಅವರು ಪದಕ ಸಾಧನೆ ಮಾಡುವಲ್ಲಿ ಹಿಂದೆ ಬೀಳಲಿಲ್ಲ.

ಎರಡನೇ ಬಾರಿ ಚಿನ್ನ ಗೆಲ್ಲುವ ತಮ್ಮ ಕನಸು ನನಸು ಮಾಡಿಕೊಳ್ಳಲು ಆಹಾರ ಪದ್ಧತಿಯಲ್ಲಿಯೂ ಬದಲಾವಣೆ ಮಾಡಿಕೊಂಡಿದ್ದರು. ಸಿಹಿ ಪದಾರ್ಥಗಳನ್ನು ಸಂಪೂರ್ಣವಾಗಿ ತ್ಯಜಿಸಿದ್ದರು. ದೇಹ ತೂಕವು ಹೆಚ್ಚದಂತೆ ಕಾಳಜಿ ವಹಿಸಿದ್ದರು.

ಬೆನ್ನುನೋವಿನಿಂದಾಗ ಅದೆಷ್ಟೋ ರಾತ್ರಿ ನಿದ್ದೆಯನ್ನೇ ಮಾಡಿರಲಿಲ್ಲ. ಇದರಿಂದಾಗಿ ಅವರ ಸಾಮರ್ಥ್ಯದಲ್ಲಿ ವ್ಯತ್ಯಾಸವಾಗುವ ಅಪಾಯವಿತ್ತು.

ಭಾಗ್ಯಶ್ರೀ ಜಾಧವ್‌ಗೆ ನಿರಾಸೆ

ಪ್ಯಾರಿಸ್ (ಪಿಟಿಐ): ಭಾರತದ ಭಾಗ್ಯಶ್ರೀ ಜಾಧವ್ ಅವರು ಮಂಗಳವಾರ ಇಲ್ಲಿ ನಡೆದ ಪ್ಯಾರಾಲಿಂಪಿಕ್ಸ್‌ನ ಮಹಿಳೆಯರ ಶಾಟ್‌ಪಟ್‌ನಲ್ಲಿ (ಎಫ್34) ಐದನೇ ಸ್ಥಾನ ಪಡೆದರು. ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡನೇ ಬಾರಿ ಭಾಗವಹಿಸುತ್ತಿರುವ ಭಾಗ್ಯಶ್ರೀ ಷಾಟ್‌ಪಟ್ ಅನ್ನು 7.28 ಮೀ ದೂರ ಎಸೆದರು. ಅದು ಪದಕ ಗೆಲ್ಲಲು ಸಾಲಲಿಲ್ಲ.

ಪ್ಯಾರಾಲಿಂಪಿಕ್ಸ್ ಪದಕ ಪಟ್ಟಿ

ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	50	37	20	107
2	ಬ್ರಿಟನ್	29	16	12	57
3	ಅಮೆರಿಕ	18	21	11	50
4	ಬ್ರೆಜಿಲ್	13	9	22	44
18	ಭಾರತ	3	5	8	16

ದೀಪ್ತಿ ಜೀವಾಂಜಿಗೆ ಕಂಚಿನ ಪದಕ

ಒಂದನೇ ಪುಟದಿಂದ

ದೀಪ್ತಿ ಅವರು ಮೇ ತಿಂಗಳಲ್ಲಿ ಜಪಾನ್‌ನಲ್ಲಿ ನಡೆದ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 55.07 ಸೆಕೆಂಡ್‌ಗಳಲ್ಲಿ ಗುರಿ ತಲುಪಿ, ವಿಶ್ವದಾಖಲೆ ನಿರ್ಮಿಸಿದ್ದರು. ಆದರೆ, ಸೋಮವಾರ ಇಲ್ಲಿ ನಡೆದ ಹೀಟ್ಸ್‌ನಲ್ಲಿ ಟರ್ಕಿಯ ಐಸೆಲ್ 54.96 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿ ಆ ದಾಖಲೆಯನ್ನು ತಮ್ಮದಾಗಿಸಿಕೊಂಡಿದ್ದರು.

ಟಿ20 ವಿಭಾಗದಲ್ಲಿ ಬೌದ್ಧಿಕ ದೌರ್ಬಲ್ಯ ಹೊಂದಿರುವ ಅಥ್ಲೀಟ್‌ಗಳು ಸ್ಪರ್ಧಿಸುತ್ತಾರೆ.

ಕಂಚಿನ ಪದಕದೊಂದಿಗೆ ನಿತ್ಯಶ್ರೀ

ಪ್ರೀತಿ ಪಾಲ್ ನಂತರ ಪ್ಯಾರಾಲಿಂಪಿಕ್ಸ್‌ನಲ್ಲಿ ಟ್ರ್ಯಾಕ್ ವಿಭಾಗದಲ್ಲಿ ಪದಕ ಗೆದ್ದ ಭಾರತದ ಎರಡನೇ ಅಥ್ಲೀಟ್ ಎಂಬ ಹೆಗ್ಗಳಿಕೆಗೆ ದೀಪ್ತಿ ಪಾತ್ರವಾಗಿದ್ದಾರೆ. ತೆಲಂಗಾಣದ ವಾರಂಗಲ್ ಜಿಲ್ಲೆಯ ಕೂಲಿ ಕಾರ್ಮಿಕ ಕುಟುಂಬದ ದೀಪ್ತಿ, ಏಷ್ಯನ್ ಪ್ಯಾರಾ ಕ್ರೀಡಾಕೂಟದ 400 ಮೀಟರ್ ಓಟದಲ್ಲೂ ಚಿನ್ನ ಗೆದ್ದಿದ್ದರು.

ನಿತ್ಯಶ್ರೀಗೆ ಕಂಚು: ಸೋಮವಾರ ತಡರಾತ್ರಿ ಭಾರತದ ನಿತ್ಯಶ್ರೀ ಶಿವನ್ ಬ್ಯಾಡ್ಮಿಂಟನ್ ಮಹಿಳೆಯರ ಸಿಂಗಲ್ಸ್‌ನ ಎಸ್‌ಎಚ್6 ವಿಭಾಗದಲ್ಲಿ ಕಂಚಿನ ಪದಕ ಗೆದ್ದರು.

19 ವರ್ಷ ವಯಸ್ಸಿನ ನಿತ್ಯಶ್ರೀ ಕಂಚಿನ ಪದಕದ ಪ್ಲೇಆಫ್ ಪಂದ್ಯದಲ್ಲಿ 21-14, 21-6 ರಿಂದ ಇಂಡೊನೇಷ್ಯಾದ ರಿನಾ ಮರ್ಲಿನ್ ಅವರನ್ನು ಸೋಲಿಸಿದರು. ಇದು ಬ್ಯಾಡ್ಮಿಂಟನ್‌ನಲ್ಲಿ ಭಾರತಕ್ಕೆ ಒಲಿದ 5ನೇ ಪದಕ.

ಅವನಿ ಲೇಖರಾಗೆ ಕೈತಪ್ಪಿದ ಪದಕ

ಶಾತೋಹು(ಪಿಟಿಐ): ಭಾರತದ ಅವನಿ ಲೇಖರಾ ಅವರಿಗೆ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡನೇ ಪದಕ ಜಯಿಸುವ ಅವಕಾಶ ಕೈತಪ್ಪಿತು.

ಮಂಗಳವಾರ ನಡೆದ ಮಹಿಳೆಯರ 50 ಮೀಟರ್ಸ್ ರೈಫಲ್ ತ್ರಿ ಪೊಸಿಷನ್ (ಎಸ್‌ಎಚ್1) ಸ್ಪರ್ಧೆಯಲ್ಲಿ ಐದನೇ ಸ್ಥಾನ ಪಡೆದರು. 22 ವರ್ಷದ ಅವನಿ ಅವರು ಫೈನಲ್‌ನಲ್ಲಿ 420.6 ಅಂಕಗಳನ್ನು ಗಳಿಸಿದರು.

ಜರ್ಮನಿಯ ನತಾಶಾ ಹಿಲ್‌ಟ್ರಾಪ್ (456.5) ಮತ್ತು ಸ್ಲೋವಾಕಿಯಾದ ವೆರೊನಿಕಾ ವಾಡೊವಿಕೊವಾ (456.1) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗಳಿಸಿದರು. ಚೀನಾದ ಝಾಂಗ್ ಕಂಚು ಪಡೆದರು.

ಅವನಿ ಅವರು ಈಚೆಗೆ ಮಹಿಳೆಯರ 10 ಮೀ ಏರ್ ರೈಫಲ್ (ಎಸ್.ಎಚ್.1) ಶೂಟಿಂಗ್‌ನಲ್ಲಿ ಚಿನ್ನದ ಪದಕ ಜಯಿಸಿದ್ದರು. ಹೋದ ವರ್ಷ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿಯೂ ಚಿನ್ನದ ಸಾಧನೆ ಮಾಡಿದ್ದರು.

ಪೂಜಾಗೆ ನಿರಾಸೆ: ಭಾರತದ ಪೂಜಾ ಜಟ್ಯಾನ್ ಅವರು ಮಹಿಳೆಯರ ಓಪನ್ ಆರ್ಚರಿ ಸ್ಪರ್ಧೆಯಲ್ಲಿ ಕ್ವಾರ್ಟರ್‌ಫೈನಲ್‌ನಲ್ಲಿ ಹೊರಬಿದ್ದರು.

27 ವರ್ಷದ ಪೂಜಾ ಅವರು ರ್‍ಯಾಂಕಿಂಗ್ ಸುತ್ತಿನಲ್ಲಿ ಅಗ್ರ 9ರಲ್ಲಿ ಸ್ಥಾನ ಪಡೆದರು. 6–0 ಅಂಕ ಗಳಿಸಿದರು. ಪ್ರೀ ಕ್ವಾರ್ಟರ್‌ಫೈನಲ್‌ನಲ್ಲಿ ಅವರಿಗೆ ಬೈ ಲಭಿಸಿತು. ಕ್ವಾರ್ಟರ್‌ಫೈನಲ್‌ನಲ್ಲಿ ಪೂಜಾ 4–6ರಿಂದ ಚೀನಾದ ವು ಚುನ್ ಯಾನ್ ವಿರುದ್ಧ ಸೋಲು ಅನುಭವಿಸಿದರು.

ಪಾಕ್ ವಿರುದ್ಧ ಬಾಂಗ್ಲಾ ಸರಣಿ ಸ್ವೀಪ್

ರಾವಲ್ಪಿಂಡಿ (ಪಾಕಿಸ್ತಾನ), (ಎಪಿ): ಬಾಂಗ್ಲಾದೇಶ ತಂಡವು ಮಂಗಳವಾರ ಆರು ವಿಕೆಟ್‌ಗಳಿಂದ ಪಾಕಿಸ್ತಾನ ತಂಡವನ್ನು ಸೋಲಿಸಿ ಎರಡು ಟೆಸ್ಟ್‌ಗಳ ಸರಣಿಯಲ್ಲಿ 2–0 ಯಿಂದ ಚಾರಿತ್ರಿಕ ಜಯ ಸಾಧಿಸಿತು.

ಲಿಟನ್ ದಾಸ್

ಗೆಲುವಿಗೆ 185 ರನ್‌ಗಳ ಗುರಿ ಎದುರಿಸಿದ್ದು ನಾಲ್ಕನೇ ದಿನದ ಕೊನೆಗೆ ವಿಕೆಟ್ ನಷ್ಟವಿಲ್ಲದೇ 42 ರನ್ ಗಳಿಸಿದ್ದ ಬಾಂಗ್ಲಾದೇಶ ಜಯ ಹೆಚ್ಚುಕಮ್ಮಿ ಖಚಿತವಾಗಿತ್ತು. ಕೊನೆಯ ದಿನ ಚಹ ವಿರಾಮಕ್ಕೆ 25 ನಿಮಿಷಗಳಿರುವಂತೆ 4 ವಿಕೆಟ್‌ಗೆ 185 ರನ್ (56 ಓವರುಗಳಲ್ಲಿ) ಗಳಿಸಿ ವಿಜಯೋತ್ಸವ ಆಚರಿಸಿತು.

ಲೆಗ್‌ಬ್ರೇಕ್ ಬೌಲರ್ ಅಬ್ರಾರ್ ಅಹ್ಮದ್ ಬೌಲಿಂಗ್‌ನಲ್ಲಿ ಕವರ್ಸ್‌ಗೆ ಬೌಂಡರಿ ಬಾರಿಸಿದ ಅನುಭವಿ ಶಕೀಬ್ ಅಲ್ ಹಸನ್ (ಔಟಾಗದೇ 21) ಗೆಲುವಿನ ರನ್ ಗಳಿಸಿದರು. ಮುಷ್ಫಿಕುರ್ ರಹೀಂ ಅಜೇಯ 22 ರನ್ ಹೊಡೆದರು.

ಪ್ರವಾಸಿ ತಂಡವು ಮೊದಲ ಟೆಸ್ಟ್ ಪಂದ್ಯವನ್ನು ನಾಲ್ಕು ದಿನಗಳ ಒಳಗೆ 10 ವಿಕೆಟ್‌ಗಳಿಂದ ಗೆದ್ದುಕೊಂಡಿತ್ತು.

ಇದು ಬಾಂಗ್ಲಾದೇಶಕ್ಕೆ ತವರಿನಿಂದ ಹೊರಗೆ ಎರಡನೇ ಸರಣಿ ಗೆಲುವು. ಈ ಹಿಂದೆ 2009ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಗೆಲುವು ಸಾಧಿಸಿತ್ತು.

ಪಾಕಿಸ್ತಾನ ತವರಿನಲ್ಲಿ 10 ಟೆಸ್ಟ್‌ಗಳಿಂದ ಗೆಲುವನ್ನೇ ಕಂಡಿಲ್ಲ. 2021ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ರಾವಲ್ಪಿಂಡಿಯಲ್ಲಿ ಕೊನೆಯ ಬಾರಿ ಟೆಸ್ಟ್ ಪಂದ್ಯವೊಂದನ್ನು ಗೆದ್ದುಕೊಂಡಿತ್ತು. ಕಳೆದ ವರ್ಷ ನಾಯಕನಾದ ನಂತರ ಶಾನ್ ಮಸೂದ್ ಅನುಭವಿಸಿದ ಎರಡನೇ ಸರಣಿ ಸೋಲು ಇದಾಗಿದೆ. ಈ ಹಿಂದೆ ಆಸ್ಟ್ರೇಲಿಯಾಕ್ಕೆ 0–3 ರಿಂದ ಸೋತಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಾಕಿಸ್ತಾನ: 274, ಬಾಂಗ್ಲಾದೇಶ: 262; ಎರಡನೇ ಇನಿಂಗ್ಸ್: ಪಾಕಿಸ್ತಾನ: 172; ಬಾಂಗ್ಲಾದೇಶ: 56 ಓವರುಗಳಲ್ಲಿ 4 ವಿಕೆಟ್‌ಗೆ 185 (ಝಾಕಿರ್ ಹಸನ್ 40, ನಜ್ಮುಲ್ ಹುಸೇನ್ ಶಾಂತೊ 38, ಮೊಮಿನುಲ್ ಹಕ್ 34, ಮುಷ್ಫಿಕುರ್ ರಹೀಂ ಔಟಾಗದೇ 22, ಶಕೀಬ್ ಅಲ್ ಹಸನ್ ಔಟಾಗದೇ 21). **ಪಂದ್ಯದ ಆಟಗಾರ:** ಲಿಟನ್ ದಾಸ್ (ಮೊದಲ ಇನಿಂಗ್ಸ್‌ನಲ್ಲಿ 138). **ಸರಣಿಯ ಆಟಗಾರ:** ಮೆಹಿದಿ ಹಸನ್ ಮಿರಾಜ್ (155 ರನ್, 10 ವಿಕೆಟ್)

ಚೆಸ್: ಅರಣ್ಯಾ, ಶ್ರೇಯಾಂಶಿಗೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಮೈಸೂರು: ತಮಿಳುನಾಡಿನ ಆರ್. ಅರಣ್ಯಾ ಹಾಗೂ ರಾಜಸ್ಥಾನದ ಶ್ರೇಯಾಂಶಿ ಜೈನ್ ಇಲ್ಲಿ ನಡೆಯುತ್ತಿರುವ ಏಳು ವರ್ಷದೊಳಗಿವರ 37ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಬಾಲಕಿಯರ ವಿಭಾಗದಲ್ಲಿ ಜಂಟಿ ಅಗ್ರಸ್ಥಾನದಲ್ಲಿ ಮುನ್ನಡೆದಿದ್ದಾರೆ.

ಮಂಗಳವಾರ ಆರನೇ ಸುತ್ತಿನ ಪಂದ್ಯದಲ್ಲಿ ಅರಣ್ಯಾ ಆಂಧ್ರಪ್ರದೇಶದ ಶ್ರೀನಿಖಿಲಾ ವಿರುದ್ಧ ಹಾಗೂ ಶ್ರೇಯಾಂಶಿ ತಮ್ಮ ರಾಜ್ಯದವರೇ ಆದ ತೀಶಾಳನ್ನು ಮಣಿಸಿ ಒಟ್ಟು 6 ಅಂಕಗಳೊಂದಿಗೆ ಅಗ್ರ ಸ್ಥಾನ ಕಾಯ್ದುಕೊಂಡರು.

ಪಶ್ಚಿಮ ಬಂಗಾಳದ ಅರ್ಪಿತಾಂಕ್ಷಿ ಭಟ್ಟಾಚಾರ್ಯ, ತೆಲಂಗಾಣದ ಸಯ್ಯದ್ ರುದಾ, ಆಂಧ್ರದ ಶ್ರೀನಿಖಿಲಾ, ರಾಜಸ್ಥಾನದ ತೀಶಾ, ಪೌರ್ಣಿಶಾ, ಪಶ್ಚಿಮ ಬಂಗಾಳದ ಅದೀನಾ ಮೊಹಂತಿ, ಒಡಿಶಾದ ಸ್ನೇಹಸ್ಮಿತಾ, ತಮಿಳುನಾಡಿನ ಎಸ್. ಆಶ್ರಿತಾ ತಲಾ ಐದು ಅಂಕಗಳೊಂದಿಗೆ ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ.

ಮುಕ್ತ ವಿಭಾಗದಲ್ಲಿ ಕೇರಳದ ಕೆ. ದೇವನಾರಾಯಣನ್ ಆರನೇ ಸುತ್ತಿನ ಅಂತ್ಯಕ್ಕೆ 6 ಅಂಕಗಳೊಂದಿಗೆ ಮುನ್ನಡೆ ಕಾಯ್ದುಕೊಂಡಿದ್ದಾನೆ. ಉತ್ತರ ಪ್ರದೇಶದ ಅಯಾಂಶ್ ಸಿಂಗ್, ತಮಿಳುನಾಡಿನ ತಕ್ಯಂತ್ ಆನಂದ್, ಅದ್ವಿಕ್ ಶರ್ಮ ತಲಾ ಐದೂವರೆ ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ.

ಆರನೇ ಸುತ್ತಿನ ಪ್ರಮುಖ ಫಲಿತಾಂಶ: ಬಾಲಕಿಯರ ವಿಭಾಗ: ಎ. ಅರಣ್ಯಾಗೆ (ತಮಿಳುನಾಡು) ಆಂಧ್ರಪ್ರದೇಶದ ಶ್ರೀನಿಖಿಲಾ ವಿರುದ್ಧ; ಶ್ರೇಯಾಂಶಿ ಜೈನ್‌ಗೆ (ರಾಜಸ್ಥಾನ) ತೀಶಾ ಎದುರು; ಅರ್ಪಿತಾಂಕ್ಷಿ ಭಟ್ಟಾಚಾರ್ಯಗೆ (ಪ.ಬಂಗಾಳ) ಮಧು (ತೆಲಂಗಾಣ) ವಿರುದ್ಧ; ಎಸ್. ಆಶ್ರಿತಾಗೆ (ತಮಿಳುನಾಡು) ಈ. ಪೂಜಿತಾ (ಕರ್ನಾಟಕ) ವಿರುದ್ಧ ಗೆಲುವು.

ಯುಗಾಂಡಾದ ಅಥ್ಲೀಟ್‌ಗೆ ಬೆಂಕಿಹಚ್ಚಿದ ಪ್ರಿಯಕರ

ನೈರೋಬಿ (ಎಎಫ್‌ಪಿ): ಪ್ರಿಯಕರ ಪೆಟ್ರೋಲ್ ಸುರಿದು ಬೆಂಕಿಹಚ್ಚಿದ ಪರಿಣಾಮ ಯುಗಾಂಡದ ಒಲಿಂಪಿಯನ್ ಅಥ್ಲೀಟ್ ಒಬ್ಬರು ಶೇ 80ರಷ್ಟು ಸುಟ್ಟಗಾಯಗಳೊಂದಿಗೆ ಗಂಭೀರ ಸ್ಥಿತಿಯಲ್ಲಿದ್ದಾರೆ. ದೀರ್ಘ ಅಂತರದ ಓಟಗಾರ್ತಿ ರೆಬೆಕಾ ಚೆಪ್ಟೇಗಿ ದೌರ್ಜನ್ಯಕ್ಕೆ ಒಳಗಾದವರು.

ಯುಗಾಂಡ ಗಡಿಯಲ್ಲಿರುವ ಟ್ರಾನ್ಸ್–ಎನ್ಜೋಯಿ ಕೌಂಟಿಯ ಎಂಡೆಬಸ್‌ನಲ್ಲಿರುವ ರೆಬೆಕಾ ಅವರ ಮನೆಗೆ ಭಾನುವಾರ ಮಧ್ಯಾಹ್ನ ನುಗ್ಗಿದ ಪ್ರಿಯತಮ ಡಿಕ್ಸನ್ ಎನ್ಡಿಮಾ ಮಾರಂಗಾಚ್ ಈ ಕೃತ್ಯ ಎಸಗಿದ್ದಾನೆ ಎನ್ನಲಾಗಿದೆ.

ಮೂರು ವಾರಗಳ ಹಿಂದೆಯಷ್ಟೇ ನಡೆದ ಪ್ಯಾರಿಸ್ ಒಲಿಂಪಿಕ್ಸ್‌ನ ಮ್ಯಾರಥಾನ್‌ನಲ್ಲಿ ರೆಬೆಕಾ 44ನೇ ಸ್ಥಾನ ಪಡೆದಿದ್ದರು.

ಕೃತ್ಯದ ವೇಳೆ ಹರಡಿದ ಬೆಂಕಿಯ ಜ್ವಾಲೆಯಿದ ಡಿಕ್ಸನ್‌ಗೂ ಸುಟ್ಟಗಾಯಗಳಾಗಿವೆ ಎಂದು ಪೊಲೀಸ್ ವರದಿ ತಿಳಿಸಿದೆ.

ಎಂಡೆಬಸ್‌ನಲ್ಲಿ ಚೆಪ್ಟೇಗಿ ಅವರು ಜಾಗ ಖರೀದಿಸಿ ಮನೆ ಕಟ್ಟಿಸಿದ್ದರು ಎಂದು ಸ್ಥಳೀಯ ಮಾಧ್ಯಮಗಳು ವರದಿಮಾಡಿವೆ. ಕೃತ್ಯಕ್ಕೆ ಮೊದಲು ಪ್ರೇಮಿಗಳ ನಡುವೆ ವಾಗ್ವಾದ ನಡೆದಿತ್ತು ಎಂದೂ ಹೇಳಿವೆ.

HONDA
Super Savetember
Scooter ಅಂದ್ರೆ ACTIVA
With H-Smart Technology

Low ROI @ 7.99%**
1st YEAR FREE SERVICE MAINTENANCE PACKAGE^
^Hurry! Valid until 30th Sept'24
Cashback of 5% up to ₹5000##
3 Years Standard + 3 Years Free Extended Warranty#
ವೀಡಿಯೋ ಆನಂದಿಸಲು, QR ಕೋಡ್ ಸ್ಕ್ಯಾನ್ ಮಾಡಿ.
IDFC FIRST Bank — Bank** / Credit Card##
HDFC BANK — Credit Card##
TATA CAPITAL Two Wheeler Loans**
L&T Finance**
BOOK ONLINE NOW! www.honda2wheelersindia.com
##Cashback Offer available on all Honda two-wheeler models for EMI transactions made using HDFC Bank credit cards & IDFC FIRST Bank credit cards through Pine Labs machines only. ##Customers can avail 5% Instant cashback, up to a maximum of Rs. 5000. ##Valid on one transaction per card/order during the offer period. ##Cashback offer valid until 30th September 2024. ##The scheme is available in select outlets only. **Approval of the loan is at the sole discretion of the financiers, and additional documentation may be required. **The interest rates, down payment, and tenure options are based on the financier's assessment of the applicant's credit profile. **The offers/features may be modified or withdrawn at any time without prior intimation. Product shown in the picture may vary from actual product available in the market. Accessories shown in the picture are not part of standard equipment. #3 years of standard plus 3 years of free extended warranty only on Activa 110cc. #This scheme is offered by authorised main dealers and Associate Dealers. *Source: Cumulative Sales figure of Brand Activa from June 2001 to June 2024 as per HMSI internal data. ^For detailed Terms and Condition of 1st Year Free Service Maintenance Package, kindly contact Authorised Main Dealers and Associate Dealers. ^Above scheme can be withdrawn at any time without prior intimation.
For more information give a missed call on 7230032200
For dealer details scan the QR Code
ACTIVA OVER 3.25 CRORE* HAPPY CUSTOMERS
CLICK BOOK RELAX
Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in
Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9606567111; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.
For Bulk/Institutional enquiries, please write us at: institutionalsales@honda2wheelersindia.com